

ಯಕ್ಷ ಸಂಕಾಶ

ಡಾ. ಆನಂದರಾಮ ಉಪಾಧ್ಯ

ಡಾ. ಆನಂದರಾಮ ಉಪಾಧ್ಯ

ಕಳೆದ ಐದು ದಶಕಗಳಿಂದ ಯಕ್ಷಗಾನ ಪ್ರಸಂಗ ಸಾಹಿತ್ಯದ ಕುರಿತು ಅಧ್ಯಯನ ನಡೆಸುತ್ತಿರುವ ಆನಂದರಾಮ ಉಪಾಧ್ಯರು ಮೂಲತಃ ಉಡುಪಿ ಜಿಲ್ಲೆಯ ಚಿತ್ರಪಾಡಿ ಗ್ರಾಮದವರು.

ಯಕ್ಷಗಾನ ಸಾಹಿತ್ಯದ ಬಗ್ಗೆ ಚಿಂತನೆ ನಡೆಸಿರುವ ಆದ್ಯರಲ್ಲಿ ಒಬ್ಬರಾದ ಡಾ. ಕೆ. ಎಂ. ಕೃಷ್ಣ ರಾವ್ ಅವರ ಮಾರ್ಗದರ್ಶನದಲ್ಲಿ ಇವರು ಸಿದ್ಧಪಡಿಸಿದ "ಯಕ್ಷಗಾನ ಮಹಾಭಾರತ ಪ್ರಸಂಗಗಳು" ಎಂಬ ಪ್ರೌಢ ಪ್ರಬಂಧಕ್ಕೆ 1985 ರಲ್ಲಿಉಸ್ಮಾನಿಯ ವಿಶ್ವವಿದ್ಯಾಲಯದ ಪಿಹೆಚ್.ಡಿ ಪದವಿ ಲಭಿಸಿದೆ. ಇದಲ್ಲದೆ "ಯಕ್ಷಗಾನ ರಾಮಾಯಣ ಪ್ರಸಂಗಗಳು", "ಯಕ್ಷ ದರ್ಶನ", "ಯಕ್ಷ ಚಿಂತನೆ", "ಯಕ್ಷಗಾನಂ ವಿಶ್ವ ಗಾನಂ", "ಕೋದಂಡ", "ಯಕ್ಷಪಥ", "ಸಮಾಹಿತ" ಮುಂತಾದ ಯಕ್ಷಗಾನ ಸಂಬಂಧಿ ಕೃತಿಗಳನ್ನು ಹೊರತಂದಿದ್ದಾರೆ .ಕೇಂದ್ರ ಸಾಹಿತ್ಯ ಅಕಾಡೆಮಿ ಗಾಗಿ "ಪ್ರತಿಬಿಂಬ" ಎಂಬ ಅನುವಾದಿತ ಪ್ರಬಂಧ ಸಂಕಲನ ರಚಿಸಿದ್ದಾರೆ. ಇವರ "ಸೋಮೇಶ್ವರ ಶತಕ ಸೌರಭ" ಎಂಬ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿನಿಧಿ ಪುರಸ್ಕಾರ ಲಭಿಸಿದೆ.

ಮೊದಲಿಗೆ ಕನ್ನಡ ಉಪನ್ಯಾಸಕರಾಗಿ ವೃತ್ತಿ ಜೀವನ ಪ್ರಾರಂಭಿಸಿದ ಇವರು ಮುಂದೆ ಕರ್ಣಾಟಕ ಬ್ಯಾಂಕ್ ಸೇರಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿ ಸಹಾಯಕ ಮಹಾಪ್ರಬಂಧಕರಾಗಿ ವಲಯ ಮುಖ್ಯಸ್ಥರಾಗಿ 2012 ರಲ್ಲಿ ನಿವೃತ್ತಿ ಹೊಂದಿದರು. ಪ್ರಕೃತ ಬೆಂಗಳೂರಿನ ಪಿ.ಇ.ಎಸ್. ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ.

ಯಕ್ಷ ಸಾಹಿತ್ಯದ ಡಿಜಿಟಲಿಕರಣದಲ್ಲಿ ಮುಂಚೂಣಿಯಲ್ಲಿರುವ ಯಕ್ಷವಾಹಿನಿ ಸಂಸ್ಥೆಯ ಅಧ್ಯಕ್ಷರಾಗಿ, ನರಹಳ್ಳಿ ಪ್ರತಿಷ್ಠಾನ ಮತ್ತು ಪು.ತಿ.ನ. ಟ್ರಸ್ಟ್‌ನ ಕಾರ್ಯದರ್ಶಿಯಾಗಿ ಸಾಹಿತ್ಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಿಗೆ ಆರ್ಯಭಟ ಪ್ರಶಸ್ತಿ (2007), ನರಸಿಂಹ ಪ್ರಶಸ್ತಿ (2007), ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ ಗೌರವ ಸಂಮಾನ (2018), ಕರ್ನಾಟಕ ಯಕ್ಷಗಾನ ಅಕಾಡೆಮಿಯ ಗೌರವ ಪ್ರಶಸ್ತಿ (2019), ಕನ್ನಡ ಸಾಹಿತ್ಯ ಪರಿಷತ್‌ನ ದತ್ತಿನಿಧಿ ಪ್ರಶಸ್ತಿ (2022) ಹಾಗೂ 'ಕರ್ನಾಟಕ ಯಕ್ಷ ಗುರು' (2023) ಪ್ರಶಸ್ತಿಗಳು ಲಭಿಸಿವೆ.

ಯಕ್ಷ ಸಂಕಾಶ

ಡಾ. ಆನಂದರಾಮ ಉಪಾಧ್ಯ

ಐಸಿರಿ ಪ್ರಕಾಶನ
ನಾಗರಭಾವಿ, ಬೆಂಗಳೂರು-72.

YAKSHA SANKAASHA : A Collections of Articles by: Dr. C. Anandarama Upadya, Published by: Aisiri Prakashana, #468, 2nd `C' Main, Nagarabavi, Bengaluru-72. Mob: 9341804700.

First Impression: 2024 | Price: 200/-
Pages: xviii + 166 = 184 | Size: Demy 1/8
Paper Used: 70 GSM Maplitho | Copies: 1000

ISBN : 978–81–969076–4–8

ಡಾ. ಆನಂದರಾಮ ಉಪಾಧ್ಯ
#317, 7ನೇ ಅಡ್ಡರಸ್ತೆ, ಆವಲಹಳ್ಳಿ ಬಿಡಿಎ ಲೇಔಟ್
ಬನಶಂಕರಿ 3ನೇ ಹಂತ, ಬೆಂಗಳೂರು – 85.
ಸಂ.ದೂ : 9880032560.

ಪ್ರಧಾನ ಸಂಪಾದಕ
ಮಂಜುನಾಥ ಪಾಳ್ಯ
ಸಲಹೆ–ಸಹಕಾರ
ನರಸಿಂಹಪ್ರಕಾಶ್ ಎನ್.ಕೆ.ವಿ.
ರೂಪ ಜಿ.
ರವಿಕೀರ್ತಿ. ಟಿ

ಡಿ.ಟಿ.ಪಿ ಮತ್ತು ಪುಸ್ತಕ ವಿನ್ಯಾಸ:
ಯಶ್ ಕ್ರಿಯೇಷನ್ಸ್, ಬೆಂಗಳೂರು – 72

ಮುಖಪುಟ ವಿನ್ಯಾಸ:
ಮರೂನಿ, ಬೆಂಗಳೂರು.

ಮುದ್ರಣ:
ಎಸ್.ಬಿ. ಪ್ರಿಂಟಿಂಗ್ ಅಂಡ್ ಬೈಂಡಿಂಗ್ ವರ್ಕ್ಸ್,
ಚೋಳರ ಪಾಳ್ಯ, ಬೆಂಗಳೂರು – 23

ಅರ್ಪಣೆ

ಮೊಮ್ಮಗ ಆರ್ಣವ್
ಮಗಳು ಸೀಮಂತಿನಿ ಹಾಗೂ
ಅಳಿಯ ವೆಂಕಟೇಶ್ ಎಸ್.ಎನ್
ಅವರುಗಳಿಗೆ ಪ್ರೀತಿಯಿಂದ

VARSHA SANKAASHA - A Collections of Articles by: Dr. [illegible] Anandarama Upadhya. Published by: Akhil Prakashana, #68, 2nd C Main, Nagarabhavi, Bengaluru-72. Mob: 9341804700.

First Impression: [illegible]
Pages: [illegible]
Paper Used: 70 GSM Maplitho

Price: 200/-
Size: Demy 1/8
Copies: 1000

ISBN: 978-81-[illegible]-4-8

[illegible]

[illegible]

[illegible]

[illegible]

ಕೃತಿ ಕುರಿತು

ಡಾ. ಆನಂದರಾಮ ಉಪಾಧ್ಯರು ಯಕ್ಷಗಾನ ರಂಗಚಿಂತನೆಯಲ್ಲಿ ತೊಡಗಿಕೊಂಡ ಮಹತ್ವದ ವ್ಯಕ್ತಿ. ಕಲಾವಿಮರ್ಶೆಯ ವಿಭಾಗಕ್ಕೆ ಬಂದರೆ ಅವರ ಚಿಂತನೆಗಳನ್ನು ಬಿಟ್ಟು ನೋಡಲು ಸಾಧ್ಯವಾಗುವುದಿಲ್ಲ. ಇಂದು ವಿಮರ್ಶೆ ಮತ್ತು ಕಲಾವಿದ ಎರಡು ಧ್ರುವಗಳಾಗಿ ವರ್ತಮಾನದ ಕಲಾಲೋಕವಿರುವುದನ್ನು ಗಮನಿಸಬಹುದಾಗಿದೆ. ದಿನನಿತ್ಯ ಊರಿಂದ ಊರಿಗೆ ಧಾವಿಸಿ ವೇಷಹಾಕಿ ಸಂಬಳ ಪಡೆದುಬರುವ ಕಲಾವಿದನಿಗೆ ಯಕ್ಷಗಾನದ ಸುಧೋರಣೆಗಳಿಗಿಂತ ಎಷ್ಟು ಪ್ರೇಕ್ಷಕರನ್ನು ಆಟಕ್ಕೆ ಕರೆಯಬಲ್ಲ ಸಾಮರ್ಥ್ಯವನ್ನು ಹೊಂದಿದ್ದಾನೆ ಎನ್ನುವುದರಮೇಲೆ ಅವನ ಭವಿಷ್ಯವಡಗಿದೆ. ಈ ಧಾವಂತಸ್ಥಿತಿ ಕಲಾವಿದರ ಆರೋಗ್ಯದಮೇಲೆ ತುಂಬಾ ಪರಿಣಾಮವನ್ನು ಬೀರುತ್ತಿದೆ. ನಿದ್ರೆಗೆಟ್ಟು ಮನೆಗೆ ಬಂದು ಮತ್ತೆ ಎಲ್ಲಿಯೋ ಆಟಕ್ಕೆ ದ್ವಿಚಕ್ರವಾಹನದಲ್ಲಿ ಹೋಗುವಾಗ ಆಗುವ ಅವಘಡಗಳು ಅವನ ಕುಟುಂಬವನ್ನೆ ಕಂಗಾಲಾಗಿ ಮಾಡುತ್ತಿದೆ. ಕೆರಮನೆ ಮಹಾಬಲ ಹೆಗಡೆಯವರು ಆ ಕಾಲದಲ್ಲಿಯೇ ಯಕ್ಷಗಾನದಲ್ಲಿ ಪ್ರಸಿದ್ಧರಾಗುವುದು ಎಂದರೆ ಕಂಠತ್ರಾಣವುಳ್ಳವ ಭಾಗವತ, ಸೊಂಟತ್ರಾಣವುಳ್ಳವ ಕಲಾವಿದ ಎನ್ನುವ ಕಟಕಿಯನ್ನಾಡುತ್ತಿದ್ದರು. ಪ್ರೇಕ್ಷಕರ ಚಪ್ಪಾಳೆಯ ಸಾಮರ್ಥ್ಯವೇ ಕಲಾವಿದನ ಅರ್ಹತೆ ಎನ್ನುವುದು ಇಂದು ವ್ಯಾಪಕವಾಗಿದೆ. ಕಲೆಯ ಗೀಳನ್ನು ಹತ್ತಿಸಿಕೊಂಡು ಈ ರಂಗಕ್ಕೆ ಬಂದವನಿಗೆ ಇದು ಹೊಟ್ಟೆಪಾಡು ಆಗಿದೆ ಎನ್ನುವುದನ್ನು ಮರೆಯಬಾರದು. ಆತನ ಕುಟುಂಬದ ಭದ್ರತೆಗೆ ನಿರಂತರವಾಗಿ ಚಪ್ಪಾಳೆಗಿಟ್ಟಿಸುವ ಕಲಾವಿದನಾಗಿರಲೇಬೇಕು. ಏನಾದರೂ ಆಗಲಿ, ತನ್ನ ನಂತರ ತನ್ನ ಮಗನಿಗೆ ಈ ರಂಗ ಖಂಡಿತವಾಗಿ ಬೇಡ ಎನ್ನುವದು ಬಹುಪಾಲು ಕಲಾವಿದರ

ನಿಲುವನ್ನು ಗಂಭೀರವಾಗಿ ತೆಗೆದುಕೊಂಡು ಈ ನಿಟ್ಟಿನಲ್ಲಿ ಆಲೋಚಿಸಬೇಕಿದೆ. ಇನ್ನು ಯಕ್ಷಗಾನದ ಬಹುಪಾಲು ವಿಮರ್ಶೆಯಜಾಡು ಕಲೆಯ ಸುಧೋರಣೆಗಿಂತ ಮುಖದ ಮೀಸೆಯನ್ನು ಹಚ್ಚಿಕೊಳ್ಳುವುದೋ ಅಥವಾ ಕಟ್ಟಿಕೊಳ್ಳುವುದೋ ಎನ್ನುವದರಲ್ಲಿಯೇ ಗಿರಕಿಹೊಡೆಯುತ್ತಿದೆ. ಆಧುನಿಕ ಭಾರತದ ವಾಣಿಜ್ಯೀಕರಣದಲ್ಲಿ ಹೆಚ್ಚಿನ ಎಲ್ಲಾ ಪ್ರದರ್ಶನ ಕಲಾಪ್ರಕಾರಗಳು ಎದುರಿಸುವ ದೊಡ್ಡ ಸವಾಲುಗಳು, ಆಯಾ ಕಲೆಯ ಮೂಲದ ನಿರ್ವಚನ ಮತ್ತು ಅದರ ಪ್ರದರ್ಶನ ವಿಭಾಗವೆನ್ನುವ ಎರಡು ಅಯಾಮಗಳನ್ನು ನಿಭಾಯಿಸುವುದಾಗಿದೆ. ಕಲೆಯಲ್ಲಿ ಫ್ಯೂಶನ್ ಎನ್ನುವುದು ಶಾಸ್ತ್ರೀಯಕಲೆಗಳಲ್ಲಿ ನುಸುಳಿ ಇಂದು ವಿಲಂಬಿತಗಾಯನ ಶೈಲಿಗಿಂತ ಠುಮ್ರಿ, ಧುನ್, ಅಬ್ಬರಶೈಲಿಯ ಪಕ್ಕವಾದ್ಯಗಳೇ ಯಶಸ್ವಿಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ಡಾ. ಆನಂದರಾಮ ಉಪಾಧ್ಯಾಯರಂತವರು ಮಹತ್ವವಾಗುವುದು ಯಕ್ಷಗಾನರಂಗಭೂಮಿಯ ಕುರಿತು ಅವರಿಗಿರುವ Empathy–ಸಹಾನುಭೂತಿಯ ಕಾರಣದಿಂದ. ಅವರು ತನ್ನನ್ನು ತಾನು ಎಲ್ಲಿಯೂ ಗಂಭೀರವಾದ ವಿಮರ್ಶಕನೆಂದು ಕರೆಯಿಸಿಕೊಳ್ಳುವುದಿಲ್ಲ. ಆದರೆ ಮರೆಯಲ್ಲಿ ಇದ್ದು ಯಕ್ಷಗಾನದ ಹಿಂದಿನ ಹಾಗೂ ವರ್ತಮಾನದ ಸ್ಥಿತ್ಯಂತರಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ಜಾಯಮಾನದವರು. ಅವರನ್ನು ಪ್ರದರ್ಶನ ವಿಭಾಗ ಸೆಳೆದುದಕ್ಕಿಂತ ಪ್ರಸಂಗ ಸಾಹಿತ್ಯವೇ ಹೆಚ್ಚಿನದಾಗಿ ಸೆಳೆದಿದೆ. ಹಾಗಾಗಿ ಅವರು ಬ್ಯಾಂಕಿನಲ್ಲಿ ಸಹಾಯಕ ಮಹಾಪ್ರಬಂಧಕ ಹುದ್ದೆಯಲ್ಲಿರುವಾಗಲೂ ಪ್ರಸಂಗ ಸಾಹಿತ್ಯದೆಡೆಗೆ ಅಧ್ಯಯನಕ್ಕೆ ತೊಡಗಿದರು. 1985ರಲ್ಲಿಯೇ ಯಕ್ಷಗಾನ ಮಹಾಭಾರತ ಪ್ರಸಂಗಗಳ ಮೇಲೆ ಪಿಎಚ್. ಡಿ. ಪಡೆದ ಅವರು ಆ ಕೃತಿಯ ಪ್ರಾರಂಭದ ತಮ್ಮ ಅಧ್ಯಯನದ ಉದ್ಧೇಶದಲ್ಲಿ "ಯಕ್ಷಗಾನ ಕೃತಿಗಳು ಆಕಾರದಲ್ಲಿ ಕಿರಿದಾಗಿದ್ದು ಗೇಯ ಕಾವ್ಯದ ಲಕ್ಷಣಗಳನ್ನು ಒಳಗೊಂಡಿದೆ. ಈ ಸಾಹಿತ್ಯ ಪ್ರಕಾರವು ಅತ್ತ ಶುದ್ಧ ಶಾಸ್ತ್ರೀಯವೂ ಅಲ್ಲದ, ಇತ್ತ ಜಾನಪದವೂ ಅಲ್ಲದ ಒಂದು ಬಗೆಯ ವಿಶಿಷ್ಟ ಹದದಲ್ಲಿ ರೂಪುಗೊಂಡದ್ದಾಗಿದೆ. ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಮಹಾಕಾವ್ಯ, ಪುರಾಣಗಳ ಒಂದು ಪ್ರಸಂಗ, ಸನ್ನಿವೇಶ, ಸಂದರ್ಭ, ಘಟನೆಯೇ ಕತೆಯ ಕೇಂದ್ರವಾಗಿರುತ್ತದೆ. ಯಕ್ಷಗಾನ ಕೃತಿಗಳಿಗೆ 'ಪ್ರಸಂಗ'ಗಳೆಂದು ಹೆಸರು ಬರಲು ಇದೇ ಕಾರಣವಾಗಿರಬೇಕು. (ಯಕ್ಷಗಾನ ಮಹಾಭಾರತ ಪ್ರಸಂಗಗಳು; ಅಧ್ಯಾಯ 1) ಹೇಳಿದ್ದಾರೆ. ಇದು ಅವರ ಈವರೆಗಿನ ಎಲ್ಲಾ ಅವಲೋಕನ ಮತ್ತು ವಿಮರ್ಶೆಯಲ್ಲಿಯೂ ಬಂದಿರುವುದನ್ನು ಕಾಣಬಹುದಾಗಿದೆ. "ಯಕ್ಷಗಾನ ಮಹಾಭಾರತ ಪ್ರಸಂಗಳು" ಯಕ್ಷಗಾನ ಆಸಕ್ತರಿಗೆ ಅಧ್ಯಯನಕ್ಕೆ ಸಹಕಾರಿಯಾಗಬಲ್ಲ ಒಂದು ಅಪೂರ್ವ ಗ್ರಂಥ. ಅದರಲ್ಲಿ ಸುಮಾರು ತೊಂಬತ್ತುನಾಲ್ಕು ಪ್ರಸಂಗಗಳನ್ನು ಮೂಲಕಥೆಯೊಂದಿಗೆ ವಿವೇಚಿಸಿ ಅದರ ಕುರಿತಾದ ತೌಲನಿಕ ಅಧ್ಯಯನವನ್ನು ಮಾಡಿದ್ದಾರೆ.

ಈಗ ಅವರು ಯಕ್ಷಗಾನದ ಅಂಗೋಪಾಂಗಗಳ ಕುರಿತು ಅವರಿಗೆ ಇರುವ ಕಾಳಜಿ ಮತ್ತು ದೃಷ್ಟಿಕೋನಗಳನ್ನು ಸಂಯಮದಿಂದ ಅವಲೋಕನ ಮಾಡಿದ ಹತ್ತೊಂಭತ್ತು ಲೇಖನಗಳ ಸಂಗ್ರಹವನ್ನು ಈ ಕೃತಿ "ಯಕ್ಷ ಸಂಕಾಶ" ದಲ್ಲಿ ಕಟ್ಟಿಕೊಟ್ಟಿದ್ದಾರೆ. ಬೇರೆ ಬೇರೆ ಸಂದರ್ಭಗಳಲ್ಲಿ ಮಂಡಿಸಿದ ಪ್ರಬಂಧಗಳು, ಇನ್ನಿತರ ಸಮಕಾಲೀನ ಲೇಖಕರ ಯಕ್ಷಗಾನ ಸಂಬಂಧಿ ಕೃತಿಗಳು ಮತ್ತು ತಮಗೆ ಆತ್ಮೀಯರಾಗಿರುವವರ ಯಕ್ಷಗಾನ ವಿದ್ವಾಂಸರ ಕುರಿತು ಬರೆದ ಲೇಖನಗಳ ಗುಚ್ಛ ಇದು. ಬರೆದ ಸಂದರ್ಭಗಳು ಮತ್ತು ಕಾಲ ಬೇರೆಯಾದರೂ ಅವರ ಚಿಂತನೆಗಳ ಸಾರ ಏಕಸೂತ್ರದಲ್ಲಿ ಬಿಂಬಿತವಾಗಿವೆ. ಮೊದಲ ಲೇಖನವಾದ ಯಕ್ಷಶಿಕ್ಷಣದ ಪಠ್ಯಗಳು ಮತ್ತು ಕಲಿಕಾ ಕೇಂದ್ರಗಳ ಕುರಿತ ಮೊದಲ ಲೇಖನ ಉಡುಪಿಯಲ್ಲಿ 2023ರಲ್ಲಿ ನಡೆದ ರಾಜ್ಯಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನದ ಮೊದಲಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ. ಇದರಲ್ಲಿ ಅವರು ಭಾರತದ ಆರ್ಷೇಯ ಪದ್ಧತಿಯ ಗುರುಕುಲದಿಂದ ಆಧುನಿಕವಾಗಿ ಕಲಿಸುವ ಕೇಂದ್ರಗಳ ಕುರಿತು ಒಂದು ಕ್ಷಕಿರಣವನ್ನು ಬೀರಿದ್ದಾರೆ. ಇದೊಂದು ಯಕ್ಷಗಾನರಂಗಕ್ಕೆ ಅನಿವಾರ್ಯವಾದ ದಾಖಲೆ ಎನ್ನಬಹುದಾಗಿದೆ. ಬಯಲಾಟ ಮೇಳಗಳ "ಪೂರ್ವರಂಗ" ಆ ಕಾಲದಲ್ಲಿ ಕಲಾವಿದರನ್ನು ರೂಪಿಸುವ ಕುಲುಮೆಗಳಾಗಿದ್ದವು ಎನ್ನುವ ಮಹತ್ವದ ಅಂಶವನ್ನು ಇಲ್ಲಿ ನಿರೂಪಿಸಿದ್ದಾರೆ. ಹೀಗಿರುವ ಯಕ್ಷಗಾನ ಕಲಿಕಾ ಪದ್ಧತಿಯಲ್ಲಿ ಬೆಳೆದ ಕಲಾವಿದರು ಕಲೆಯೆನ್ನುವುದನ್ನು ವ್ಯಕ್ತಿಸ್ಥಪ್ರಭಾವದ ಮೂಲಕ ಕಲಿತು ಅದನ್ನು ಮುಂದುವರಿಸಿದ್ದಾರೆ. ಅದರಲ್ಲಿ ಸಂಪ್ರದಾಯವೆನ್ನುವುದು ರೂಪುಗೊಂಡಿರುವುದು ಪ್ರದೇಶ, ಕಾಲ ಮತ್ತು ವ್ಯಕ್ತಿಗಳ ಪ್ರಭಾವದಿಂದ. ಭಾರತದ ಹೆಚ್ಚಿನ ಪ್ರದರ್ಶನಕಲೆಗಳು ಬೆಳೆದುಬಂದ ಬಗೆಯೇ ಹೀಗೆ. ಈ ಕಾರಣದಿಂದ ಯಕ್ಷಗಾನಕ್ಕೆ ಒಂದು ಮೂಲ ಶಾಸ್ತ್ರಗ್ರಂಥವಿಲ್ಲ ಎನ್ನುವ ಟೀಕೆಗಳು ವಿದ್ವತ್ ವಲಯದಲ್ಲಿ ಬರುತ್ತಿವೆ. ಅದನ್ನು ಗುರುತಿಸಿ ಉಪಾಧ್ಯರು ಪಾರ್ತಿಸುಬ್ಬ ಹದಿನಾರನೆ ಶತಮಾನದಲ್ಲಿ ರಚಿಸಿದ "ಯಕ್ಷಗಾನ ಸಭಾ ಲಕ್ಷಣ ಮತ್ತು ಪ್ರಸಂಗ ಪೀಠಿಕೆ" ಯನ್ನು ಉಲ್ಲೇಖಿಸಿ ಕಡಂದಲೆ ರಾಮರಾಯರು ಅದನ್ನು ಪರಿಷ್ಕರಿಸಿದವಿವರಗಳ ಕುರಿತು ಹೇಳುತ್ತಾರೆ. ಸೋಂದಾ ಕೃಷ್ಣ ಭಂಡಾರಿಯವರು ರಚಿಸಿದ "ಯಕ್ಷಗಾನ ಕೈಪಿಡಿ" ಯನ್ನು ವಿಮರ್ಶಿಸಿರುವ ರೀತಿ ಆಪ್ಯಾಯ ಮಾನವಾಗಿದೆ. ಪಾರ್ತಿಸುಬ್ಬನಾಗಲಿ, ಕಡಂದಲೆ ರಾಮರಾಯರಾಗಲೀ ನೀಡಿರುವುದಕ್ಕಿಂತ ಭಿನ್ನವಾಗಿ ಬತ್ತೀಸ ರಾಗದ ಪರಿಚಯದೊಂದಿಗೆ ಬಂದ ವಿಶಿಷ್ಠ ಕೈಪಿಡಿ ಹಾಗೂ ಇದು ಪ್ರಾಚೀನ ಸಂಪ್ರದಾಯವನ್ನು ತಿಳಿದುಕೊಳ್ಳುವವರಿಗೆ ಅಮೂಲ್ಯ ದಾಖಲೆ ಎನ್ನುವುದನ್ನು ಗುರುತಿಸಿ ಪೂರ್ವ ಸೂರಿಗಳನ್ನು ಗೌರವಿಸುತ್ತಾರೆ. ಯಕ್ಷಗಾನದ ಪಠ್ಯಶಿಕ್ಷಣಕ್ಕಾಗಿ ಅವರು ಕೇವಲ ಕರಾವಳಿ ಮತ್ತು ಮಲೆನಾಡಿನ ಸ್ಥಳಗಳ ಕುರಿತು ಹೇಳದೇ ಮಂಡ್ಯಜಿಲ್ಲೆಯ ಕಿಕ್ಕೇರಿಯ ಪುಟ್ಟಶಾಮಾಚಾರ್ಯರ

"ಸಭಾವಂದನೆ" ನಾಟ್ಯಶಾಸ್ತ್ರವನ್ನು ಅನುಸರಿಸಿ ರಚಿಸಿದ್ದಾದರೂ ಅದು ಕಲಿಕೆಗೆ ಪೂರಕವಾಗಿತ್ತು ಎನ್ನುವುದರ ಮೂಲಕ ಯಕ್ಷಗಾನವೆನ್ನುವುದು ಸಮಗ್ರ ಕರ್ಣಾಟಕದ ಕಲೆಯಾಗಿತ್ತು ಎನ್ನುವ ಮಾತನ್ನು ಗಟ್ಟಿಗೊಳಿಸುತ್ತಾರೆ. ಈ ಎಲ್ಲ ಗ್ರಂಥಗಳ ವಿವರಣೆಯನ್ನು ನೀಡಿ ಪೂರ್ವರಂಗದ ಕಲಿಕಾ ಪದ್ಧತಿಯ ಪದ್ಯಗಳು ಮತ್ತು ಬಿಡ್ತಿಕೆಗಳನ್ನು ವಿವರವಾಗಿ ತಿಳಿಸಿದ್ದಾರೆ. ಇವೆಲ್ಲವೂ ಕಾರಣಾಂತರಗಳಿಂದಾಗಿ ನಶಿಸಿಹೋದ ಕುರಿತು ವಿಷಾದದ ಭಾವವೂ ಅವರಲ್ಲಿದೆ. ಆ ಕಾರಣಕ್ಕಾಗಿ ಅವರು ಯಾರನ್ನೂ ದೂಷಿಸುವುದಿಲ್ಲ. ಬದಲಾಗಿ ಪೂರ್ವರಂಗವನ್ನು "ಪ್ರಾಯೋಗಿಕ ಪಾಠಶಾಲೆ" ಎನ್ನುವುದರ ಮೂಲಕ ಅದನ್ನು ಬೇರೆ ಯಾವರೀತಿಯಲ್ಲಿ ಅಳವಡಿಸಬಹುದು ಎನ್ನುವ ಆಲೋಚನೆಗೆ ಅವಕಾಶವನ್ನು ನೀಡುತ್ತಾರೆ. ಅವರು ಯಾವುದೇ ಪದ್ಧತಿಯ ನಶಿಸುವಿಕೆಗಾಗಲಿ, ಇಲ್ಲವೇ ಅದನ್ನು ಮರೆತುಬಿಡುವ ಕಲಾವಿದರನ್ನಾಗಲೀ ಟೀಕಿಸುವುದಿಲ್ಲ. ಆದರೆ ಆ ಕುರಿತು ಕಲಾಪ್ರಿಯರನ್ನು ಜಾಗ್ರತಗೊಳಿಸುವುದು ತಮ್ಮ ಶಾಂತ ಮನಸ್ಥಿತಿಯಲ್ಲಿ ಆ ವಿಷಯವನ್ನು ಮನಮುಟ್ಟುವಂತೆ ಹೇಳುವ ಮೂಲಕ. ಯಾವ ಸಂದರ್ಭದಲ್ಲಿಯೂ ಅವರು ತಮ್ಮ ಸಂಯಮವನ್ನು ಉಳಿಸಿಕೊಂಡೇ ಹೇಳಬೇಕಾಗಿರುವುದನ್ನು ಹೇಳುತ್ತಾರೆ. ಅದಕ್ಕೆ ಯಾವ ದಾಕ್ಷಿಣ್ಯವೂ ಇಲ್ಲ. ಇಂದು ನಾವು ಯಕ್ಷಗಾನದ ಪಠ್ಯದ ಕುರಿತು ಮಾತನಾಡುತ್ತೇವೆ. ಸರಕಾರ ಮತ್ತು ಅಕಾಡೆಮಿ ಎಲ್ಲವೂ ಏನೇನೋ ಒಂದು ಕಸರತ್ತನ್ನು ಮಾಡಿ ಕೊನೆಗೂ ಅದು ಮೂಲೆಸೇರುವಂತೆ ಆಯಿತು. ಆದರೆ ಸರಕಾರದ ಯಾವ ನೆರವೂ ಇಲ್ಲದೇ ಸ್ವತಃ ಆಸಕ್ತಿಯಿಂದ ಯಕ್ಷಗಾನದ ಕಲಿಕೆಗೊಂದು ಪಠ್ಯವನ್ನು ರಚಿಸಿದ ಕೃಷ್ಣ ಭಂಡಾರಿ, ಭಾಗವತರಾದ ನಾರ್ಣಪ್ಪ ಉಪ್ಪೂರರು, ಅನುಷ್ಠಾನಗೊಳಿಸಿದ ಗುರು ವೀರಭದ್ರ ನಾಯಕರು, ಹೊಸ್ತೋಟ ಮಂಜುನಾಥ್ ಭಾಗವತರು ಮೊದಲಾದವರನ್ನೆಲ್ಲ ದಾಖಲಿಸಿರುವ ಡಾ. ಆನಂದರಾಮ ಉಪಾಧ್ಯರ ಪ್ರಯತ್ನವನ್ನು ಮೆಚ್ಚಲೇಬೇಕು. ಬಯಲಾಟದ ಪೂರ್ವರಂಗದಿಂದ ಹಿಡಿದು ಇಂದಿನ ಯಕ್ಷಗಾನ ಕಲಿಕಾ ಕೇಂದ್ರಗಳೆಲ್ಲವನ್ನೂ ಉಲ್ಲೇಖಿಸಿದ್ದಾರೆ. ಇದು ದಾಖಲೆಯ ಅಂಕಿಅಂಶಗಳ ಪದಪ್ರಯೋಗವಾಗಿಲ್ಲ. ಅದನ್ನು ಆಸಕ್ತಿಯಿಂದ ಓದಲು ಸುಲಲಿತ ಶೈಲಿ ಅವರಿಗೆ ಸಿದ್ಧಿಸಿದೆ. ಯಕ್ಷಗಾನ ಮೊದಲನೆಯ ಸಮ್ಮೇಳನದಲ್ಲಿ ಮಂಡಿಸಲ್ಪಟ್ಟ ಮಹತ್ವದ ಈ ಪ್ರಬಂಧ ಯಕ್ಷಗಾನವನ್ನು ಕಲಿಯುವವರಿಗೂ ಮತ್ತು ಅದರ ಸಂಶೋಧಕರಿಗೂ ಅತ್ಯಗತ್ಯ ದಾಖಲೆಯಾಗಲಿದೆ.

ಅದೇರೀತಿ ಡಾ. ಶಿವರಾಮ ಕಾರಂತರ ಯಕ್ಷಗಾನ ಬಯಲಾಟ, ಯಕ್ಷಗಾನ ಮತ್ತು ಕಥಕಳಿ, ಎರಡನ್ನೂ ಸಹ ಈ ಕಲೆಯನ್ನು ಪರಿಚಯಿಸುವ ಪ್ರಮುಖ ದ್ವಾರಗಳು ಎಂದು ಬಣ್ಣಿಸಬಹುದು. ಶಿವರಾಮ ಕಾರಂತರ ಯಕ್ಷಗಾನ ಬಯಲಾಟ ಹರಿಹಂಚಾಗಿದ್ದ ಪ್ರಸಂಗ ಮತ್ತು ಪ್ರಯೋಗಗಳಿಗೆ ಒಂದು ವ್ಯವಸ್ಥಿತ ಸ್ವರೂಪವನ್ನು

ಕೊಟ್ಟ ಮೊದಲ ಪುಸ್ತಕ. ಇಂದು ಈ ಮಾಧ್ಯಮವನ್ನು ದೇಸಿ ಮತ್ತು ಮಾರ್ಗವೆಂದು ಕರೆಯುವ ಅನೇಕರಿಗೆ ಮೂಲ ಆಧಾರವಾಗಿರುವುದು ಈ ಕೃತಿಯಿಂದ. ಪಾರ್ತಿಸುಬ್ಬನ ಹುಟ್ಟೂರಿಗೆ ಕಾರಣವಾದ ಕಾರಂತರ ಲೇಖನದಿಂದ ಕುಕ್ಕಿಲ ಕೃಷ್ಣಭಟ್ಟರ "ಪಾರ್ತಿಸುಬ್ಬನ ಯಕ್ಷಗಾನಗಳು" ಹೊರಬರಲು ಸಾಧ್ಯವಾಯಿತು. ಇದೊಂದು ವಿವಾದಗಳಿಂದಾಗಿ ಡಾ. ಕಾರಂತರು "ಯಕ್ಷಗಾನ ಬಯಲಾಟ" ಬರೆಯಲು ಪ್ರೇರಣೆಯನ್ನು ಒದಗಿಸಿತು. ಕಾರಂತರ "ಯಕ್ಷಗಾನ ಬಯಲಾಟ" ಕೃತಿಯ ಪ್ರವೇಶಿಕೆಗೆ ಅತ್ಯಗತ್ಯವಾದ ಕೃತಿಯಾಗಿ ಅವರ ಈ ಲೇಖನವನ್ನು ಪರಿಗಣಿಸಬಹುದು. ಬಯಲಾಟದ ಸ್ತ್ರೀ ವೇಷಕ್ಕೆ ಕೊಟ್ಟ ಶಿರೋಭೂಷಣ ಡಾ. ಕಾರಂತರ ಕಲ್ಪನೆ. ಓಡಿಸ್ಸಿ ನೃತ್ಯದಿಂದ ಪ್ರಭಾವಿತವಾಗಿದೆ. ಕಾರಂತರ ಅಭಿಪ್ರಾಯವನ್ನು ಒಪ್ಪುವವರು, ಬಿಡುವವರು, ಅದರ ಕುರಿತು ತಿಳಿಯದವರು ಎಲ್ಲರಿಗೂ ಒಪ್ಪಿತವಾದ ಸಾಧನವಾಗಿ ಮೂಡಿದೆ. ಈ ಶಿರೋಭೂಷಣದ ಹಿಂದಿನ ಕರ್ತನ ಕುರಿತು ದಾಖಲಿಸುವ ಮೂಲಕ ಡಾ. ಕಾರಂತರ ಕೊಡುಗೆಯನ್ನು ಸ್ಮರಿಸಿದ್ದಾರೆ. ಯಕ್ಷಗಾನ ಮತ್ತು ಕಥಕಳಿ ಎನ್ನುವ ಪ್ರಬಂಧವನ್ನು ಉಲ್ಲೇಖಿಸಲು ಮುಖ್ಯ ಕಾರಣ ಇಂತಹದೊಂದು ತೌಲನಿಕ ಅಧ್ಯಯನ ಅನೇಕ ಸಂದರ್ಭಗಳಲ್ಲಿ ಮೌಕಿಕವಾಗಿತ್ತೇ ಹೊರತು ಬರಹರೂಪದಲ್ಲಿ ಇರಲಿಲ್ಲ. ಈ ವಿಷಯದಲ್ಲಿ ಆಳವಾದ ಅಧ್ಯಯನದೊಂದಿಗೆ ಬರೆದ ಡಾ. ಮಹಾಲಿಂಗೇಶ್ವರ ಶರ್ಮ ಕುಳಮರ್ವರ "ಯಕ್ಷಗಾನ ಮತ್ತು ಕಥಕಳಿ" ಗ್ರಂಥವನ್ನು ಪರಿಚಯಿಸಿದ ಲೇಖನ. ಹೀಗೆ ಪರಿಚಯಿಸುವಾಗ ಅದನ್ನು ಈ ಮೊದಲೇ ಪ್ರಸ್ತಾಪಿಸಿದ ಸಂಶೋಧಕ ಶ್ರೀ ವೆಂಕಟರಾಜ ಪುಣಿಂಚತ್ತಾಯರನ್ನು ಸ್ಮರಿಸಿದ್ದು ಯುಕ್ತವಾಗಿದೆ. ಕೇರಳ ಮತ್ತು ಕರ್ನಾಟಕದ ಕರಾವಳಿ ಎರಡೂ ಅನೇಕ ವಿಷಯಗಳಲ್ಲಿ ಸಾಮ್ಯತೆಯನ್ನು ಹೊಂದಿವೆ. ಇಲ್ಲಿನ ದೇವಾಲಯಗಳಲ್ಲಿನ ಶೈವಾಗಮ ಪದ್ಧತಿಯ ಪೂಜಾವಿಧಾನಗಳಲ್ಲಿ ಏಕಸೂತ್ರವನ್ನು ನೋಡಬಹುದು. ಕಥಕಳಿಯ ಮೂಲ 'ರಾಮನಾಟ್ಟಂ' ಮತ್ತು ಬಯಲಾಟಗಳ ನಡುವಿನ ಬಾಂಧವ್ಯವನ್ನು ಅವರ "ಕಥಕಳಿ ಯಕ್ಷಗಾನ ಕೇಳಿಕೆ" ಎನ್ನುವ ಪುಣಿಂಚತ್ತಾಯರ ದೀರ್ಘಲೇಖನವನ್ನು ಉಲ್ಲೇಖಿಸುತ್ತಾರೆ. ಸಂಶೋದನಾ ಕೃತಿಯೊಂದನ್ನು ಓದಲು ಆಸಕ್ತಿಯುಂಟಾಗುವಂತೆ ಮಾಡಿದ ಲೇಖನ ಇದು. ಅದೇರೀತಿ ಆರ್. ಆರ್. ಪಾಂಗಾಳರ "ವ್ಯಾಸ ಭಾರತ ಭಿನ್ನ ವಿನ್ಯಾಸ" ಕೃತಿಯ ಪರಿಚಯ ಸಹ ಇದೇ ಜಾಡಿನಲ್ಲಿ ಸಾಗುತ್ತದೆ. ಪಾಂಗಾಳರು ಪಂಪ, ರನ್ನ ಕುಮಾರವ್ಯಾಸ, ಲಕ್ಷ್ಮೀಶ, ಮೊದಲಾದವರಿಂದ ಹಿಡಿದು ಯಕ್ಷಗಾನ ಪ್ರಸಂಗಕರ್ತರಾದ ಪಾರ್ತಿಸುಬ್ಬ, ಧ್ವಜಪುರದ ನಾಗಪ್ಪಯ್ಯ, ಹಟ್ಟಿಯಂಗಡಿಯ ರಾಮ ಭಟ್ಟ, ದೇರಾಜೆ, ಭೈರಪ್ಪ ಮೊದಲಾದವರ ಮೂಲಕ ಮರುಹುಟ್ಟು ಪಡೆದ ವಿಷಯವನ್ನು ಚಿಕಿತ್ಸಕವಾಗಿ ಬರೆದಿದ್ದಾರೆ ಎನ್ನುವುದನ್ನು ಇಲ್ಲಿ ವಿವರಿಸಿದ್ದಾರೆ. ಉಪಾಧ್ಯರ ಲೇಖನದ ವಿಶೇಷವೇ ಅವರು ವಿಷಯವನ್ನು ಪ್ರಸ್ತಾಪಿಸುವ ರೀತಿ,

ಮತ್ತು ವಿಷಯದ ತಿರುಳನ್ನು ತಮ್ಮದೇ ಆದ Crisp ನುಡಿಗಟ್ಟಿನೊಂದಿಗೆ ಹೇಳುವ ವಿಧಾನ. ಉದಾಹರಣೆಗೆ ಪಾಂಗಾಳರ ಕೃತಿಯನ್ನು ಅವರು ಎತ್ತಿಗಟ್ಟುವುದು ಹೀಗೆ ಪಾಂಗಳರು ತಮ್ಮ "ವ್ಯಾಸಭಾರತ ಭಿನ್ನ ವಿನ್ಯಾಸ"ಕ್ಕೆ ಒಂದು ವೈಚಾರಿಕ ನೆಲೆಗಟ್ಟು ಎಂದಿದ್ದಾರೆ.ಇದೊಂದು ರೀತಿಯಲ್ಲಿ ಠೀಕು ಇದ್ದಂತೆ. ಮೂಲಕತೆಗಿಂತ ಭಿನ್ನ ಚಿಂತನೆಯಿದ್ದು ಅಲ್ಲಿನ ಘಟನೆಗಳಿಗೆ ತಮ್ಮ ಮೂಸೆಯಲ್ಲಿ ಮೂಡಿದ ಚಿಂತನೆಗಳ ಲೇಪನವನ್ನು ಮಾಡುವ ಮೂಲಕ ಕೃತಿ ಇನ್ನಷ್ಟು ಮೆರುಗುವಂತೆ ನೋಡಿಕೊಂಡಿದ್ದಾರೆ. ಅಲ್ಲಿನ ಅನೇಕ ಸಂದಿಗ್ಧವಿಚಾರಗಳಿಗೆ ವಾಸ್ತವದ ಉತ್ತರವನ್ನು ನೀಡಲು ಪ್ರಯತ್ನಿಸಿದ್ದಾರೆ. ಪ್ರತಿ ಪಾತ್ರದ ಒಳನೋಟವನ್ನು ಬಿಚ್ಚಿದರೂ ಕೂಡ ಕಲ್ಪನೆಗೆ ವಿರುದ್ಧವಾದ ಒಳನೋಟ ನೀಡಿದ್ದಾರೆ.ಮೂಲ ಮಹಾಭಾರತವು ಪದ್ಯ ಸಾಹಿತ್ಯಗಳಲ್ಲಿ "ಮಿತ್" ಸೃಷ್ಟಿಗೆ ಪೂರಕವಾಗಿದ್ದರೆ, ಪಾಂಗಾಳರ ಕೃತಿಯುಗದ್ಯ ರೂಪದಲ್ಲಿದ್ದು "ಮಿತ್"ನ್ನು ಒಡೆಯುವಲ್ಲಿ ಯಶಸ್ವಿಯಾಗಿದೆ. ಲೇಖಕರು ಪ್ರತಿ ಅಧ್ಯಾಯವನ್ನು ಪ್ರಾರಂಭಿಸುವಾಗ ಅಲ್ಲಿನ ಚಿತ್ರವೊಂದನ್ನು ನೀಡುತ್ತಾ ಪಾತ್ರಕ್ಕೆ ಸಂಬಂಧಿಸಿದ ಘಟನೆಗಳ ವಿಶ್ಲೇಷಣೆಗೆ ತೊಡಗುತ್ತಾರೆ. ಕೃತಿ ವೈಚಾರಿಕವಾಗಿದ್ದರೂ ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ". ಕಾವ್ಯದ ಪ್ರವೇಶಕ್ಕೆ ಇಂತಹ ಪರಿಚಯಾತ್ಮಕ ಲೇಖನ ತುಂಬಾ ಸಹಕಾರಿ.

ಸಂಶೋಧನಾ ಲೇಖನ, ಗೋಷ್ಠಿಯಲ್ಲಿ ಮಂಡನೆ ಮಡುವ ವಿಚಾರಗಳು ಮತ್ತು ವಿಮರ್ಶೆ ಮೂಲತಃ ಪ್ರಬಂಧ ಮಾದರಿಯವು. ಇವುಗಳಲ್ಲಿ ರಚನಾಕಾರನಿಗೆ ರಸತಜ್ಞತೆಯ ಸೂಕ್ಷ್ಮ ಪರಿಚಯ ಇರಬೇಕಾಗುತ್ತದೆ. ರಸಾನುಭವ ಮತ್ತು ರಸತಜ್ಞತೆ ಇವು ಒಂದೇ ನೆಲಯದಾದರೂ ತಜ್ಞತೆ ಇರುವಲ್ಲಿ ಚಿಕಿತ್ಸಕ ಬುದ್ಧಿ ಇರಬೇಕಾಗುತ್ತದೆ. ಅನುಭವ ಸ್ವಂತದ್ದು , ಅದನ್ನು ಅನುಭವಿಸಿದವನಿಗೆ ಅದನ್ನು ವಿವರಿಸುವ ಸಾಮರ್ಥ್ಯದ ಕೊರತೆ ಇರಬಹುದು. ಆತ ತುಂಬಾ ಚನ್ನಾಗಿದೆ ಎನ್ನುವ ವಿವರಣೆಯನ್ನು ಕೊಟ್ಟು ಸುಮ್ಮನಾಗಬಹುದು. ಆದರೆ ರಸತಜ್ಞತೆಯಲ್ಲಿ ಹಾಗಲ್ಲ, ಆತ ತಾರ್ಕಿಕವಾಗಿ ಏಕೆ ಮತ್ತು ಹೇಗೆ ಚನ್ನಾಗಿದೆ ಎನ್ನುವುದನ್ನು ಇನ್ನೊಬ್ಬರಿಗೆ ಅರ್ಥವಾಗುವಂತೆ ಹೇಳಬಲ್ಲ. ಒಮ್ಮೊಮ್ಮೆ ಬರಹದ ಮೋಡಿಯಲ್ಲಿ ಏನೋ ಇದೆ ಎನ್ನುವ ಭ್ರಮೆಗೆ ಓದುಗ ಒಳಗಾಗಬಹುದು. ರಾಮಾಯಣದ ಮಂಥರೆಯನ್ನು ವಾಲ್ಮೀಕಿಯ ದೃಷ್ಟಿಕೋನದಲ್ಲಿ ನೋಡಿದಾಗ ಹೊರ ಅರ್ಥ ಆಕೆ ಕೆಟ್ಟವಳು ಎನ್ನುವದಾಗಿ ಬರುತ್ತದೆ. ಆದರೆ ಆಕೆಯಲ್ಲಿಯೂ ಒಂದು ಮನಸ್ಸಿದೆ ಎನ್ನುವುದನ್ನು ಕುವೆಂಪುರವರಷ್ಟು ಚನ್ನಾಗಿ ರಾಮಾಯಣ ದರ್ಶನ ಕಾವ್ಯದಲ್ಲಿ ತಂದವರು ಬೇರೆ ಯಾರೂ ಇಲ್ಲ. ವಾಲ್ಮೀಕಿಯ ಮಂಥೆರೆಗೆ ನಿಷ್ಠರಾಗಿಯೇ ಅವಳ ಮನವನ್ನು ಹೊಕ್ಕಿದ್ದಾರೆ. ಹಾಗಾಗಿ ಇಲ್ಲಿ ಮಂಥರೆ ಮನಗೆ ಹೊಕ್ಕ ಮಾರಿಯಾದರೂ ಕೈಕೆಯ ಪಾಲಿಗೆ ಮಮತೆಯ ಸುಳಿಯಾಗಿದ್ದಾಳೆ. ರಸಭಾವವನ್ನು ಅನುಭವಿಸುವುದಕ್ಕೂ ರಸತಜ್ಞತೆಗೂ ಇರುವ

ವ್ಯತ್ಯಾಸ ಇದು. ಉಪಾಧ್ಯರು ಅವಲೋಕನದಲ್ಲಿ ಈ ಹಾದಿಯನ್ನು ಆರಿಸಿಕೊಂಡಿದ್ದಾರೆ.

ಕಬ್ಬಿನಾಲೆ ವಸಂತ ಭಾರದ್ವಾಜರು ಸಹ ಕವಿಹೃದಯದ ಸಂಶೋಧಕರು. ರಂಗಪ್ರದರ್ಶನಕ್ಕಿಂತ ಅವರು ಪ್ರಸಂಗ ಸಾಹಿತ್ಯಕ್ಕೆ ಮಾರುಹೋದವರು. ಹಾಗೇ ನೋಡಿದರೆ ಕಬ್ಬಿನಾಲೆಯವರಿಗೆ ಆನಂದರಾಮ ಉಪಾಧ್ಯರಿಗೆ (ನನ್ನನ್ನೂ ಸೇರಿಸಿ) ಸಮಾನ ವೃತ್ತಿ ಹಿನ್ನೆಲೆಯಿದೆ. ಎಲ್ಲರೂ ಬ್ಯಾಂಕಿಂಗ್ ಹಿನ್ನೆಲೆಯಿಂದ ಬಂದವರು. ಇಲ್ಲಿ ವಸ್ತುವನ್ನು ಅವಲೋಕಿಸುವಾಗ ಅದರಲ್ಲಿ ತರ್ಕ ಮತ್ತು ಅನುಷ್ಠಾನವನ್ನು ಆಧರಿಸಿ ನಿರ್ಣಯವನ್ನು ತೆಗೆದುಕೊಳ್ಳುವುದು ಮುಖ್ಯ. ಬ್ಯಾಂಕಿಂಗ್ ಭಾಷೆಯಲ್ಲಿ ಅದನ್ನು Banking theory & Banking Practice ಎನ್ನುತ್ತಾರೆ. ಕಬ್ಬಿನಾಲೆಯವರ ಕವಿಕಾವ್ಯ ವಿಹಾರ 20 ಯಕ್ಷಗಾನ ಕವಿಗಳನ್ನು ಸಾಹಿತ್ಯಾತ್ಮಕವಾಗಿ ಪರಿಚಯಿಸಿದ ಕೃತಿ. ಇದೀಗ 2021ರಲ್ಲಿ ಪ್ರಕಟಿಸಿದ ಅದರ ಮುಂದಿನ ಭಾಗವಾಗಿ 30 ಯಕ್ಷಗಾನ ಕವಿಗಳನ್ನು ಪರಿಚಯಿಸಿದ "ಕವಿ ಕಾವ್ಯ ವಿಚಾರ" ಮೇಲಿನ ಉದಾಹರಣೆಗಳಿಗೆ ಸಾದೃಶ್ಯವಾಗುವಂತೆ ರಚಿಸಿದ ಕೃತಿ. ಪ್ರಸಂಗ ಕರ್ತರನ್ನು ಈ ರೀತಿ ಶೋಧಿಸಿ ಗುರುತಿಸಿದ ಮತ್ತೊಂದು ಗ್ರಂಥ ಕನ್ನಡದಲ್ಲಿ ಇಲ್ಲ. ಈ ಕೃತಿಯ ತುಲನೆಯನ್ನೂ ಉಪಾಧ್ಯರು ಅಷ್ಟೇ ಚನ್ನಾಗಿ ಮಾಡಿದ್ದಾರೆ. ಭಾರದ್ವಾಜರಲ್ಲಿರುವ ಪ್ರಬುದ್ಧ ಪಾಂಡಿತ್ಯ, ಸಮವಾದ ಪ್ರಜ್ಞೆ, ಛಂದೋವೈವಿದ್ಯತೆ, ಅಲಂಕಾರಿಕ ಶಕ್ತಿ ಮತ್ತು ವರ್ಣ ಸಾಮರ್ಥ್ಯಗಳನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಅದೇ ರೀತಿ ಹೊಸ್ತೋಟರ "ತತ್ವ ಚಿಂತನೆಗೆ ಕೃಷ್ಣ ಮಹಿಮೆಯ ಲೇಪನ – ಹೊಸ್ತೋಟರ ಭಾಗವತ ಪ್ರಸಂಗಗಳು", ಡಾ. ನಂಬಿಯಾರರ "ತವನಿಧಿ" ರವಿ ಮಡೋಡಿಯವರ "ಮಲೆನಾಡಿನ ಯಕ್ಷಚೇತನಗಳು – ಮಲೆನಾಡು ಯಕ್ಷಗಾನ ಲೋಕದ ಪಾತಾಳ ಗರಡಿ" ಕುರಿತಾದ ಬರಹಗಳಲ್ಲಿಯೂ ಅವರ ಸುದ್ರರ್ಶನ ಗುಣಗಳನ್ನು ಕಾಣಬಹುದು.

ಇದರಲ್ಲಿ ಬರುವ "ವೀರ ಪರಶುರಾಮ" ಡಿ. ಎಸ್. ಶ್ರೀಧರ ಅವರ ಪ್ರಸಿದ್ಧವಾದ ಕಾದಂಬರಿ. ನೇರವಾಗಿ ಯಕ್ಷಗಾನಕ್ಕೆ ಸಂಬಂಧಿಸಿದಲ್ಲವಾದರೂ ಯಕ್ಷಗಾನ ಅರ್ಥದಾರಿಗಳಿಗೆ ಒಂದು ಆಕರ ಗ್ರಂಥವಾಗಬಲ್ಲದು. ಅದರಲ್ಲಿ ಅವರು ಶ್ರೀಧರರಿಗಿರುವ 'ಸನ್ನಿವೇಶ ಸೃಷ್ಟಿ' ಯ ಅಮೋಘತೆಯನ್ನು ಗುರುತಿಸಿದ್ದಾರೆ. ಇನ್ನು ಅಣ್ಣ ಮಹಾಬಲ, ಮದ್ದಳೆಯ ಮಾಂತ್ರಿಕ ಹಿರಿಯಡ್ಕ ಗೋಪಾಲ ರಾವ್, ಯಕ್ಷಗಾನದ ಕಣ್ವ ನಾರ್ಣಪ್ಪ ಉಪ್ಪೂರರು, ಎಸ್. ಎನ್. ಪಂಜಾಜೆ, ಇವುಗಳೆಲ್ಲ ವ್ಯಕ್ತಿ ಪರಿಚಯದವುಗಳಾದರೂ ಪ್ರತಿಯೊಬ್ಬರಲ್ಲೂ ಇರುವ ಗುಣವಿಶೇಷತೆಯನ್ನು ಚನ್ನಾಗಿ ವಿಶ್ಲೇಷಿದ್ದಾರೆ.

ಇಲ್ಲಿ ಡಾ. ಆನಂದರಾಮ ಉಪಾಧ್ಯರ ವಿಶೇಷ ಲೇಖನದ ಕುರಿತು ಹೇಳಲೇ ಬೇಕು. ಉತ್ತರ ಕನ್ನಡ ಜಿಲ್ಲೆಯ ಮಂಚಿಕೇರಿಯ ರಾ. ಭಾ. ಹಾಸಣಗಿಯವರ

"ಯಕ್ಷನಾಟಕಗಳು" ಕುರಿತಾದ ಅವಲೋಕನ. ಡಾ. ಎಚ್. ಆರ್. ಅಮರನಾಥರಿಂದ ಹೊಸರೂಪದಲ್ಲಿ ಎರಡನೆ ಮುದ್ರಣವಾಗಿ ಹೊರಬಂದ "ಯಕ್ಷನಾಟಕ" ಹಾಸಣಗಿಯವರು ಯಕ್ಷಗಾನವನ್ನು ನೋಡಿದ ವಿಭಿನ್ನ ರೀತಿಯನ್ನು ತೆರೆದಿಡುತ್ತದೆ. ಬಯಲಾಟ, ದಶಾವತಾರ, ಎನ್ನುವುದು ಇತ್ತೀಚೆಗೆ ಯಕ್ಷಗಾನ ಎನ್ನುವ ಮರುರೂಪವನ್ನು ಪಡೆದ ಹೆಸರು. ಈ ಕುರಿತು ಸುಮಾರು ಐವತ್ತರ ದಶಕದಲ್ಲಿ ಉತ್ತರಕನ್ನಡ ಜಿಲ್ಲೆಯಲ್ಲಿ ಜಿ. ಆರ್. ಪಾಂಡೇಶ್ವರ, ಗೌರೀಶ ಕಾಯ್ಕಿಣಿ, ಗಂಗಾಧರ ಶಾಸ್ತ್ರಿ ಮೊದಲಾದವರೆಲ್ಲರೂ ಗಂಭೀರವಾದ ಚರ್ಚೆಯನ್ನು ಮಾಡಿದ್ದರು ಎನ್ನುವುದನ್ನು ಗಂಗಾಧರ ಶಾಸ್ತ್ರಿಯವರು ಉಲ್ಲೇಖಿಸಿದ್ದರು. ಹಾಸಣಗಿಯವರು ಈ ಕಲೆಯ ಗುಣ ಲಕ್ಷಣಗಳನ್ನೆಲ್ಲವನ್ನೂ ಉಲ್ಲೇಖಿಸಿ ಇದನ್ನು ಯಕ್ಷನಾಟಕಗಳು ಎನ್ನುವುದಾಗಿ ಮರುನಾಮಕರಣ ಮಾಡಿದ್ದರು. ಅದನ್ನು ಸರಿಯಾದ ನೆಲೆಯಲ್ಲಿ ಗ್ರಹಿಸಿ ಅವಲೋಕಿಸಿರುವುದು ಉಪಾಧ್ಯರ ಹಿರಿಮೆ.

ಸಾಹಿತ್ಯ ಮತ್ತು ಪ್ರದರ್ಶನ ಕಲೆಗಳು ಅನಾವರಣಗೊಳ್ಳುವುದು ಕಲ್ಪನಾ ಶಕ್ತಿಯಮೇಲೆ. ಈ ಕಲ್ಪನಾಶಕ್ತಿ ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದದ ಪ್ರತಿಮೆಗಳನ್ನು ಬಳಸಿಕೊಳ್ಳುತ್ತವೆ. (ಕೃಪೆ.;- ಬಿ. ಎಚ್, ಶ್ರೀಧರ). ಅದನ್ನು ನೋಡಲು ಸಾಮಾನ್ಯರಿಗೆ ಅನುಕೂಲವಾಗುವ ವಿಧಾನ ಒಂದು. ಇನ್ನೊಂದು ಅದರೊಳಗಿನ ನಿರ್ವಚನವನ್ನು (Etymology) ಅನಾವರಣಗೊಳಿಸಬಲ್ಲ ಅವಲೋಕನಕಾರತ್ವ. ಉದ್ದೇಶ ಪೂರ್ವಕವಾಗಿ ನಾನು ಇಲ್ಲಿ ವಿಮರ್ಶಕ ಎನ್ನುವ ಪದವನ್ನು ಬಳಸಿಲ್ಲ. ವಿಮರ್ಶಕ ತನ್ನ ಅನುಭವದ ಮತ್ತು ತನ್ನ ನೇರಕ್ಕೆ ವಸ್ತುವನ್ನು ನೋಡುತ್ತಾನೆ. ಅವಲೋಕನಕಾರ ರಚನಾಕಾರ/ಕಲಾವಿದರ ನೆಲೆಯಲ್ಲಿ ನಿಂತು ಅದರ ಗುಣ-ದೋಷಗಳನ್ನು ಅವಲೋಕಿಸುತ್ತಾನೆ. ಎರಡನೆಯವನಿಗೆ ರಸಾಸ್ವಾದನೆ ಮುಖ್ಯ. ಹತ್ತೊಂಭತ್ತು ಲೇಖನಮಾಲಿಕೆಯ ಈ ಕೃತಿಯಲ್ಲಿ ಉಪಾಧ್ಯರ ನಿಲುವು ಅವಲೋಕನಕಾರನದ್ದು. ಬೇರೆ ಬೇರೆ ಸಂದರ್ಭದಲ್ಲಿ ಲೇಖನಗಳು ಬರೆದಿರುವು ದಾದರೂ ಅವುಗಳಲ್ಲಿ ಏಕಸೂತ್ರವಿದೆ. ಕಲಾತಜ್ಞತೆ ರಸಭಾವದಲ್ಲಿ ಮಿಳಿತವಾಗಿವೆ. ಕವಿಹೃದಯದ ಭಾಷೆ ಅವರಿಗೆ ಸಿದ್ಧಿಸಿದೆ. ಅಧ್ಯಯನ ಮತ್ತು ಪರಿಚಯಾತ್ಮಕತೆ ಎರಡಕ್ಕೂ ಉಪಯೋಗವುಳ್ಳ ಕೃತಿ ಇದು.

ಅಕ್ಷಯ ತೃತೀಯ
10-05-2024

ನಾರಾಯಣ ಯಾಜಿ
ಸಾಲೇಬೈಲು.

ಅರಿಕೆ

ಯಕ್ಷಗಾನ ಸಾಹಿತ್ಯ, ಕಲೆ, ಕಲಾವಿದರ ಕುರಿತಾದ ಸಾಂದರ್ಭಿಕ ಲೇಖನಗಳು, ವಿಚಾರಗೋಷ್ಠಿಗಳಲ್ಲಿ ಮಂಡಿತವಾದ ಪ್ರಬಂಧಗಳು, ಯಕ್ಷ ಸಾಹಿತ್ಯ ಕೃತಿಗಳ ವಿಶ್ಲೇಷಣಾತ್ಮಕ ಬರಹಗಳ ಸಂಕಲನವೇ "ಯಕ್ಷ ಸಂಕಾಶ". ಯಕ್ಷಗಾನದ ನಾನಾ ಮಗ್ಗುಲಗಳನ್ನು ಪರಿಚಯಿಸುವ, ಅಭ್ಯಸಿಸಿ ನಿಕಷಕ್ಕೆ ಒಡ್ಡುವ ಆ ಮೂಲಕ 'ಸಂಕಾಶ' ಕ್ಕೆ ತರುವ ಪ್ರಯತ್ನದ ಫಲವಿದು. ಯಕ್ಷಗಾನ ಕರ್ನಾಟಕದ ಪ್ರಾತಿನಿಧಿಕ ಕಲೆ ಎಂಬುದು ನನ್ನ ಅಚಲ ನಿಲುವು. ಈ ಕಾರಣ ಎಲ್ಲ ಪ್ರಸ್ತುತಿಯಲ್ಲೂ ಕರ್ನಾಟಕದ ವ್ಯಾಪ್ತಿಯಲ್ಲೇ ಚರ್ಚಿಸಲಾಗಿದೆ. ಹೀಗಾದಾಗ ಮಾತ್ರ 'ಯಕ್ಷಗಾನ' ಎಲ್ಲ ಕನ್ನಡಿಗರನ್ನು ಒಳಗೊಳ್ಳಲು ಸಾಧ್ಯ. ಇಲ್ಲಿನ ಹತ್ತೊಂಬತ್ತು ಲೇಖನಗಳಲ್ಲಿ ಹೆಚ್ಚಿನವು ಯಕ್ಷ ಸಾಹಿತ್ಯ ಕ್ಕೆ ಸಂಬಂಧಿಸಿದವು. "ಯಕ್ಷ ಶಿಕ್ಷಣ-ಪಠ್ಯಹಾಗೂ ಕಲಿಕೆ" ಪ್ರಥಮ ರಾಜ್ಯ ಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧದ ವಿಸ್ತೃತ ರೂಪ. ಪಾರಂಪರಿಕ ಯಕ್ಷ ಶಿಕ್ಷಣ ವ್ಯವಸ್ಥೆಯು ಇಂದಿನ ದಿನ ಮಾನದಲ್ಲಿ ಹೊಸತರೆಡೆಗೆ ಹೊರಳುತ್ತಿರುವುದರ ಹೊಳಹು ಇಲ್ಲಿದೆ. ಮೂಲ ತಳಹದಿಯ ಚಿತ್ರಣದೊಂದಿಗೆ ಪಡೆದುಕೊಳ್ಳುತ್ತಿರುವ ಭಿನ್ನ ಹರವುಗಳ ವಿವರವಿದೆ. ಯಕ್ಷಗಾನಕಲಾವಿದರ, ಪ್ರದರ್ಶನಗಳ, ಯಕ್ಷ ಕೃತಿಗಳ ಕುರಿತು ಬರೆದ ಲೇಖನಗಳು ಸಂಸ್ಮರಣ ಗ್ರಂಥಗಳಲ್ಲಿ, ಅಭಿನಂದನಾ ಗ್ರಂಥಗಳಲ್ಲಿ, ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಬರೆಹಗಳನ್ನು ಪ್ರಕಟಿಸಿದ ಗೌರವ ಗ್ರಂಥ ಗಳ ಸಂಪಾದಕ ರಿಗೆ ಹಾಗೂ ವಿಜಯ ಕರ್ನಾಟಕ, ವಿಜಯವಾಣಿ, ವಿಶ್ವ ವಾಣಿ, ಯಕ್ಷ ರಂಗ, ಯಕ್ಷ ಪ್ರಭ, ಹರ್ಷ ವಾಣಿ ಪತ್ರಿಕೆಗಳಿಗೆ ನಾನು ಋಣಿ.

'ಯಕ್ಷ ಸಂಕಾಶ'ಕ್ಕೆ ಪ್ರೀತಿಯಿಂದ ಮುನ್ನುಡಿ ಬರೆದು ಕೊಟ್ಟವರು ಖ್ಯಾತ ಲೇಖಕರು ಮತ್ತು ಅರ್ಥಧಾರಿಗಳು ಆದ ಶ್ರೀ ನಾರಾಯಣ ಯಾಜಿ ಸಾಲೆಬೈಲು ಅವರು. ಆತ್ಮೀಯ ಗೆಳೆಯರಾದ ಯಾಜಿ ಅವರಿಗೆ ನಾನು ಆಭಾರಿ.

ಇಲ್ಲಿನ ಬರೆಹಗಳಿಗೆ ಅನೇಕರು ಕಾರಣರಾಗಿದ್ದಾರೆ. ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಡಾ. ಜಿ. ಎಲ್. ಹೆಗಡೆ, ಹೂವಿನಹಡಗಲಿಯ ಬಯಲಾಟ ಅಧ್ಯಯನ ಕೇಂದ್ರದ ಡಾ. ಕರಿಶೆಟ್ಟಿ ರುದ್ರಪ್ಪ, ಶಿವರಾಮ ಕಾರಂತ ವೇದಿಕೆಯ ಪಾ. ಚಂದ್ರಶೇಖರ ಚಡಗ, 'ಯಕ್ಷ ಹಂಸ'ದ ಸಂಪಾದಕರಾದ ಡಾ. ವಿಜಯಾನಳಿನಿ ರಮೇಶ್, ಶ್ರೀನಿವಾಸ ಸಾಸ್ತಾನ, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ವಿದ್ಯಾರಶ್ಮಿ ಪೆಲತಡ್ಕ, ರಾಜಶೇಖರ ಜೋಗಿನ್ಮನೆ, ಕಡತೋಕ ಗೋಪಾಲಕೃಷ್ಣ ಭಾಗವತ, ಕೆ.ಎಲ್. ಕುಂಡಂತಾಯ, ಕೆ.ಎಲ್. ರವಿಶಂಕರ ಉಪಾಧ್ಯ, ಡಾ. ರಾಧಾಕೃಷ್ಣ ಉರಾಳ, ರವಿಮಡೋಡಿ, ಕೆರೆಮನೆ ಶಿವಾನಂದ ಹೆಗಡೆ, ಕೆ. ಮೋಹನ್, ಸುದರ್ಶನ ಉರಾಳ ಮುಂತಾದವರಿಗೆ ನಾನು ಕೃತಜ್ಞ.

ಕಳೆದ ಐದು ದಶಕಗಳಿಂದ ಗೆಳೆಯರಾಗಿದ್ದು ನನ್ನ ಬರವಣಿಗೆಗೆ ಒತ್ತಾಸೆ ನೀಡುತ್ತಿರುವ ನಾಡಿನ ಪ್ರಸಿದ್ಧ ಕವಿ ಡಾ. ಎಚ್. ಎಸ್. ವೆಂಕಟೇಶಮೂರ್ತಿ ಮತ್ತು ಖ್ಯಾತ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರಿಗೆ ಆದರದ ವಂದನೆಗಳು. ಈ ಪುಸ್ತಕವನ್ನು ಪ್ರಕಟಿಸುತ್ತಿರುವ ಐಸಿರಿ ಪ್ರಕಾಶನದ ಡಾ. ಮಂಜುನಾಥ ಪಾಳ್ಯ ಹಾಗೂ ತಂಡದವರಿಗೆ, ಗೆಳೆಯ ಡಾ. ಆರ್. ವಾದಿರಾಜು, ಅಂದವಾಗಿ ಡಿ.ಟಿ.ಪಿ ಮಾಡಿಕೊಟ್ಟ ಶ್ರೀ ವಿ.ಡಿ. ಲಕ್ಷ್ಮೀನಾರಾಯಣ, ಪುಸ್ತಕ ವಿನ್ಯಾಸ ಗೊಳಿಸಿದ ಯಶ್ ಕ್ರಿಯೇಷನ್ಸ್, ಮುಖಪುಟ ವಿನ್ಯಾಸಕಾರರಾದ ಮರೂನಿ, ಮುದ್ರಣಕಾರರಾದ ಎಸ್.ಬಿ. ಪ್ರಿಂಟಿಂಗ್ ಅಂಡ್ ಬೈಂಡಿಂಗ್ ವರ್ಕ್ಸ್ ಹಾಗೂ ಸಹಕರಿಸಿದ ಎಲ್ಲ ಗೆಳೆಯರಿಗೆ ಧನ್ಯವಾದಗಳು.

ನನ್ನ ಬಾಳಸಂಗಾತಿ ಪ್ರೇಮಾ ಸದಾ ಬರವಣಿಗೆಗೆ ಪ್ರೋತ್ಸಾಹಿಸುತ್ತಾ ಬಂದವಳು. ಈ ಕೃತಿಯನ್ನು ನನ್ನ ಪ್ರೀತಿಯ ಮೊಮ್ಮಗ ಆರ್ಣವ, ಮಗಳು ಸೀಮಂತಿನಿ ಹಾಗೂ ಅಳಿಯ ವೆಂಕಟೇಶ ಅವರಿಗೆ ಪ್ರೀತಿಯಿಂದ ಅರ್ಪಿಸುತ್ತಿದ್ದೇನೆ. ಇವರೆಲ್ಲರಿಗೆ ನನ್ನ ನೆನಕೆಗಳು.

ಬುದ್ಧ ಪೂರ್ಣಿಮೆ

23.05.2024 ಡಾ. ಆನಂದರಾಮ ಉಪಾಧ್ಯ

ಪರಿವಿಡಿ

[illegible]

ಯಕ್ಷಶಿಕ್ಷಣ – ಪಠ್ಯ ಮತ್ತು ಕಲಿಕೆ

ಆರ್ಷೇಯ ಭಾರತೀಯ ಶಿಕ್ಷಣ ವ್ಯವಸ್ಥೆಯು "ಗುರುಕುಲ" ಮಾದರಿಯದ್ದು. ಋಷಿಮುನಿಗಳ ಆಶ್ರಮದಲ್ಲಿದ್ದು ಅವರ ಸೇವೆ ಮಾಡುತ್ತಾ ವಿದ್ಯಾರ್ಥಿಯಾದವನು ಜ್ಞಾನಾರ್ಜನೆ ಮಾಡಬೇಕಾಗಿತ್ತು. ಭಾರತೀಯ ಸಂಸ್ಕೃತಿಯಲ್ಲಿ ಈ ಬಗೆಯ "ಗುರುಶಿಷ್ಯ" ಪರಂಪರೆಗೆ ಹಿರಿದಾದ ಸ್ಥಾನವಿದೆ. ನಮ್ಮ ದೇಶದಲ್ಲಿ ಪಾಶ್ಚಾತ್ಯ ಶಿಕ್ಷಣ ಪದ್ಧತಿ ಮೊದಲಾಯಿತು. ಆಂಗ್ಲ ಶಿಕ್ಷಣ ಕ್ರಮದಂತೆ ಬೋಧಿಸುವ ಶಾಲೆಗಳು ಕಳೆದ ಶತಮಾನದ ಮೊದಲ ಭಾಗದಲ್ಲಿ ಎಲ್ಲೆಡೆ ಪ್ರಾರಂಭವಾದವು. ಡಾ. ಶಿವರಾಮಕಾರಂತರ ಮರಳಿಮಣ್ಣಿಗೆಯಲ್ಲಿ ಶಿಕ್ಷಣ ವ್ಯವಸ್ಥೆ ಬದಲಾಗಿದ್ದರ ಫಲವಾಗಿ ಉಂಟಾದ ಸಾಮಾಜಿಕ ಪಲ್ಲಟದ ಚಿತ್ರಣ ಇದೆ. ಇದು ಶಿಕ್ಷಣದ ಮುಖ್ಯ ಧಾರೆಗೆ ಸಂಬಂಧಿಸಿದ ವಿಚಾರವಾದರೆ ಸಂಗೀತ, ನಾಟ್ಯ, ಚಿತ್ರಗಾರಿಕೆ ಮುಂತಾದ ಕಲೆಗಳ ಕಲಿಕೆಯಲ್ಲಿ ಕಳೆದ ಶತಮಾನದ ಪೂರ್ವಾರ್ಧದವರೆಗೆ ಪ್ರಾಚೀನವಾದ "ಗುರುಕುಲ" ಮಾದರಿಯ ಕಲಿಕೆ ಇದ್ದಿತ್ತು.

ಕಲಾವಿದರಾಗಬಯಸುವವರು ಗುರುವನ್ನೇ ಸಂಪೂರ್ಣವಾಗಿ ಅವಲಂಬಿಸಿ ಅವರಿಂದ "ಕಲಾಜ್ಞಾನ"ವನ್ನು ಆವಾಹಿಸಿಕೊಳ್ಳಬೇಕಾಗಿತ್ತು. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಈ ಕಲಿಕೆಗಳು ಕೂಡಾ ಬದಲಾದವು. ಅಕಾಡೆಮಿಕ್ ಶಿಕ್ಷಣ ವ್ಯವಸ್ಥೆ ಬಂದವು. ಶಾಲಾಕಾಲೇಜು ವಿಶ್ವವಿದ್ಯಾಲಯಗಳು ಕಲಿಕೆಗಳನ್ನು ಕಲಿಸಲು ಮೊದಲುಗೊಂಡವು. ಇನ್ನು ಯಕ್ಷಗಾನದಂತಹ ಪಾರಂಪರಿಕ ಕಲೆಗಳ ಕಲಿಕಾ ವಿಧಾನಗಳು ಪ್ರದೇಶವಾರು ಭಿನ್ನವಾಗಿದ್ದವು. ಕರಾವಳಿ ಪ್ರದೇಶಗಳ ಬಯಲಾಟದ ಮೇಳಗಳು ಕಲಿಕಾ ಕೇಂದ್ರಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಅದೇ ಮಲೆನಾಡು ಹಾಗೂ ಬಯಲು ಸೀಮೆಗಳಲ್ಲಿ ಗುರುವಾದವರು ತಂಡವನ್ನು ಕಟ್ಟಿ "ಕಲಿಕಾರ್ಥಿ"ಗಳಿಗೆ ಯಕ್ಷಶಿಕ್ಷಣವನ್ನು ಬೋಧಿಸುತ್ತಿದ್ದರು. ದೇವಸ್ಥಾನಗಳನ್ನು ಆಶ್ರಯಿಸಿದ ಯಕ್ಷಗಾನಬಯಲಾಟದ ಮೇಳಗಳಲ್ಲಿ ಎಳೆಯ ಮಕ್ಕಳು ಈ ಕಲಿಕೆಯನ್ನು ಕಲಿತು

ಜೀವನ ನಿರ್ವಹಣೆ ಮಾಡಿಕೊಳ್ಳುವುದಕ್ಕಾಗಿ ಸೇರಿಕೊಳ್ಳುತ್ತಿದ್ದರು. ಆರು ತಿಂಗಳುಗಳ ಕಾಲ ಮೇಳದ "ತಿರುಗಾಟ"ದಲ್ಲಿ ಸಂಚರಿಸುತ್ತ ಹಿಮ್ಮೇಳದವರಿಲ್ಲವೇ ವೇಷಧಾರಿಗಳ ಒಡನಾಟದಲ್ಲಿದ್ದು ವಿಚಾರಗಳನ್ನು ಗ್ರಹಿಸಿಕೊಳ್ಳುತ್ತಾ ಅವರನ್ನು ಅನುಕರಿಸಿ, ಅನುಸರಿಸಿ ಕಲಿಕೆಯ ಅಂಗಗಳನ್ನು ಪರಿಚಯಿಸಿಕೊಳ್ಳುತ್ತಿದ್ದರು. ರಂಗದಲ್ಲಿ ಮೊದಲಿಗೆ ಕೋಡಂಗಿಯರಾಗಿ, ಬಾಲಗೋಪಾಲರಾಗಿ ಸ್ತ್ರೀ ವೇಷಧಾರಿಗಳಾಗಿ, ಪುಂಡುವೇಷಧಾರಿಗಳಾಗಿ ಕ್ರಮಕ್ರಮವಾಗಿ ಪದೋನ್ನತಿ ಹೊಂದುತ್ತಿದ್ದರು. ಮಳೆಗಾಲದ ಸಂಧರ್ಭದಲ್ಲಿ ಕೆಲವೊಮ್ಮೆ ಭಾಗವತರನ್ನು ವೇಷಧಾರಿಗಳನ್ನು ಸಂಪರ್ಕಿಸಿ ಕಲೆಯ ಹೆಚ್ಚಿನ ಮರ್ಮವನ್ನು ಅರಿತುಕೊಳ್ಳುತ್ತಿದ್ದರು.

ಇಂತಹ ಶಿಕ್ಷಣ ವ್ಯವಸ್ಥೆ ಕಳೆದ ಶತಮಾನದ ಉತ್ತರಾರ್ಧದಲ್ಲಿ ಕ್ಷೀಣಿಸುತ್ತಾ ಬಂದು ಅಲ್ಲಲ್ಲಿ ತರಬೇತಿ ಕೇಂದ್ರಗಳು ಪ್ರಾರಂಭಗೊಂಡವು. ಹೊಸ ಬಗೆಯ ಶಿಕ್ಷಣ ಕ್ರಮದಿಂದ ಪಠ್ಯಗಳು ಅನಿವಾರ್ಯವಾದವು. ಅಲ್ಲಿಯವರೆಗೆ ಹಿರಿಯ ಭಾಗವತರು ಸಾಂಪ್ರದಾಯಿಕವಾದ ತಮ್ಮದೇ ಆದ ಪಠ್ಯಕ್ರಮವನ್ನು ಇಟ್ಟುಕೊಂಡು ಶಿಕ್ಷಣ ನೀಡುತ್ತಿದ್ದುದೂ ಗಮನ ನೀಡಬೇಕಾದ ಅಂಶವಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಯಕ್ಷಗಾನದ ಪಾರಂಪರಿಕ ಪಠ್ಯದ ಪರಿಚಯ ಹಾಗೂ ಅವುಗಳ ವೈವಿಧ್ಯತೆಯ ಕುರಿತು ಅರಿಯ ಬೇಕಾಗಿದೆ. ಕಳೆದ ಶತಮಾನದ ಪೂರ್ವಾರ್ಧದವರೆಗೆ ನಡೆಯುತ್ತಿದ್ದ ಯಕ್ಷಗಾನ/ಬಯಲಾಟ ಪ್ರದರ್ಶನಗಳಲ್ಲಿ ಎರಡು ಭಾಗಗಳಿದ್ದು ಮೊದಲನೆಯದು ಪೂರ್ವರಂಗ ಎಂತಲೂ, ಎರಡನೆಯದು ಅಂದಿನ ಕಥಾಭಾಗವುಳ್ಳ ಉತ್ತರಾರ್ಧ ವಾಗಿರುತ್ತದೆ. ಪೂರ್ವರಂಗ ಎಂಬುದು ಒಂದು ರೀತಿಯಿಂದ 'ಕಲಿಕಾರಂಗ'ವಿದ್ದಂತೆ. ಸುಮಾರು ಎರಡು ತಾಸುಗಳ ಈ ಅವಧಿಯಲ್ಲಿ ಎಳೆಯ ಬಾಲಕರಿಗೆ ವೃತ್ತಿಗೆ ಬೇಕಾದ ಪ್ರಾಥಮಿಕ ಶಿಕ್ಷಣ ಲಭಿಸುತ್ತದೆ. ಈ ಪೂರ್ವರಂಗವು ಕರ್ನಾಟಕದಾದ್ಯಂತ ಇರುವ ಯಕ್ಷಗಾನದ ಎಲ್ಲಾ ಪ್ರಭೇದಗಳಲ್ಲೂ ಒಂದಿಲ್ಲೊಂದು ಬಗೆಯಿಂದ ಅಸ್ತಿತ್ವದಲ್ಲಿತ್ತು. ಹೆಚ್ಚಾಗಿ ಭರತನ ನಾಟ್ಯಶಾಸ್ತ್ರವನ್ನು ಆಧರಿಸಿ ಆಯಾ ಪ್ರದೇಶಕ್ಕೆ ಅನುಗುಣವಾಗಿ ಅಲ್ಲಲ್ಲಿನ ಭಾಗವತರು ಸಿದ್ಧಪಡಿಸಿಕೊಂಡಿದ್ದರು. ಹದಿನಾರನೆ ಶತಮಾನದ ಪಾರ್ತಿಸುಬ್ಬನು ರಚಿಸಿದ "ಯಕ್ಷಗಾನ ಸಭಾಲಕ್ಷಣ ಮತ್ತು ಪ್ರಸಂಗ ಪೀಠಿಕೆ" ಹೆಚ್ಚಾಗಿ ಕರಾವಳಿ ಭಾಗದಲ್ಲಿ ಬಳಸುತ್ತಿದ್ದರು. ಇದೇ ವಸ್ತುವಿರುವ ಹೊತ್ತಿಗೆಯನ್ನು ಕಡಂದಲೆ ರಾಮರಾಯರು ಸಂಪಾದಿಸಿ, ಇನ್ನಷ್ಟು ಹಾಸ್ಯಗಳನ್ನು ಸಂಗ್ರಹಿಸಿ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯದ ಮೂಲಕ ಪ್ರಕಟಿಸಿದ್ದು (1962ಕ್ಕಾಗಲೇ ಏಳು ಮುದ್ರಣಗಳನ್ನು ಕಂಡಿತ್ತು) ಕಳೆದ ಶತಮಾನದಲ್ಲಿ ಹೆಚ್ಚಿನ ಭಾಗವತರು ಈ ಕೃತಿಯನ್ನೇ ಆಶ್ರಯಿಸಿ "ಪೂರ್ವರಂಗ"ವನ್ನು ನಡೆಸುತ್ತಿದ್ದರು. ಕ್ರಿ.ಶ.1955ರಲ್ಲಿ ಪ್ರಕಟಗೊಂಡ ಉತ್ತರಕನ್ನಡ ಜಿಲ್ಲೆಯ ಸೋಂದಾಕೃಷ್ಣ ಭಂಡಾರಿಯವರ "ಯಕ್ಷಗಾನ

ಕೈಪಿಡಿ"ಯು ಸಭಾಲಕ್ಷಣದ ಪದ್ಯಗಳ ಜೊತೆಯಲ್ಲೇ ಕಲಿಕೆಗೆ ಬೇಕಾದ ಅನೇಕ ತಾಳ ಪದ್ಧತಿಗಳ ವಿಚಾರಗಳಿಂದ ಕೂಡಿಕೊಂಡಿದೆ. ವಿಭಿನ್ನ ತಾಳಗಳು ಕೋಷ್ಟಕದಲ್ಲಿದೆ. ಸರಿಗಮದ ಸರಳವರಸೆಗಳು ಚೌಕಿಯ ಮನೆಯಲ್ಲಿ ಗಣಪತಿ ಪೂಜೆಯ ಕ್ರಮ, ರಂಗ ಪ್ರವೇಶ, ಅಬ್ಬರ ಬಡ್ತಿಗೆ ವಿವರಣೆ, ಸಾಮಾನ್ಯ ಸಭಾಲಕ್ಷಣ ಮುಂತಾದ ವಿವರಗಳು ಮೊದಲಿಗೆ ಬಂದಿವೆ.

ಕೃಷ್ಣಭಂಡಾರಿಯವರು ಕಳೆದ ಶತಮಾನದ ಮೊದಲಾರ್ಧದಲ್ಲಿ ಹದಿನೈದರಿಂದ ಇಪ್ಪತ್ತೈದು ಜನರಿಗೆ ಯಕ್ಷಶಿಕ್ಷಣ ನೀಡುತ್ತಿದ್ದರು. ಈ ಅನುಭವವನ್ನೇ ಆಧರಿಸಿ ಪುಸ್ತಕವನ್ನು ರಚಿಸಿದ್ದಾರೆ. ಬೇರೆ ಬೇರೆ ವೇಷಗಳನ್ನು ಹೊರಡಿಸುವ ಪರಿ, ಒಡ್ಡೋಲಗದ ಕ್ರಮ, ಯಕ್ಷಗಾನ ನಿಯಮಾವಳಿ ಮುಂತಾದ ವೈವಿಧ್ಯಮಯ ಅಂಶಗಳಿಂದ "ಯಕ್ಷಗಾನ ಕೈಪಿಡಿ" ವಿಶಿಷ್ಟರೀತಿಯ ಯಕ್ಷಗಾನ ಪಠ್ಯದ ಮಾದರಿಯಾಗಿದೆ. ಈ ಕಾರಣ ಪ್ರಾಚೀನ ಸಂಪ್ರದಾಯ ತಿಳಿದುಕೊಳ್ಳುವವರಿಗೆ ಇದು ಅಮೂಲ್ಯ ಸಂಗ್ರಹ ಕೃತಿ. ಅಭ್ಯಾಸಕ್ಕಾಗಿ ಇಲ್ಲಿ ಸಭಾಹಿತ ಪ್ರತಿಗಳ ತುಂಡು ಪದ್ಯಗಳನ್ನು ಮೂವತ್ತೆರಡು ರಾಗಗಳ ಉದಾಹರಣೆಗಾಗಿ ಬಳಸಲಾಗಿದೆ. ಕೊನೆಯಲ್ಲಿ ಮಂಗಳಾಚರಣೆಯ ಪದ್ಧತಿಯೊಂದಿಗೆ ಆಟ ಮುಕ್ತಾಯವಾಗುವ ಬಗೆಯನ್ನು ತಿಳಿಸಿದ್ದಾರೆ. ಖ್ಯಾತ ಕನ್ನಡ ಪ್ರಾಧ್ಯಾಪಕ ಕೆ.ಜಿ.ಶಾಸ್ತ್ರಿಯವರು ಪ್ರಥಮ ಮುದ್ರಣಕ್ಕೆ ಮುನ್ನುಡಿ ಬರೆದಿದ್ದಾರೆ. ಮೂಡಲಪಾಯದಲ್ಲಿ ಕೂಡಾ "ಪೂರ್ವರಂಗ" ಹಿಂದೆ ಇದ್ದು ಈಗ ನಶಿಸಿದೆ. ಮಂಡ್ಯ ಜಿಲ್ಲೆಯ ಕಿಕ್ಕೇರಿಯ (ಕವಿ: ಕೆ.ಎಸ್. ನರಸಿಂಹಸ್ವಾಮಿಯವರ ಹುಟ್ಟೂರು) ಪುಟ್ಟಶಾಮಾಚಾರ್ಯನ "ಸಭಾವಂದನೆ" ಎಂಬ ಕೃತಿಯು ನಾಟ್ಯ ಶಾಸ್ತ್ರವನ್ನು ಅನುಸರಿಸಿದ್ದು ಬೇರೆಬೇರೆ ಕನ್ನಡ ಪದ್ಯಗಳಿಂದ ಕೂಡಿಕೊಂಡಿದೆ. ಇಲ್ಲಿ ಕೋಡಂಗಿಯನ್ನು ಹನುಮನಾಯಕ ಇಲ್ಲಿವೇ ನಕಲಿ, ಇಲ್ಲಿವೇ ಸಾರಥಿ ಎಂದು ಕರೆಯಲಾಗಿದೆ. ಹಾಸ್ಯಗಳಲ್ಲಿ ಭಿನ್ನತೆ ಇದೆ. ಈ ಕೃತಿಯ ಕುರಿತು ಖ್ಯಾತ ವಿದ್ವಾಂಸರಾದ ಡಾ.ಕೆ.ಎಂ.ಕೃಷ್ಣರಾವ್ರವರು "ಯಕ್ಷಗಾನ ಸಾಹಿತ್ಯ (1956)" ಪುಸ್ತಕದಲ್ಲಿ ವಿವರಣೆ ನೀಡಿದ್ದಾರೆ. ಉತ್ತರಕರ್ನಾಟಕದ ದೊಡ್ಡಾಟದಲ್ಲೂ ಕಥೆಯ ಪ್ರಾರಂಭದ ಮುನ್ನ ಕೆಲವೊಂದು ಪೂರ್ವರಂಗದ ಆಚರಣೆಗಳಿದ್ದವು. ಹಳೆಯ ಭಾಗವತರು ಬಳಸುತ್ತಿದ್ದರು. ಇಲ್ಲಿ ಕೋಡಂಗಿಯನ್ನು "ಸಾರಥಿ"ಯೆಂದೇ ಕರೆಯುತ್ತಾರೆ. ಮೇಲ್ಕಂಡ ಎಲ್ಲಾ "ಸಭಾಲಕ್ಷಣ" ಕೃತಿಗಳಲ್ಲಿ ಬಳಕೆಯಾಗಿರುವುದು ಭರತನ ನಾಟ್ಯಶಾಸ್ತ್ರದಲ್ಲಿ ಬಂದ ಪದ್ಯಗಳೇ ಆಗಿವೆ. ಉದಾಹರಣೆಗೆ ಕೊಟ್ಟಿರುವ ಪದ್ಯಗಳು ಮಾತ್ರ ಪ್ರದೇಶವಾರು ಭಿನ್ನವಾಗಿವೆ. ದಾಸರಪದಗಳ ಬಳಕೆಯಲ್ಲೂ ವ್ಯತ್ಯಾಸವಿದೆ. ನಕಲಿ ಅಥವಾ ಹನುಮನಾಯಕನ ಹಾಸ್ಯಗಳಲ್ಲಿ ಅನೇಕ ಸಾಮಾಜಿಕ ಅಂಶಗಳು ಬಂದಿವೆ. ಭಾಗವತರುಗಳೊಂದಿಗಿನ ಸಂಭಾಷಣೆ ಸ್ವಾರಸ್ಯಮಯವಾಗಿದೆ.

ಈ ಯಕ್ಷಗಾನ ಸಭಾಲಕ್ಷಣ ಮತ್ತು ಪ್ರಸಂಗ ಪೀಠಿಕೆಯನ್ನು ಯಕ್ಷಗಾನ ಕಲಿಕೆಯ ಆದ್ಯ ಪಠ್ಯವೆಂದು ಪರಿಗಣಿಸಿದರೆ ತಪ್ಪಾಗಲಾರದು. ಎಳೆಯ ಬಾಲಕರಿಗೆ ನೃತ್ಯದ ಅಭ್ಯಾಸವನ್ನು ಪೂರ್ವರಂಗದ ಮೂಲಕ ಮಾಡಿಸುತ್ತಿದ್ದರು. ಆದುದರಿಂದ ಸಭಾಲಕ್ಷಣ ಲಕ್ಷಣ ಗ್ರಂಥವಾದರೂ ಶಿಕ್ಷಣ ಗ್ರಂಥವೆಂದು ಪರಿಭಾವಿಸಬೇಕಾಗುತ್ತದೆ. ಸಾಂಪ್ರದಾಯಿಕ ಕಲಿಕೆಯಾದ ಯಕ್ಷಗಾನಕ್ಕೆ ಶಾಸ್ತ್ರೀಯ ನೆಲೆಗಟ್ಟನ್ನು ಹೊಂದಿಸುವ ಪ್ರಯತ್ನ ಈ ಕೃತಿಯಲ್ಲಿದೆ. ಮುಖ್ಯವಾಗಿ ಸಭೆ ಹೇಗಿರಬೇಕು, ವಾದ್ಯಗಳು ಹೇಗಿರುತ್ತವೆ, ತಾಳಲಕ್ಷಣಗಳು, ತಾಳಾಂಗವಿಧಾನಗಳು, ಮೃದಂಗ ಲಕ್ಷಣ, ಗಣಪತಿಯ ಕೌತುಕ, ಬಾಲಗೋಪಾಲ ಪ್ರವೇಶ, ಅವರ ಕುಣಿತ, ಷಣ್ಮುಖಿ-ಈಶ್ವರ-ಪಾರ್ವತಿ ವೇಷಗಳ ಪ್ರವೇಶ, ಸ್ತ್ರೀ ವೇಷದ ಪ್ರವೇಶ, ಅವರ ಕುಣಿತ, ಪ್ರಸಂಗ ಪೀಠಿಕೆ, ಹಾಗೂ ವಿವಿಧ ಪಾತ್ರಗಳ ಒಡ್ಡೋಲಗದ ಬಗೆಗಿನ ವಿವರಗಳಿರುತ್ತವೆ. ಕೊನೆಯಲ್ಲಿ ಮಂಗಳಾಚರಣೆಯ ಕ್ರಮದ ಬಗ್ಗೆ ಪದ್ಯಗಳು ಇರುತ್ತವೆ. ಪ್ರದೇಶಕ್ಕೆ ಅನುಗುಣವಾಗಿ ಕೆಲವೆಡೆ ಕೆಲವೊಂದು ಭಾಗಗಳಿದ್ದರೆ ಇನ್ನು ಕೆಲವೆಡೆ ಬೇರೆ ಭಾಗಗಳು ಚಾಲ್ತಿಯಲ್ಲಿವೆ. ಸ್ಥೂಲವಾಗಿ ಈ ಅಂಶಗಳನ್ನು ಆಧರಿಸಿ "ಪೂರ್ವರಂಗ"ವಿರುತ್ತದೆ.

"ಸಭಾಲಕ್ಷಣ"ದ ಮೊದಲಿಗೆ "ಅಬ್ಬರಬಡ್ತಿಗೆ"ಯ ಪದ್ಯಗಳಿದ್ದು ಅದು ನಡೆಯುವ ವಿವರವಿರುತ್ತದೆ. ಇದನ್ನು'ಕೇಳಿ ಹೊಡೆಯುವುದು' 'ಅಬ್ಬರ ತಾಳ', 'ತಾಳಮದ್ದಳೆ' ಮುಂತಾದ ಹೆಸರುಗಳಿಂದ ಕೂಡಾ ಕರೆಯುತ್ತಾರೆ. ಇಲ್ಲಿ ಮೇಳದವರು ಆಟ ಆಡುವ ಊರಿಗೆ ಬಂದೊಡನೆ ಬೆಳಗಿನ ಹೊತ್ತು ಆ ಊರಿನ ದೇವಸ್ಥಾನದಲ್ಲಿ ಇಲ್ಲವೇ ಆಟ ಆಡಿಸುವವರ ಮನೆಯಲ್ಲಿ ಈ ಕಾರ್ಯ ನಡೆಸುತ್ತಾರೆ. ಹೆಚ್ಚಾಗಿ ಸಂಗೀತಗಾರ ಒತ್ತುಮದ್ದಲೆಗಾರ ಇಲ್ಲಿ ಇರುತ್ತಾರೆ. ಪ್ರಾರಂಭದಲ್ಲಿ ಅಷ್ಟ ತಾಳದ ಬಾಯಿತಾಳ ಹಾಕಿ, ಏಕತಾಳದ ಮುಕ್ತಾಯ ಮಾಡಿ ಆದಿತಾಳದ ಒಂದು ತುಂಡು ಪದ್ಯವನ್ನು ಹೇಳುವುದು ರೂಢಿ.

ಶಂಕರಾಭರಣ ರಾಗದ ಆದಿತಾಳದ

"ವಾರಣವದನ। ತ್ರೈಲೋಕ್ಯ । ಸುಮೋಹನ ।। ವಾರುಣ ॥ ಪ ।"

ವಾರಣಾಸ್ಯ ವರದಾಯಕ ಸನ್ನುತ । ನಾರದಾದಿ ಮುನಿವಂದಿತ ಪದಯುಗ ॥ ವಾರುಣ ॥

ಎಂಬ ಗಣಪತಿ ಕೀರ್ತನೆ ಹೆಚ್ಚು ಬಳಕೆಯಲ್ಲಿದೆ. ಸಾಯಂಕಾಲ ಚೌಕಿಯಲ್ಲಿ ನಡೆಯುವ ಅಬ್ಬರಬಡ್ತಿಗೆ/ಅಬ್ಬರತಾಳದ ನಂತರದ ಚೌಕಿ ಪೂಜೆಯ ಸಂಧರ್ಭದಲ್ಲಿ

ರಾಗ ಸೌರಾಷ್ಟ / ತಿವುಡೆ ತಾಳದ

"ಗಜಮುಖದವಗೆ ಗಣಪಗೆ /

ಚೆಲ್ವ / ತ್ರಿಜಗ ವಂದಿತನಿಗಾರತಿಯೆತ್ತಿರೆ" ॥ ಗಜಮುಖದವಗೆ ॥

ಎಂಬ ಪದ್ಯ ಹಾಡುತ್ತಾರೆ. ಚೌಕಿಪೂಜೆಯ ನಂತರ ರಂಗಸ್ಥಳಕ್ಕೆ ವೀಳ್ಯ ಸಿಕ್ಕಿದ ನಂತರ ಸ್ಥಳದ ದೇವರ ಮತ್ತು ಮೇಳದ ದೇವರ ಹೊಗಳಿಕೆ ಮಾಡಿ ಬಾಯಿ ತಾಳದ ಲಯದ ಪೆಟ್ಟುಗಳನ್ನು ತಾಳ ಹಾಗೂ ಮದ್ದಳೆ, ಚಂಡೆಗಳಲ್ಲಿ ಬಾರಿಸುತ್ತಾ ರಂಗಸ್ಥಳಕ್ಕೆ ಬಂದು ಮುಕ್ತಾಯ ಮಾಡುತ್ತಾರೆ. ಮುಂದೆ

ರಾಗ ನಾಟಿ ಝಂಪೆ ತಾಳದ

ಮುದದಿಂದ ನಿನ್ನ। ತಾತಾಗತ್ತಕ ತರಗಡಗಿತ್ತಕ ಧಿನ್ನತ್ತೆ ಧಿನ್ನಥೈಯಾಧಂ।

ಮುದದಿಂದ ನಿನ್ನ ಕೊಂಡಾಡುವೆನು ಅನವರತ

ಮದವೂರ ವಿಘ್ನೇಶ ದೇವಜಗದೀಶ ।

ಎಂಬುವುದನ್ನು ಹಾಡುತ್ತಾರೆ. ಮುಂದೆ ತ್ವರಿತ ಝಂಪೆಯಲ್ಲಿ "ಅರರೆ ನಿನ್ನಯ ಮಹಿಮೆಯನ್ನು ಪೊಗುಳುವಲ್ಲಿ" ಎಂಬುವುದನ್ನು ಮುಕ್ತಾಯಕ್ಕೆ ಬಳಸುತ್ತಾರೆ. ನಂತರ

ರಾಗ ಮಧ್ಯಮಾವತಿ ತಿವುಡೆ ತಾಳ

"ಶರಣು ತಿರುವಗ್ರ ಶಾಲಿವಾಹಿನಿ । ಶ್ಯಾಮಲ ರೂಪಿಣಿ ।"

ಹಾಡುತ್ತಾರೆ. ಬಡಗಿನಲ್ಲಿ ಮುಂದೆ "ಮೂಕಾಂಬಿಕೆ ಕೌತುಕ" ಹಾಡು (ರಾಗ ಸೌರಾಷ್ಟ / ಅಷ್ಟ ತಾಳ) ಬರುತ್ತದೆ. ಆಮೇಲೆ ಸಭಾಲಕ್ಷಣದ ಪದ್ಯವಾದ "ಸರ್ವೇಷಾಂ ಪರಿಪೂಜೀತಂ"ಎಂಬುವುದು ಹೇಳಿ ವಚನ ಗಟ್ಟಿಚೂರ್ಣಿಕೆಗಳು ಬರುತ್ತವೆ. ಮುಂದೆ ಕೋಡಂಗಿ ಕುಣಿತ ಹಾಗೂ ಭಾಗವತನೊಂದಿಗಿನ ಮಾತುಗಳು ಬರುತ್ತವೆ. ಎಳೆಯರಾಗಿ ಮೇಳ ಸೇರಿದವರು ಕೋಡಂಗಿ ವೇಷದಿಂದ ಪ್ರಾರಂಭವಾಗಿ ಬಾಲಗೋಪಾಲರಾಗಿ ಮುಂದೆ ಸ್ತ್ರೀ ವೇಷಧಾರಿಗಳಾಗಿ ಪುಂಡು ವೇಷಧಾರಿಗಳಾಗಿ (ಮುಂಡಾಸು ವೇಷ), ರಾಜವೇಷ ಧಾರಿಗಳಾಗಿ (ಎರಡನೇ ವೇಷಧಾರಿ) ಕಿರೀಟ ವೇಷಧಾರಿಗಳಾಗಿ ಪದೋನ್ನತಿ ಹೊಂದುತ್ತಾರೆ. ಕುಣಿತ, ಅಭಿನಯ, ಬಣ್ಣಗಾರಿಕೆ, ಅರ್ಥಗಾರಿಕೆಯ ಪಾಠ ಕಲಿಯುವವರಿಗೆ ಈ ಮೂಲಕ ಮೇಳದಲ್ಲಿ ಶಿಕ್ಷಣ ಲಭಿಸುತ್ತದೆ. ಹಿಮ್ಮೇಳದಲ್ಲಿ ಆಸಕ್ತಿವುಳ್ಳವರಿಗೆ ಸಂಗೀತಗಾರರಾಗಿ ಒತ್ತು ಮದ್ದಲೆಗಾರರಾಗಿ, ಚಂಡೆ ವಾದಕರಾಗಿ, ಮುಂದೆ ಮುಖ್ಯ ಮದ್ದಳೇವಾದಕರಾಗಿ ಇಲ್ಲವೇ ಮುಖ್ಯ ಭಾಗವತರಾಗಿ

ವೃತ್ತಿಯಲ್ಲಿ ಏರನ್ನು ಕಾಣುತ್ತಾರೆ. ಪೂರ್ವರಂಗದ ಹಿಮ್ಮೇಳದಲ್ಲಿರುವವರು ತಾವು ಕಲಿಯುತ್ತಾ ಇತರರನ್ನು ಕುಣಿಸಲು ಶಿಕ್ಷಣ ಪಡೆಯುತ್ತಾರೆ. ಇಪ್ಪತ್ತನೆಯ ಶತಮಾನದ ಪೂರ್ವಾರ್ಧದವರೆಗೆ ಈ ಸಭಾಲಕ್ಷಣದಲ್ಲಿ ಹೇಳಿದ ಅಂಶಗಳನ್ನು ಪ್ರತಿ ಪ್ರದರ್ಶನಗಳಲ್ಲೂ ಬಳಸುತ್ತಿದ್ದರು. ಅದು ಕ್ರಮೇಣ ಕಡಿಮೆ ಆಯಿತು. ಇದನ್ನೇ ಶ್ರೀ ಕುಕ್ಕಿಲ ಕೃಷ್ಣಭಟ್ಟರು "ಸಾವಿರ ವರ್ಷಗಳಿಂದ ಯಕ್ಷಗಾನ, ಬಯಲಾಟಗಳಲ್ಲಿ ಸಾಂಪ್ರದಾಯಿಕವಾಗಿ ಉಳಿದು ಬಂದಿರುವ ಈ ಭರತೋಕ್ತ ನಾಟ್ಯ ಪ್ರಯೋಗವು ಸುಮಾರು 10 ವರ್ಷಗಳಿಂದ ಕ್ಷೀಣವಾಗುತ್ತಾ ಬಂದು ಇದೀಗ ನಷ್ಟಪ್ರಾಯವಾಗಿ ಬರುತ್ತಿರುವುದು ತುಂಬಾ ಖೇದದ ವಿಚಾರ" ಎಂದಿದ್ದಾರೆ. (ಕುಕ್ಕಿಲ ಸಂಪುಟ ಸಂ. ಡಾ.ಎಂ. ಪ್ರಭಾಕರ ಜೋಷಿ, ಪುಟ 20) ಉತ್ತರಕನ್ನಡದಲ್ಲಿ ಈ ಅಂಶವನ್ನು ಗಮನಿಸಿಯೇ ಸೋಂದಾ ಕೃಷ್ಣಭಂಡಾರಿಯವರು "ಯಕ್ಷಗಾನ ಕೈಪಿಡಿ" ಪ್ರಕಟಿಸಿದರು. ಅದನ್ನು ಮರುಪ್ರಕಟಿಸಿದ ಡಾ.ವಿಠಲಭಂಡಾರಿಯವರು "ಯಕ್ಷಗಾನದ ಭಾಗವತಿಕೆ, ಕುಣಿತ ಮತ್ತು ಮದ್ದಳೆಯನ್ನು ಕಲಿಯುವ ಆಸಕ್ತರಿಗೆ ಇದೊಂದು ಮಹತ್ವದ ಶೈಕ್ಷಣಿಕ ಕೃತಿ ಕೂಡಾ" ಎಂದಿದ್ದಾರೆ. (ಯಕ್ಷಗಾನ ಕೈಪಿಡಿ, ದಿ.ಕೃಷ್ಣಭಂಡಾರಿ, ಸೋಂದಾ, ಪುಟ 5). ಈ ಎರಡು ಉಲ್ಲೇಖಗಳು "ಸಭಾಲಕ್ಷಣದ" ಶೈಕ್ಷಣಿಕ ಮಹತ್ವವನ್ನು ಸಾರುತ್ತವೆ. ಈ ಕಾರಣ "ಪೂರ್ವರಂಗ" ಒಂದು ರೀತಿಯಲ್ಲಿ "ಪ್ರಾಯೋಗಿಕ ಪಾಠಶಾಲೆ" ಇದ್ದಂತೆ ಸರಿ.

ಕಳೆದ ಶತಮಾನದ ಐವತ್ತರ ದಶಕಗಳಲ್ಲಿ ಭಾಗವತ ಎಂ.ನಾರಣಪ್ಪ ಉಪ್ಪೂರರು, ಗುರುವೀರಭದ್ರ ನಾಯಕರ ಕೋರಿಕೆಯಂತೆ "ಯಕ್ಷಗಾನ ಶಿಕ್ಷಕ" (1966) ಎಂಬ ಕಿರು ಹೊತ್ತಿಗೆಯನ್ನು ಬರೆದರು. ಇದನ್ನು ನಿಟ್ಟೂರಿನ ಶ್ರೀ ಮೂಕಾಂಬಿಕಾ ಯಕ್ಷಗಾನ ಸಂಘದವರು ಪ್ರಕಟಿಸಿದರು. ಸ್ವತಃ ಉಪ್ಪೂರರೇ ಇದನ್ನು ಸಂಗೀತಗಾರರಿಗಾಗಿ, ಎಳೆಯ ಕಲಾವಿದರ ಕಲಿಕೆಗಾಗಿ ರಚಿಸಿರುವುದು ಎಂದು ಹೇಳಿಕೊಂಡಿದ್ದಾರೆ. ವೀರಭದ್ರನಾಯಕರು ಮಲೆನಾಡಿನ ಭಾಗಗಳಲ್ಲಿರುವ ಯಕ್ಷಗಾನ ಸಂಘಗಳಿಗೆ ಈ ಪುಸ್ತಕವನ್ನು ಪರಿಚಯಿಸಿ ಪಠ್ಯದ ಮಾದರಿಯಾಗುವಂತೆ ಮಾಡಿದ್ದರು. ಇದರಲ್ಲಿ ತಾಳಗಳ ಬಳಕೆಯ ವಿಧಾನ, ಸಭಾಲಕ್ಷಣದ ಪರಿಚಯ, ಅಬ್ಬರ ಭಿಡ್ತಿಗೆಯ ಕ್ರಮ, ಬಾಲ ಗೋಪಾಲ, ಸ್ತ್ರೀ ವೇಷಗಳ ಕುಣಿಸುವ ಪರಿ, ಒಡ್ಡೋಲಗ ನಡೆಸುವ ಬಗೆ ಮುಂತಾದ ವಿವರಗಳಿವೆ. ಇವೆಲ್ಲವೂ ಯಕ್ಷಗಾನದ ಪಠ್ಯ ಸಂಬಂಧಿ ವಿಚಾರವಾಗಿವೆ. ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರ ಆರಂಭವಾಗಿ ನಾರಾಣಪ್ಪ ಉಪ್ಪೂರರೇ ಅಲ್ಲಿ ಪ್ರಾಚಾರ್ಯರಾಗಿದ್ದಾಗ "ಯಕ್ಷಗಾನ ಅಧ್ಯಯನ" (1978) ಎಂಬ ಇನ್ನೊಂದು ಕೃತಿ ರಚಿಸಿದರು. "ಪಾಠ ಕೊಡುವ ಮೊದಲು ಮಾಡಿಡುತ್ತಿದ್ದ ಟಿಪ್ಪಣಿಗಳೇ ಪುಸ್ತಕಕ್ಕೆ ಸ್ಥೂಲ ರೂಪರೇಷೆ ಒದಗಿಸಿದೆ. "ಯಕ್ಷಗಾನ ಕಲಾಕೇಂದ್ರದ ಪಠ್ಯ ಯೋಜನೆಯನ್ನು

ವ್ಯಾಸಂಗ ಸೌಕರ್ಯಕ್ಕಾಗಿ ಇಲ್ಲಿ ಕೊಡಲಾಗಿದೆ" ಎಂದು ಪುಸ್ತಕ ಪ್ರಕಟಿಸಿರುವ ಯಕ್ಷಗಾನ ಕಲಾಕೇಂದ್ರದ 'ಶ್ರೀ ಐರೋಡಿ ಸದಾನಂದ ಹೆಬ್ಬಾರರು' ಹೇಳಿದ್ದಾರೆ. (ಯಕ್ಷಗಾನ ಅಧ್ಯಯನ– ಎಂ.ನಾರಾಣಪ್ಪ ಉಪ್ಪೂರ, ಪುಟ vii). ಇಲ್ಲಿ ಸವಿಸ್ತಾರವಾದ ಪತ್ಯದ ಮಾದರಿಯನ್ನು ಕಾಣಬಹುದು. ತಾಳಗಳು, ಅವುಗಳ ಬಳಕೆಯ ಕ್ರಮ, ಪಾತ್ರಗಳನ್ನು ಕುಣಿಸುವ ರೀತಿ, ಪೂರ್ವರಂಗವನ್ನು ನಡೆಸುವ ಪರಿ, ಒಡ್ಡೋಲಗ ನಡೆಸುವ ವಿಧಾನ ಮುಂತಾದವೆಲ್ಲವನ್ನೂ ಇಲ್ಲಿ ಸೋದಾಹರಣವಾಗಿ ವಿವರಿಸಲಾಗಿದೆ. ಡಾ.ಶಿವರಾಮಕಾರಂತರು ಈ ಕೃತಿಗೆ ಮುನ್ನುಡಿ ಬರೆದು "ಈ ಕಿರು ಹೊತ್ತಿಗೆ ಒಂದು ಅಮೂಲ್ಯ ಕೊಡುಗೆ" ಎಂದಿದ್ದಾರೆ. ಇದೇ ರೀತಿ 1971ರಲ್ಲಿ ಪ್ರಾರಂಭವಾದ ಉಡುಪಿಯ ಯಕ್ಷಗಾನ ಕೇಂದ್ರದಲ್ಲಿ ಗುರುಗಳಾಗಿದ್ದ ಭಾಗವತ ನೀಲಾವರ ರಾಮಕೃಷ್ಣಯ್ಯನವರು ಅಲ್ಲಿ ಪಾಠ ಮಾಡುತ್ತಿರುವ ಪದ್ಧತಿಯನ್ನು ಪುಸ್ತಕರೂಪದಲ್ಲಿ "ಯಕ್ಷಗಾನ ಪಾಠಗಳು" (1978) ಎಂಬ ಹೆಸರಿನಲ್ಲಿ ಬರೆದರು. ಇದನ್ನು ಗೋವಿಂದ ಪೈ ಸಂಶೋಧನಾ ಕೇಂದ್ರ ಪ್ರಕಟಿಸಿತು. ಇಲ್ಲಿ ಕೂಡಾ ವೇಷಧಾರಿ ಮಾಡ ಬೇಕಾದ ಶಾರೀರಿಕ ಅಭ್ಯಾಸಗಳಿಂದ ಮೊದಲುಗೊಂಡು ತಾಳಗಳ ವಿವರ, ಸಂಗೀತದ ಹಾಡುಗಾರಿಕೆಯ ಸ್ವರೂಪ, ಮಾತುಗಾರಿಕೆಯ ವಿಧಾನ, ಬಣ್ಣಗಾರಿಕೆ, ವೇಷಭೂಷಣಗಳ ಬಗೆಗಿನ ಮಾಹಿತಿಗಳು ಇವೆ. ಮುಂದೆ ಇವರೇ 2003ರಲ್ಲಿ ಬರೆದ "ಯಕ್ಷಗಾನ ಸ್ವಬೋಧನಿ"ಯ ಪರಿಷ್ಕೃತ ಆವೃತ್ತಿಯನ್ನು ಉಡುಪಿಯ ಯಕ್ಷಗಾನ ಕೇಂದ್ರದವರು ಮರು ಮುದ್ರಣ ಮಾಡಿದ್ದಾರೆ. ಇಲ್ಲಿ ಒಟ್ಟು ಎಂಟು ಅಧ್ಯಾಯಗಳಿದ್ದು ಎಲ್ಲಾ ಕಲಿಕಾಕ್ರಮಗಳನ್ನು ಸುದೀರ್ಘವಾಗಿ ವಿವರಿಸಲಾಗಿದೆ.

"ಪರಿಷ್ಕರಣಕಾರರ ಎರಡು ಮಾತು"ವಿನಲ್ಲಿ ಯಕ್ಷಗಾನ ಕೇಂದ್ರದ ಪ್ರಾಂಶುಪಾಲರಾದ ನೀಲಾವರ ಲಕ್ಷ್ಮೀನಾರಾಯಣರವರು "ಇಲ್ಲಿ ಕಲಿಯುವವರಿಗೆ ಅನುಕೂಲವಾಗುವಂತೆ ಕೋಷ್ಟಕ ಗುರುತು ಸಹಿತ ಇದೆ. ತಾಳಬಿಡ್ತಿಗೆ, ಮುಕ್ತಾಯ ಒಂದೇ ತಾಳದಲ್ಲಿ ವಿವಿಧ ಮಟ್ಟುಗಳು, ಪದ್ಯಗಳಲ್ಲಿಯ ನಡೆ ಬದಲಾವಣೆ, ನೃತ್ಯದ ವೈವಿಧ್ಯ, ಎಲ್ಲಾ ಪ್ರಕಾರದ ಒಡ್ಡೋಲಗಗಳು ಇವೆಲ್ಲವನ್ನೂ ತತ್ಕಾರ ಸಹಿತ ಕಲಿಯುವವರಿಗೆ ಸಹಕಾರವಾಗುವಂತೆ ವಿವರವಾಗಿ ಬರೆದಿದ್ದಾರೆ. ಅಲ್ಲದೇ ಪರಂಪರೆಯಿಂದ ಬಂದ ಪದ್ಧತಿಯಲ್ಲಿ ಕಂಡು ಬರುವ ಲೋಪದೋಷಗಳನ್ನು ಕ್ರಮವಾಗಿ ಗುರುತಿಸಿ ಅದನ್ನು ತಿದ್ದಿ ಬಳಸ ಬಹುದಾದ ಮಾರ್ಗವನ್ನು ಸೂಚಿಸಿದ್ದಾರೆ" ಎಂದು ಯಕ್ಷಗಾನ ಸ್ವಬೋಧನಿಯ ವಿಶೇಷತೆ ತಿಳಿಸಿಕೊಟ್ಟಿದ್ದಾರೆ.

ಮೊದಲ ಅಧ್ಯಾಯದಲ್ಲಿ ಯಕ್ಷಗಾನದಲ್ಲಿ ಕಂಡು ಬರುವ ತಾಳ, ತಾಳ ಪ್ರಭೇದಗಳಾಗಿ ಹನ್ನೆರಡು ವಿಧಗಳನ್ನು ಗುರುತಿಸಿದ್ದಾರೆ. ಇದರಲ್ಲಿ ವಿಳಂಬ, ತ್ವರಿತ

ಎಂದು ಬೇರೆಬೇರೆಯಾಗಿ ಕಾಣಿಸಿರುವುದು ಕಲಿಯುವವರಿಗೆ ಅನುಕೂಲವಾಗುವಂತಿದೆ. ಎರಡನೆಯ ಅಧ್ಯಾಯದಲ್ಲಿ ಪ್ರತಿ ತಾಳದ ಪದ್ಯಗಳಲ್ಲಿನ ವಿವಿಧ ಮಟ್ಟುಗಳನ್ನು ಗುರುತಿಸಿ ಅವುಗಳ ಆವರ್ತನವನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಮುಂದಿನ ಅಧ್ಯಾಯದಲ್ಲಿ ತಾಳ ಮಾಲಿಕೆ, ನೃತ್ಯದಲ್ಲಿ ವೈವಿಧ್ಯವನ್ನು ಪ್ರಸ್ತಾಪಿಸಿದ್ದಾರೆ. ಇಲ್ಲಿ ಕೂಡಾ ಪ್ರಸಂಗದ ಪದ್ಯಗಳನ್ನು ಆಯ್ದು ವಿವರಿಸಿದ್ದಾರೆ. ನಾಲ್ಕನೆಯ ಅಧ್ಯಾಯದಲ್ಲಿ ವಿವಿಧ ಕುಣಿತ ಪದ್ಧತಿಗಳನ್ನು, ಪಾತ್ರಕ್ಕೆ ಅನುಸಾರವಾಗಿ ನಿರೂಪಿಸಿದ್ದಾರೆ. ಈ ಅಧ್ಯಾಯದಲ್ಲಿ ಎಲ್ಲಾ ಪಾತ್ರಗಳ ಒಡ್ಡೋಲಗದ ಪದ್ಧತಿ, ಪ್ರಯಾಣದ ಕುಣಿತ, ಯುದ್ಧ ನೃತ್ಯ, ಕತ್ತಿ ಪಡೆ ಯುದ್ಧ ಮುಂತಾದುವು ಬಂದಿವೆ. ರಕ್ಕಸ ಪಾತ್ರದ ಒಡ್ಡೋಲಗವಂತೂ ಬಹು ಸುದೀರ್ಘವಾಗಿದೆ. ಕುಣಿತದ ಪರಿಯನ್ನು ಬಹು ಸಮರ್ಪಕವಾಗಿ ತಿಳಿಸಿಕೊಟ್ಟಿದ್ದಾರೆ. ಮುಂದಿನ ಅಧ್ಯಾಯದಲ್ಲಿ ಸಭಾಲಕ್ಷಣದ ವಿವರವಿದೆ. ಈ ಎಲ್ಲವೂ ಪಾರಂಪರಿಕವಾದ ರೀತಿಯಲ್ಲಿ ಬಂದಿವೆ. ಪೀಠಿಕಾ ಸ್ತ್ರೀ ವೇಷ ಪ್ರವೇಶ ಮತ್ತು ಚಾಲು ಕುಣಿತದ ಪರಿಯನ್ನು ಕಲಿಯುವವರಿಗೆ ಸುಲಭವಾಗುವಂತೆ ತಿಳಿಸಿದ್ದಾರೆ. ಆರನೆಯ ಅಧ್ಯಾಯದಲ್ಲಿ ಪ್ರಸಂಗ ಪೀಠಿಕೆಯ ವಿವರವಿದೆ. ಯಕ್ಷಗಾನದಲ್ಲಿ ರೂಢಿ ಇರುವ ತಾಳಗಳು ಹಾಗೂ ಅವುಗಳ ಮುಕ್ತಾಯಗಳಿಗೆ ಒಂದು ಅಧ್ಯಾಯ ಮೀಸಲಾಗಿರಿಸಲಾಗಿದೆ. ಇದು ಅತ್ಯಂತ ವಿವರಣಾತ್ಮಕವಾಗಿ ಬಂದಿದೆ. ಕೊನೆಯ ಅಧ್ಯಾಯದಲ್ಲಿ ಬಣ್ಣಗಾರಿಕೆ ಮತ್ತು ವೇಷಗಾರಿಕೆಗಳ ಕುರಿತು ನೀಲಾವರ ರಾಮಕೃಷ್ಣಯ್ಯನವರು ತಮ್ಮ ಪಾರಂಪರಿಕ ಜ್ಞಾನವನ್ನು ತಿಳಿಸಿಕೊಟ್ಟಿದ್ದಾರೆ. ಅನುಬಂಧದಲ್ಲಿ ಕೆಲವು ದೇವತಾ ಸ್ತುತಿಗಳು ಬಂದಿವೆ. ಹಸೆ ಹಾಡು, ಕೋಲಾಟದ ಪದ್ಯ, ಹೂವಿನ ಕೊಲುವಿನಲ್ಲಿ ಬಳಸಿದ ಮಹಾನವಮಿ ಪದಗಳು, ಜಲಕ್ರೀಡೆಗೆ ಹೊರಡುವಾಗಿನ ಪದ್ಯಗಳು ಮುಂತಾದುವುಗಳನ್ನು ಕೊಡಲಾಗಿದೆ. ಅನುಬಂಧದಲ್ಲಿ ಬರೆದಿರುವ ಹಾಡುಗಳು ಮೌಲ್ಯ ಹೆಚ್ಚಿಸಿದೆ.

ಹೀಗೆ ತಾಳಗಳು, ತಾಳ ಮಾಲಿಕೆ, ನೃತ್ಯದಲ್ಲಿ ವೈವಿಧ್ಯ, ಕುಣಿತ ಪದ್ಧತಿ, ಸಭಾಲಕ್ಷಣ, ಪ್ರಸಂಗ ಪೀಠಿಕೆ, ತಾಳ ಮುಕ್ತಾಯ ಹಾಗೂ ವೇಷಗಾರಿಕೆಗಳ ಕುರಿತು ಭಾಗವತ ನೀಲಾವರ ರಾಮಕೃಷ್ಣಯ್ಯನವರು ತಮ್ಮ ಆಳವಾದ ಜ್ಞಾನವನ್ನು, ಅಪರಿಮಿತ ಅನುಭವವನ್ನು ಅಕ್ಷರ ರೂಪಕ್ಕೆ ಇಳಿಸಿದ್ದಾರೆ. ಡಾ.ರಾಘವ ನಂಬಿಯಾರ್ ಅವರ ಪ್ರೌಢಪ್ರಬಂಧವು ಯಕ್ಷಗಾನದ ಹಿಮ್ಮೇಳದ ಕುರಿತಾಗಿದ್ದು ಅನೇಕ ಸಂಶೋಧನಾತ್ಮಕ ವಿಚಾರಗಳನ್ನು ತಿಳಿಸುವುದರೊಂದಿಗೆ ಪಾರಂಪರಿಕ ಯಕ್ಷಶಿಕ್ಷಣದ ಉಳುವಿನ ಬಗ್ಗೆ ಉತ್ತಮ ಸಲಹೆಗಳಿಂದ ಕೂಡಿದೆ. ಅದೇ ರೀತಿ ವಿದ್ವಾನ್ ಗಣಪತಿ ಭಟ್ಟರ "ಯಕ್ಷಗಾನ ಗಾನ ಸಂಹಿತೆ"ಯು ಭಾಗವತರುಗಳಿಗೆ ರಾಗಗಳ ಕುರಿತು ವಿಶೇಷ ಜ್ಞಾನವನ್ನು ನೀಡಿ ಚಿಂತನೆಗೆ ಹಚ್ಚುವಂತೆ ಇದೆ. ಇವೆರಡೂ ಕೃತಿಗಳನ್ನು ಯಕ್ಷಶಿಕ್ಷಣದ ಪ್ರೌಢ

ಅಧ್ಯಯನಕ್ಕಿರುವ ಪಠ್ಯಗಳೆಂದೇ ಪರಿಗಣಿಸಬಹುದು. ತೆಂಕುತಿಟ್ಟಿನ ಭಾಗವತ ಶ್ರೇಷ್ಠರುಗಳಾದ ಬಲಿಪ ನಾರಾಯಣ ಭಾಗವತ, ಅಗರಿ ಶ್ರೀನಿವಾಸ ಭಾಗವತ, ಮಾಂಬಾಡಿ ನಾರಾಯಣ ಭಾಗವತ ಮುಂತಾದವರು ತಮ್ಮ ಭಾಗವತಿಕೆಯಿಂದ ಖ್ಯಾತರಾದದ್ದು. ಮಾತ್ರವಲ್ಲದೇ ಪಾರಂಪರಿಕವಾದ ಜ್ಞಾನವನ್ನು ತಿಳಿದವರಾಗಿದ್ದರು. ಅವರುಗಳಿಂದ ರೂಪಗೊಂಡ ಶಿಷ್ಯ ಸಂಪತ್ತುಗಳಲ್ಲಿ ಯಕ್ಷಗಾನ ಕಲಿಕೆ ಸುಸೂತ್ರವಾಗಿ ಹರಿದು ಬಂದಿದೆ. ತೆಂಕುತಿಟ್ಟಿನಲ್ಲಿ ಪರಂಪರಾಗತವಾದ ಯಕ್ಷಶಿಕ್ಷಣ ಉಳಿದು ಬೆಳೆದಿದೆ. 1980ರಲ್ಲಿ ಪ್ರಕಟಗೊಂಡ ಪೊಳಲಿಯವರ ಸಂಸ್ಮರಣ ಗ್ರಂಥ "ಯಕ್ಷಗಾನ ಮಕರಂದ" ದಲ್ಲಿ (ಪ್ರಧಾನ ಸಂಪಾದಕರು ಮುಳಿಯ ಮಹಾಬಲ ಭಟ್ಟ) ಶ್ರೀ ಬಲಿಪ ನಾರಾಯಣ ಭಾಗವತರು ಬರೆದಿರುವ "ತೆಂಕುತಿಟ್ಟಿನ ಬಯಲಾಟದ ಪೂರ್ವರಂಗ" (ಪುಟ 323) ಎಂಬ ಲೇಖನ, ದೀವಾಣ ಭೀಮಭಟ್ಟರು ಬರೆದಿರುವ "ತೆಂಕುತಿಟ್ಟಿನ ತಾಳಗಳು ಮತ್ತು ಸಂಪ್ರದಾಯಗಳು" (ಪುಟ 333) ಎಂಬ ಬರಹ, "ಪೂರ್ವರಂಗ–ನಾಟ್ಯಾಭ್ಯಾಸದ ತಳಹದಿ" (ಪುಟ 351)" ಎಂಬ ಕೋಳ್ಯೂರು ರಾಮಚಂದ್ರರಾವ್‌ರವರ ಲೇಖನ ಹಾಗೂ ಅಳಿಕೆ ರಾಮಯ್ಯರೈಗಳವರ "ರಂಗಪ್ರವೇಶ" (ಪುಟ 355) ಎಂಬ ಬರಹಗಳು ಯಕ್ಷಶಿಕ್ಷಣದ ದೃಷ್ಟಿಯಿಂದ ಬಹು ಅಮೂಲ್ಯ ಯಕ್ಷಗಾನದ ಪಾರಂಪರಿಕ ಪಠ್ಯಗಳ ಅನೇಕ ಅಂಶಗಳನ್ನು ನಾವು ಅಲ್ಲಿ ಕಾಣಬಹುದು. ಈ ಎಲ್ಲವೂ ಮಾರ್ಗದರ್ಶಕ ಸೂತ್ರದಂತಿವೆ. 2002ರಲ್ಲಿ ಪ್ರಕಟಗೊಂಡ "ಒಡ್ಡೋಲಗ" (ಸಂ. ಭಾಸ್ಕರರೈ ಕುಕ್ಕುವಳ್ಳಿ) ಕೃತಿಯಲ್ಲಿ ಬಂದಿರುವ ದಿನಕರ ಎಸ್. ಪಚ್ಚನಾಡಿಯವರ "ನಾಟ್ಯಾಭ್ಯಾಸಿಗಳಿಗೆ ನೂರ ಒಂದು ವಿಚಾರಗಳ ಮುನ್ನೋಟ" (ಪುಟ 277) ಎಂಬ ಸುದೀರ್ಘ ಬರಹದಲ್ಲಿ ಯಕ್ಷಗಾನ ಕಲಿಕೆಯ ಕಾಲದಲ್ಲಿ ನಾಟ್ಯಾಭ್ಯಾಸಿಗಳು ಅನುಸರಿಸ ಬೇಕಾದ ನೂರವೊಂದು ಸೂಚನೆಗಳಿವೆ. ಹೀಗೆ ಬಿಡಿಬಿಡಿಯಾಗಿ ಬಂದಿರುವ ಲೇಖನಗಳಲ್ಲೂ ಯಕ್ಷಶಿಕ್ಷಣದ ಅಂಶಗಳಿವೆ.

1972ರ ಸುಮಾರಿಗೆ ಶ್ರೀಕ್ಷೇತ್ರ ಧರ್ಮಸ್ಥಳದ ವತಿಯಿಂದ ಪ್ರಾರಂಭವಾದ "ಧರ್ಮಸ್ಥಳ ಯಕ್ಷಗಾನ ತರಬೇತಿ ಕೇಂದ್ರ"ದಲ್ಲಿ ಗುರುಗಳಾಗಿ ಸೇವೆ ಸಲ್ಲಿಸಿರುವ ಶ್ರೀ ಪಡ್ರೆಚಂದ್ರು, ಶ್ರೀ ಕೆ. ಗೋವಿಂದಭಟ್ಟ, ಶ್ರೀ ಕೋಳ್ಯೂರು ರಾಮಚಂದ್ರರಾವ್, ಶ್ರೀ ತಾರನಾಥ ಬಲ್ಯ ಮುಂತಾದವರು ಕಾಲಕಾಲಕ್ಕೆ ಪಾರಂಪರಿಕ ಪಠ್ಯವನ್ನು ಆಧರಿಸಿ ಕಲಿಸುತ್ತಿದ್ದರು. ಇದೇ ಮಾದರಿಯ ಶಿಕ್ಷಣವು ಪೆರ್ಲದ ಶ್ರೀ ಪಡ್ರೆ ಚಂದ್ರು ಸ್ಮಾರಕ ಕಲಾ ಕೇಂದ್ರದಲ್ಲಿ ಬೋಧಿಸಲಾಗುತ್ತಿದೆ. ಅಲ್ಲಿ ಗುರುಗಳಾದ ಸಬ್ಬಣ ಕೋಡಿ ರಾಮಭಟ್ಟರು ಕಾರ್ಯ ನಿರ್ವಹಿಸುತ್ತಿದ್ದಾರೆ. ಬಿ.ಗೋಪಾಲಕೃಷ್ಣ ಕುರುಪ್ ಅವರು ತೆಂಕುತಿಟ್ಟಿನ "ಮದ್ದಲೆ ವಾದನ ಕ್ರಮ" ಎಂಬ ಪುಸ್ತಕದ ಮೂಲಕ, ನೆಡ್ಲೆ ನರಸಿಂಹ ಭಟ್ಟರ ಪರಂಪರೆಯನ್ನು ಪರಿಚಯಿಸಿದ್ದಾರೆ. ಇವರೇ ಬರೆದಿರುವ

"ಯಕ್ಷಗಾನ ತೆಂಕುತಿಟ್ಟಿನ ಚಂಡೆ ವಾದನ ಕ್ರಮ" ವನ್ನು ಉಡುಪಿಯ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ 1998ರಲ್ಲಿ ಪ್ರಕಟಿಸಿದೆ. ಮುನ್ನುಡಿಯಲ್ಲಿ ಈ ಬಗೆಯ ಗ್ರಂಥರಚನೆಗಳನ್ನು ಒಂದು ಐತಿಹಾಸಿಕ ಅವಶ್ಯಕತೆಯೆಂದೇ ಕರೆದಿರುವ ಡಾ.ಕೆ.ಎಂ.ರಾಘವ ನಂಬಿಯಾರ್ ಅವರು ಚೆನ್ನಾಗಿ ತಿದ್ದಿಕೊಳ್ಳದೇ ಕೇವಲ ಕೇಳ್ಮೆ, ಅನುಕರಣೆಯ ಬಲದಲ್ಲಿ ಕಸುಬುಗಾರಿಕೆಗಳಾಗುವುದರಿಂದ ಈ ರಂಗದ "ಆತೋದ್ಯ" ವಿಭಾಗ ಶೈಥಿಲ್ಯಕ್ಕೆ ಸಿಲುಕಿದೆ" ಎಂದಿದ್ದಾರೆ (ಪುಟ ii). "ತೆಂಕುತಿಟ್ಟಿನ ಯಕ್ಷಗಾನ ಬಯಲಾಟ ಮಾರ್ಗದರ್ಶಿ" ಎಂಬ ತಲೆ ಬರಹದಲ್ಲಿ ಶ್ರೀ ಧರ್ಮಪಾಲ್ ಜಾಧವ್ ಮುಂಡೋಡು ಅವರು "ನೂತನ ಯಕ್ಷಗಾನ ಸಭಾಲಕ್ಷಣ ಮತ್ತು ಪ್ರಸಂಗ ಪೀಠಿಕೆ" ಎಂಬ ಹೊತ್ತಿಗೆಯನ್ನು 1989ರಲ್ಲಿ ಪ್ರಕಟಿಸಿದ್ದು ಕಾಸರಗೋಡು ಭಾಗದ ಯಕ್ಷಗಾನ ಅಭ್ಯಾಸಿಗಳಿಗೆ ಮಾರ್ಗದರ್ಶಕ ಪಠ್ಯವಾಗಿದೆ. ಈ ಕೃತಿಯ ಮುನ್ನುಡಿಯಲ್ಲಿ ಶ್ರೀ ಎಡನೀರು ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರು ಇದೊಂದು ಶಾಸ್ತ್ರೀಯ ಕೃತಿ ಎಂದಿದ್ದಾರೆ. ಈ ಪುಸ್ತಕದಲ್ಲಿ ಮೂರು ವಿಭಾಗಗಳಿದ್ದು ಸಭಾಲಕ್ಷಣ, ಪದಗಳ ಪ್ರಸ್ತಾರ ಹಾಗೂ ತಾಳ ಪ್ರಸ್ತಾರ ಮತ್ತು ಮದ್ದಳೆ ತಾಳಗಳ ಪ್ರಸ್ತಾರದ ವಿವರಗಳಿವೆ. ಇದೇ ರೀತಿ ತೆಂಕುತಿಟ್ಟು ಯಕ್ಷಗಾನದ ಹೆಜ್ಜೆಗಾರಿಕೆಯನ್ನು ಕುರಿತು ಕರ್ಗಲ್ಲು ವಿಶ್ವೇಶ್ವರ ಭಟ್ಟರು ಕೃತಿಯನ್ನು ರಚಿಸಿದ್ದಾರೆ. 2002ರಲ್ಲಿ ಪ್ರಕಟಗೊಂಡ ಅವರ ಹೆಜ್ಜೆಗಾರಿಕೆ ನೃತ್ಯ ಪಾಠ ಪ್ರಾಥಮಿಕ ಹಂತವು ಯಕ್ಷಗಾನ ನೃತ್ಯವನ್ನು ಕಲಿಸುವ ವಿಧಾನದ ಬಗ್ಗೆ ಅನೇಕ ಅಂಶಗಳನ್ನು ತಿಳಿಸಿ ಕೊಡುತ್ತದೆ. ಒಂಭತ್ತು ಅಧ್ಯಾಯಗಳಿಂದ ಕೂಡಿರುವ ಈ ಕೃತಿಯಲ್ಲಿ ತಾಳ ಆಧಾರಿತ ಹೆಜ್ಜೆ ಹಾಕುವುದರಿಂದ ಪ್ರಾರಂಭಿಸಿ ಅಭಿನಯ ಕುರಿತು ವಿವರಣೆ ಇದೆ. ತೆರೆಕಲಸು, ಸಭಾಕಲಸು ಪ್ರವೇಶ ಕುಣಿತ ಮುಂತಾದುವನ್ನು ಸಮರ್ಪಕವಾಗಿ ವಿವರಿಸಿದ್ದಾರೆ. ಸಂಗ್ರಹಿಸಿ ಬರೆದಿರುವ ಕೃತಿಗಳಲ್ಲಿ ಅನೇಕ ಉತ್ತಮ ಪ್ರಕಾರದ ಪಠ್ಯ ವಿಚಾರಗಳಿವೆ.

ಮೂಡಬಿದಿರೆಯ ಆಳ್ವಾಸ್ ಸಂಸ್ಥೆಯವರು "ಧಿಂಕಿಟ ಯಕ್ಷಗಾನ ಅಧ್ಯಯನ ಕೇಂದ್ರ"ವನ್ನು (2004) ಇಪ್ಪತ್ತು ವರ್ಷಗಳ ಕೆಳಗೆ ಸ್ಥಾಪಿಸಿದ್ದು ತುಳು ಕಲಿಯುವ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಯಾಗಿ ಯಕ್ಷಗಾನದ ಆಯ್ಕೆಯನ್ನು ಕೊಟ್ಟಿದ್ದರು. ಅಲ್ಲಿನ ಕಲಿಕಾ ಕೇಂದ್ರದಲ್ಲಿ ಪ್ರದರ್ಶನಕ್ಕೆ ಬೇಕಾದ ಯಕ್ಷಶಿಕ್ಷಣವನ್ನು ಆಯ್ದ ನೂರಾ ಎಂಭತ್ತು ವಿದ್ಯಾರ್ಥಿಗಳು ಪದವಿ ಪಡೆದು ಕಾಲೇಜಿನ ಸಮಾರಂಭಗಳಲ್ಲಿ ಹಾಗೂ ಕಾಲೇಜನ್ನು ಪ್ರತಿನಿಧಿಸಿ ಹೊರಗೆ ನಡೆಯುವ ಕಾರ್ಯಕ್ರಮಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡುತ್ತಿದ್ದರು. ಇದಲ್ಲದೇ ಆಸಕ್ತ ಅಸಂಖ್ಯ ವಿದ್ಯಾರ್ಥಿಗಳು ನೃತ್ಯ ಕಲಿತರು. ಯಕ್ಷಗಾನವನ್ನು ಕಲಿತ ಅವರು ವೃತ್ತಿ ಕಲಾವಿದರಾಗಲು ಸಾಧ್ಯವಾಗದಿದ್ದರೂ, ಹವ್ಯಾಸಿ ಕಲಾವಿದರಾಗಲು ಸಾಧ್ಯವಾಯಿತು. ಮುಂದೆ 2017ರಲ್ಲಿ ಈ ಆಳ್ವಾಸ್

ಸಂಸ್ಥೆಯವರು ಡಿಪ್ಲೊಮೋ ಕೋರ್ಸನ್ನು ಧಿಂಕಿಟ ಯಕ್ಷಗಾನ ಅಧ್ಯಯನ ಕೇಂದ್ರದಲ್ಲಿ ಪ್ರಾರಂಭಿಸಿದರು. ಆಯ್ದು ಎಂಬತ್ತು ವಿದ್ಯಾರ್ಥಿಗಳಲ್ಲಿ ತೆಂಕುತಿಟ್ಟಿಗೆ ಹಾಗೂ ಬಡಗುತಿಟ್ಟಿಗೆ ಎರಡರಲ್ಲೂ ನಾಲ್ಕು ಸೆಮಿಸ್ಟರ್ಗಳ ತರಬೇತಿ ಪ್ರಾರಂಭವಾಯಿತು. ತೆಂಕುತಿಟ್ಟಿಗೆ ಶ್ರೀ ರಾಕೇಶ್ ರೈ ಅಡಕ ಹಾಗೂ ಶ್ರೀ ದಿವಿತ್ ಕೋಟ್ಯಾನ್‌ರು ಗುರುಗಳಾಗಿದ್ದರು. ಬಡಗುತಿಟ್ಟಿಗೆ ಶ್ರೀ ಗುಂಡಮಿ ಸದಾನಂದ ಐತಾಳ, ಭಾಗವತರಾದ ಶ್ರೀ ಸುಬ್ರಹ್ಮಣ್ಯ ಧಾರೇಶ್ವರ್ ಮತ್ತು ಶ್ರೀ ಎನ್.ಬಿ. ಹೆಗಡೆಯವರು ನೇಮಕಗೊಂಡರು. ಪ್ರೊ.ಸದಾಶಿವ ಶೆಟ್ಟಿಗಾರರು ಮೇಲ್ವಿಚಾರಕರಾಗಿದ್ದರು. ಗುಂಡ್ಮಿ ಸದಾನಂದ ಐತಾಳ್ ನಾಲ್ಕು ಸೆಮಿಸ್ಟರ್‌ಗೆ ಸರಿಹೊಂದುವ ಪಠ್ಯಕ್ರಮವನ್ನು ರೂಪಿಸಿದರು. ಒಟ್ಟು ಹದಿನಾರು ಪ್ರಕಾರಗಳಲ್ಲಿ ಶಿಕ್ಷಣವನ್ನು ನೀಡಿ ತರಗತಿಗೆ ನೋಟ್ಸ್‌ಗಳನ್ನು ನೀಡುತ್ತಾ ಪ್ರಶ್ನೆ ಪತ್ರಿಕೆಗಳ ತಯಾರಿ ಮಾಡಿ ಆಧುನಿಕ ಶಿಕ್ಷಣಕ್ಕೆ ಅಗತ್ಯವಾಗುವಂತೆ ಪಠ್ಯ ನಿರೂಪಿಸಿದರು. ಅವರು ರೂಪಿಸಿದ ಪಠ್ಯ ಕ್ರಮದಲ್ಲಿ ಲಯದ ಪ್ರಜ್ಞೆ, ಭಂಗಿ ಚಲನೆ, ದೈಹಿಕ ವ್ಯಾಯಾಮ ವಿವರ, ತಾಳಗಳ ಅಭ್ಯಾಸ, ಮಾತ್ರೆ ಗಣಗಳ ವಿಚಾರಗಳು ಮೊದಲ ಷಣ್ಮಾಸಿಕ ಸೆಮಿಸ್ಟರ್ನಲ್ಲಿ ಬಂದಿವೆ. ಎರಡನೇ ಷಣ್ಮಾಸಿಕದಲ್ಲಿ ಮೂಲಭೂತ ಹೆಜ್ಜೆಗಳ ಪ್ರಾಥಮಿಕ ಕುಣಿತ ವಿಚಾರ ತಾಳಕ್ಕೆ ಕುಣಿತವನ್ನು ಜೋಡಿಸುವ ಬಗ್ಗೆ ಅಭಿನಯ ಭಾಗದಲ್ಲಿ ಶಾಬ್ದಿಕ ವಿವರ, ಅಭಿನಯದ ಪರಿಚಯ, ಚಾಲು ಕುಣಿತ, ಮುಂತಾದ ತರಹೇವಾರು ಕುಣಿತದ ಬಗೆಗಳು ಬಂದಿವೆ. ವಿದ್ಯಾರ್ಥಿಗಳು ಮೂರನೆಯ ಷಣ್ಮಾಸಕಕ್ಕೆ ಬಂದಾಗ ಪಠ್ಯ ಸಹಿತ ಅಭಿನಯ, ಗಾಯನ, ವಾದನ, ಒಟ್ಟಾಗಿ ಸಾಗುವಾಗ ಕುಣಿಯುವ ಪರಿ, ವೇಷಭೂಷಣಗಳ ವಿವರಣೆ, ಪಾತ್ರಗಳ ಸ್ವಭಾವ ಅನುಸಾರವಾದ ವೇಷಗಾರಿಕೆ, ಲಿಂಗ ಆಧಾರಿತ ವೇಷಗಾರಿಕೆ, ದೈಹಿಕ ಆಧಾರಿತ ವೇಷಗಾರಿಕೆ ಮುಂತಾದುವುಗಳನ್ನು ಕಾಣಬಹುದಾಗಿದೆ. ಕೊನೆಯ ಷಣ್ಮಾಸಿಕದಲ್ಲಿ ನೃತ್ಯ ವೈವಿಧ್ಯಗಳಾದ ಪ್ರಯಾಣ ಕುಣಿತ, ಯುದ್ಧ ಕುಣಿತ, ಒಡ್ಡೋಲಗ, ಜಲಕ್ರೀಡೆ, ಪಾತ್ರ, ವೇಷಗಳ ವಿಧವಿಧ ಸ್ವರೂಪ, ಭಾವ ಹಾಗೂ ರಸದ ಕುರಿತು ತತ್ವ ಪ್ರತಿಪಾದನೆ, ಸಭಾಲಕ್ಷಣದ ಪಾಠಗಳು ಇರುತ್ತವೆ. ಇವೆಲ್ಲವನ್ನೂ ಗ್ರಂಥರೂಪದಲ್ಲಿ ಸಿದ್ಧಪಡಿಸಿದ್ದು ಪ್ರಕಟಗೊಳ್ಳಬೇಕಿದೆ.

ಇದರ ಸಾರರೂಪವನ್ನು ಈಗಾಗಲೇ ಸದಾನಂದ ಐತಾಳರು 160 ಪುಟಗಳ ಲೇಖನ ರೂಪದಲ್ಲಿ ಬರೆದಿದ್ದು ಅದು "ಯಕ್ಷಗಾನ ತಾಳ ಪ್ರಕರಣ" ಎಂಬ ಹೆಸರಿನಲ್ಲಿ ದಿ. ಎಂ.ಎ. ಹೆಗಡೆಯವರ ಹಾಗೂ ಸೋಂದಾ ನಾಗರಾಜ ಜೋಷಿಯವರ ಸಂಪಾದಕತ್ವದಲ್ಲಿ ಹೊರ ಬಂದಿರುವ "ಯಕ್ಷಗಾನ ಸ್ವರೂಪ ಲಕ್ಷಣ" (ಸ್ವರ್ಣವಲ್ಲಿ ಮಠದ ಯಕ್ಷ ಶಾಲ್ಮಲಿ ಪ್ರಕಾಶನ–2022) ಎಂಬ ಕೃತಿಯಲ್ಲಿದೆ.

ಬೆಂಗಳೂರಿನ ಯಕ್ಷವಾಹಿನಿ ಸಂಸ್ಥೆಯವರು ಡಿಜಿಟಿಲಿಕರಣದ ಕಾರ್ಯದಲ್ಲಿ ಪ್ರವೃತ್ತರಾಗಿದ್ದು ಭಾಗವತರುಗಳ ಕಲಿಕೆಗಾಗಿ "ಮಟ್ಟುಕೋಶ" ಎಂಬ ಡಿಜಿಟಲ್ ಮಾಧ್ಯಮವನ್ನು ಹುಟ್ಟು ಹಾಕಿದ್ದಾರೆ. ಪ್ರಸಂಗ ಸಾಹಿತ್ಯದಲ್ಲಿ ಕಂಡು ಬಂದಿರುವ 150 ಮಟ್ಟುಗಳನ್ನು ಶೋಧಿಸಿ, ಸಂಕಲಿಸಲಾಗಿದೆ. ಸಂಪಾದಕರಾಗಿರುವ ಶ್ರೀಮತಿ ಅಶ್ವಿನಿ ಹೋದಲ ಹಾಗೂ ಅಜಿತ್ ಕಾರಂತರು ಖ್ಯಾತ ಯಕ್ಷಗಾನ ಕವಿಗಳಾದ ಶ್ರೀ ಡಿ.ಎಸ್. ಶ್ರೀಧರ ಮತ್ತು ಗಿಂಡಿಮನೆ ಮೃತ್ಯುಂಜಯ ಅವರ ಮಾರ್ಗದರ್ಶನದಲ್ಲಿ ಹಾಗೂ ಎಲ್.ಎನ್. ಭಟ್ ಅವರ ಸಹಕಾರದಲ್ಲಿ ಈ ಕೋಶವನ್ನು ಸಿದ್ಧಪಡಿಸಿದ್ದಾರೆ. ಇವುಗಳಲ್ಲಿ ಐಯ್ದು ನೂರು ಮಟ್ಟುಗಳಿಗೆ ಸಾಹಿತ್ಯ ವಿನ್ಯಾಸದ ಹಾಗೂ ರಾಗ ವಿನ್ಯಾಸದ ವಿವರಣೆಯನ್ನು ಭಾಗವತರುಗಳಾದ ಶ್ರೀ ಅನಂತಪದ್ಮನಾಭ ಪಾಠಕ್ ಹಾಗೂ ಪುತ್ತೂರು ರಮೇಶ್ ಭಟ್ಟರು ನೀಡಿದ್ದಾರೆ. ಉಡುಪಿಯ ಯಕ್ಷಗಾನ ಕೇಂದ್ರದಲ್ಲಿ ಇದರ ವಿಡಿಯೋ ಗ್ರಾಫಿಯ ದಾಖಲೀಕರಣವು ಯಕ್ಷಗಾನ ಕಲಾರಂಗದ ಪ್ರಾಯೋಜಕತ್ವದಲ್ಲಿ ನಡೆದಿದೆ. ಭಾಗವತರುಗಳಾಗಿ ಎ.ಪಿ.ಪಾಠಕ್, ಶ್ರೀರಕ್ಷಾ ಹೆಗಡೆ, ಚಿತ್ಕಲಾ ತುಂಗ, ಅನಂತ ಹೆಗಡೆ ದಂತಳಿಕೆ, ಲಂಬೋದರ ಹೆಗಡೆಯವರಿದ್ದು ಮದ್ದಲೆಯಲ್ಲಿ ಎನ್.ಬಿ.ಹೆಗಡೆ ಹಾಗೂ ಬಗ್ವಾಡಿ ಕೃಷ್ಣಮೂರ್ತಿ ಭಟ್ ಸಹಕರಿಸಿದ್ದಾರೆ. ಬಡಗುತಿಟ್ಟಿನ ಹಾಡುಗಾರಿಕೆ ಸಿದ್ಧಗೊಂಡಿದ್ದು ಮೈಲಾಡಿ ಲೈವ್ ಅವರು ಪ್ರಸರಣಕ್ಕೆ ಸಿದ್ಧಗೊಳಿಸಿದ್ದಾರೆ. ಈ ಕಾರ್ಯದಿಂದ ಪ್ರಸಂಗಕಾರರಾಗಬೇಕೆಂಬವರಿಗೆ ರಾಗ ಹಾಗೂ ಹಾಗೂ ಮಟ್ಟುಗಳ ಛಂಧಸ್ಸಿನ ಜ್ಞಾನ ಲಭಿಸುತ್ತದೆ. ಅದೇ ರೀತಿ ಭಾಗವತರುಗಳು ಕೇವಲ ಅನುಕರಣದಿಂದ ಕಲಿಯದೇ ಮಟ್ಟುಗಳ ಪೂರ್ವಾಪರ ಜ್ಞಾನವನ್ನು ಪಡೆಯುವಂತಾಗಿದೆ. ಈ ಮೂಲಕ ಇದೊಂದು ಯಕ್ಷಶಿಕ್ಷಣದ ಪಠ್ಯಕ್ರಮಕ್ಕೆ ನೂತನ ಸೇರ್ಪಡೆಯಾಗಿದೆ. ಯಕ್ಷವಾಹಿನಿ ಸಂಸ್ಥೆಯ ಪದಾಧಿಕಾರಿಗಳಾದ ಡಾ.ಆನಂದರಾವು ಉಪಾಧ್ಯ, ನಟರಾಜ ಉಪಾಧ್ಯ ಹಾಗೂ ರವಿ ಮಾಡೋಡಿಯವರು ಈ ಯೋಜನೆಯನ್ನು ಪುಸ್ತಕ ರೂಪದಲ್ಲಿ ತರಬೇಕೆಂಬ ಉದ್ದೇಶ ಹೊಂದಿದ್ದು (ಸ್ಕ್ಯಾನ್ ಕೋಡ್, ಬಾರ್ ಕೋಡ್ ಮಾದರಿ) ತಂತ್ರಜ್ಞಾನದ ಮೂಲಕ ಒಂದು ಮಟ್ಟನ್ನು ಓದಿ ತಿಳಿದೊಡನೆ ಮೊಬೈಲ್ನಲ್ಲಿ ಕೋಡ್ ಅನ್ನು ಸ್ಕ್ಯಾನ್ ಮಾಡಿದೊಡನೆ ಆ ಹಾಡಿನ ರೂಪವನ್ನು ಕೇಳಿ ಭಾಗವತಿಕೆಯನ್ನು ಕಲಿಯಲು ಹಾಗೂ ಸುಧಾರಿಸಿಕೊಳ್ಳಲು ಸಾಧ್ಯವಾಗುವಂತೆ ರೂಪಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ.

ಉತ್ತರ ಕನ್ನಡ ಬಡಗು ತಿಟ್ಟಿನಲ್ಲಿ ಸೋಂದಾ ಕೃಷ್ಣಭಂಡಾರಿಯವರ ಪಠ್ಯ ಮಾತ್ರವಲ್ಲದೇ ಬೇರೆ ಚಿಂತನೆಗಳು ಕೂಡಾ ಇವೆ. ಗುಣವಂತೆಯಲ್ಲಿರುವ "ಶ್ರೀಮಯ ಕಲಾಕೇಂದ್ರ"ದಲ್ಲಿ ಯಕ್ಷಶಿಕ್ಷಣವು ಸಾಂಪ್ರದಾಯಿಕವಾಗಿದ್ದು ಪಠ್ಯಕ್ರಮ ಹೆಚ್ಚಾಗಿ ನೀಲಾವರದವರ ಯಕ್ಷಗಾನ ಸ್ವಬೋಧಿನಿಯನ್ನು ಅನುಸರಿಸಲಾಗುತ್ತಿದೆ. ಕರ್ಕಿ

ಹಾಸ್ಯಗಾರ ಮೇಳದವರು ತಮ್ಮದೇ ಆದ ಸಭಾಹಿತ ಮಟ್ಟು ಉಳ್ಳವರಾಗಿದ್ದು "ಸಭಾ ಲಕ್ಷಣ" ಕೃತಿಯನ್ನು ಆಧರಿಸಿ ಮನೆತನದೊಳಗೆ ಶಿಕ್ಷಣ ನೀಡುತ್ತಿದ್ದಾರೆ. ಈ ಬಗ್ಗೆ ಯಕ್ಷಗಾನ ಮಕರಂದದಲ್ಲಿ ಬಂದಿರುವ ಪಿ.ವಿ. ಹಾಸ್ಯಗಾರರ ಲೇಖನವನ್ನು ವಿಶೇಷವಾಗಿ ಗಮನಿಸಬೇಕಾಗಿದೆ. ಸಾತ್ವಿಕಾಭಿನಯ ಹಾಗೂ ಆಂಗಿಕಾಭಿನಯದಲ್ಲಿ ಇಲ್ಲಿ ಸಾಕಷ್ಟು ಕೃಷಿ ನಡೆದಿದೆ. ನಾಟ್ಯ ಶಾಸ್ತ್ರ ತಜ್ಞರಾಗಿರುವ ಡಾ.ಜಿ.ಎಸ್.ಹೆಗಡೆ ಯಾದಳ್ಳಿಯವರು ರಚಿಸಿರುವ "ಯಕ್ಷಗಾನ ಹಸ್ತಾಭಿನಯ ದರ್ಪಣ" (ಪ್ರಕಟಣೆ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು 1995) ಎಂಬ ಕೃತಿಯು ಅಧ್ಯಯನ ಪೂರ್ಣವಾಗಿದ್ದು ಅಭಿನಯಕ್ಕೆ ಸಂಬಂಧಿಸಿದಂತೆ ಕಲಾವಿದರಿಗೆ ಉಪಯುಕ್ತವಾಗಿದೆ. ಇಲ್ಲಿನ ರೇಖಾ ಚಿತ್ರಗಳು, ಹಸ್ತಾಭಿನಯದ ಚಿತ್ರಗಳು, ಅಭ್ಯಾಸಿಗಳಿಗೆ, ಯಕ್ಷಶಿಕ್ಷಕರಿಗೆ ಮಾರ್ಗದರ್ಶಕವಾಗಿವೆ. ಅಭಿನಯ ಭಾಗದಲ್ಲಿ ಆಯೋಜಿಸುವವರಿಗೂ ಅಧ್ಯಯನ ನಡೆಸಬೇಕೆನ್ನುವವರಿಗೂ ಈ ಕೃತಿ ಕೈಪಿಡಿಯಾಗುತ್ತದೆ ಎಂದು ಹೊಸ್ತೋಟ ಮಂಜುನಾಥ ಭಾಗವತರು "ನುಡಿಸೇಸೆ" ತಳೆದಿದ್ದಾರೆ.

ಯಕ್ಷಋಷಿ ಶ್ರೀಹೊಸ್ತೋಟ ಮಂಜುನಾಥ ಭಾಗವತರು ಮಕ್ಕಳಿಗೆ, ಹವ್ಯಾಸಿಗಳಿಗೆ, ಅಂಧರಿಗೆ, ಮಹಿಳೆಯರಿಗೆ ಯಕ್ಷಶಿಕ್ಷಣ ನೀಡುತ್ತಾ ಬಂದವರು. ಟೊರೆಂಟಾವಿನ ಯಕ್ಷಮಿತ್ರ, ಯಕ್ಷಗಾನ ಮೇಳದವರು 2016ರಲ್ಲಿ ಪ್ರಕಟಿಸಿರುವ "ಯಕ್ಷಗಾನ ಶಿಕ್ಷಣ ಲಕ್ಷಣ" ಕೇವಲ ಬೋಧನೆಯಾಗದೇ ಚಿಂತನೆಗೆ ಹಚ್ಚುವ ಕೃತಿಯಾಗಿದೆ. ಈ ಪುಸ್ತಕದಲ್ಲಿ ಹತ್ತು ಅಧ್ಯಾಯಗಳಿದ್ದು ಲಯ, ತಾಳಗಳು, ಮದ್ದಲೆ, ಯಕ್ಷಗಾನ ಕುಣಿತ, ಸ್ವರ, ರಾಗಗಳು, ಸಾಹಿತ್ಯ, ಅರ್ಥಗಾರಿಕೆ, ಅಭಿನಯ ಎಂಬ ವಿಚಾರಗಳ ಕುರಿತಾಗಿವೆ. ಇವೆಲ್ಲವೂ ಕೇವಲ ಪಾಠಗಳಾಗದೆ ವ್ಯಾಖ್ಯಾನಿಸುವಾಗ ಅನೇಕ ಹೊಳಹುಗಳನ್ನು ಹೊಮ್ಮಿಸುತ್ತವೆ. "ಪ್ರಾದೇಶಿಕ, ಪಾರಂಪರಿಕ ಕಲಿಕಾ ಕ್ರಮಕ್ಕೆ ಸೂಕ್ತ ವ್ಯಾಕರಣ ವಿಧಾನ ಕಲಿಸಲು, ಸೂತ್ರ ರೂಪ ನೀಡಲು ಪ್ರಯತ್ನಿಸುತ್ತಿದ್ದೇನೆ" ಎಂದು ಹೇಳಿರುವ ಹೊಸ್ತೋಟರವರು "ಗಣಿತ ಕ್ರಮದಲ್ಲಿ" ಲಯ, ತಾಳಗಳನ್ನು ತಿಳಿಸುವ, ಮಟ್ಟಾಗಿ ಗುರುತಿಸಿ ಅಭ್ಯಸಿಸುವ ಸುಸೂತ್ರ ಪಾಠಕ್ರಮ ಎಂದು ಹೇಳಿಕೊಂಡಿದ್ದಾರೆ. ನಲ್ನುಡಿ ಬರೆದಿರುವ ಡಾ.ಎಂ.ಪ್ರಭಾಕರ ಜೋಷಿಯವರು "ಅದು ಮುಕ್ತವಾಗಿದ್ದು ಶಾಸ್ತ್ರೀಯ, ಸಹಜ ಸರಳವಾಗಿದ್ದು ವ್ಯವಸ್ಥಿತ, ಅರಿಯಬೇಕೆಂಬ, ಕಲಿಯಬೇಕೆಂಬ ಆಸೆ ಇದ್ದವರಿಗೆ ವಿಧಿ ವಿಧಾನಗಳನ್ನು ಅದು ನೀಡುತ್ತದೆ. ತಾಂತ್ರಿಕ, ಸಾತ್ವಿಕ, ದರ್ಶನ ಮಾರ್ಗದರ್ಶನ ಎಲ್ಲಾ ಬೆರೆತ ಈ ಕೃತಿ "ಅಸಾಧಾರಣ" ಎಂದಿದ್ದಾರೆ.

ಮುಖ್ಯ ಅಧ್ಯಾಯದ ಪ್ರಾರಂಭದ ಮೊದಲೇ "ಯಕ್ಷಗಾನ ಹುಟ್ಟು ಬೆಳವಣಿಗೆ" ಎಂಬ ದೀರ್ಘ ಪ್ರಸ್ತಾವನೆಯಲ್ಲಿ ಯಕ್ಷಗಾನ ಶೈಲಿಯ ಬಗ್ಗೆ ಹೊಸ್ತೋಟ ಮಂಜುನಾಥ

ಭಾಗವತರಿಗೆ ಇರುವ ಖಚಿತ ದೃಷ್ಟಿಕೋನದ ಪರಿಚಯವಾಗುತ್ತದೆ. "ಹಳೆಗನ್ನಡದಿಂದ ನಡುಗನ್ನಡಕ್ಕೆ ತಿರುಗುವಾಗ ಭಾಷೆ ಪಡೆದ ತಿರುವಿನ ಸುಳಿಯೇ ಯಕ್ಷಗಾನ ಶೈಲಿಯ ತಿರುಳು, ಕನ್ನಡ ಪದ್ಯಗಳ ಮೂಲ ಮಟ್ಟುಗಳಾದ ತ್ರಿಪದಿ, ಸಾಂಗತ್ಯ, ದ್ವಿಪದಿ, ಚೌಪದಿ, ಷಟ್ಪದಿ, ರಗಳೆ, ವಚನ, ಸಾಹಿತ್ಯಗಳಲ್ಲಿ ಧ್ವನಿಗೈಯ್ಯುವ ಭಾಷಾನಾದ ಶೀಲವನ್ನು ಸ್ವೀಕರಿಸಿ ಈಗಿನ ಶೈಲಿ ಬೆಳೆದಿದೆ. ನಡುಗನ್ನಡದ ಸಮಾಸ ಕ್ರಮದ ಬಾಗು ಬಳಕುಗಳನ್ನು ಹೊಂದಿ ಬೆಳೆದು ಬಂದ ಗಾನ ಶೈಲಿಯೇ ಯಕ್ಷಗಾನ ಶೈಲಿ ಎಂದು ಒಪ್ಪಬೇಕಾಗುತ್ತದೆ" ಎಂಬ ವಾಕ್ಯಗಳಲ್ಲಿ ಯಕ್ಷಗಾನ ಶೈಲಿಯು ಕನ್ನಡದ ದೇಸಿ ಪರಂಪರೆಯನ್ನು ಹೊಂದಿದೆ ಎಂಬುವುದು ವ್ಯಕ್ತವಾಗುತ್ತದೆ. ಆದುದರಿಂದ ಯಕ್ಷಗಾನ ಅಭ್ಯಾಸ ಕ್ರಮಕ್ಕೆ ಪ್ರಾದೇಶಿಕ ಪರಂಪರೆಯ ಅನುಕರಣೆ ಹಾಗೂ ಅನುಸರಣೆ ಅನಿವಾರ್ಯವೆಂದು ಆ ನಿಟ್ಟಿನಲ್ಲಿ ಪಠ್ಯಕ್ರಮ ರೂಪಿಸಿದ್ದಾರೆ. ನಲವತ್ತು ಪುಟಗಳಷ್ಟು ಸುದೀರ್ಘವಾಗಿರುವ "ತಾಳಗಳು" ಅಧ್ಯಾಯದಲ್ಲಿ ತಾಳದ ಗತಿಗಳ ಎಲ್ಲಾ ಆ ಮಾತುಗಳನ್ನು ಚರ್ಚಿಸಿದ್ದಾರೆ. ಪ್ರತಿ ತಾಳದ ಕಾಲವನ್ನು ಅದಕ್ಕೆ ಸರಿ ಹೊಂದುವ ಮಾತ್ರೆಗಳು, ಅಂಶಗಣ ಕ್ರಮದ ವಿಧಾನದಲ್ಲಿ ವಿವರಿಸಿದ್ದಾರೆ. "ಮದ್ದಳೆ" ಎಂಬ ಅಧ್ಯಾಯದಲ್ಲಿ ಕೋಷ್ಠಕಗಳ ಮೂಲಕ ಘಾತದ ನಡೆಯನ್ನು ತಿಳಿಸಿದ್ದಾರೆ. ಮದ್ದಳೆಯ ಅಭ್ಯಾಸ ಕ್ರಮದಲ್ಲಿ ಗಮನಿಸಬೇಕಾದ ಅಂಶಗಳನ್ನು ತಿಳಿಸಿ ಲಯಕ್ಕೆ ಹೊಂದಿಸುವ ಬಗೆಯನ್ನು ಹೇಳಿಕೊಟ್ಟಿದ್ದಾರೆ. ಮದ್ದಳೆಯ ನುಡಿಗಟ್ಟುಗಳನ್ನು ತಿಳಿಸಿ ಪ್ರತಿ ತಾಳಗಳ ಬಗ್ಗೆ ಬರೆದು ತತ್ಕಾರ ಸಹಿತ ಸಂಯೋಜನೆ ವಿಶದ ಪಡಿಸಿದ್ದಾರೆ. ಈ ಅಧ್ಯಾಯ 66 ಪುಟಗಳಷ್ಟಿದೆ. "ಯಕ್ಷಗಾನ ಕುಣಿತ" ದಲ್ಲಿ ನಿಲ್ಲುವ ಆಕೃತಿಗಳನ್ನು ಸಚಿತ್ರವಾಗಿ ತಿಳಿಸಿಕೊಟ್ಟು ಪಾದಗಳ ಚಲನೆಯ ಬಗೆಯನ್ನು ರೇಖಾಚಿತ್ರದ ಮೂಲಕ ತೋರಿಸಿದ್ದಾರೆ. ಅರವತ್ತು ಬಗೆಯ ರಂಗರೇಖೆಗಳನ್ನು ಸವಿಸ್ತಾರವಾಗಿ ತೋರಿಸಿಕೊಟ್ಟಿರುವುದು ಕಲಿಯುವವರಿಗೆ ಬಹಳ ಅನುಕೂಲಕರ "ಸ್ವರ" ಎಂಬ ಅಧ್ಯಾಯದಲ್ಲಿ ಸಂಗೀತದ ನಾನಾ ಬಗೆಗಳನ್ನು ಮೇಳಕರ್ತ ರಾಗಗಳ ಸ್ವರಗಳ ಬಗೆಯನ್ನು ಆರೋಹಣ ಅವರೋಹಣಗಳ ಮೂಲಕ ಹೊಸ್ತೋಟರವರು ವಿವರಿಸಿದ್ದಾರೆ. ಪ್ರಸಂಗದ ಪದ್ಯವನ್ನು ಉದಾಹರಿಸಿ ಸ್ವರಾಭ್ಯಾಸ ಕ್ರಮವನ್ನು ತಿಳಿಸಿದ್ದಾರೆ. ಮುಂದೆ ರಾಗಗಳ ಪರಿಚಯ ಮಾಡಿ ಅನೇಕ ರಾಗಗಳ ಆರೋಹ ಅವರೋಹಣಗಳನ್ನು ಈ ಗ್ರಂಥದಲ್ಲಿ ತಿಳಿಸಲಾಗಿದೆ. ಒಟ್ಟು 86 ರಾಗಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ರಾಗಗಳ ಇತಿಹಾಸ, ಬೇರೆ ಪದ್ಧತಿಯಲ್ಲಿ ಅದು ಬಂದ ಬಗೆ, ಯಕ್ಷಗಾನ ಸಂಗೀತದಲ್ಲಿ ಅದು ಪಡೆದುಕೊಂಡ ಬಗೆಯನ್ನು ತಿಳಿಸಿದ್ದಾರೆ. ದಿ.ಪ್ರೊ. ಎಂ. ರಾಜಗೋಪಾಲಾಚಾರ್ಯರು "ಯಕ್ಷಗಾನ ಸಂಗೀತ" ಎಂಬ ಆಚಾರ್ಯ ಕೃತಿಯನ್ನು ರಚಿಸಿದ್ದು ಇಲ್ಲಿ ಉಲ್ಲೇಖಾನಾರ್ಹ. ಅವರ ಪುಸ್ತಕದ ಅನೇಕ ಅಂಶಗಳು ಪ್ರೌಢ ಅಧ್ಯಯನಕ್ಕೆ ಒಳಪಡಬೇಕಾಗಿದೆ. ಮಂಜುನಾಥ ಭಾಗವತರು

ಇಲ್ಲಿ ಬಹು ಸರಳವಾಗಿ ನಿರೂಪಿಸಿದ್ದಾರೆ. ಏಳನೆಯ ಅಧ್ಯಾಯದಲ್ಲಿ "ಯಕ್ಷಗಾನ ಸಾಹಿತ್ಯ"ದ ಕುರಿತು ಹೊಸ್ತೋಟರು ತಮ್ಮ ವಿಚಾರಧಾರೆಯನ್ನು ಮಂಡಿಸಿದ್ದಾರೆ. ಇಲ್ಲಿ ಅವರು ಮಟ್ಟುಗಳನ್ನು ಪರಿಚಯಿಸಿದ್ದಾರೆ. ಛಂಧೋಂಬುಧಿಯ ಬೇರೆ ಬೇರೆ ಛಂದಸ್ಸುಗಳನ್ನು ಉದಾಹರಿಸಿ ಅವುಗಳ ನಡೆ ಹೇಗಿದೆ ಎಂಬುವುದನ್ನು ತಿಳಿಸಿಕೊಟ್ಟಿದ್ದಾರೆ. ಸಂಸ್ಕೃತದ ಇಪ್ಪತ್ತು ವೃತ್ತಗಳನ್ನು ಉದಾಹರಣೆಯೊಂದಿಗೆ ವಿವೇಚಿಸಿ ಮುಂದೆ ಷಟ್ಪದಿಗಳ ಬಗ್ಗೆ, ರಗಳೆಗಳ ಬಗ್ಗೆ, ಪ್ರಸಂಗದ ಪದ್ಯ ಆಧರಿಸಿ ತಿಳಿಸಿದ್ದಾರೆ. ಯಕ್ಷಗಾನ ಹಿಮ್ಮೇಳದ ಪದಗಳಿಗೆ ಜಾನಪದ ಹಿನ್ನೆಲೆ ಇದೆ ಎಂಬ ವಾದ ಮಂಡಿಸಿದ್ದಾರೆ. ತ್ರಿಪದಿಯ ನಡೆಯು ಬೇರೆಬೇರೆ ತಾಳಗಳಲ್ಲಿ ಹೇಗೆ ಆಗುತ್ತದೆ ಎಂಬುವುದನ್ನು ವಿವರಿಸಿದ್ದಾರೆ. "ಅರ್ಥಗಾರಿಕೆ"ಯ ಬಗ್ಗೆ ಇರುವ ಅಧ್ಯಾಯದಲ್ಲಿ ಅರ್ಥಧಾರಿ ಅನುಸರಿಸಬೇಕಾದ ಸೂಕ್ಷ್ಮಗಳನ್ನು ಸೂಚ್ಯವಾಗಿ ತಿಳಿಸಿದ್ದಾರೆ. ಮುಂದಿನ ಅಧ್ಯಾಯಕ್ಕೆ "ಅಭಿನಯ ಅವಲೋಕನ" ಎಂದು ಹೆಸರಿಸಿ ಕೆಲವು ಮುದ್ರೆಗಳನ್ನು ತಿಳಿಸಿದ್ದಾರೆ. ಅಭಿನಯದ ಸಾಧ್ಯತೆಗಳನ್ನು ಆಧಾರದ ಮೂಲಕ ವಿವರಿಸಿದ್ದಾರೆ. ಕೊನೆಯ ಅಧ್ಯಾಯದಲ್ಲಿ ಚಂಡೆಯ ಬಗ್ಗೆ ವಿವರಿಸಿ, ಖ್ಯಾತ ಚಂಡೆವಾದಕರಾದ ಶ್ರೀ ಕೃಷ್ಣಯಾಜಿ ಇಡಗುಂಜಿಯವರಿಂದ ಎರಡು ಲೇಖನ ಬರೆಸಿ ಇದಕ್ಕೆ ಅನುಬಂಧದ ರೀತಿಯಲ್ಲಿ ಸೇರಿಸಿಕೊಟ್ಟಿದ್ದಾರೆ. ಶ್ರೀ ಯಾಜಿಯವರು ಚಂಡೆ ನುಡಿಸುವ ವಿಧಾನ, ಭಾಗವತರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಬಗೆಯನ್ನು ಬಹು ಅಧಿಕೃತವಾಗಿ ತಿಳಿಸಿಕೊಟ್ಟಿದ್ದಾರೆ. ಕೊನೆಯಲ್ಲಿ ಹೊಸ್ತೋಟರು ಚಂಡೆಯ ಔಚಿತ್ಯವನ್ನು ವಿವರಿಸಿ ಪ್ರದರ್ಶನಕ್ಕೆ ಅದರ ಬಳಕೆಯ ಬಗ್ಗೆ ತಮ್ಮ ನಿಲುವನ್ನು ಪ್ರಕಟಿಸಿದ್ದಾರೆ. ಹೀಗೆ ಇಲ್ಲಿನ ಹತ್ತು ಅಧ್ಯಾಯಗಳು ಬಹು ದೀರ್ಘವು ವಿಚಾರಾತ್ಮಕವೂ ಆಗಿವೆ.

ಇಲ್ಲಿ ಪ್ರಾಯೋಗಿಕವಾಗಿ ಹೊಸ್ತೋಟ ಮಂಜುನಾಥ ಭಾಗವತರ ಚಿಂತನಾಕ್ರಮದ ಮಾದರಿಯೊಂದನ್ನು ಗಮನಿಸಬಹುದು. "ಯಕ್ಷಗಾನ ಪರಂಪರೆ"ಯ ಗುಣಮಟ್ಟ ಏರುತ್ತಾ ಜನಪ್ರಿಯತೆ ಗಳಿಸಲು ಕಾರಣ ಆ ಕಲೆಯ ವೈಶಿಷ್ಟ ಪೂರ್ಣ ಜಾನಪದ ಆವರಣ, ಶಾಸ್ತ್ರೀಯ ಸಂಗೀತ ಪದ್ಧತಿಯ ಚೌಕಟ್ಟಿನೊಳಗೆ ಹೋಗದಿದ್ದರೂ ಆ ಚೌಕಟ್ಟನ್ನು ಅನುಸರಿಸಿದೆ. ದೇಸೀಯ ಸ್ವಚ್ಛಂದತೆಯನ್ನು ಮೆಚ್ಚಿಕೊಂಡರೂ ತನ್ನಲ್ಲಿ ಸೇರಿಸಿಕೊಳ್ಳುವಾಗ ನಿಯಮಕ್ಕೆ ಒಳಪಡಿಸಿಕೊಂಡಿದೆ. ಪುರಾಣದ ಕಥೆಗಳನ್ನಾಯ್ದುಕೊಂಡು ವಿದ್ವಾಂಸರ ಗಮನ ಸೆಳೆದು ಜನ ಸಾಮಾನ್ಯರ ರಂಜನೆಗೂ ಇಂಬಿತ್ತು ಸಮಾಜವನ್ನು ಆಕರ್ಷಿಸಿದೆ. ಈ ಸೂತ್ರದೊಂದಿಗೆ ಬೆಳೆದು ಬರುವಾಗ ಅದು ಭೂತದ ಬಯಲಿಗೂ ಸಾಗಿದೆ. ದೇವಾಲಯದ ಮುಖಮಂಟಪವನ್ನು ಪ್ರವೇಶಿಸಿದೆ. ಸುಸಂಸ್ಕೃತದ ಸಾಹಿತ್ಯದ ಭಾವ ಗಾಂಭೀರ್ಯವನ್ನು ಮನ್ನಿಸಿ ಜಾನಪದ ಸಾಹಿತ್ಯದ ಮುಗ್ಧ ಸೌಂದರ್ಯವನ್ನು ಸ್ವಾಗತಿಸಿದ ಸಹೃದಯ ಸಂಕಲನ ಶೀಲ ಸ್ವಭಾವ ಈ

ಕಲೆಯ ವೈಶಿಷ್ಟ. ಆರೋಗ್ಯಕರ ಧೀರ್ಘಾಯು ಸೂತ್ರವೂ ಇದೆ. (ಯಕ್ಷಗಾನ ಶಿಕ್ಷಣ–ಲಕ್ಷಣ. ಹೊಸ್ತೋಟ ಮಂಜುನಾಥ ಭಾಗವತ. ಪುಟ 140–141) ಈ ಸಾಲುಗಳು ಯಾವ ಸೃಜನಶೀಲ ಸಾಹಿತ್ಯಕ್ಕೂ ಕಡಿಮೆ ಇಲ್ಲದ್ದೂ. ನಾಲ್ಕು ದಶಕಗಳ ಪಾಠ ಮಾಡಿದ ಅನುಭವ ಇಲ್ಲಿ ನಾಲ್ಕು ವರ್ಷಗಳಲ್ಲಿ ಹರಳುಗಟ್ಟಿ ಪುಸ್ತಕ ರೂಪ ತಾಳಿದೆ.

ಕರಾವಳಿ ಕಳೆದು ಮಲೆನಾಡಿಗೆ ಬಂದರೆ ಅಲ್ಲೂ ಯಕ್ಷಗಾನ ಶಿಕ್ಷಣ ಗುರು ಮುಖೇನ ನಡೆಯುತ್ತಿದೆ ಎಂಬುದು ತಿಳಿದು ಬರುತ್ತದೆ. ಕಳೆದ ಶತಮಾನದ ಪೂರ್ವಾರ್ಧದಲ್ಲಿ ಬಾಳಿಬದುಕಿದ ಅನೇಕ ಯಕ್ಷಗಾನ ಮೇಳಗಳು, ಲಿಂಗನಮಕ್ಕಿ ಜಲಾಶಯದಿಂದಾಗಿ ಕಾಲಗರ್ಭದಲ್ಲಿ ಮುಳುಗಿ ಹೋದದ್ದನ್ನು ಲೇಖಕ ಶ್ರೀ ರವಿ ಮಾಡೋಡಿಯವರು ತಮ್ಮ "ಮಲೆನಾಡಿನ ಯಕ್ಷ ಚೇತನಗಳು" (ಮಡಿಲು ಪ್ರಕಾಶನ 2021) ಗುರುತಿಸಿದ್ದಾರೆ. ಆ ಪ್ರದೇಶಗಳಲ್ಲಿ ಯಕ್ಷಗುರುವಾಗಿ ಅನೇಕ ಶಿಷ್ಯರನ್ನು ತರಬೇತಿಗೊಳಿಸಿ, ಮೇಳಗಳ ಪ್ರದರ್ಶನಕ್ಕೆ ಕಾರಣರಾದವರ ವಿಚಾರ ಅಲ್ಲಿ ಬರುತ್ತದೆ. ಅವರುಗಳಲ್ಲಿ ಗುರು ವೀರಭದ್ರನಾಯಕ (ಬೆಳೆಯೂರು ಮೇಳ), ಮಲಗದ್ದೆ ಗಣೇಶಯ್ಯ (ಮರಗಡಿ ಮೇಳ), ಗುಂಡೂ ಸೀತಾರಾಮರಾವ್ (ದೊಡ್ಡೇರಿ ಮೇಳ), ಉಳ್ಳೂರು ಗಣಪತಿ ನಾಯಕ್ (ಬಾಳೆಹೊಳೆ ಮೇಳ), ಹುಕ್ಲಮಕ್ಕಿ ಮಂಜುನಾಥ ಹೆಗಡೆ (ಹುಕ್ಲಮಕ್ಕಿ ಮೇಳ) ಮುಂತಾದವರು ಮುಖ್ಯರು. ನಾರಾಣಪ್ಪ ಉಪ್ಪೂರರ "ಯಕ್ಷಗಾನ ಶಿಕ್ಷಕ" ಹೆಚ್ಚಾಗಿ ಈ ಭಾಗದಲ್ಲಿ ಪಠ್ಯವಾಗಿರುವುದನ್ನು ಕಾಣಬಹುದು. ಶ್ರೀ ಟಿ.ಎಂ.ಸುಬ್ಬರಾಯ ಹಾಗೂ ಶ್ರೀ ಶ್ರೀಪಾದ ಹೆಗಡೆಯವರು ಅನುಕ್ರಮವಾಗಿ ಮರಗಡಿ ಮೇಳ, ಹುಕ್ಲಮಕ್ಕಿ ಮೇಳದ ಬಗ್ಗೆ ಪುಸ್ತಕ ಬರೆದಿದ್ದು ಅಲ್ಲಿನ ಯಕ್ಷಶಿಕ್ಷಣದ ವಿವರ ಲಭ್ಯವಾಗುತ್ತದೆ.

ಬಯಲು ಸೀಮೆಗೆ ಬಂದರೆ ಪ್ರಚಲಿತವಿರುವ ಮೂಡಲಪಾಯ, ಘಟ್ಟದ ಕೋರೆ ಯಕ್ಷಗಾನಗಳಲ್ಲೂ ಕೂಡಾ ಗುರುಮುಖೇನ ಯಕ್ಷಶಿಕ್ಷಣ ನಡೆಯುತ್ತಿತ್ತು. ಮೂಡಲಪಾಯದ ಭಾಗವತರುಗಳಾದ ಪಟೇಲ್ ಎನ್. ನರಸಪ್ಪ, ಸಣ್ಣತಿಮ್ಮಯ್ಯ, ಅರಳಗುಪ್ಪೆ ಚೆನ್ನಬಸವಯ್ಯ, ಮತ್ತಿಹಳ್ಳಿ ಮಂಜುನಾಥ, ಕಲ್ಮನೆ ನಂಜಪ್ಪ, ಕ.ನ.ದಾಸಾಚಾರ್ ಮುಂತಾದವರು ತಮ್ಮ ಶಿಷ್ಯರಿಗಾಗಿ ತಮ್ಮದೇ ಆದ ಪಠ್ಯ ರಚನೆ ಮಾಡಿಕೊಂಡು ಯಕ್ಷಗಾನವನ್ನು ಕಲಿಸುತ್ತಾ ಬಂದಿದ್ದಾರೆ. ಕರ್ನಾಟಕ ಯಕ್ಷಗಾನ ಅಕಾಡೆಮಿಯವರು 2019ರಲ್ಲಿ ಪ್ರಕಟಿಸಿದ ಶ್ರೀ ಕಲ್ಮನೆ ನಂಜಪ್ಪನವರ "ಮೂಡಲಪಾಯ ಯಕ್ಷಗಾನ ಭಾಗವತಿಕೆಯ ಪ್ರವೇಶಿಕೆ"ಯಲ್ಲಿ ನಾಲ್ಕು ಭಾಗಗಳಿವೆ. ಮೊದಲ ಭಾಗದಲ್ಲಿ ಎಂಟು ರಾಗಗಳ ಚಲನೆ ಹೇಗಿರಬೇಕೆಂಬುದನ್ನು ಸೋದಾಹರಣವಾಗಿ ವಿವರಿಸಲಾಗಿದೆ. ಎರಡನೆಯ ಭಾಗದಲ್ಲಿ ಹದಿನೈದು ರಾಗಗಳ ಸಂಚಾರ ಕ್ರಮವನ್ನು

ಪದ್ಯಗಳ ಮೂಲಕ ವಿವರಿಸಿದ್ದಾರೆ. ಇನ್ನೆರಡು ಭಾಗಗಳಲ್ಲಿ ಎಂಟು–ಹತ್ತು ರಾಗಗಳಲ್ಲಿ ಹಾಡುವ ಪದ್ಯಗಳನ್ನು ಬೇರೆಬೇರೆಯಾಗಿ ಪ್ರಸಂಗದಿಂದ ಆರಿಸಿ ಕೊಟ್ಟಿದ್ದಾರೆ. ಈ ಎಲ್ಲವನ್ನೂ ಧ್ವನಿ ಮುದ್ರಿಸಿದ್ದು ಪುಸ್ತಕದೊಂದಿಗೆ ಧ್ವನಿ ಮುದ್ರಿಕೆ ಉಚಿತವಾಗಿ ಕೊಡ ಮಾಡಲಾಗಿದೆ. ಡಾ. ನರಸೇಗೌಡ ಎನ್ನುವವರು "ಮಧುಗಿರಿ ತಾಲ್ಲೂಕಿನ ಬಯಲಾಟಗಳು" ಎಂಬ ಪ್ರೌಢ ಪ್ರಬಂಧದಲ್ಲಿ ಕಾಲಾನುಸಾರವಾಗಿ ರಾಗ, ತಾಳಗಳ ಬಳಕೆಯ ವಿಧಾನ ತಿಳಿಸಿದ್ದಾರೆ. ಇಲ್ಲಿ ಪಾತ್ರಗಳು ತಾಳಗಳನ್ನು ಆಧರಿಸಿ ಕುಣಿಯುವ ಬಗೆಯನ್ನು ವಿವರಿಸಲಾಗಿದೆ. ಪಾರಂಪರಿಕವಾದ ಪಠ್ಯದ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಇನ್ನೊಬ್ಬ ಭಾಗವತರಾದ ಶ್ರೀ ಅರಳಗುಪ್ಪ ಚೆನ್ನಬಸವಯ್ಯನವರು ತಮ್ಮ ಮಂಡಲಿಗೆ ತಮ್ಮದೇ ಆದ ಪಠ್ಯ ಸಿದ್ಧಪಡಿಸಿಕೊಂಡಿದ್ದಾರೆ. ಘಟ್ಟದಕೋರೆಗೆ ಸಂಬಂಧಿಸಿದಂತೆ ಜಯಚಂದ್ರರಾಜ ಅರಸು ಅವರು ತಂಡದ ಕಲಾವಿದರಿಗೆ ಕಲಿಕೆಯ ತರಬೇತಿಯನ್ನು ನೀಡುತ್ತಿದ್ದಾರೆ. ತೆಂಕುತಿಟ್ಟಿನ ಕಲಿಕಾ ಕ್ರಮವೇ ಇದೆ. ಇವರು ಹೆಚ್ಚಾಗಿ ತೆಂಕುತಿಟ್ಟಿನ ಪ್ರಸಂಗಗಳನ್ನೇ ಆಶ್ರಯಿಸಿಕೊಂಡಿದ್ದಾರೆ. ಕರ್ಗಲ್ ವಿಶ್ವೇಶ್ವರ ಭಟ್ಟರು ಮೂಡಲಪಾಯದ ಅನೇಕ ಯುವಕರಿಗೆ ಕಲಿಕೆಯಲ್ಲಿ ಮಾರ್ಗದರ್ಶನ ನೀಡುತ್ತಿದ್ದಾರೆ. ಹೀಗಿದ್ದೂ ಮೂಡಲಪಾಯದಲ್ಲಿ ಯಕ್ಷಗಾನ ತರಬೇತಿಗಾಗಿ ಯಾವುದೇ ಅಧಿಕೃತ ಪಠ್ಯ ಸಿದ್ಧಗೊಂಡಿಲ್ಲ.

ಮಧ್ಯ ಕರ್ನಾಟಕ ಹಾಗೂ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ದೊಡ್ಡಾಟ, ಸಣ್ಣಾಟ, ಡಪ್ಪಿನಾಟ, ಶ್ರೀಕೃಷ್ಣಪಾರಿಜಾತ ಮುಂತಾದ ಪ್ರಕಾರಗಳಲ್ಲಿ ಪಠ್ಯಗಳು ಪ್ರದೇಶವಾರು ಭಿನ್ನವಾಗಿವೆ. ಡಾ.ಬಸವರಾಜು ಮಲಶೆಟ್ಟಿ, ಡಾ.ಕೆ.ಆರ್.ದುರ್ಗಾದಾಸ್, ಪ್ರೊ.ಬಿ.ಆರ್.ಪೊಲೀಸ್ ಪಾಟೀಲ್, ಡಾ.ಕರಿಶೆಟ್ಟಿ ರುದ್ರಪ್ಪ ಮುಂತಾದವರು ಅಧ್ಯಯನ ನಡೆಸಿ ಬಯಲಾಟ ಸಂಪ್ರದಾಯದ ಸಂಗೀತ, ಕುಣಿತ, ವೇಷಭೂಷಣಗಳ ಬಗ್ಗೆ ಸಾಕಷ್ಟು ವಿಚಾರಗಳನ್ನು ತಿಳಿಸಿದ್ದಾರೆ. ಹೆಚ್ಚಾಗಿ ಇಲ್ಲಿ ತಂಡಕ್ಕೊಬ್ಬ ಹಿರಿಯನಿದ್ದು ಆತ ಉಳಿದ ಕಲಾವಿದರಿಗೆ ಕಲಾ ಶಿಕ್ಷಣವನ್ನು ತನ್ನ ಅನುಭವದ ಆಧಾರದ ಮೇಲೆ ನೀಡುತ್ತಾನೆ. ಖಚಿತವಾದ ಪಠ್ಯಕ್ರಮ ಇನ್ನೂ ರೂಢಿಗೊಂಡಿಲ್ಲ. ಆದರೆ ಮಾಸ್ತರ್/ಗುರುವೆನಿಸಿಕೊಂಡವರು ತಾನೇ ಮೌಖಿಕವಾಗಿ ಸಿದ್ಧಪಡಿಸಿಕೊಂಡ ಪಾಠಕ್ರಮವನ್ನು ಆಧರಿಸಿ ಕಲಿಸುತ್ತಾರೆ. ಗೊಟಗೋಡಿಯಲ್ಲಿರುವ ಜಾನಪದ ವಿಶ್ವವಿದ್ಯಾಲಯವು ಬಯಲಾಟದಲ್ಲಿ ಒಂದು ವರ್ಷದ ಡಿಪ್ಲೊಮೊ ಕೋರ್ಸನ್ನು ಪ್ರಾರಂಭಿಸಿದೆ. ಗೊಟಗೋಡಿಯಲ್ಲಿ ಕರ್ನಾಟಕ ಬಯಲಾಟ (ದೊಡ್ಡಾಟ) ಟ್ರಸ್ಟ್, ಹುಲಸೋಗಿ ಎಂಬುದು ಸ್ಥಾಪನೆಯಾಗಿದ್ದು ಅಲ್ಲಿ ಟಿ.ಬಿ.ಸೊಲಬಕ್ಕನವರ ಅಧ್ಯಕ್ಷತೆಯಲ್ಲಿ ತರಬೇತಿ ಕೇಂದ್ರ ಪ್ರಾರಂಭಿಸಿದರು. ಮದ್ದಳೆ ಕಲಾವಿದ ಬಾಲಚಂದ್ರಪ್ಪ ನಾಯಕ್, ಪ್ರಸಂಗಕಾರ ವೀರನಗೌಡ ಪಾಟೀಲ್ ಮುಂತಾದವರು ಗ್ರಾಮೀಣ ಪ್ರದೇಶದ ಕಲಾವಿದರಿಗೆ

ಗುರುಗಳಾಗಿ ತರಬೇತಿ ನೀಡುತ್ತಿದ್ದಾರೆ. ಡಿಪ್ಲೊಮ ತರಬೇತಿಗಳಿಗಾಗಿ ಡಾ.ಕರಿಶೆಟ್ಟಿ ರುದ್ರಪ್ಪ, ಡಾ.ಸಿದ್ದೇಶ್ವರ ಬಳ್ಳಾರಿ ಮುಂತಾದವರು ಪಠ್ಯಪುಸ್ತಕಗಳನ್ನು ರಚಿಸಿದ್ದಾರೆ. ಈ ಪಠ್ಯಗಳಲ್ಲಿ ಬಯಲಾಟದ ಚರಿತ್ರೆ, ಪದ್ಯಗಳ ಬಳಕೆ, ಪ್ರಸಂಗಗಳ ವಿವರಗಳಿವೆ. ಆದರೆ ಪ್ರಾಯೋಗಿಕ ಪಠ್ಯವಿಧಾನ ಕಾಣುತ್ತಿಲ್ಲ. ಜಾನಪದ ವಿಶ್ವವಿದ್ಯಾನಿಲಯ ಹಾಗೂ ಬಯಲಾಟ ಅಕಾಡೆಮಿ ಅನೇಕ ದಾಖಲೀಕರಣ, ವಿಚಾರ ಸಂಕಿರಣ, ಕಮ್ಮಟಗಳನ್ನು ನಡೆಸುತ್ತಿವೆ. ಹೂವಿನಹಡಗಲಿಯಲ್ಲಿರುವ ರಂಗಚೈತನ್ಯ ಬಯಲಾಟ ಕೇಂದ್ರದವರು ತರಬೇತಿ ಕೇಂದ್ರಗಳನ್ನು ನಡೆಸುತ್ತಿದ್ದು ಡಾ.ಕರಿಶೆಟ್ಟಿ ರುದ್ರಪ್ಪನವರು ಮಾರ್ಗದರ್ಶಕರಾಗಿದ್ದಾರೆ.

ಕರಾವಳಿ ಹಾಗೂ ಮಲೆನಾಡಿನಲ್ಲಿರುವ ವಿವಿಧ ಯಕ್ಷಗಾನ ಪಠ್ಯಕ್ರಮಗಳಲ್ಲಿ ಏಕರೂಪತೆ ಬೇಕೆಂಬ ಕೂಗು ಬಹಳ ದಿನಗಳಿಂದ ಇದ್ದಿತ್ತು. ಇದನ್ನು ಮನಗಂಡ ಕರ್ನಾಟಕ ಸರ್ಕಾರ ಮೊದಲ ಬಾರಿಗೆ ತೆಂಕು ಹಾಗೂ ಬಡಗು ತಿಟ್ಟಿಗೆ ಅನ್ವಯವಾಗುವಂತೆ ಪ್ರಾಥಮಿಕ ವಿಭಾಗದ ಪಠ್ಯವೊಂದನ್ನು ಹೊಸ್ತೋಟ ಮಂಜುನಾಥ ಭಾಗವತರ ಅಧ್ಯಕ್ಷತೆಯಲ್ಲಿ ಸಿದ್ಧಪಡಿಸಿತ್ತು. ಕರ್ನಾಟಕ ಪಠ್ಯ ಪುಸ್ತಕ ಸಂಘವು 2019ರಲ್ಲಿ "ಯಕ್ಷಗಾನ ಶಿಕ್ಷಣ ಪಠ್ಯ ಪುಸ್ತಕ"ಎಂಬ ಹೆಸರಿನಲ್ಲಿ ಪ್ರಕಟಿಸಿತ್ತು. ಇದರಲ್ಲಿ ಅನೇಕ ಅರಕೆಗಳನ್ನು, ಸೂತ್ರಗಳಲ್ಲಿರುವ ಅವ್ಯವಸ್ಥೆಯನ್ನು ಯಕ್ಷಗಾನ ಕಲಾವಿದರು, ಗುರುಗಳು, ವಿದ್ವಾಂಸರು ಗುರುತಿಸಿದ್ದಾರೆ. ಉತ್ತರ ಕನ್ನಡದ ತಿಟ್ಟುಗಳಲ್ಲಿ ಬಳಕೆಯಲ್ಲಿರುವ ಅನೇಕ ಅಂಶಗಳು ಸೇರ್ಪಡೆಗೊಂಡಿಲ್ಲ ಎಂಬ ಕೂಗು ಇದೆ. ಹೀಗೆ ಸರ್ಕಾರದ ಈ ಯೋಜನೆ ಟೀಕೆಗೆ ಗುರಿಯಾಗಿದೆ. ಈ ಪುಸ್ತಕದಲ್ಲಿ ಪ್ರಮುಖವಾಗಿ ನಾಲ್ಕು ಅಧ್ಯಾಯಗಳಿವೆ. ಪ್ರತಿಯೊಂದು ಅಧ್ಯಾಯಗಳಲ್ಲಿ ಘಟಕಗಳಿವೆ. ಮೊದಲಿಗೆ ಮುನ್ನುಡಿಯಲ್ಲಿ "ಯಕ್ಷಗಾನ ವಿಶಾಲ ಕ್ಷೇತ್ರ, ಈ ಪಠ್ಯ ಪುಸ್ತಕ ಕೇವಲ ಪ್ರಾಥಮಿಕ ಹಂತದ ವಿಷಯಗಳ ಕಲಿಕೆಗೆ ಸೀಮಿತವಾಗಿದೆ" ಎಂದಿದ್ದಾರೆ. ಪ್ರಾಥಮಿಕ ಲಯ, ತಾಳ ಮತ್ತು ರಂಗದ ನಡೆನುಡಿಗಳನ್ನು ಕಲಿಸುವ ಸುಲಭ ವಿಧಾನವನ್ನು ಚಿಂತಿಸಿ ಅಳವಡಿಸಿದ್ದಾರೆ ಎಂದು ಹೊಸ್ತೋಟರು ತಿಳಿಸಿದ್ದಾರೆ. ಮೊದಲ ಅಧ್ಯಾಯದಲ್ಲಿ ಯಕ್ಷಗಾನದ ಸ್ವರೂಪ, ಪರಿಚಯ, ಬೇರೆಬೇರೆ ಪ್ರಕಾರಗಳ ಬಗ್ಗೆ ವಿವರಣೆ, ಪ್ರದರ್ಶಕ ಕಲೆಗಳ ವಿಚಾರ, ಯಕ್ಷಗಾನವು ಹೇಗೆ ಸಮಷ್ಟಿಕಲೆ ಎಂಬುದರ ಬಗ್ಗೆ ಮಾಹಿತಿ ಇದೆ. ಎರಡನೆಯ ಅಧ್ಯಾಯದಲ್ಲಿ ರಂಗಸ್ಥಳ ಹಾಗೂ ವೇಷಭೂಷಣಗಳ ಬಗ್ಗೆ ವಿವರಗಳಿವೆ. ಯಕ್ಷಗಾನ ಪ್ರಸಂಗ ಹಾಗೂ ಅರ್ಥಗಾರಿಕೆಯ ಬಗ್ಗೆ ಒಂದು ಅಧ್ಯಾಯವಿದೆ. ಕೊನೆಯ ಅಧ್ಯಾಯವು ಯಕ್ಷಶಿಕ್ಷಣಕ್ಕೆ ಮೀಸಲಾಗಿದೆ. ಸುಮಾರು ನೂರಿಪ್ಪತ್ತು ಪುಟಗಳಲ್ಲಿ ಎರಡು ತಿಟ್ಟುಗಳಲ್ಲಿ ಇರುವ ಯಕ್ಷಗಾನದ ಶಿಕ್ಷಣವನ್ನು ಆರು ಘಟಕಗಳಲ್ಲಿ ವಿಶ್ಲೇಷಿಸಲಾಗಿದೆ. ಲಯ,ತಾಳ, ಕಾಲ ಹೆಜ್ಜೆಗಾರಿಕೆ, ಅಭಿನಯ, ರಂಗತಂತ್ರ ಮುಂತಾದ ವಿಚಾರಗಳು ಪ್ರತ್ಯೇಕ ಪ್ರತ್ಯೇಕವಾಗಿ ಬಂದಿವೆ. ಇದು ಪ್ರತಿ

ಘಟಕದ ಅಂತ್ಯದಲ್ಲಿ "ನಿಮಗೆ ತಿಳಿದಿರಲಿ" ಎಂಬ ಟಿಪ್ಪಣಿಯ ಮೂಲಕ ಅನೇಕ ಯಕ್ಷಗಾನ ಸಂಬಂಧಿ ವಿಚಾರಗಳನ್ನು ತಿಳಿಸಲಾಗಿದೆ. ಪ್ರತಿ ಅಧ್ಯಾಯದ ಕೊನೆಯಲ್ಲಿ ಮುಖ್ಯಧಾರೆಯ ಶಿಕ್ಷಣ ಕ್ರಮದಂತೆ ಅಭ್ಯಾಸದ [ಪ್ರಶ್ನೆಗಳನ್ನು ನೀಡಲಾಗಿದೆ. ವೇಷಭೂಷಣಗಳ ಬಗ್ಗೆ, ಹೆಜ್ಜೆಗಾರಿಕೆ ಬಗ್ಗೆ, ನಿಲ್ಲುವ ಭಂಗಿಗಳ ಬಗ್ಗೆ, ಬೇರೆಬೇರೆ ವೇಷಗಳ ಬಗ್ಗೆ, ವರ್ಣಾತ್ಮಕ ಚಿತ್ರಗಳಿದ್ದು ಪುಸ್ತಕದ ಮೌಲ್ಯ ಹೆಚ್ಚಿಸಿದೆ. ರಂಗ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಗಳನ್ನು ಕೋಷ್ಟಕದ ಮೂಲಕ ನೀಡಲಾಗಿದೆ. ಆಧುನಿಕ ಶಿಕ್ಷಣಕ್ಕೆ ಸರಿ ಹೊಂದುವಂತೆ ಹಳ್ಳಿಗಳಲ್ಲಿ ನಗರ ಪ್ರದೇಶಗಳಲ್ಲಿ ಹವ್ಯಾಸಿಗಳು ಮಹಿಳೆಯರು ಮಕ್ಕಳು ಯಕ್ಷಗಾನವನ್ನು ಅಭ್ಯಾಸ ಮಾಡುತ್ತಿದ್ದಾರೆ. ಇವರಿಗೆ ಗುರುಗಳಾಗಿ ಬೇರೆಬೇರೆ ಕೇಂದ್ರಗಳಲ್ಲಿ ಕಲಿತು ಪರಿಣತಿ ಪಡೆದವರು, ವೃತ್ತಿಯಿಂದ ನಿವೃತ್ತಿಗೊಂಡ ಕಲಾವಿದರು ಯಕ್ಷಶಿಕ್ಷಣ ನೀಡುತ್ತಿದ್ದಾರೆ. ಇವರೆಲ್ಲರಿಗೆ ಮೇಲ್ಕಂಡ ಒಂದಿಲ್ಲೊಂದು ಪಠ್ಯಗಳು ಮಾದರಿಯಾಗಿವೆ ಆನ್‌ಲೈನ್‌ನಲ್ಲಿ ಹೇಳಿಕೊಡುವ ಯಕ್ಷಗಾನ ಗುರುಗಳೂ ಕೂಡ ಇದೇ ಕ್ರಮವನ್ನು ಅನುಸರಿಸುತ್ತಿದ್ದಾರೆ. ಒಟ್ಟಾರೆಯಾಗಿ ಚಿಂತಿಸಿದರೆ ಒಟ್ಟು ಯಕ್ಷಗಾನ ರಂಗದಲ್ಲಿ ಸಾಕಷ್ಟು ಪಠ್ಯಗಳಿದ್ದು ಅವುಗಳಲ್ಲಿ ಅಡಗಿರುವ ಉತ್ತಮ ಅಂಶಗಳನ್ನು ಕ್ರೋಢೀಕರಿಸಿ, ಸಮಗ್ರವಾದ ಒಂದು ಯಕ್ಷಶಿಕ್ಷಣದ ಪಠ್ಯ ಅಗತ್ಯವಿದೆ. ಯಕ್ಷಗಾನ ಸಭಾಲಕ್ಷಣ ಮತ್ತು ಪ್ರಸಂಗ ಪೀಠಿಕೆಯಿಂದ ಆರಂಭಿಸಿ ಸರಕಾರದ ಯಕ್ಷಗಾನ ಶಿಕ್ಷಣ ಪಠ್ಯ ಪುಸ್ತಕದವರೆಗಿನ ಈ ದೀರ್ಘ ಪ್ರಯಾಣದಲ್ಲಿ ವೈವಿಧ್ಯಮಯ ಪಾಠಕ್ರಮಗಳು ಹೊಸ ಚಿಂತನೆಗಳು, ಕಲಿಕಾ ವಿಧಾನಗಳು ಸೇರ್ಪಡೆಗೊಂಡಿವೆ. ಆಧುನಿಕ ಕಾಲಕ್ಕೆ ಆಧುನಿಕ ಶಿಕ್ಷಣದ ಮಾದರಿ ಬೇಕೆ ಎಂಬ ಬಗ್ಗೆ ಚರ್ಚೆ ನಡೆಯಬೇಕಾಗಿದೆ.

ಕಲಿಕಾ ಕೇಂದ್ರಗಳು :

ಕರ್ನಾಟಕದಾದ್ಯಂತ ಯಕ್ಷಶಿಕ್ಷಣ ನೀಡುವ ನೂರಾರು ತರಬೇತಿ ಕೇಂದ್ರಗಳಿವೆ. ಅವುಗಳ ಮೂಲಕ ಸಾವಿರಾರು ಮಕ್ಕಳು, ಮಹಿಳೆಯರು, ಯುವಕರು ಯಕ್ಷಗಾನವನ್ನು ಕಲಿಯುತ್ತಿದ್ದಾರೆ. ಹೆಚ್ಚಿನವರು ಅಲ್ಲಲ್ಲೇ ನಡೆಯುವ ಪ್ರದರ್ಶನದ ಅವಕಾಶಕ್ಕಾಗಿ ಕಲಿಯುತ್ತಿದ್ದಾರೆ. ಕೆಲವೇ ಕೆಲವರು ಅದರಲ್ಲೂ ಕೆಲವರು ನಿರ್ದಿಷ್ಟ ಕೇಂದ್ರಗಳಿಂದ ಕಲಿಯುವವರು ತಮ್ಮ ಬದುಕಿಗಾಗಿ ಕಲಿತು ವೃತ್ತಿ ಕಲಾವಿದರಾಗಿ ಮೇಳಗಳನ್ನು ಆಶ್ರಯಿಸುತ್ತಿದ್ದಾರೆ. ಹವ್ಯಾಸಕ್ಕಾಗಿ ಕಲಿಯುವವರದ್ದೂ ಹೆಚ್ಚು ದೀರ್ಘವಿಲ್ಲದ ಕಲಿಕೆ. ಆದರೆ ಉಡುಪಿ, ಧರ್ಮಸ್ಥಳ, ಗುಣವಂತೆ ಮುಂತಾದ ಕಲಿಕಾ ಕೇಂದ್ರಗಳಲ್ಲಿ ಕಲಿಯುವವರು ಹೆಚ್ಚಾಗಿ ವೃತ್ತಿಗಾಗಿ ಯಕ್ಷಶಿಕ್ಷಣದ ಮೊರೆ ಹೋಗುತ್ತಿದ್ದಾರೆ. ದೀರ್ಘಕಾಲಿಕ ಕಲಿಕೆ ಪಡೆಯುತ್ತಿದ್ದಾರೆ. ಇಲ್ಲಿನ ಸಮಸ್ಯೆಯೆಂದರೆ ಕಲಿಯುತ್ತಿರುವಾಗಲೇ

ಮೇಳದ ಕರೆಗೆ ಆಕರ್ಷಿತರಾಗಿ ಅರ್ಧಕ್ಕೇ ಕಲಿಕೆ ನಿಲ್ಲಿಸಿ ಮೇಳ ಸೇರಿಕೊಂಡು ಅಲ್ಲಿ ಸಹಕಲಾವಿದರೊಂದಿಗೆ ಕಲೆತು ಯಕ್ಷಗಾನವನ್ನು ಕಲಿತುಕೊಳ್ಳುತ್ತಾರೆ. ಇದರಿಂದಾಗಿ ಕಲಾವಿದರಾದವರಿಗೆ ಪೂರ್ಣ ಪ್ರಮಾಣದ ಪಠ್ಯದ ಬೋಧನೆಯಾಗಿರುವುದಿಲ್ಲ. ಕೇಂದ್ರದವರು ಈ ಮೊದಲ ವರ್ಷಕ್ಕೆ ಆರಿಸಿಕೊಂಡ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಅರ್ಧದಷ್ಟು ಜನ "ಡ್ರಾಪ್ ಔಟ್" ಆಗುತ್ತಾರೆ. ಇನ್ನು ಉಳಿದ ಕೇಂದ್ರಗಳವರ ಉದ್ದೇಶ ಪ್ರದರ್ಶನವನ್ನು ಆಧರಿಸಿ ಇರುವುದರಿಂದ ಸಮಗ್ರವಾದ ಯಕ್ಷಶಿಕ್ಷಣ ಅವರಿಗೆ ದೊರೆಯುವುದೇ ಇಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ಯಕ್ಷಶಿಕ್ಷಣ ಕೇಂದ್ರಗಳ ಕುರಿತು ಚರ್ಚಿಸಬೇಕಾಗಿದೆ.

ಬಡಗುತಿಟ್ಟಿನಲ್ಲಿ ಯಕ್ಷಶಿಕ್ಷಣ ಕಳೆದ ಶತಮಾನದ ಎಪ್ಪತ್ತರ ದಶಕದಲ್ಲೇ ಪ್ರಾರಂಭವಾಯಿತು. ಡಾ. ಶಿವರಾಮಕಾರಂತರ ಮಾರ್ಗದರ್ಶನದಲ್ಲಿ ಉಡುಪಿಯ ಎಂ.ಜಿ.ಎಂ. ಕಾಲೇಜಿನ ಆವರಣದಲ್ಲಿ 1991ರ ಜೂನ್ನಲ್ಲಿ ಗುರು ವೀರಭದ್ರ ನಾಯಕರ ಹಿರಿತನದಲ್ಲಿ ಸಾಂಪ್ರದಾಯಿಕ ಯಕ್ಷಗಾನ ಶಿಕ್ಷಣಕ್ಕಾಗಿ "ಯಕ್ಷಗಾನ ಕೇಂದ್ರ" ಎಂಬ ಮಾದರಿಯ ಶಾಲೆ ಪ್ರಾರಂಭವಾಯಿತು. ಈ ಯಕ್ಷಗಾನ ಕೇಂದ್ರಕ್ಕೆ ಗೌ.ನಿರ್ದೇಶಕರಾಗಿ ಕು.ಶಿ. ಹರಿದಾಸ ಭಟ್ಟರಿದ್ದರು. ಮದ್ದಳೆ ವಾದಕರಾಗಿ ಹಿರಿಯಡ್ಕ ಗೋಪಾಲರಾಯರು ಇದ್ದರು. ಮುಂದೆ ಈ ಕೇಂದ್ರದ ಗುರುಗಳಾಗಿ ನೀಲಾವರ ರಾಮಕೃಷ್ಣಯ್ಯ, ಜಾನುವಾರುಕಟ್ಟೆ ಗೋಪಾಲಕೃಷ್ಣಯ್ಯ, ಹೆರಂಜಾಲು ವೆಂಕಟರಮಣ, ಮಣೂರು ಮಹಾಬಲಕಾರಂತ, ಗೋರ್ಪಾಡಿ ವಿಠ್ಠಲಪಾಟೀಲ್, ನೀಲಾವರ ಲಕ್ಷ್ಮೀನಾರಾಯಣ, ಶ್ರೀಧರ ಹೆಗಡೆ, ಬನ್ನಂಜೆ ಸಂಜೀವ ಸುವರ್ಣ ಮುಂತಾದವರು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಇಲ್ಲಿ ಕಲಿತ ಅನೇಕ ಜನರು ವೃತ್ತಿ ಮೇಳಗಳಲ್ಲಿ ಕಲಾವಿದರಾಗಿ, ಅನೇಕ ತರಬೇತಿ ಕೇಂದ್ರಗಳಲ್ಲಿ ಉತ್ತಮ ಗುರುಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಯಳ್ಳಂಪಳ್ಳಿ ಜಗನ್ನಾಥಾಚಾರ್, ಸದಾಶಿವ ಅಮಿನ್, ಬೇಗಾರ್ ಶಿವಕುಮಾರ್, ಕುಂಭೈ ಶ್ರೀಧರ್ರಾವ್, ಗುರುರಾಜ ಮಾರ್ಪಳ್ಳಿ, ಕರ್ಗಲ್ ವಿಶ್ವೇಶ್ವರ ಭಟ್, ಬೆಳೆಯೂರು ಕೃಷ್ಣಮೂರ್ತಿ ಮುಂತಾದವರು. ಪ್ರಾರಂಭದ ವರ್ಷಗಳಲ್ಲಿ ಯಕ್ಷಗಾನ ಕಲಿಯುವುದು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಶಿಕ್ಷಣ ವೇತನದ ಸೌಲಭ್ಯವಿರುವುದರಿಂದ ಆಯ್ಕೆಗೆ ಮಾನದಂಡವಿದ್ದು ಕಾರಂತರೇ ಆಯ್ಕೆಯ ಸಮಿತಿಯಲ್ಲಿ ಇರುತ್ತಿದ್ದರು. ಈಗ ಕೇಂದ್ರದ ಗುರುಗಳಾಗಿ ಉಮೇಶ ಸುವರ್ಣ, ದೇವರಾಜದಾಸ್, ಕೃಷ್ಣಮೂರ್ತಿ ಭಟ್, ಮಹೇಶ್ ಕುಮಾರ್ ಮುಂತಾದವರಿದ್ದಾರೆ.

ಕೃಷ್ಣಮೂರ್ತಿ ಉರಾಳ, ಅನಂತ ಪದ್ಮನಾಭ ಪಾಟಕ್, ಎಂ.ಎ.ನಾಯಕ್ ರಾಮ ನಾಯರಿ, ಹಾರಾಡಿ ಸರ್ವಗಾಣಿಗ, ಗುರುರಾಜ ಮಾರ್ಪಳ್ಳಿ, ಸುದರ್ಶನ ಉರಾಳ, ಕೃಷ್ಣಮೂರ್ತಿ ತುಂಗ, ಅದ್ರಿ ಗೋಪಾಲ ಗಾಣಿಗ, ಮಂಜುನಾಥ ಕುಲಾಲ,

ಪ್ರತೀಶ್ ಕುಂದರ್, ಪ್ರಸಾದ್ ಕುಮಾರ್ ಮೊಗೆಬೆಟ್ಟು ಮುಂತಾದವರು ಕೂಡಾ ಇಲ್ಲಿ ಕಲಿತು ಖ್ಯಾತಿಗೊಂಡವರು. ಡಾ. ಕಾರಂತರ ಮಾರ್ಗದರ್ಶನದಲ್ಲಿ ರೂಪುಗೊಂಡ "ಯಕ್ಷರಂಗ" ದ "ಬ್ಯಾಲೆ" ಗಳು ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿವೆ. ಬ್ಯಾಲೆಗೆ ಕೂಡಾ ಡಾ. ಕಾರಂತರು ಕಲಾವಿದರನ್ನು ಆಯ್ದು ತರಬೇತಿ ನೀಡುತ್ತಿದ್ದರು. ಈ ಯಕ್ಷಗಾನ ಕೇಂದ್ರಕ್ಕೆ ಹೊರರಾಜ್ಯದ, ಹೊರರಾಷ್ಟ್ರದ ಕೆಲವರು ಬಂದು ಯಕ್ಷಗಾನ ತರಬೇತಿ ಪಡೆದಿರುವುದು ಉಂಟು. ರಾಜ್ಯದ ಉಳಿದ ಯಕ್ಷಗಾನ ತರಬೇತಿ ಕೇಂದ್ರಗಳಿಗೆ ಇದೊಂದು ಮಾದರಿಯಾಗಿದೆ ಎಂದರೆ ತಪ್ಪಾಗಲಾರದು.

1972ರ ಸುಮಾರಿಗೆ ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರ ಸ್ಥಾಪನೆಗೊಂಡಿತು. ಖ್ಯಾತ ಭಾಗವತರಾದ ಶ್ರೀ ಎಂ.ನಾರಣಪ್ಪ ಉಪ್ಪೂರರು ಇಲ್ಲಿಗೆ ಗುರುಗಳಾಗಿ ಶಿಷ್ಯರನ್ನು ತರಬೇತಿಗೊಳಿಸುತ್ತಿದ್ದರು. ಮದ್ದಳೆ ವಾದಕರಾದ ಶ್ರೀ ತಿಮ್ಮಪ್ಪ ನಾಯಕರು ಕೆಲಕಾಲ ಗುರುಗಳಾಗಿದ್ದರು. ಈಗ ಗುಂಡಮೀ ಸದಾನಂದ ಐತಾಳರು ಈ ಕೇಂದ್ರದ ಗುರುಗಳಾಗಿದ್ದಾರೆ. ಈ ಕೇಂದ್ರದಲ್ಲಿ ಕಲಿತು ಖ್ಯಾತ ಭಾಗವತರಾಗಿ ತಾರಾ ಮೌಲ್ಯಗಳಿಸಿದವರಲ್ಲಿ ಶ್ರೀ ಕಾಳಿಂಗನಾವಡೆ, ಶ್ರೀ ಸುಬ್ರಹ್ಮಣ್ಯ ಧಾರೇಶ್ವರರು ಮುಖ್ಯರು. ಇವರಲ್ಲದೇ ಮೊದಲಿಗೆ ಈ ಕೇಂದ್ರದ ಕಾರ್ಯದರ್ಶಿಯಾಗಿ ಸಂಸ್ಥೆಯನ್ನು ಕಟ್ಟಿ ಬೆಳೆಸಿದವರು ಶ್ರೀ ಎ.ಸದಾನಂದ ಹೆಬ್ಬಾರರು. ಈಗ ಇದೇರೀತಿ ರಾಜಶೇಖರ ಹೆಬ್ಬಾರರ ನೇತೃತ್ವದಲ್ಲಿ ಸಂಸ್ಥೆ ಮುನ್ನಡೆಯುತ್ತಿದೆ. ಬಡಗುತಿಟ್ಟಿನಲ್ಲಿ ಕೆಲವು ಧೀಮಂತ ಗುರುಗಳಾಗಿದ್ದವರು ಹವ್ಯಾಸಿ ಕಲಾವಿದರಿಗೆ, ಮಹಿಳೆಯರಿಗೆ ಯಕ್ಷಶಿಕ್ಷಣವನ್ನು ನೀಡಿ ಖ್ಯಾತಿ ಗಳಿಸಿದ್ದಾರೆ. ಅವರುಗಳಲ್ಲಿ ತೋನ್ಸೇ ಕಾಂತಪ್ಪ ಮಾಸ್ತರ್, ಗುಂಡಿ ಬೈಲು ನಾರಾಯಣ ಶೆಟ್ಟಿ, ಮಣಿಪಾಲ ಮಾಧವ ಶೆಣೈ, ಹಾರಾಡಿ ಸುಬ್ರಾಯ, ತೋನ್ಸೆ ಜಯಂತ್ಕುಮಾರ್, ಸಕ್ಕಟ್ಟು ಸೀತಾರಾಮಯ್ಯ ಮುಂತಾದವರು ಮುಖ್ಯರು.

ಉಡುಪಿಯ ಶಾಸಕರಾದ ಶ್ರೀ ರಘುಪತಿ ಭಟ್ಟರು ಯಕ್ಷಶಿಕ್ಷಣ ಟ್ರಸ್ಟ್ ರಚಿಸಿದ್ದು ಶಾಲೆಗಳಲ್ಲಿ ಯಕ್ಷಶಿಕ್ಷಣವನ್ನು ನೀಡಲು "ಶಾಲೆಗಳಲ್ಲಿ ಯಕ್ಷಶಿಕ್ಷಣ" ಯೋಜನೆ ರೂಪಿಸಿದ್ದಾರೆ. ಉಡುಪಿ ಜಿಲ್ಲೆಯ ನಲವತ್ತೈದು ಪ್ರೌಢಶಾಲೆಗಳಲ್ಲಿ ಇಪ್ಪತ್ತೆಂಟಕ್ಕೂ ಹೆಚ್ಚು ಜನ ಶಿಕ್ಷಕರು ಯಕ್ಷಶಿಕ್ಷಣ ನೀಡುತ್ತಿದ್ದಾರೆ. ಉಡುಪಿಯ ಶ್ರೀ ಕೃಷ್ಣ ಮಠ ಹಾಗೂ ಕಲಾರಂಗದ ಮುರುಳಿ ಕಡೆಕಾರ್ ಮುಂತಾದ ಪದಾಧಿಕಾರಿಗಳು ಇವರೊಂದಿಗೆ ಕೈ ಜೋಡಿಸಿದ್ದಾರೆ. ಯಕ್ಷಶಿಕ್ಷಣಕ್ಕೆ ಸಂಬಂಧಿಸಿದಂತೆ ಇದೊಂದು ಯಶಸ್ವಿ ಯೋಜನೆಯಾಗಿದೆ. ಕುಂದಾಪುರ ತಾಲ್ಲೂಕಿನ ಹಟ್ಟಿಯಂಗಡಿಯಲ್ಲಿ "ನಮ್ಮ ಭೂಮಿ", ಅಂಪಾರಿನಲ್ಲಿ "ವಾಗ್ಜ್ಯೋತಿ" ಶಾಲೆ, ವಂಡ್ಸೆಯ "ಯಕ್ಷಗಾನ ಭಾರತಿ ಸಾಂಸ್ಕೃತಿಕ ಕಲಾಕೇಂದ್ರ" ಮುಂತಾದೆಡೆ ಯಕ್ಷಗಾನ ತರಬೇತಿ ನಡೆಯುತ್ತಿದೆ. ಬ್ರಹ್ಮಾವರದಿಂದ ಕೋಟದ ಪ್ರದೇಶದಲ್ಲಿ ಗೋವಿಂದ ಉರಾಳ, ಸುದರ್ಶನ ಉರಾಳ,

ಎಂ.ಎನ್. ಮಧ್ಯಸ್ಥ, ಲಂಬೋದರ ಹೆಗಡೆ ಹಾಗೂ ದೇವದಾಸ್ ರಾವ್ ಕೊಡ್ಗಿ ಮುಂತಾದವರು ಹವ್ಯಾಸಿಗಳಿಗೆ, ಮಕ್ಕಳಿಗೆ ತರಬೇತಿ ನೀಡುತ್ತಿದ್ದಾರೆ.

ಸಾಲಿಗ್ರಾಮ ಮಕ್ಕಳ ಮೇಳ ಕಳೆದ ಐದು ದಶಕಗಳಿಂದ ಆಯ್ದ ಶಾಲಾ ಮಕ್ಕಳಿಗೆ ಪಾರಂಪರಿಕ ಯಕ್ಷಗಾನ ತರಬೇತಿ ನೀಡಿ ಅವರಿಂದ ಯಶಸ್ವಿ ಪ್ರದರ್ಶನ ನೀಡುತ್ತಿದೆ. ಯಕ್ಷಗಾನದ ಸೀಮೋಲ್ಲಂಘನೆ ಮಾಡಿದ ಮೊದಲ ಮೇಳವೆಂಬ ಹೆಗ್ಗಳಿಕೆ ಇದರದು. ಹಿಂದೆ ಕಾರ್ಕಡ ಶ್ರೀನಿವಾಸ ಉಡುಪರು, ಶ್ರೀಧರ ಹಂದೆಯವರು ಗುರುಗಳಾಗಿದ್ದರು. ಈಗ ಶ್ರೀ ಸುಜಯೀಂದ್ರ ಹಂದೆಯವರು ಮುನ್ನಡೆಸುತ್ತಿದ್ದಾರೆ. ಇಲ್ಲಿ ಕಲಿತ ಹಲವರು ಈಗ ಖ್ಯಾತ ಹವ್ಯಾಸಿ ಯಕ್ಷಗಾನ ಕಲಾವಿದರಾಗಿ ಮಿಂಚುತ್ತಿದ್ದಾರೆ. ತೆಂಕುತಿಟ್ಟಿನಲ್ಲಿ ಬನಾರಿಯ ಗೋಪಾಲಕೃಷ್ಣ ಯಕ್ಷಗಾನ ಕಲಾ ಸಂಘ 1943ರಲ್ಲಿ ಅರ್ಥಗಾರಿಕೆ ತರಬೇತಿ ನಡೆಸುತ್ತಿತ್ತು. ಶ್ರೀ ಕ್ಷೇತ್ರ ಧರ್ಮಸ್ಥಳದ ವತಿಯಿಂದ, 1972ರಿಂದ ಯಕ್ಷಗಾನ ಕಲಾಕೇಂದ್ರ ಪ್ರಾರಂಭವಾಯಿತು. ಗುರುಗಳಾಗಿ ಶ್ರೀ ಪಡ್ರೆಚಂದುರವರು ಭದ್ರ ಬುನಾದಿ ಹಾಕಿ ಕೊಟ್ಟರು. ಮುಂದೆ ಸುರಿಕುಮೇರು ಕೆ. ಗೋವಿಂದ ಭಟ್ಟರು, ಶ್ರೀ ಕೋಳ್ಯೂರು ರಾಮಚಂದ್ರರಾವ್, ಶ್ರೀ ತಾರಾನಾಥ ಬಲ್ಯಾಯರು ಮುಂತಾದವರು ಗುರುಗಳಾಗಿ ಸೇವೆ ಸಲ್ಲಿಸಿದ್ದಾರೆ. ಇಲ್ಲಿ ಕಲಿತ ಸಬ್ಬಣ ಕೋಡಿ ರಾಮಭಟ್ಟರು, ಪೆರ್ಲದಲ್ಲಿ ಶ್ರೀಪಡ್ರೆಚಂದ್ರು ಸ್ಮಾರಕ ಯಕ್ಷಗಾನ ತರಬೇತಿ ಕೇಂದ್ರವನ್ನು ಸ್ಥಾಪಿಸಿ ಕಾಸರಗೋಡು ಪ್ರದೇಶದಲ್ಲಿ ಯಕ್ಷಶಿಕ್ಷಣ ಲಭಿಸುವಂತೆ ನೋಡಿಕೊಂಡಿದ್ದಾರೆ. ಈ ಕಲಿಕಾ ಕೇಂದ್ರದಲ್ಲಿ ಕಲಿತಂತಹ ಅನೇಕರು ವೃತ್ತಿ ಮೇಳದಲ್ಲಿದ್ದು ಹೆಸರು ಮಾಡಿದ್ದಾರೆ. ಮೂಡಬಿದ್ರೆಯ ಡಾ.ಮೋಹನ ಆಳ್ವರು ತಮ್ಮ ಆಳ್ವಾಸ್‌ನಲ್ಲಿ "ಧಿಂಕಿಟ ಅಧ್ಯಯನ ಕೇಂದ್ರ" ಸ್ಥಾಪಿಸಿದ್ದು ಅಲ್ಲಿ ಡಿಪ್ಲೊಮ ಕೋರ್ಸಿಗೆ ಕಲಿಯುವ ಅವಕಾಶವಿದೆ. ಇದೇ ರೀತಿ ಬಂಟ್ವಾಳ ವೆಂಕಟರಮಣ ಕಾಲೇಜಿನಲ್ಲಿ ಯಕ್ಷಶಿಕ್ಷಣ ಕೇಂದ್ರವಿದೆ. ಡಾ.ನಾಗವೇಣಿ ಮಂಚಿಯವರು ಇದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಉಜಿರೆಯ ಮಂಜುನಾಥೇಶ್ವರ ಕಾಲೇಜಿನಲ್ಲಿ ಯಕ್ಷಶಿಕ್ಷಣದ ವ್ಯವಸ್ಥೆ ಇದೆ. ಸನ್ಮಾನ್ಯ ಹರ್ಷೇಂದ್ರಕುಮಾರ್ ಹಾಗೂ ಯಶೋವರ್ಮರ ಮಾರ್ಗದರ್ಶನದಲ್ಲಿ ಉಜಿರೆಯಲ್ಲಿ ನಡೆಯುವ ಈ ಕೇಂದ್ರಕ್ಕೆ ಮಾಲಿನಿ ಅಂಚನ್ ಸಂಚಾಲಕರಾಗಿದ್ದಾರೆ. ಪುತ್ತೂರಿನ ವಿವೇಕಾನಂದ ಕಾಲೇಜು ಮತ್ತು ಸೆಂಟ್‌ಜೋಸೆಫ್ ಕಾಲೇಜುಗಳಲ್ಲಿ ಯಕ್ಷಶಿಕ್ಷಣವಿದೆ. ಅದೇ ರೀತಿ ಸುರತ್ಕಲ್ ಗೋವಿಂದದಾಸ ಕಾಲೇಜು, ಮಂಗಳೂರಿನ ಕೆನರಾ ಕಾಲೇಜು, ಗೋಕರ್ಣನಾಥೇಶ್ವರ ಕಾಲೇಜುಗಳಲ್ಲೂ ಯಕ್ಷಗಾನ ತರಬೇತಿಗಳು ನಡೆಯುತ್ತಿವೆ.

ತೆಂಕುತಿಟ್ಟಿನಲ್ಲಿ ಅನೇಕ ಯಕ್ಷ ಗುರುಗಳಿದ್ದು ಅಲ್ಲಲ್ಲಿ ತರಬೇತಿ ನಡೆಸುವ ಮೂಲಕ ಯಕ್ಷಶಿಕ್ಷಣದ ಪ್ರಸಾರವನ್ನು ಮಾಡುತ್ತಿದ್ದಾರೆ. ಮಾಂಬಾಡಿ ಸುಬ್ರಾಯ

ಭಟ್ಟ, ಕೊಡ್ರೆಲ್ ಗಣಪತಿ ಭಟ್ಟ, ರವಿ ಅಲೆವೂರಾಯ, ಸಬ್ಬಣ ಕೋಡಿ ರಾಮಭಟ್ಟ, ಎನ್.ಬಿ. ನರೇಂದ್ರಕುಮಾರ್, ವೆಂಕಟೇಶ್, ಡಾ. ದಿನಕರ ಎಸ್. ಪಚನಾಡಿ. ಸಿರಿಬಾಗಿಲು ರಾಮಕೃಷ್ಣಮಯ್ಯ, ಮುಂಡ್ರುಪಾಡಿ ಶ್ರೀಧರ, ಕುಮಾರ್ ಸುಬ್ರಹ್ಮಣ್ಯ, ಜಯಂತ್ರಾವ್ ಪೊಳಲಿ, ಮೋಹನ್ ಬೈಪಡಿತ್ತಾಯಿ, ವಿನೋದ್ಕುಮಾರ್ ಸೂರಂಜೆ, ರಕ್ಷಿತ್ ಪಡ್ರೆ, ಪುಷ್ಪರಾಜ್, ಯೋಗೇಶ್ ಆಚಾರ್ಯ, ನಿವಾಣ ಶಿವಶಂಕರ ಭಟ್ಟ, ರಾಕೇಶ್ ರೈ ಅಡಕ, ಸಿಂಧೂ ಆರ್. ಭಟ್, ಚೈತ್ರರಾವ್, ಸುಮಂಗಲಾ ರತ್ನಾಕರ, ಮಹೇಶ್ ಕನ್ಯಾಡಿ ಮುಂತಾದವರು ಪ್ರಮುಖ ಯಕ್ಷಗುರುಗಳಾಗಿದ್ದಾರೆ. ತೆಂಕುತಿಟ್ಟಿನಲ್ಲಿ ಮಕ್ಕಳ ಮೇಳಗಳು ಸಕ್ರಿಯವಾಗಿದ್ದು ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನದ ವತಿಯಿಂದ ಮಕ್ಕಳಿಗೆ ಯಕ್ಷಶಿಕ್ಷಣ ನೀಡಲಾಗುತ್ತಿದೆ. ಸಾಕಷ್ಟು ಬಾಲಯಕ್ಷ ಕಲಾವಿದರು ತಯಾರಾಗುತ್ತಿದ್ದಾರೆ. ಇದೇ ರೀತಿ ಮೂಡುಬಿದ್ರಿಯ "ಯಕ್ಷದೇವ ಮಿತ್ರ ಮಂಡಳಿ" ಬಿ.ಸಿ.ರೋಡ್‌ನ "ಮೋಕೆದ ಕಲಾವಿದರು" ಮಂಗಳೂರಿನ "ಸರಯೂ ಬಾಲ ವೃಂದ" ಮುಂತಾದುವು ಮಕ್ಕಳಿಗೆ ಯಕ್ಷಶಿಕ್ಷಣ ನೀಡುವಲ್ಲಿ ಮುಂಚೂಣಿಯಲ್ಲಿವೆ. ಮಹಿಳಾ ಯಕ್ಷಗಾನ ತಂಡಗಳು ಯಕ್ಷಶಿಕ್ಷಣ ನೀಡುತ್ತಿವೆ. ಕಾಟೀಪಾಳದ ಸಿದ್ಧಿವಿನಾಯಕ ಯಕ್ಷಗಾನ ಮಂಡಳಿ, ಉರ್ವದ "ಯಕ್ಷಾರಾಧನ ಕಲಾ ಕೇಂದ್ರ", ಸರಯೂ ಮಹಿಳಾ ತಂಡ, ಯಕ್ಷ ಮಂಜುಳ, ಯಕ್ಷ ಸಿಂಧೂರ ಮುಂತಾದುವು ಮಹಿಳೆಯರಿಗೆ ಶಿಕ್ಷಣ ಕಲಿಸುತ್ತವೆ. ಎಡನೀರು ಮಠದ ಶ್ರೀಶ್ರೀಕೇಶವಾನಂದ ಭಾರತಿಶ್ರೀಗಳು ಭಾಗವತಿಕೆ ಮಾಡುತ್ತಿದ್ದುದಷ್ಟೇ ಅಲ್ಲದೇ ಆಸಕ್ತರಿಗೆ ಯಕ್ಷಶಿಕ್ಷಣ ನೀಡಲು ಪ್ರೋತ್ಸಾಹಿಸುತ್ತಿದ್ದರು. ಬನಾರಿ ಗೋಪಾಲಕೃಷ್ಣ ಯಕ್ಷಗಾನ ಕಲಾ ಸಂಘದಲ್ಲಿ ಯಕ್ಷಗಾನ ತರಬೇತಿ ಇದ್ದು ಹಿಂದೆ ಕಿರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ, ಕೇದಗಡಿ ಗುಡ್ಡಪ್ಪ ಗೌಡ, ಕಡಾರು ನಾರಾಯಣ ಭಟ್ಟ, ಜತ್ತಪ್ಪ ರೈ, ಕೆ.ವಿ. ನಾರಾಯಣ ರೈ ಮುಂತಾದವರು ಗುರುಗಳಾಗಿದ್ದರು. ಈಗ ವಿಶ್ವವಿನೂತ ಬನಾರಿಯವರು ಮಾರ್ಗದರ್ಶಕರಾಗಿದ್ದಾರೆ. ಪೆರ್ಲದ ಪಡ್ರೆಚಂದು ಸ್ಮಾರಕ ಕೇಂದ್ರದಲ್ಲಿ ತೆಂಕುಬೈಲು, ತಿರುಮಲೇಶ್ವರ ಶಾಸ್ತ್ರಿಗಳು ಹಿಮ್ಮೇಳದ ಪಾಠ ಮಾಡುವ ಗುರುಗಳಾಗಿದ್ದಾರೆ. ಕೇರಳ ಸರ್ಕಾರದ ಅನುದಾನ ಕೂಡಾ ಈ ಕೇಂದ್ರಕ್ಕೆ ಲಭ್ಯವಿದೆ.

ಬಡಾಬಡಗು ತಿಟ್ಟಿನಲ್ಲೂ ಕೂಡಾ ಅನೇಕ ಕಲಿಕಾ ಕೇಂದ್ರಗಳು ಕಾರ್ಯೋನ್ಮುಖವಾಗಿವೆ. ಇವುಗಳಲ್ಲಿ ಗುಣವಂತೆಯಲ್ಲಿರುವ ಶ್ರೀಮಯ ಯಕ್ಷಗಾನ ಕಲಾ ಕೇಂದ್ರವು ಬಹಳ ಹೆಸರು ಮಾಡಿದೆ. 1986ರಲ್ಲಿ ಕೆರೆಮನೆ ಶಂಭುಹೆಗಡೆಯವರ ಹಿರಿತನದಲ್ಲಿ ಕೇಂದ್ರ ಸ್ಥಾಪನೆಗೊಂಡಿದ್ದು ಈಗ ಶಿವಾನಂದ ಹೆಗಡೆಯವರು ನಿರ್ದೇಶಕರಾಗಿದ್ದಾರೆ. ಇಲ್ಲಿ ಮೂರು ವರ್ಷದ ತರಬೇತಿಯ ಅವಧಿ ಹಾಗೂ ಒಂದು ವರ್ಷದ ತರಬೇತಿ ಅವಧಿಯ ಕೋರ್ಸುಗಳಿವೆ. ಗುಣವಂತೆಯ ಈ ಕಲಾ

ಕೇಂದ್ರದಲ್ಲಿ ಗುರುಕುಲ ಮಾದರಿಯಲ್ಲಿ ಯಕ್ಷಶಿಕ್ಷಣ ನೀಡಲಾಗುತ್ತಿದ್ದು ದಿ. ಹೆರಂಜಾಲು ವೆಂಕಟರಮಣ ಹೆರಂಜಾಲು ಗೋಪಾಲ ಗಾಣಿಗ, ಕೃಷ್ಣಯಾಜಿ ಇಡಗುಂಜಿ, ಅನಂತಪದ್ಮನಾಭ ಪಾಟಕ್, ಗುರುರಾಜ ಮಾರ್ಪಳ್ಳಿ, ವಿದ್ವಾನ್ ಗಣಪತಿ ಭಟ್, ಕೃಷ್ಣಭಂಡಾರಿ, ಅನಂತ ಹೆಗಡೆ ದಂತಳಿಕೆ ಮುಂತಾದವರು ಗುರುಳಾಗಿ ಸೇವೆ ಸಲ್ಲಿಸಿದ್ದಾರೆ. ಈ ಕೇಂದ್ರದಲ್ಲಿ ತರಬೇತಿ ಹೊಂದಿ, ವ್ಯವಸಾಯಿ ಮೇಳಗಳಲ್ಲಿ ಹೆಸರು ಮಾಡಿರುವ ಸಾಲ್ಕೋಡು ಶಂಕರ ಹೆಗಡೆ, ಯಲಗಪ್ಪ ಸುಬ್ರಹ್ಮಣ್ಯ ಹೆಗಡೆ, ಕಾಸರಗೋಡು ಶ್ರೀಧರ ಭಟ್, ಮಲವಳ್ಳಿ ಸದಾಶಿವ ಭಟ್, ಮಂಕಿ ಈಶ್ವರ ನಾಯಕ್ ಮುಂತಾದವರು ಪ್ರಮುಖರಾಗಿದ್ದಾರೆ. ಇದೂ ಅಲ್ಲದೇ ಮೂರೂರಿನಲ್ಲಿರುವ ವಿದ್ಯಾನಿಕೇತನ ಎಂಬ ಸಂಸ್ಥೆಯು ಯಕ್ಷಗಾನ ಕಲಾ ಕೇಂದ್ರವಾಗಿದೆ. ಸರ್ವೇಶ್ವರ ಹೆಗಡೆ, ಮೂರೂರು ಸುಬ್ರಹ್ಮಣ್ಯ ಹೆಗಡೆ ಗುರುಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನವಿಲಗೋಣದಲ್ಲಿ ಭಾಗವತ ಉಮೇಶ ಭಟ್ಟರು, ಶ್ರೀಸಿದ್ಧಿ ವಿನಾಯಕ ಯಕ್ಷಗಾನ ಕಲಾ ಸಂಘದ ಮೂಲಕ ಯಕ್ಷಗಾನ ಕಲಿಸುತ್ತಿದ್ದಾರೆ. ಎಲ್ಲಾಪುರದ ಮಂಚಿಕೇರಿಯಲ್ಲಿ ಜಿ.ಟಿ.ಭಟ್ ನೇತೃತ್ವದ "ರಾಯಸಂ" ಸಂಸ್ಥೆಯು ಯಕ್ಷಗಾನದ ಕಲಿಕಾ ಕೇಂದ್ರವಾಗಿದೆ. ಇದೇ ರೀತಿ ಆನಗೋಡಿನ ಯಕ್ಷಗಾನ ಕಲಾಮಿತ್ರ ಮಂಡಳಿ, ಸಿದ್ದಾಪುರ ಹಾರ್ಸಿನಕಟ್ಟದ "ದಿವಾನ್ ಯಕ್ಷ ಸಮೂಹ" ಇಟಗಿಯ "ಕಲಾ ಭಾಸ್ಕರ" ಮುರುಡೇಶ್ವರದ "ಯಕ್ಷ ರಕ್ಷೆ" ಮುಂತಾದ ಸಂಸ್ಥೆಗಳು ಯಕ್ಷಗಾನದ ತರಬೇತಿ ನೀಡುತ್ತಿವೆ. ಇದೂ ಅಲ್ಲದೇ ಯಕ್ಷಗಾನದಲ್ಲಿ ಅಪಾರ ಅನುಭವ ಜ್ಞಾನ ಹೊಂದಿರುವ ಶಂಕರ ಭಾಗವತ ಯಲ್ಲಾಪುರ, ಕವಾಳೆ ಗಣಪತಿ ಭಾಗವತ, ಐನಬೈಲು ಪರಮೇಶ್ವರ ಹೆಗಡೆ, ಕೃಷ್ಣ ಭಂಡಾರಿ ಗುಣವಂತೆಯವರು ಆಸಕ್ತರಿಗೆ ಯಕ್ಷಗಾನ ಶಿಕ್ಷಣವನ್ನು ಧಾರೆ ಎರೆಯುತ್ತಿದ್ದಾರೆ.

ಯಕ್ಷಗಾನ ಕಲಿಕೆಯು ಮಲೆನಾಡಿನಲ್ಲಿ ಕಳೆದ ಶತಮಾನದಲ್ಲಿ ಬಹು ಬಿರುಸಾಗಿದ್ದು ಅಸಂಖ್ಯ ಹವ್ಯಾಸಿ ಯಕ್ಷಗಾನ ಸಂಘಗಳ ಹುಟ್ಟಿಗೆ ಕಾರಣವಾಗಿತ್ತು. ತೀರ್ಥಹಳ್ಳಿಯ ರಂಜದಕಟ್ಟೆಯಲ್ಲಿ ದಾಮೋದರ ಕಾಮತ್‌ರವರು ಯಕ್ಷಗಾನ ಕಲಿಕಾ ಕೇಂದ್ರಗಳನ್ನು ತೆರೆದಿದ್ದರು. ಶ್ರೀನಿವಾಸ ದಾಸರು ಗುರುಗಳಾಗಿದ್ದರು. ಅದೇ ರೀತಿಯಲ್ಲಿ ಆಗುಂಬೆಯಲ್ಲಿ ಅನಂತಮೂರ್ತಿ ಹೆಬ್ಬಾರ, ಡಾ.ಗುರಪ್ಪ ಗೌಡ, ಹರಿನಾರಾಯಣ ಉಡುಪ, ಯಕ್ಷಶಿಕ್ಷಣ ನೀಡುತ್ತಿದ್ದರು. ಶಿವಮೊಗ್ಗದಲ್ಲಿ ಐನಬೈಲು ಪರಮೇಶ್ವರ ಹೆಗಡೆ, ಎ.ಆರ್.ಗಣಪತಿ, ಸಂಪ ಲಕ್ಷ್ಮೀನಾರಾಯಣ ಅವರು ತರಗತಿ ತೆಗೆದುಕೊಂಡು ಯಕ್ಷಗಾನ ಕಲಿಸುತ್ತಿದ್ದರು. ಹೊಸ್ತೋಟ ಮಂಜುನಾಥ ಭಾಗವತರು ಶಿವಮೊಗ್ಗದಲ್ಲಿ ಅಂಧ ಮಕ್ಕಳಿಗೆ ಯಕ್ಷಗಾನ ಕಲಿಸುವಲ್ಲಿ ಯಶಸ್ವಿಯಾಗಿದ್ದರು. ಹೊಸನಗರದಲ್ಲಿ ಅನೇಕ ಯಕ್ಷಗಾನ ಕಲಾವಿದರಿದ್ದರು. ಆಡಿಕೆ ಅಣ್ಣಪ್ಪಯ್ಯ, ಮಳಲಿ ಶೇಷಯ್ಯ, ಪರಮೇಶ್ವರಯ್ಯ, ಬೇಲೂರು ಲಕ್ಷ್ಮೀನಾರಾಯಣಪ್ಪ, ಚಂದ್ರಶೇಖರಯ್ಯ ಮುಂತಾದವರು

ಯಕ್ಷಶಿಕ್ಷಣ ನೀಡುವ ಗುರುಗಳಾಗಿದ್ದರು. ಗುಡ್ಡೆಹಿತ್ತಲು ಸುಬ್ರಹ್ಮಣ್ಯ ಭಟ್ಟರು ನಿಟ್ಟೂರು ಪ್ರದೇಶದಲ್ಲಿ ಯಕ್ಷಗಾನ ಸಂಘ ಸ್ಥಾಪಿಸಿ ಮಹಿಳೆಯರಿಗೆ ಮಕ್ಕಳಿಗೆ ಹಾಗೂ ಹವ್ಯಾಸಿಗಳಿಗೆ ಯಕ್ಷಗಾನ ಕಲಿಸುತ್ತಿದ್ದರು. "ಶ್ರೀ ರಾಮಾರ್ಪಣ ಕಲಾ ವೇದಿಕೆ" ಯು ಯಕ್ಷಶಿಕ್ಷಣ ನೀಡುತ್ತಿದ್ದು ರಮೇಶ ಹೆಗಡೆ ಗೂಂಡೂಮನೆ, ವಿಶ್ವೇಶ್ವರ ಭಟ್, ನಿವಣೆ ಗಣೇಶ್ ಭಟ್ಟರು ಈ ಪ್ರದೇಶದಲ್ಲಿ ಯಕ್ಷಗಾನದ ಪ್ರಸರಣದಲ್ಲಿ ನಿರತರಾಗಿದ್ದಾರೆ. ನಗರದಲ್ಲೂ ಬೂದ ಭಾಗವತರಿಂದ, ಮಂಜು ಭಾಗವತರಿಂದ, ಉಳ್ಳೂರು ಗಣಪತಿ ಭಾಗವತರಿಂದ ಯಕ್ಷಶಿಕ್ಷಣದ ಕಾರ್ಯ ನಡೆದಿವೆ. ಪುರಪೆ ಮನೆಯ ಸಾಕೇತ ಕಲಾವಿದರಿಂದ ಹಿಮ್ಮೇಳ, ಮುಮ್ಮೇಳದ ತರಗತಿಗಳು ನಡೆದಿವೆ. ಮಾಸ್ತಿಕಟ್ಟೆಯ ಸುರೇಂದ್ರ ಪ್ರಭುಗಳು ಶ್ರೀ ಲಕ್ಷ್ಮೀನಾರಾಯಣ ಕೃಪಾ ಪೋಷಿತ ಯಕ್ಷಗಾನ ಮಂಡಳಿಯ ಮೂಲಕ ಆ ಪ್ರದೇಶದಲ್ಲಿ ಅನೇಕ ಹವ್ಯಾಸಿಗಳಿಗೆ ಯಕ್ಷಶಿಕ್ಷಣ ದೊರಕಲು ಕಾರಣರಾದರು. ಸಾಗರ ತಾಲೂಕಿನಲ್ಲಿ ಹೊನ್ನೂರು ನಾಗರಾಜ, ಕ್ಯಾಸನೂರು ಅಶೋಕ, ಮಾಡುಗೋಡು ಮಹಾಬಲೇಶ್ವರ, ಕೆ.ಜಿ. ರಾಮರಾಯ, ತ್ರಯಂಬಕ ಹೆಗಡೆ, ಬಾಳೆಗೊಂದಿ ಆನಂದ, ಕೆರೆಕೈ ಗಣೇಶ, ಅನಜಿ ಮಹಾಬಲ ಗಿರಿ, ಕೆಸವಿನಮನೆ ಲಕ್ಷ್ಮೀನಾರಾಯಣ ಹೆಗಡೆ, ಕಡಗೋಡು ನಾರಾಯಣ ಭಟ್ಟ ಮುಂತಾದವರು ಯಕ್ಷಗಾನದ ವಿವಿಧ ಅಂಗಗಳಲ್ಲಿ ಪರಿಣಿತರಾಗಿದ್ದು ಹವ್ಯಾಸಿಗಳಿಗೆ ಯಕ್ಷಗಾನ ಕಲಿಸುವುದರಲ್ಲಿ ನಿರತರಾಗಿದ್ದಾರೆ. ಶೃಂಗೇರಿ ಪ್ರದೇಶದಲ್ಲಿ ಚೀಕಳಿಮನೆ ಸುಬ್ಬಣ್ಣಯ್ಯ, ಹೊಲಗೋಡು ಬೆಳ್ಳಯ್ಯ, ಭಾಗವತ ಹಿರಿಯಣ್ಣಾಚಾರ್, ಶೇಷಗಿರಿ ಸುಬ್ರಾಯರು ಗುರುಗಳಾಗಿ ತರಬೇತಿ ನೀಡುತ್ತಿದ್ದಾರೆ. ಕೊಪ್ಪ ಹಾಗೂ ಮೂಡಿಗೆರೆ ಪ್ರದೇಶದಲ್ಲಿ ಗೊರ್ಪಾಡಿ ವಿಠಲಭಾಗವತರು, ಸಾಕಷ್ಟು ಕಡೆ ಯಕ್ಷಶಿಕ್ಷಣ ನೀಡಿ ಅನೇಕರನ್ನು ಸಿದ್ಧಗೊಳಿಸಿದ್ದರು. ಗುಂಡುಮನೆ ರಾಮಯ್ಯ, ಕೇದಿಕೆಮನೆ ಚೆನ್ನಯ್ಯ, ಬಿದಿನಮನೆ ವೆಂಕರಾಮಯ್ಯ, ಸುರೇಶ ಮೊಯಿಲಿ, ಬಿಳಾಲುಕೊಪ್ಪದ ಸದಾನಂದ ಹೆಬ್ಬಾರ್, ಮತ್ತಾನಿ ಶಿವಶಂಕರ್, ಅಣ್ಣಾಜಿ ರಾವ್, ದಿ.ಹಳಕ ರಮೇಶ್, ದೇವಣ್ಣ ಕಾಮತ್ ಮುಂತಾದವರು ಮಲೆನಾಡಿನಲ್ಲಿ ಯಕ್ಷಶಿಕ್ಷಣದ ಹರಿಕಾರರಾಗಿದ್ದಾರೆ. ಮೈಸೂರಿನಲ್ಲೂ ಯಕ್ಷಶಿಕ್ಷಣವನ್ನು ಪ್ರಸರಿಸುವಲ್ಲಿ ಬೇಗಾರ್ ಶಿವಕುಮಾರ್ ಹಾಗೂ ಕರ್ಗಲ್ ವಿಶ್ವೇಶ್ವರ ಭಟ್‌ರವರ ಪಾತ್ರ ಬಹು ಮಹತ್ವವಿದ್ದು ನೂರಾರು ವಿದ್ಯಾರ್ಥಿಗಳಿಗೆ ಯಕ್ಷಶಿಕ್ಷಣ ಕಲಿಸಿದ ಕೀರ್ತಿ ಇವರಿಬ್ಬರಿಗೆ ಸಲ್ಲುತ್ತದೆ.

ಬಯಲು ಸೀಮೆಯಲ್ಲಿ ಮೂಡಲಪಾಯ ಯಕ್ಷಗಾನದ ಶಿಕ್ಷಣ ಹೆಚ್ಚಾಗಿ ಗುರು ಮುಖೇನ ನಡೆಯುತ್ತಿತ್ತು. ಜಾನಪದ ವಿದ್ವಾಂಸ ಡಾ.ಜಿ.ಶಂ.ಪರಮಶಿವಯ್ಯನವರು, ತಿಪಟೂರು ತಾಲೂಕಿನ ಕೊನೇಹಳ್ಳಿಯಲ್ಲಿ ಮೂಡಲಪಾಯ ಯಕ್ಷಗಾನ ಅಧ್ಯಯನ ಕೇಂದ್ರ ಸ್ಥಾಪಿಸಿ ಆ ಪ್ರದೇಶದ ಆಸಕ್ತರಿಗೆ ಗುರು ಮುಖೇನ ಮೂಡಲಪಾಯದ ಕಲಿಕೆ ಪ್ರಾರಂಭಿಸಿದರು. ಈ ಕೇಂದ್ರ ಸ್ವಲ್ಪಕಾಲ ಬಹು ಚೆನ್ನಾಗಿ ನಡೆದು ಅನೇಕ

ಕಲಾವಿದರು ರಂಗಕ್ಕೆ ಬರಲು ಕಾರಣವಾಯಿತು. ಪಟೇಲ್ ಎನ್. ನಾರಸಪ್ಪ, ಸಣ್ಣತಿಮ್ಮಯ್ಯ, ಅರಳುಗುಪ್ಪೆ ಚೆನ್ನಬಸವಯ್ಯ ಮುಂತಾದವರು ಈ ಪ್ರದೇಶದಲ್ಲಿ ಯಕ್ಷಶಿಕ್ಷಣ ನೀಡುವ ಗುರುಗಳಾಗಿದ್ದಾರೆ. ಹೆಚ್ಚಾಗಿ ಇವರು ಕುಣಿತವನ್ನು ಹೇಳಿಕೊಡುತ್ತಾರೆ. ಮಾತು ಹಾಗೂ ಅಭಿನಯ ಕೂಡಾ ಪಠ್ಯಕ್ರಮದಲ್ಲಿ ಸೇರಿಕೊಂಡಿದೆ. ಅರಳುಗುಪ್ಪೆ ಎ.ಎನ್. ನಂಜಪ್ಪ ಮತ್ತಿಹಳ್ಳಿ ಮಂಜುನಾಥ, ಕ.ನ. ದಾಸಾಚಾರ್ ಮುಂತಾದವರು ಹವ್ಯಾಸಿಗಳಿಗೆ ಮೂಡಲಪಾಯ ಕಲಿಸಿಕೊಡುತ್ತಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಮೂಡಲಪಾಯ ಪ್ರಸಾರದ ಚಟುವಟಿಕೆಗಳು ಹೆಚ್ಚುತ್ತಿದ್ದು ಅಲ್ಲಿ ಕರ್ನಾಟಕ ಮೂಡಲಪಾಯ ಯಕ್ಷಗಾನ ಪರಿಷತ್ತು ಸ್ಥಾಪನೆಯಾಗಿದೆ. ಶ್ರೀ ಕೆ. ಜಯಪ್ರಕಾಶ ಗೌಡ, ಶಶಿಧರ ಭಾರೀಘಾಟ್, ಮುಂತಾದವರು ಕ್ರಿಯಾಶೀಲರಾಗಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಭಾಗವತ ಕೆ. ಲಕ್ಷ್ಮಣಪ್ಪ, ತುಮಕೂರಿನ ಸಿರಾ ತಾಲೂಕಿನಲ್ಲಿ ದಾಸರಹಳ್ಳಿ ರಮಾನಂದ ಮುಂತಾದವರು ಮೂಡಲಪಾಯದ ಗುರುಗಳಾಗಿದ್ದಾರೆ. ಇದೇ ರೀತಿ ಗುಬ್ಬಿ ತಾಲ್ಲೂಕಿನಲ್ಲಿ ಇರಕಸಂದ್ರದ ರಂಗಸ್ವಾಮಯ್ಯ ಪಾವಗಡ ತಾಲೂಕಿನಲ್ಲಿ ಭಾಗವತ ಹನುಮಂತಪ್ಪ, ಮಧುಗಿರಿ ತಾಲೂಕಿನಲ್ಲಿ ಗೋಪಗೊಂಡನ ಹಳ್ಳಿ ಚಿಕ್ಕಮದ್ದೂರು ಭಾಗವತ ರಾಮಯ್ಯ, ಎಮ್ಮೆತಿಮ್ಮನಳ್ಳಿ ದೊಡ್ಡಪಾಲಯ್ಯ ಮುಂತಾದವರು ಶಿಕ್ಷಕರಾಗಿದ್ದಾರೆ. ಶ್ರೀ ಜಯಚಂದ್ರರಾಜೇ ಅರಸರು, ಕೊಳ್ಳೇಗಾಲದ ಸುತ್ತಮುತ್ತ ಘಟ್ಟದ ಕೋರೆ ಶಿಕ್ಷಣ ನೀಡುತ್ತಾ ನೂರಾರು ಕಲಾವಿದರ ಸೃಷ್ಟಿಗೆ ಕಾರಣರಾಗಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಈ ಕಲೆಯನ್ನು ಪ್ರಸರಿಸುವಲ್ಲಿ ಇವರ ಪಾತ್ರ ಮಹತ್ವದ್ದು. ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ದೊಡ್ಡಾಟ, ಸಣ್ಣಾಟ, ಡಪ್ಪಿನಾಟ, ಶ್ರೀಕೃಷ್ಣಪಾರಿಜಾತ ಮುಂತಾದ ಪ್ರಭೇದಗಳಲ್ಲೂ ಯಕ್ಷಶಿಕ್ಷಣ ಗುರು ಮುಖೇನ ನಡೆಯುತ್ತಿತ್ತು. ಈಚೆಗೆ ಅಲ್ಲೂ ಕೂಡ ತರಬೇತಿ ಕೇಂದ್ರಗಳು ಪ್ರಾರಂಭಗೊಂಡಿವೆ. ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಲ್ಲಿಯೂ ಡಾ. ಬಸವರಾಜ ಮಲಶೆಟ್ಟಿ ಬಯಲಾಟ ಅಕಾಡೆಮಿಯೂ ದೊಡ್ಡಾಟದಲ್ಲಿ ಒಂದು ವರ್ಷದ ಡಿಪ್ಲೊಮ ಕೋರ್ಸನ್ನು ನಡೆಸುತ್ತಿದೆ. ಇಲ್ಲಿ ಹಾಡುಗಾರಿಕೆ ಹಾಗೂ ಕುಣಿತದ ತರಗತಿಗಳಿವೆ ಅದೇ ರೀತಿ ಗೋಟಗೋಡಿಯಲ್ಲಿರುವ ಬಯಲಾಟ ಟ್ರಸ್ಟ್, ಹುಲುಸೋಗೆಯಲ್ಲಿ ಆಸಕ್ತರಿಗೆ ಬಯಲಾಟ ತರಬೇತಿ ನೀಡುತ್ತಿದ್ದಾರೆ. ಆ ಕೇಂದ್ರದಲ್ಲಿ ಗುರುಗಳಾಗಿ ಬಾಲಚಂದ್ರಪ್ಪ ನಾಯ್ಕರ, ವೀರನಗೌಡ ಪಾಟೀಲರಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಮಹಿಳೆಯರು ಬಯಲಾಟ ಕಲಿತು ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದಾರೆ. ಕೆಲವರು ದೊಡ್ಡಾಟ ಗುರುಗಳಾಗಿ ಖ್ಯಾತಿ ಪಡೆದಿದ್ದಾರೆ. ಅವರಲ್ಲಿ ಕೂಡ್ಲಿಗಿಯ ಭೀಮವ್ವ, ಬಿ.ನಾಗಮ್ಮ, ಗುಪ್ಪಲಾರ ದೊಡ್ಡ ಚೌಡಮ್ಮ, ನಿಂಗಮ್ಮ, ಮಂಜಮ್ಮ ಜೋಗತಿ, ಅರಸಿಕೆರೆ ಯಲ್ಲಮ್ಮ, ಬಳ್ಳಾರಿ ಸುಜಾತಮ್ಮ ಮುಂತಾದವರು ಮಹಿಳಾ ಕಲಾವಿದರಾಗಿ ಖ್ಯಾತಿ ಪಡೆದವರು. ಅದೇ ರೀತಿ ಇವರು ಬೇರೆಯವರಿಗೆ ಗುರುಗಳಾಗಿ ಶಿಕ್ಷಣ

ಕಲಿಸುತ್ತಿದ್ದರು. ಕಲ್ಯಾಣ ಕರ್ನಾಟಕದಲ್ಲಿ ಶ್ರೀಕೃಷ್ಣ ಪಾರಿಜಾತವು ಜನಪ್ರಿಯ ರಂಗಕಲೆಯಾಗಿದೆ. ಈ ಕಲೆಯನ್ನು ಕಲಿಸುವ ಗುರುಗಳು ಸಾಕಷ್ಟು ಮಂದಿ ಇದ್ದಾರೆ. ಅವರಲ್ಲಿ ಬರಗಿ ರಾಚಯ್ಯ, ಕೃಷ್ಣೋಜಿ ದೇಶಪಾಂಡೆ, ಅಪ್ಪಾಲು ನಾಡಪ್ಪ, ಯಲ್ಲವ್ವ, ದೊಡ್ಡಪ್ಪನವರ, ಶ್ರೀಮತಿ ಮಲ್ಲವ್ವ, ರಾಮಚಂದ್ರ ಸೀಮಂತ, ಮಲ್ಲವ್ವ ಮಾಗೀ ಮುಂತಾದವರು ತಮ್ಮ ಸಹಕಲಾವಿದರಿಗೆ ಈ ಕಲೆಯನ್ನು ಕಲಿಸಿಕೊಡುತ್ತಿದ್ದಾರೆ. ಲೋಕಾಪುರದ ಶಾಂತವ್ವ ಜಾಲಿಕಟ್ಟೆಯವರು ಸ್ವತಃ ಮೇಳಕಟ್ಟಿ ಕಲಾವಿದರನ್ನು ಬೆಳೆಸಿದ್ದಾರೆ. ಟಕ್ಕಳಕಿ ವಿಠಲರಾವ್ ಕಂಪನಿಯಲ್ಲೂ ಈ ಕಲೆ ಕಲಿತವರು ಸಾಕಷ್ಟು ಜನರಿದ್ದಾರೆ. ಇದೇ ರೀತಿ ಕೌಜಲಗಿ ನಿಂಗವ್ವರ ಕಂಪನಿಯನ್ನು ಸೇರಿ ಕೆಲವರು ಈ ಕಲೆಯಲ್ಲಿ ಪಾರಂಗತರಾಗಿದ್ದಾರೆ. ಹೀಗೆ ಉತ್ತರಕರ್ನಾಟಕ ಹಾಗೂ ಮಧ್ಯ ಕರ್ನಾಟಕದ ಹೆಚ್ಚಿನ ಪ್ರದೇಶಗಳಲ್ಲಿ ಯಕ್ಷಗಾನ ಶಿಕ್ಷಣದ ತರಬೇತಿ ಕೇಂದ್ರಗಳು ಕಾರ್ಯೋನ್ಮುಖವಾಗಿವೆ.

ಜಾಗತೀಕರಣ ಹಾಗೂ ನಗರೀಕರಣದಿಂದಾಗಿ ವಿಶ್ವದೆಲ್ಲೆಡೆ ಗ್ರಾಮೀಣ ಪ್ರದೇಶಗಳಿಂದ ಜನರು ನಗರಕ್ಕೆ ವಲಸೆ ಹೋಗುತ್ತಿದ್ದಾರೆ. ಈ ವಲಸೆಯೊಂದಿಗೆ ತಾನು ಬಾಲ್ಯದಲ್ಲಿ ಕಂಡ, ಅದರಲ್ಲಿ ನಲಿವನ್ನು ಉಂಡ ತಮ್ಮ ಕಲೆಗಳನ್ನು ನಗರ ಪ್ರದೇಶಕ್ಕೆ ತರುವ ಸಾಹಸ ಮಾಡುತ್ತಿದ್ದಾರೆ. ಯಕ್ಷಗಾನವು ಇದಕ್ಕೆ ಹೊರತಲ್ಲ. ಇಂದು ಬೆಂಗಳೂರು, ಮುಂಬಯಿ, ಮೈಸೂರು ದೂರದ ದೆಹಲಿಯಲ್ಲೂ ಕೂಡ ಯಕ್ಷಗಾನವನ್ನು ಕಲಿತು ಪ್ರದರ್ಶಿಸುವ ಹವ್ಯಾಸಿ ತಂಡಗಳಿವೆ. ಈ ಹವ್ಯಾಸಿ ತಂಡಗಳನ್ನು ಸಿದ್ಧಪಡಿಸುವ ಗುರುಗಳು ತರಬೇತಿ ಕೇಂದ್ರಗಳು ಹುಟ್ಟಿಕೊಂಡಿವೆ. ಹೆಚ್ಚಾಗಿ ಯಕ್ಷಗಾನ ವೃತ್ತಿರಂಗಕ್ಕೆ ವಿದಾಯ ಹೇಳಿದ ಹಿರಿಯ ಕಲಾವಿದರು, ಯಕ್ಷಗಾನ ಕೇಂದ್ರಗಳಲ್ಲಿ ಕಲಿತು ಆಧುನಿಕ ಶಿಕ್ಷಣವನ್ನು ಇತರರಿಗೆ ಕಲಿಸಬೇಕೆಂಬ ಮನೋಭಾವದವರು ಇಲ್ಲಿ ಗುರುಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ತೆಂಕು, ಬಡಗು ಹಾಗೂ ಬಡಾಬಡಗು ತಿಟ್ಟುಗಳಗೆ ಸೇರಿದ ಐವತ್ತಕ್ಕೂ ಹೆಚ್ಚು ಯಕ್ಷಗಾನ ಸಂಘಗಳಿವೆ. ಅಂತೆಯೇ ಯಕ್ಷಗಾನವನ್ನು ಕಲಿಸುವ ಕಲಿಕಾ ಕೇಂದ್ರಗಳು ಎಂಟಕ್ಕೂ ಹೆಚ್ಚಿವೆ. ಇವುಗಳಿಂದಾಗಿ ಶನಿವಾರ, ಭಾನುವಾರಗಳಲ್ಲಿ ಎರಡು ಮೂರು ಬಡಾವಣೆಗಳಲ್ಲಿ ಒಂದಿಲ್ಲೊಂದು ಯಕ್ಷಗಾನ ಪ್ರದರ್ಶನ ನಡೆಯುತ್ತಿರುತ್ತದೆ. ಬೆಂಗಳೂರಿನಲ್ಲಿ ಐವತ್ತು ವರ್ಷಗಳ ಕೆಳಗೆ ಹವ್ಯಾಸಿ ತಂಡ ಕಟ್ಟಿದ ಕೆ. ಮೋಹನ್‌ರವರು ತಮ್ಮ "ಯಕ್ಷ ದೇಗುಲ" ಸಂಸ್ಥೆಯಲ್ಲಿ ತರಬೇತಿಯನ್ನು ಕಳೆದ ಮೂವತ್ತು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಯಕ್ಷ ದೇಗುಲದಲ್ಲಿ ಮಕ್ಕಳಿಗೆ, ಮಹಿಳೆಯರಿಗೆ ಹಾಗೂ ಪುರುಷರಿಗೆ ಕುಣಿತಕ್ಕೆ ತರಗತಿಗಳು ನಡೆಯುತ್ತಿವೆ. ಕೆ.ಮೋಹನ್, ಪ್ರಿಯಾಂಕ ಕೆ. ಹೊಳ್ಳ, ಸುದರ್ಶನ ಉರಾಳರವರು ಗುರುಗಳಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ. ಯಕ್ಷಾಂಗಣ ಟ್ರಸ್ಟ್ (ರಿ) ಮೂಲಕ ಕೂಡಾ ಬಡಗುತಿಟ್ಟಿನ ಯಕ್ಷಗಾನ ಪ್ರದರ್ಶನವನ್ನು

ಇವರು ನೀಡುತ್ತಿದ್ದಾರೆ. ಯಕ್ಷ ದೇಗುಲದಿಂದ ಸಾವಿರಾರು ಜನ ಯಕ್ಷಗಾನವನ್ನು ಕಲಿತು ಪ್ರದರ್ಶನ ನೀಡುವಲ್ಲಿ ಸಫಲರಾಗಿದ್ದಾರೆ. ಇದೇ ರೀತಿ 1992ರಲ್ಲಿ ಪ್ರಾರಂಭವಾದ ಇನ್ನೊಂದು ತಂಡವೆಂದರೆ "ಕರ್ನಾಟಕ ಕಲಾ ದರ್ಶಿನಿ" ಗುರು ಶ್ರೀನಿವಾಸ ಸಾಸ್ತಾನ, ಪತ್ನಿ ಗೌರಿ ಸಾಸ್ತಾನರವರು ಇಲ್ಲಿನ ಮಾರ್ಗದರ್ಶಕರಾಗಿದ್ದಾರೆ. ಕೆಂಗೇರಿ, ವಿಜಯನಗರ, ಬಸವೇಶ್ವರ ನಗರ, ಗಿರಿನಗರ, ಜೆ.ಪಿ.ನಗರಗಳಲ್ಲಿ ಯಕ್ಷಗಾನ ತರಬೇತಿಯನ್ನು ನೀಡುತ್ತಿದ್ದಾರೆ. ಮೊದಲಿಗೆ ಸುಬ್ರಾಯ ಹೆಬ್ಬಾರರು ಗುರುಗಳಾಗಿದ್ದರು. ಹತ್ತು ತಿಂಗಳ, ವರ್ಷದ ಹಾಗೂ ಐದು ವರ್ಷಗಳ ಕೋರ್ಸನ್ನು ಇವರೇ ಮಾಡಿಕೊಂಡಿದ್ದಾರೆ. ಮಕ್ಕಳಿಗೆ, ಮಹಿಳೆಯರಿಗೆ, ಯುವಕರಿಗೆ ತರಬೇತಿ ಇರುತ್ತದೆ. ಮುಂದೆ ಯಕ್ಷಗಾನವನ್ನು ವೃತ್ತಿಯಾಗಿ ತೆಗೆದುಕೊಳ್ಳುವವರಿಗೆ ತಿಂಗಳಿಗೆ ಸ್ಟೇಫಂಡ್ ಮಾದರಿ ಸಹಾಯಧನವಿದೆ. ಕುಣಿತ ಮಾತ್ರವಲ್ಲದೇ ಚಂಡೆ ವಾದನದ ತರಬೇತಿ ಕೂಡಾ ಇಲ್ಲಿ ಲಭ್ಯವಿದೆ. ಕಲಾದರ್ಶಿನಿಯ ಇನ್ನೊಂದು ವೈಶಿಷ್ಟ್ಯವೆಂದರೆ ನಿಂತು ಹೋಗಿದ್ದ ಡಾ. ಶಿವರಾಮಕಾರಂತರ ಬ್ಯಾಲೆಗೆ ಮರು ಜೀವ ನೀಡಿ ಅಲ್ಲಲ್ಲಿ ಬ್ಯಾಲೆಯ ಪ್ರದರ್ಶನ ನೀಡುತ್ತಿದ್ದಾರೆ. ತೆಂಕುತಿಟ್ಟು ಹಾಗೂ ಬಡಗುತಿಟ್ಟು ಶೈಲಿಗಳ ಎರಡರಲ್ಲೂ ಯಕ್ಷಶಿಕ್ಷಣ ದೊರೆಯುತ್ತದೆ. ಕೆಲವೊಂದು ಶಾಲೆಗಳಿಗೂ ತೆರಳಿ ಶಾಲಾ ಮಕ್ಕಳಿಗೆ ಯಕ್ಷಗಾನ ಕಲಿಸುತ್ತಿದ್ದಾರೆ. ಸಾವಿರಾರು ವಿದ್ಯಾರ್ಥಿಗಳು ಈ ಸಂಸ್ಥೆಯ ಮೂಲಕ ಯಕ್ಷಗಾನದಲ್ಲಿ ಪಾರಂಗತರಾಗಿದ್ದಾರೆ.

ಇದೇ ರೀತಿಯಲ್ಲಿ ಯಕ್ಷಶಿಕ್ಷಣ ನೀಡುತ್ತಿರುವ ಬಡಗುತಿಟ್ಟಿನ ಇನ್ನೆರಡು ತಂಡಗಳೆಂದರೆ ಯಕ್ಷ ಕಲಾ ಅಕಾಡೆಮಿ (ರಿ). ಕಲಾ ಕದಂಬ ಆರ್ಟ್ಸ್ ಸೆಂಟರ್ (ರಿ) ಹಿಂದೆ ಯಕ್ಷ ದೇಗುಲದಲ್ಲಿ ಯಕ್ಷ ಗುರುಗಳಾಗಿದ್ದ ಶ್ರೀ ಕೃಷ್ಣಮೂರ್ತಿ ತುಂಗರು ಹಾಗೂ ಡಾ.ರಾಧಾಕೃಷ್ಣ ಉರಾಳರು ಅನುಕ್ರಮವಾಗಿ 2003ರಲ್ಲಿ ಹಾಗೂ 2009ರಲ್ಲಿ ಈ ಎರಡೂ ಸಂಸ್ಥೆಗಳನ್ನು ಪ್ರಾರಂಭಿಸಿ ಪ್ರತ್ಯೇಕವಾಗಿ ಯಕ್ಷಗಾನ ಶಿಕ್ಷಣ ನೀಡಲು ಪ್ರಾರಂಭಿದಸಿದರು. ಯಕ್ಷ ಕಲಾ ಅಕಾಡೆಮಿಯು ನಾಗರಭಾವಿಯಲ್ಲಿ ತರಬೇತಿ ನೀಡುತ್ತಿದ್ದು ಕೃಷ್ಣಮೂರ್ತಿ ತುಂಗರು ಹಾಗೂ ಚಿತ್ಕಲ ತುಂಗರು ಕುಣಿತದಲ್ಲಿ ಯಕ್ಷಶಿಕ್ಷಣ ನೀಡುತ್ತಿದ್ದಾರೆ. ಈಗ ವಿಶ್ವೇಶ್ವರ ಲೇಔಟ್‌ನಲ್ಲಿರುವ ಕಲಾ ಕದಂಬ ಆರ್ಟ್ಸ್ ಸೆಂಟರ್‌ನವರು ಯಕ್ಷಶಿಕ್ಷಣದೊಂದಿಗೆ ಬೇರೆ ರಂಗ ಶಿಕ್ಷಣ ನೀಡುತ್ತಿದ್ದಾರೆ. ಅನೇಕ ಶಾಲೆಗಳಿಗೆ ತೆರಳಿ ಅಲ್ಲಿನ ವಿದ್ಯಾರ್ಥಿಗಳಿಗೆ ಯಕ್ಷಗಾನ ಕಲಿಸಿಕೊಡುತ್ತಿದ್ದಾರೆ. ಚಿಕ್ಕಲ್ಲಸಂದ್ರ ಕೆಎಸ್‌ಆರ್‌ಟಿಸಿ ಲೇಔಟ್‌ನಲ್ಲಿ ಸಿದ್ಧಿ ಗಣಪತಿ ದೇವಸ್ಥಾನದಲ್ಲಿ ತರಬೇತಿ ಹಾಗೂ ಪ್ರದರ್ಶನವನ್ನು ಕಳೆದ ಹದಿನಾಲ್ಕು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಈಚೆಗೆ ಗಂಗೂಬಾಯಿ ವಿಶ್ವವಿದ್ಯಾಲಯ ಅಡಿಯಲ್ಲಿ ಯಕ್ಷಗಾನ ಡಿಪ್ಲೊಮೊ ಹಾಗೂ ಸರ್ಟಿಫಿಕೇಟ್ ಕೋರ್ಸ್ ನಡೆಸುತ್ತಿದ್ದಾರೆ.

ಶಂಕರ ಬಾಳೇಕುದ್ರು ಅವರು ಹುಳಿಮಾವಿನಲ್ಲಿ "ಯಕ್ಷ ಸಂಭ್ರಮ"ದ ಮೂಲಕ ಭಾಗವತಿಕೆ, ಚಂಡೆ, ನಾಟ್ಯಗಾರಿಕೆಯನ್ನು ಕಲಿಸುತ್ತಿದ್ದಾರೆ. ಕೆಲವು ಶಾಲೆಗಳಿಗೆ ತೆರಳಿ ಅಲ್ಲೂ ಯಕ್ಷಗಾನವನ್ನು ಕಲಿಸುತ್ತಿದ್ದಾರೆ. ಇಪ್ಪತ್ತೈದು ತರಗತಿಗಳಲ್ಲಿ ಒಂದು ಪ್ರದರ್ಶನಕ್ಕೆ ಬೇಕಾಗುವ ತರಬೇತಿ ನೀಡುವ ಶಾರ್ಟ್ ಟರ್ಮ್ ಕೋರ್ಸ್ ಇವರಲ್ಲಿದೆ. ಇನ್ನೂರೈವತ್ತಕ್ಕೂ ಹೆಚ್ಚು ಜನ ಕಲಿಕಾರ್ತಿಗಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಶ್ರೀನಾಗೇಂದ್ರ ಪಂಚಲಿಂಗರು ತಮ್ಮ ಶ್ರೀ ಮಹಾಗಣಪತಿ ಕೃಪಾಶ್ರಿತ ಯಕ್ಷ ಬಳಗದ ಮೂಲಕ ವಿಜಯನಗರ, ಬಸವೇಶ್ವರನಗರ, ನಂದಿನಿ ಲೇ ಔಟ್ ಮುಂತಾದೆಡೆ ಯಕ್ಷಗಾನ ತರಬೇತಿ ನಡೆಸುತ್ತಿದ್ದಾರೆ. ಹಿಂದೆ ಗುಂಡ್ಮಿ ರಘುರಾಮರು ಕೂಡಾ ಇಲ್ಲಿ ಯಕ್ಷಗಾನ ಕಲಿಸುವ ಗುರುಗಳಾಗಿದ್ದರು. ಸ್ತ್ರೀ ವೇಷಧಾರಿಯಾಗಿ ಹೆಸರು ಮಾಡಿದ್ದ ಶ್ರೀ ಬೇಗಾರ್ ಶಿವಕುಮಾರರು 2004ರಲ್ಲಿ ಗಾನ ಸೌರಭ ಯಕ್ಷಗಾನ ಶಾಲೆ ತೆರೆದು ಯಕ್ಷಶಿಕ್ಷಣ ನೀಡುತ್ತಿದ್ದಾರೆ. ನಗರದ ಅನೇಕ ಕಡೆ ಶಾಲೆಯ ಶಾಖೆಗಳನ್ನು ತೆರೆದು ನಾಟ್ಯ, ಭಾಗವತಿಕೆ, ಮದ್ದಳೆ, ಚಂಡೆ ಕಲಿಸುವ ಏರ್ಪಾಡು ಮಾಡಿದ್ದಾರೆ. ಯಕ್ಷಗುರು ಅನಂತ ಪದ್ಮನಾಭ ಪಾಟಕರು ಗುರುಗಳಾಗಿ ಶಿಷ್ಯರನ್ನು ತರಬೇತಿಗೊಳಿಸುತ್ತಿದ್ದಾರೆ. ಕೆನರಾ ಬ್ಯಾಂಕ್ ಕಾಲೋನಿ, ನಾಗರಬಾವಿ, ಬಿಟಿಎಂ ಲೇ ಔಟ್, ಬನಗಿರಿ, ಮಲ್ಲೇಶ್ವರಂ, ಲಗ್ಗೆರೆ ಮುಂತಾದೆಡೆ ಹೆಚ್ಚಿನ ಸಂಖ್ಯೆಯಲ್ಲಿ ಯಕ್ಷಗಾನ ಕಲಿಯುವವರಿದ್ದಾರೆ.

1984ರಲ್ಲಿ "ಕರಾವಳಿ ಯಕ್ಷಗಾನ ಕಲಾವಿದರು" ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ ಶಿವರಾಂ ಭಟ್ಟರು 2002ರಲ್ಲಿ ತೆಂಕುತಿಟ್ಟಿನ ನಾಟ್ಯ ತರಗತಿಯನ್ನು ಯಕ್ಷಗಾನ ಕಲಿಯುವವರಿಗಾಗಿ ಪ್ರಾರಂಭಿಸಿದರು. ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ, ರಾಜರಾಜೇಶ್ವರಿ ನಗರದಲ್ಲಿ, ಆನಂದ ಬಳಗದಲ್ಲಿ ಇವರು ತರಗತಿಗಳನ್ನು ನಡೆಸುತ್ತಿದ್ದು ನೂರಾರು ವಿದ್ಯಾರ್ಥಿಗಳು ತಯಾರಾಗಿದ್ದು ತೆಂಕುತಿಟ್ಟಿನಲ್ಲಿ ಪ್ರದರ್ಶನ ನೀಡಲು ಯೋಗ್ಯರಾಗಿದ್ದಾರೆ. ಸಾಕಷ್ಟು ಜನರಿಗೆ ಚಂಡೆವಾದನವನ್ನು ಕಲಿಸಿರುವುದು ಈ ಸಂಸ್ಥೆಯ ಹೆಗ್ಗಳಿಕೆ. ಇದೇ ರೀತಿ ಕಾರ್ತೀಕ್‌ರಾವ್ ಕೊಡೆಕಲ್ ಹಾಗೂ ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿ ಮಣೆಮುಂಡ ಅವರು ತೆಂಕುತಿಟ್ಟಿನಲ್ಲಿ ಯಕ್ಷಗಾನ ನೀಡುವ ಗುರುಗಳಾಗಿದ್ದಾರೆ. ಕಾರ್ತೀಕ್ ರಾವ್ ರವರು ಹನುಮಂತನಗರ ಕೋಣನಕುಂಟೆ, ನಾಗದೇವನಹಳ್ಳಿ ಮುಂತಾದ ಕಡೆ ಬೇರೆಬೇರೆ ಯಕ್ಷಗಾನ ಸಂಘಗಳಿಗೆ ಗುರುಗಳಾಗಿದ್ದು ಯಕ್ಷಶಿಕ್ಷಣ ನೀಡುತ್ತಿದ್ದಾರೆ. ಸುಬ್ರಹ್ಮಣ್ಯ ಶಾಸ್ತ್ರಿಗಳು ಬಿಇಎಲ್ ಲಲಿತಾ ಕಲಾ ಸಂಘದಲ್ಲಿ ಬಸವನಗುಡಿ ಪುತ್ತಿಗೆ ಮಠದಲ್ಲಿ ಹಿಮ್ಮೇಳ, ಮುಮ್ಮೇಳದ ತರಗತಿ ನಡೆಸುತ್ತಿದ್ದಾರೆ. ಶ್ರೀ ವಿಷ್ಣು ಕಿದೂರು, ಪವನ್ ಕಾರ್ಕಳ, ಶ್ರೀ ಲಕ್ಷ್ಮೀನಾರಾಯಣ ಕಲ್ಚಾರು, ಗಣೇಶ್ ಭಟ್ಟ ಬಾಯಾರು, ಪ್ರಸಾದ ಚೇರ್ಕಾಡಿ, ಶ್ರೀ ಕೃಷ್ಣಮೂರ್ತಿ ಪಾಂಗಣ್ಣಾಯ ಶ್ರೀಪಾದ ದಾಮ್ಲೆ ಮುಂತಾದವರು. ತೆಂಕುತಿಟ್ಟಿನ ಯಕ್ಷಗಾನ ಕಲಿಸುವ

ಗುರುಗಳಾಗಿದ್ದಾರೆ. ಶ್ರೀ ಎಸ್.ಎನ್. ಪಂಜಾಜೆಯವರು ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನದ ಮೂಲಕ ಯಕ್ಷಗಾನ ಸಮ್ಮೇಳನ ನಡೆಸುವುದರೊಂದಿಗೆ ಹವ್ಯಾಸಿ ಕಲಾವಿದರಿಗೆ ಅಲ್ಲಲ್ಲಿ ತರಬೇತಿ ನೀಡಿದ್ದಾರೆ. ಕೆಲವು ಗುರುಗಳನ್ನು ನಿಯೋಜಿಸಿ ಬ್ರಿಡ್ಜ್ ಕೋರ್ಸ್‌ಗಳ ಮೂಲಕ ಸಂಘ ಸಂಸ್ಥೆಗಳಿಂದ ಪ್ರದರ್ಶನ ಏರ್ಪಡಿಸಿರುವುದು ಇವರ ಹೆಗ್ಗಳಿಕೆ.

ಮುಂಬಯಿ ಮಹಾನಗರವು ಕೂಡಾ ಯಕ್ಷಗಾನ ಕಲಿಯುವವರಿಗೆ, ಕಲಿತು ಯಕ್ಷಗಾನ ಪ್ರದರ್ಶನ ನೀಡುವವರಿಗೆ ಆಡುಂಬೊಲವಾಗಿದೆ. ಯಕ್ಷಗಾನ ಕಲಿಕೆಯ ವಿಚಾರದಲ್ಲಿ ಮುಂಬೈಗೆ ನೂರು ವರ್ಷಗಳ ಇತಿಹಾಸವಿದೆ. ತಿಮರಗುತ್ತು ಮಂಜಯ್ಯ ಶೆಟ್ಟಿ, ಸೀತಾನದಿ ನರಸಿಂಹ ನಾಯಕರು ಕಳೆದ ಶತಮಾನದ ಮೂವತ್ತರ ದಶಕದಲ್ಲಿ ಮುಂಬೈಗೆ ಬಂದು ತರಬೇತಿ ನೀಡುತ್ತಿದ್ದರು. 1962 ರಿಂದ 1965ರವರೆಗೆ ಖ್ಯಾತ ಕಲಾವಿದ ಕಾವುಕಣ್ಣರು ಮುಂಬೈಗೆ ಬಂದು ಯಕ್ಷಗಾನ ಕುಣಿತದಲ್ಲಿ ತರಬೇತಿ ನೀಡಿದ್ದಾರೆ. ದಿ.ಸುರತ್ಕಲ್ ನಾರಾಯಣ ಶೆಟ್ಟಿಗಾರರು ಮುಂಬೈಯಲ್ಲಿ ನೂರಾರು ಕಲಾವಿದರಿಗೆ ಹೆಜ್ಜೆಗಾರಿಕೆ ಹೇಳಿಕೊಟ್ಟಿದ್ದಾರೆ. ಇದೇ ರೀತಿ ಕುಂಬಳೆ ಸುಬ್ಬರಾಯರು, ಕುಂಬಳೆ ನಾರಾಯಣ, ಅಣ್ಣುಭಟ್, ವೆಂಕಟೇಶ ಪೈ ಮುಂತಾದವರು 70ರ 80ರ ದಶಕಗಳಲ್ಲಿ ಗುರುಗಳಾಗಿದ್ದು ಸಾಕಷ್ಟು ಸಂಘಸಂಸ್ಥೆಗಳಿಂದ ಪ್ರದರ್ಶನ ಏರ್ಪಡಿಸುವಲ್ಲಿ ಸಫಲರಾಗಿದ್ದಾರೆ. ಯಕ್ಷಗಾನದ ಮೂಲಕ ಮುಂಬೈಯಲ್ಲಿ ಮನೆಮಾತಾಗಿರುವ ಶ್ರೀ ಹೆಚ್.ಬಿ.ಎಲ್. ರಾವ್‌ರವರು ತಮ್ಮ ಮನೆಯಲ್ಲೇ ಉದಯೋನ್ಮುಖರಿಗೆ ತರಬೇತಿ ನೀಡುತ್ತಿದ್ದರು. 1980ರ ನಂತರ ಅಪ್ಪಯ್ಯ ಮಣಿಯಾಣಿ, ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿ, ಗುಣಪಾಲ ಹೆಗ್ಡೆ, ವಿಠಲ್ ಥೋರನ್, ತ್ರಿವಿಕ್ರಮ ಶೆಣೈ, ಜಯಪ್ರಕಾಶ ನಿಡುವಣ್ಣಾಯ, ಎಂ.ಎಸ್. ಕೋಟ್ಯಾನ್ ಮುಂತಾದವರು ಆಸಕ್ತರಿಗೆ ಯಕ್ಷಗಾನ ಕಲಿಸುವಲ್ಲಿ ನಿರತರಾಗಿದ್ದರು. ನವದೆಹಲಿಯಲ್ಲೂ ಯಕ್ಷಗಾನದ ಪಾರಂಪರಿಕ ಶಿಕ್ಷಣ ದೊರೆಯುತ್ತಿರುವುದು ವಿಶೇಷ. ಶ್ರೀಮತಿ ವಿದ್ಯಾಕೊಳ್ಯೂರು ಹಾಗೂ ಶ್ರೀ ಸರಯೂ ಕೃಷ್ಣಭಟ್ಟರು ಹಿಂದಿಯಲ್ಲಿ ಯಕ್ಷಗಾನವನ್ನು ಆಸಕ್ತರಿಗೆ ಕಲಿಸಿ, ಪ್ರದರ್ಶನ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಅನುಕ್ರಮವಾಗಿ ಯಕ್ಷ ಮಂಜೂಷ ಹಾಗೂ ದೆಹಲಿಯ ಅಕಾಡೆಮಿ ಆಫ್ ತೆಂಕುತಿಟ್ಟು ಸಂಸ್ಥೆಗಳ ನಿರ್ದೇಶಕರಾಗಿರುವ ಇವರಿಬ್ಬರೂ ರಾಷ್ಟ್ರದ ರಾಜಧಾನಿಯಲ್ಲಿ ಚಂಡೆ ಮೊಳಗಲು ಕಾರಣರಾದವರು. ಅನೇಕ ಕಲಿಕಾರ್ಥಿಗಳನ್ನು ಸಿದ್ಧಗೊಳಿಸಿರುವುದು ಇವರಿಬ್ಬರ ಹಿರಿಮೆಯಾಗಿದೆ.

ದುಬಾಯಿಯಲ್ಲಿ ಅನೌಪಚಾರಿಕವಾಗಿ ಶೇಖರ ಡಿ. ಶೆಟ್ಟಿಗಾರರ ಗುರುತ್ವದಲ್ಲಿ 2011–2012ನೇ ಸಾಲಿನಿಂದಲೇ ಯಕ್ಷಗಾನ ನಾಟ್ಯ ತರಬೇತಿ ನಡೆಯುತ್ತಿದ್ದರೂ 2015–2016ನೇ ಸಾಲಿನಿಂದ ಅಧಿಕೃತವಾಗಿ "ದುಬಾಯಿ ಯಕ್ಷಗಾನ ಅಭ್ಯಾಸ

ತರಗತಿ" ಎಂಬ ಹೆಸರಿನಿಂದ ಗುರುಗಳಾದ ಶೇಖರ್ ಶೆಟ್ಟಿಗಾರ್ ಮತ್ತು ಬಾಲಕೃಷ್ಣ ಡಿ. ಶೆಟ್ಟಿಗಾರ್ ಸಹೋದರರ ನಿವಾಸದಲ್ಲೇ ಪ್ರಥಮವಾಗಿ ಕಾರ್ಯಾರಂಭ ಮಾಡಿತು. ಮುಂದೆ ತರಗತಿಯ ಅನುಕೂಲಕ್ಕಾಗಿ ತರಗತಿಯ ಸಂಚಾಲಕ ದಿನೇಶ ಶೆಟ್ಟಿಯವರ ನಿವಾಸದಲ್ಲಿ ಮುಂದುವರಿಯಿತು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ವ್ಯವಸ್ಥಿತವಾದ ತರಗತಿಗಳು ಟ್ಯಾಲೆಂಟ್ಫೋನ್ಮ್ಯೂಸಿಕ್ ಅಂಡ್ ಡ್ಯಾನ್ಸ್ ಸೆಂಟರ್, ಬಳಿಕ ದುಬೈಯ ಪ್ರಖ್ಯಾತ ವಿದ್ಯಾಲಯ ಬಿಲ್ವ ಸ್ಕೂಲ್ ಆಫ್‌ಸೈನ್ಸ್‌ನಲ್ಲಿ ಮುಂದುವರಿಯಿತು. ಕೊರೋನ ಕಾರಣವಾಗಿ ಆನ್ ಲೈನ್ ನಲ್ಲಿ ನಡೆಯುತ್ತಿದ್ದ ತರಗತಿಗಳು ಕೊರೋನಾ ನಂತರ ಬದಲಾದ ಹೆಸರಿನಿಂದ ವಕ್ವಾಡಿ ಪ್ರವೀಣ್ ಶೆಟ್ಟರ ಫಾರ್ಚೂನ್ ವಸತಿ ಸಮುಚ್ಚಯದ ಕೊಠಡಿಯಲ್ಲಿ ನಡೆಯುತ್ತಿದೆ. (ಯಕ್ಷಪ್ರಭಾ, ಮಾರ್ಚ್ 2024, ಪುಟ 18)

ಮೇಲೆ ತಿಳಿಸಿದ ಕಲಿಕಾ ಕೇಂದ್ರಗಳಲ್ಲಿ ಕೆಲವು ಸಾಂಪ್ರದಾಯಿಕ ಶಿಕ್ಷಣದ ಪಠ್ಯವನ್ನು ಅನುಸರಿಸಿದರೆ ಇನ್ನು ಕೆಲವರು ಆಧುನಿಕ ಶಿಕ್ಷಣಕ್ಕೆ ಅಗತ್ಯವಾಗುವಷ್ಟನ್ನೇ ಇಟ್ಟುಕೊಂಡು ಕಲಿಸುತ್ತಿದ್ದಾರೆ. ಹೀಗಾಗಿ ಪ್ರತಿ ಕಲಿಕಾಕೇಂದ್ರದ ಪಠ್ಯಗಳು ವಿಭಿನ್ನವಾಗಿವೆ. ಈ ದೃಷ್ಟಿಯಿಂದ ಕೂಡಾ ಮೇಲ್ಕಂಡ ಎಲ್ಲಾ ತರಬೇತಿ ಕೇಂದ್ರಗಳಿಗೆ ಸರಿ ಹೊಂದುವಂತೆ ಡಿಪ್ಲೊಮೊ ಕೋರ್ಸ್‌ಗಳನ್ನು ಹಾಗೂ ವಿಶ್ವವಿದ್ಯಾನಿಲಯಗಳ ಮಾನ್ಯತೆಗೆ ಅಗತ್ಯವಾಗುವ ಪದವಿ ತರಗತಿಗಳ ಕೋರ್ಸನ್ನು ಪ್ರಾರಂಭಿಸಲು ಸರ್ಕಾರ/ ಅಕಾಡೆಮಿ ಯೋಜನೆ ರೂಪಿಸಬೇಕು. ಅಂತಹ ಕೋರ್ಸುಗಳಿಗೆ ಸರಿಹೊಂದುವ ಮಾದರಿ ಹೊರ ತರಬೇಕು. ಕೇಂದ್ರಗಳಿಗೆ ಕೂಡಾ ನೋಂದಣಿ ಮಾಡಿಸಿ ಮಾನ್ಯತೆಯನ್ನು ಕೊಡುವ ವ್ಯವಸ್ಥೆಗೆ ಸರಕಾರ ಮುಂದಾಗಬೇಕೆಂಬುವುದೇ ಯಕ್ಷಗಾನ ಆಸಕ್ತರ ಆಶಯವಾಗಿದೆ.

(ದಿನಾಂಕ 11–02–2023ರಂದು ನಡೆದ ಉಡುಪಿಯಲ್ಲಿ ಪ್ರಥಮ ರಾಜ್ಯ ಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನ ಮೊದಲ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧದ ವಿಸ್ತೃತ ರೂಪ)

*

ಶಿವರಾಮಕಾರಂತರ ಯಕ್ಷಗಾನ ಬಯಲಾಟ

ಕರ್ನಾಟಕದ ಸಾಂಪ್ರದಾಯಿಕ ರಂಗಭೂಮಿಯಾದ ಯಕ್ಷಗಾನವನ್ನು ವಿಶ್ವಮಾನ್ಯಗೊಳಿಸುವಲ್ಲಿ ಶಿವರಾಮಕಾರಂತರ ಪಾತ್ರ ಬಹುಮುಖ್ಯವಾದದ್ದು. 19ನೆಯ ಶತಮಾನದವರೆಗೆ ದ್ರಾವಿಡ ಮೂಲದ ಈ ಸಾಂಪ್ರದಾಯಿಕ ರಂಗಭೂಮಿ ಕರ್ನಾಟಕದಾದ್ಯಂತ ಬೇರೆಬೇರೆ ಹೆಸರಿನಲ್ಲಿ ಬಳಕೆಯಲ್ಲಿತ್ತು. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಕಾಣಿಸಿಕೊಂಡ ವೃತ್ತಿ ನಾಟಕ ರಂಗಭೂಮಿಯ ಆಧಿಕ್ಯದಿಂದಾಗಿ ಯಕ್ಷಗಾನದಂತಹ ಜಾನಪದ ಕಲೆಗಳು ಹಿಂದೆ ಸರಿಯಲು ಪ್ರಾರಂಭಗೊಂಡವು. ಆದರೆ ಕರಾವಳಿ ಹಾಗೂ ಮಲೆನಾಡಿನಲ್ಲಿ ಈ ಪ್ರಕ್ರಿಯೆ ಅಷ್ಟು ಬಿರುಸಾಗಲಿಲ್ಲ. ಇದಕ್ಕೆ ಕಾರಣರಾದವರು ಅಲ್ಲಿನ ವಿದ್ಯಾವಂತರು, ಇಂಗ್ಲೀಷ್ ವಿದ್ಯಾಭ್ಯಾಸದ ಜೊತೆಯಲ್ಲಿ ಅವರು ಯಕ್ಷಗಾನವನ್ನು ಪ್ರೀತಿಸಿದರು, ಇದರಿಂದ ಕರಾವಳಿ ಹಾಗೂ ಮಲೆನಾಡಿನಲ್ಲಿ ಯಕ್ಷಗಾನ ಜನಾಕರ್ಷಣೆಯ ಕೇಂದ್ರವಾಯಿತು. ಈ ಸಂದರ್ಭದಲ್ಲಿ ವೃತ್ತಿನಾಟಕ ಕಂಪನಿಗಳಿಗೆ ಸಾಹಿತ್ಯ ಬರೆಯುತ್ತಿದ್ದ ಗೀತ ರೂಪಕಗಳನ್ನು ರಚಿಸುತ್ತಿದ್ದ, ನೃತ್ಯ ನಾಟಕಗಳಲ್ಲಿ ಭಾಗವಹಿಸುತ್ತಿದ್ದ, ಕಾದಂಬರಿಕಾರರಾಗಿ ಖ್ಯಾತಿಗೊಂಡಿದ್ದ ಶಿವರಾಮಕಾರಂತರು ಯಕ್ಷಗಾನದ ಕಡೆಗೆ ಆಕರ್ಷಿತರಾದರು. ಇಲ್ಲಿನ ಸಾಹಿತ್ಯ, ಸಂಗೀತ, ಬಣ್ಣಗಾರಿಕೆ, ವೇಷಭೂಷಣಗಳು ಇವರನ್ನು ಸೆಳೆದವು. ಮೇಳಗಳ ಕಲಾವಿದರ ಸಂಪರ್ಕಕ್ಕೆ ಬಂದ ಕಾರಂತರು ಈ ಕಲೆಯ ಒಳಮರ್ಮವನ್ನು ಅರಿಯಲು ಪ್ರಯತ್ನಿಸಿದರು. ಪ್ರಸಂಗ ಕೃತಿಗಳ ತಾಡವೋಲೆಗಳನ್ನು ಸಂಗ್ರಹಿಸುತ್ತಾ ಕರಾವಳಿ ಹಾಗೂ ಮಲೆನಾಡಿನ ಉದ್ದಗಲಕ್ಕೂ ಸಂಚರಿಸಿ ಯಕ್ಷಗಾನದ ಆಳ ವಿಸ್ತಾರವನ್ನು ಅರಿತರು. ಆ ಸಂದರ್ಭದಲ್ಲಿ ಖ್ಯಾತ ವಿದ್ವಾಂಸರಾಗಿದ್ದ ಮುಳಿಯ ತಿಮ್ಮಪ್ಪಯ್ಯನವರ ಪಾರ್ತಿಸುಬ್ಬ ಪ್ರಕಟವಾಯಿತು. ಅಲ್ಲಿ ಅವರು ಕವಿಯ ಕಾಲವನ್ನು ತಿಳಿಸಿದ್ದಕ್ಕೂ ತಾವು ಸಂಪಾದಿಸಿದ ಕೃತಿಯ ತಾಡವೋಲೆಗಳಲ್ಲಿರುವ ಕವಿಯ ಕಾಲಕ್ಕೂ ವ್ಯತ್ಯಾಸವಿತ್ತು. ಹೀಗೆ ಇದ್ದಿದ್ದನ್ನು ಪ್ರಕಟಿಸಿ ಪಾರ್ತಿಸುಬ್ಬನ ಹುಟ್ಟೂರಿನ ವಾದವಿವಾದಕ್ಕೆ ಕಾರಂತರು ಕಾರಣರಾದರು. ಈ ಚರ್ಚೆ ಬಹಳಷ್ಟು ವರ್ಷ ಬಿರುಸಿನಿಂದ ನಡೆದು ವಿದ್ಯಾವಂತರೆಲ್ಲಾ

ಈ ಕಲೆಯ ಕಡೆಗೆ ಮುಖಮಾಡುವಂತೆ ಮಾಡಿತು. ಹದಿನೈದು ಇಪ್ಪತ್ತು ವರ್ಷಗಳ ಕಾಲ ಶಿವರಾಮಕಾರಂತರ ಪರಿಶ್ರಮ, ಅಭ್ಯಾಸ, ಸಂಶೋಧನೆ, ಕ್ಷೇತ್ರಕಾರ್ಯದ ಫಲವೇ 1958ರಲ್ಲಿ "ಯಕ್ಷಗಾನ ಬಯಲಾಟ" ಎಂಬ ಕೃತಿ ಪ್ರಕಟಗೊಳ್ಳಲು ಕಾರಣವಾಯಿತು. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಕೂಡಾ ಲಭಿಸಿ ಈ ಮೂಲಕ "ಯಕ್ಷಗಾನ"ವೂ ಕರ್ನಾಟಕದಾದ್ಯಂತ ಕುತೂಹಲಕ್ಕೆ, ಆಸಕ್ತಿಗೆ ಕಾರಣವಾಯಿತು. ಶಿವರಾಮಕಾರಂತರಂತಹ ಸಾಹಿತಿಗಳ ಸ್ಪರ್ಶಕ್ಕೆ "ಯಕ್ಷಗಾನ" ಒಳಗಾದದ್ದು ಈ ಕಲೆಯ "ಪುಣ್ಯ" ಎಂದೇ ಭಾವಿಸಬೇಕು. ಕಾರಂತರ ನಿಶಿತಮತಿ ಮತ್ತು ಸಂಶೋಧನಾ ನಿಷ್ಠೆ, ಪ್ರಪಂಚದ ಉಳಿದ ಕಲೆಗಳ ಕುರಿತ ಅಪಾರವಾದ ಜ್ಞಾನ, ವಿಶಾಲವಾದ ಓದು ಎಲ್ಲವೂ ಈ ಪುಸ್ತಕದಲ್ಲಿ ಹರಳುಗಟ್ಟಿವೆ. "ಯಕ್ಷಗಾನ" ಕಲೆಯ ನಾನಾ ಆಯಾಮಗಳ ಕುರಿತು ವಿಸ್ತೃತವಾದ ವಿವರ ಇಲ್ಲಿದೆ. ಪ್ರತಿಯೊಂದು ಅಂಗದ ಬಗ್ಗೆ ಆಳವಾದ ಅಧ್ಯಯನವನ್ನು ಕಾರಂತರು ನಡೆಸಿರುವುದನ್ನು ಈ ಕೃತಿಯಲ್ಲಿ ಕಾಣಬಹುದು. ಎರಡು ಭಾಗಗಳಲ್ಲಿ ಹದಿನಾರು ಅಧ್ಯಾಯಗಳಲ್ಲಿ ಕಾರಂತರು ಬಯಲಾಟದ ಹಿರಿಮೆ ಕುರಿತು ತಮ್ಮ ಸಂಶೋಧನಾತ್ಮಕ ವಿಚಾರವನ್ನು ತಿಳಿಸಿದ್ದಾರೆ.

"ಯಕ್ಷಗಾನ ಬಯಲಾಟ" ಕೃತಿಯ ಪ್ರಾರಂಭದಲ್ಲಿ ಶಿವರಾಮಕಾರಂತರು ಓದುಗರಿಗೆ ಈ ಕಲೆಯನ್ನು ಪರಿಚಯಿಸುತ್ತಾರೆ. ಯಕ್ಷಗಾನವು ವಿಜಯನಗರದ ಅರಸರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದರಬೇಕೆಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪೂರಕವಾಗಿ ಅವರು ಕ್ರಿ.ಶ.1456ರ ಬಳ್ಳಾರಿ ಜಿಲ್ಲೆಯ ಸೋಮಸಮುದ್ರದ ಲಕ್ಷ್ಮೀನಾರಾಯಣ ದೇವಾಲಯದ ದಾನಶಾಸನವೊಂದನ್ನು ಆಧಾರವಾಗಿ ಕೊಡುತ್ತಾರೆ. ಕುರುಗೋಡು ಸೀಮೆಯ ದೇವಸ್ಥಾನಗಳಲ್ಲಿ "ತಾಳ ಮದ್ದಳೆ" ಸೇವೆಗೆ ಉಂಬಳಿ ಬಿಡುತ್ತಿದ್ದಾರೆಂಬ ಮಾಹಿತಿ ನೀಡಿ, ಆ ಮೂಲಕ ಯಕ್ಷಗಾನ ಸಂಬಂಧಿ ಕಲೆಯಾದ "ತಾಳ ಮದ್ದಳೆ"ಯೇ ಇದು ಇದ್ದಿರಬಹುದು ಎನ್ನುತ್ತಾರೆ. ಹಾಗಿಲ್ಲದಿದ್ದರೆ ಯಕ್ಷಗಾನ ಪ್ರಸಂಗದಲ್ಲಿ "ತಾಳ ಮದ್ದಳೆ"ಗೆ ಮಹತ್ತರ ಸ್ಥಾನವಿರುವುದರಿಂದ ಅವುಗಳ ಬಳಕೆ ಆ ಕಾಲಕ್ಕೆ ವ್ಯಾಪಕವಾಗಿದ್ದಿರಬೇಕು, ದೇವಸ್ಥಾನಗಳಿಗೂ ಈ ಕಲೆಗೂ ನಂಟು, ಹೀಗೆ ಪ್ರಾರಂಭಗೊಂಡಿರಬೇಕು ಎನ್ನುತ್ತಾರೆ. "ಯಕ್ಷಗಾನ" ಪದದ ಉತ್ಪತ್ತಿ ಬಗ್ಗೆ ಕೂಡಾ ಶಿವರಾಮಕಾರಂತರು ಸಾಕಷ್ಟು ಚರ್ಚೆಗಳನ್ನು ಇಲ್ಲಿ ನಡೆಸಿದ್ದಾರೆ. ಇದೊಂದು ಜಾನಪದ ಕಲೆ ಎಂಬುದು ಅವರ ಖಚಿತ ನಿಲುವಾಗಿತ್ತು. ಇದರ ಸಂವಾದಿ ಕಲೆಗಳು ಆ ಕಾಲದಲ್ಲಿ ದಕ್ಷಿಣ ಭಾರತದ ಎಲ್ಲಾ ಕಡೆ ಪ್ರಚುರದಲ್ಲಿತ್ತು ಎನ್ನುತ್ತಾರೆ. ಮುಂದೆ ಅವರು ಕರಾವಳಿ ಹಾಗೂ ಮಲೆನಾಡಿನ ಸಂಘ ಸಂಸ್ಥೆಗಳು, ದೇವಸ್ಥಾನಗಳು, "ಯಕ್ಷಗಾನ ಮೇಳ"ಗಳನ್ನು ರಚಿಸಿದ ವಿಚಾರ ತಿಳಿಸುತ್ತಾರೆ. ಹರಕೆ ಆಟಗಳಿಂದಾಗಿ ಈ ಕಲೆ ಉಳಿದು ಬಂದ ಬಗೆ ತಿಳಿಸಿದ್ದಾರೆ. ಕನಿಷ್ಠ ಇನ್ನೂರು ವರ್ಷಗಳಿಂದಾದರೂ ದೇವಸ್ಥಾನಗಳನ್ನು ಆಶ್ರಯಿಸಿದ ಮೇಳಗಳಿದ್ದ

ಬಗ್ಗೆ ತಿಳಿಸಿ, ಈ ವ್ಯವಸ್ಥೆ ಕರ್ನಾಟಕದ ಬೇರೆ ಕಡೆಗಳಲ್ಲಿ ಇದ್ದಿದ್ದರೆ ಕಲೆ ಇನ್ನಷ್ಟು ಶ್ರೀಮಂತವಾಗಿರುತ್ತಿತ್ತು ಎಂಬುದು ಕಾರಂತರ ಅಭಿಮತವಾಗಿದೆ.

ಹಿಂದೆಲ್ಲಾ ಯಕ್ಷಗಾನವನ್ನು ಬಯಲಾಟ, ದಶಾವತಾರಾಟ ಎಂದೇ ಕರೆಯುತ್ತಿದ್ದರು. ಊರಿನ ಬಯಲಿನಲ್ಲಿ, ಇಲ್ಲವೇ ದೇವಸ್ಥಾನದ ಮುಂಭಾಗದಲ್ಲಿ ನಾಲ್ಕು ಕಂಬಗಳನ್ನು ನೆಟ್ಟು ಅದನ್ನೇ "ರಂಗಸ್ಥಳ"ವೆಂದು ಕರೆದು ರಾತ್ರಿಯಿಡೀ ಪ್ರದರ್ಶನ ನೀಡಿ ಮಾರನೆಯ ಬೆಳಿಗ್ಗೆ ಮಂಗಳ ಮಾಡುವ ವಿವರವಿದೆ. ಕಥೆಯ ಪ್ರಾರಂಭಕ್ಕೆ ಮೊದಲು "ಸಭಾಲಕ್ಷಣ ಮತ್ತು ಪ್ರಸಂಗ ಪೀಠಿಕೆ" ಭಾಗವನ್ನು ಎರಡು ತಾಸುಗಳ ಕಾಲ ಕಡ್ಡಾಯವಾಗಿ ನಡೆಸುತ್ತಿದ್ದರು. ಇಲ್ಲಿ ದೇವರಸ್ತುತಿ, ಬಾಲಗೋಪಾಲರ ಪ್ರವೇಶ ಪೀಠಿಕಾ ಸ್ತ್ರೀ ವೇಷದ ನರ್ತನವಿರುತ್ತದೆ. ಕೋಡಂಗಿಯ ಮಾತುಗಳೆಲ್ಲದರ ವಿವರ ಕೊಟ್ಟಿದ್ದಾರೆ. ಇಂದಿನ ಯಕ್ಷಗಾನ ಪ್ರದರ್ಶನಗಳಲ್ಲಿ ಇವೆಲ್ಲವನ್ನೂ ಕೈ ಬಿಡಲಾಗಿದೆ. ಕಾರಂತರು ಈ ಭಾಗದ ಮಹತ್ವವನ್ನು, ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಯಕ್ಷಗಾನದ ಪೂರ್ವರಂಗಕ್ಕೆ ಶೈಕ್ಷಣಿಕ ಮಹತ್ವವಿದೆ ಮತ್ತು ಎಳೆಯ ಬಾಲಕ ಮೇಳಕ್ಕೆ ಸೇರಿಕೊಂಡಾಗ ಪೂರ್ವರಂಗದಲ್ಲಿ ಭಾಗವಹಿಸುವ ಮೂಲಕ ಕಲಾವಿದನಾಗಿ ಬೆಳೆಯುತ್ತಾನೆ ಎಂದು ತಮ್ಮ ಅನಿಸಿಕೆ ತಿಳಿಸಿದ್ದಾರೆ. ಸಭಾಲಕ್ಷಣ ಸಾಹಿತ್ಯದ ಕುರಿತು ಈ ಅಧ್ಯಾಯದಲ್ಲಿ ವಿವರವಾಗಿ ಕಾರಂತರು ಚರ್ಚಿಸಿದ್ದಾರೆ.

ಆಟಗಳಲ್ಲಿ ಪೂರ್ವರಂಗ ಮುಗಿದೊಡನೆ ಕಥಾ ಭಾಗವು ಒಡ್ಡೋಲಗದಿಂದ ಪ್ರಾರಂಭಗೊಳ್ಳುತ್ತದೆ. ಭಾಗವತನು ಪ್ರಸಂಗದ ಪದ್ಯವನ್ನೇ ಹಾಡಿದಾಗ ಅದಕ್ಕೆ ಅನುಸಾರವಾಗಿ ಪಾತ್ರಧಾರಿ ಪ್ರೇಕ್ಷಕರಿಗೆ ಕುಣಿತ, ಅಭಿನಯದ ಮೂಲಕ ಕಾವ್ಯ ಭಾಗದಲ್ಲಿರುವ ಸಾಹಿತ್ಯ ಅಂಶಗಳನ್ನು ತೋರಿಸುತ್ತಾನೆ. ಮುಂದೆ ಮಾತಿನಲ್ಲಿ ಇನ್ನಷ್ಟು ವಿಸ್ತರಿಸಿ ಆಶು ಭಾಷಣದ ಮೂಲಕ ಪ್ರೇಕ್ಷಕರಿಗೆ ಮುಟ್ಟಿಸುತ್ತಾನೆ. ಈ ಕಾರಣ ಒಂದು ಪ್ರಸಂಗ ಮಾರನೇ ದಿನ ಅದೇ ಪ್ರಸಂಗವಿದ್ದರೂ ಅದು ಬೇರೆಯೇ ಆಗಿರುತ್ತದೆ ಎಂದೆಲ್ಲಾ ವಿವರಗಳು ಬಂದಿವೆ.

ಯಕ್ಷಗಾನ ಪ್ರದರ್ಶನಕ್ಕೆ ಮೂಲ ಆಧಾರವೇ ಪ್ರಸಂಗಗಳು. ಈ ಪ್ರಸಂಗವನ್ನು ಕವಿಯಾದವನು ಬರೆದಿರುತ್ತಾನೆ. 600–700 ವರ್ಷಗಳಿಂದ ಇವುಗಳ ರಚನೆ ನಡೆಯುತ್ತಲೇ ಇದೆ. ಸಾವಿರದಷ್ಟು ಯಕ್ಷಗಾನ ಕವಿಗಳಿದ್ದಾರೆ. ಐದು ಸಾವಿರದಷ್ಟು ಪ್ರಸಂಗಗಳಿವೆ. ಹೆಚ್ಚಾಗಿ ನಡುಗನ್ನಡ ಶೈಲಿಯಲ್ಲಿ, ಅಪ್ಪಟ ಕನ್ನಡ ಛಂದಸ್ಸುಗಳಲ್ಲಿ, ಕವಿಗಳು ಪ್ರಸಂಗಗಳನ್ನು ರಚಿಸಿದ್ದಾರೆ. ಯಕ್ಷಕವಿ ತನ್ನ ರಚನೆಗೆ ರಾಗ ಹಾಗೂ ತಾಳದ ಉಲ್ಲೇಖ ಮಾಡಿರುತ್ತಾನೆ. ಇದನ್ನು "ಮಟ್ಟು" ಎಂದು ಕರೆಯುತ್ತಾರೆ. 250ರಷ್ಟು ಮಟ್ಟುಗಳಿವೆ. ಕಾರಂತರು ಬೇರೆ ಬೇರೆ ಛಂದಸ್ಸುಗಳ ಬಳಕೆಯ ಬಗ್ಗೆ ವಿವರಗಳನ್ನು ಸೋದಾಹರಣವಾಗಿ ನೀಡಿದ್ದಾರೆ. ಪ್ರಸಂಗದ ಪದ್ಯಗಳನ್ನು

ಅವುಗಳಲ್ಲಿರುವ ಸಾಹಿತ್ಯ, ಸೌಂದರ್ಯವನ್ನು ಅವು ಹಾಡಿಗೆ ಒದಗುವ ಬಗೆಯನ್ನು, ಭಾವ ಪ್ರಸ್ತುತಿಗೆ ನೆರವಾಗುವ ರೀತಿಯನ್ನು ಕಾರಂತರು ಚರ್ಚಿಸಿದ್ದಾರೆ. "ಯಕ್ಷಗಾನ ಒಂದು ಪ್ರದರ್ಶನ ಕಲೆಯಾದ್ದರಿಂದ ಸಾಹಿತ್ಯವು ಹಾಡಿಗೆ ಒಗ್ಗುವಂತಿರಬೇಕು ಮತ್ತು ಪ್ರೇಕ್ಷಕ ಅದನ್ನು ಕೇಳಿಸಿಕೊಂಡಾಗ ಅರ್ಥ ಸ್ಫುರಿಸುವಂತಿರಬೇಕು" ಎನ್ನುತ್ತಾರೆ.

ಮುಂದೆ ಶಿವರಾಮಕಾರಂತರು ಹಾಡುವಿಕೆಯ ಬಗ್ಗೆ ತಾವು ಕಂಡುಕೊಂಡ ವಿಚಾರಗಳನ್ನು ತಿಳಿಸುತ್ತಾರೆ. ಯಕ್ಷಗಾನದ ಹಾಡುಗಳ ಧಾಟಿಗಳನ್ನು ತಿಳಿಸಿ ಅವುಗಳು ಭಾವ ಪ್ರಸರಣಕ್ಕೆ ಒದಗುವ ಬಗೆಯನ್ನು ತಿಳಿಸಿದ್ದಾರೆ. ಯಕ್ಷಗಾನದ ಹಾಡುವಿಕೆ ಕರ್ನಾಟಕ ಸಂಗೀತ ಹಾಗೂ ಹಿಂದೂಸ್ತಾನಿ ಸಂಗೀತಕ್ಕಿಂತ ಭಿನ್ನವಾಗಿದೆ. ಕವಿ ಅದೇ ರಾಗಗಳ ಹೆಸರನ್ನು ಬಳಸಿದ್ದರೂ ಅವು ಈ ಎರಡೂ ಶೈಲಿಗಿಂತ ಭಿನ್ನವಾಗಿವೆ. ಭಾಗವತರು ಕೇವಲ ಅನುಕರಣೆಯಿಂದ ಹಾಡುತ್ತಾರೆಯೇ ಹೊರತು ಆ ಸಾಹಿತ್ಯಕ್ಕೆ ಅಲ್ಲಿನ ಧಾಟಿ ಹಾಗೂ ರಾಗಗಳು ಸರಿ ಹೊಂದುತ್ತದೆಯೇ ಇಲ್ಲವೇ ಎಂಬುದನ್ನು ಪರೀಕ್ಷಿಸಬೇಕು ಎಂದು ತಿಳಿಸಿದ್ದಾರೆ. ಸುಮಾರು ನೂರಿಪ್ಪತ್ತು ಹೆಚ್ಚು ರಾಗಗಳು ತಾವು ಸಂಪಾದಿಸಿದ ಪ್ರಸಂಗಗಳಲ್ಲಿ ಇವೆ ಎಂದು ತಿಳಿಸಿದ್ದಾರೆ. ಕಾರಂತರು ಕೆಲವು ಭಾಗವತರನ್ನು ಕೂಡಿಸಿಕೊಂಡು ಅವರಿಂದ ರಾಗಗಳನ್ನು ಹಾಡಿಸಿದರು. ಸಂಗೀತ ವಿದ್ವಾಂಸರನ್ನು ಅಲ್ಲಿಗೆ ಕರೆಸಿ ಅವರ ಮೂಲಕ ರಾಗಗಳ ವಿಶಿಷ್ಟತೆಯನ್ನು ಅರಿತುಕೊಂಡರು. ಯಾವುದೇ ವಿಚಾರವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳುವುದು ಕಾರಂತರ ಕ್ರಮ. ಮೇಲುನೋಟವನ್ನು ಅವರು ಎಂದೂ ಒಪ್ಪುವುದಿಲ್ಲ. ವಿಚಾರದ ಆಳಕ್ಕೆ ಇಳಿದು ಪರೀಕ್ಷಿಸಿ ತಮ್ಮ ಅನಿಸಿಕೆ ತಿಳಿಸುತ್ತಾರೆ. ಈ ಅಧ್ಯಾಯದಲ್ಲಿ ಅವರು ಮಾಡಿದ ಪ್ರಯೋಗಗಳು ದಾಖಲಾಗಿವೆ. ಇಲ್ಲಿ ಭಾಗವತನು ಹಾಡಿದಾಗ ಅವನನ್ನು ಅನುಸರಿಸಿ ಮದ್ದಳೆಗಾರ ಸೌಂದರ್ಯ ವೃದ್ಧಿಯಾಗುವಂತೆ ಬಿಡ್ತಿಗೆಗಳನ್ನು ಬಾರಿಸಬೇಕು ಎನ್ನುತ್ತಾರೆ. ಈ ಕಾಲದಲ್ಲಿ ಶೃತಿಗೆ ಹಾರ್ಮೋನಿಯಂ ಬಳಸುತ್ತಿದ್ದರು. ಕಾರಂತರು "ಮುಖವೀಣೆಯೇ ಉತ್ತಮ ಎಂದು ತಿಳಿಸಿ, ಇಲ್ಲವಾದರೆ ಪಿಟೀಲು ಬಳಸಿದಾಗ ಭಾಗವತನ ಹಾಡುಗಾರಿಕೆ ಹೊಂದಿಕೊಳ್ಳುತ್ತದೆ" ಎನ್ನುತ್ತಾರೆ. ಮುಂದೆ ಅವರು "ಬ್ಯಾಲೆ" ಪ್ರಯೋಗವನ್ನು ಮಾಡಿದಾಗ ಹಿಮ್ಮೇಳದಲ್ಲಿ ಪಿಟೀಲು ಬಳಸಿದ್ದನ್ನು ಗಮನಿಸಬಹುದು. ಮದ್ದಳೆಯ ನುಡಿತದಲ್ಲಿ ಶೋಕ, ಕಾರುಣ್ಯ, ಲಾಸ್ಯ, ಶೃಂಗಾರ ಮುಂತಾದ ಸನ್ನಿವೇಶಗಳಿಗೆ ಒದಗುವ ಗುಣವಿದೆ. ಆದರೆ ಚಂಡೆ, ರೌದ್ರ, ವೀರ, ರೋಷ ಹಿಗ್ಗುಗಳ ಅಭಿವ್ಯಕ್ತಿಗೆ ಪೂರಕವಾಗಿದೆ ಎಂದಿದ್ದಾರೆ. ಅವರ ಬ್ಯಾಲೆಯಲ್ಲಿ ಅವರ ಪ್ರಯೋಗಗಳ ಫಲಿತವನ್ನು ಕಾಣಬಹುದು. ಯಕ್ಷಗಾನ ಸಂಗೀತದ ಬಗ್ಗೆ ಅವರು ಮಾಡಿದ ಅಭ್ಯಾಸ, ನಡೆಸಿದ ಪ್ರಯೋಗ, ಸಂಶೋಧನೆಗಳೆಲ್ಲಾ ಬಹುಮೌಲಿಕವಾದ್ದು. ಕಾರಂತರ ಈ ಕೃತಿಯಲ್ಲಿ ಅವರ ತಳಸ್ಪರ್ಶಿ ಅಧ್ಯಯನದ ಕುರುಹುಗಳು ದೊರೆಯುತ್ತವೆ. ನಾರ್ಣಪ್ಪ ಉಪ್ಪೂರ, ನೀಲಾವರ ರಾಮಕೃಷ್ಣಯ್ಯ,

ಹಿರಿಯಡ್ಕ ಗೋಪಾಲರಾವ್ ಮುಂತಾದವರು ಅವರ ಪ್ರಯೋಗಗಳಲ್ಲಿ, ಕಮ್ಮಟಗಳಲ್ಲಿ, ಪ್ರಾತ್ಯಕ್ಷಿಕೆಗಳಲ್ಲಿ ಸಹಕರಿಸಿದರು. ಹಾಡುಗಾರರ ಹಾಡಿನ ಅರ್ಥ ವಿಸ್ತಾರಕ್ಕೆ ತಾಳ ವಾದ್ಯಗಳ ಆರ್ಭಟ ಅಡ್ಡಿಯಾಗುವುದನ್ನು ಅವರು ಕಟುವಾಗಿ ವಿರೋಧಿಸುತ್ತಿದ್ದರು. ಈ ಪುಸ್ತಕದಲ್ಲಿ ಅದೆಲ್ಲಾ ದಾಖಲಾಗಿದೆ.

ಶಿವರಾಮಕಾರಂತರು ನೃತ್ಯಪಟುವಾಗಿದ್ದರು. ನೃತ್ಯ ನಾಟಕಗಳಲ್ಲಿ, ಗೀತರೂಪಕಗಳಲ್ಲಿ ಅವರು ಮತ್ತು ಅವರ ಮಡದಿ ಶ್ರೀಮತಿ ಲೀಲಾ ಕಾರಂತರು ಸ್ವಯಂ ಭಾಗವಹಿಸುತ್ತಿದ್ದರು. ಈ ಹಿನ್ನೆಲೆಯಿಂದ ಯಕ್ಷಗಾನ ರಂಗವನ್ನು ಪ್ರವೇಶಿಸಿದ್ದರಿಂದ ನೃತ್ಯದ ಬಗ್ಗೆ ಸಾಕಷ್ಟು ಚಿಂತನೆ ನಡೆಸಿದ್ದಾರೆ. ಯಕ್ಷಗಾನ ಕುಣಿತದ ಕುರಿತು ಇರುವ ಅಧ್ಯಾಯದಲ್ಲಿ ನೃತ್ಯದ ಇತಿಹಾಸ ಅದರ ಗುರಿಯನ್ನು, ಅದರ ಪರಿಯನ್ನು ಇಲ್ಲಿ ಮಾರ್ಮಿಕವಾಗಿ ವಿರಿಸಿದ್ದಾರೆ. ವೇಷಧಾರಿ ಯಾವ ಕೋನದಲ್ಲಿ ನಿಲ್ಲಬೇಕು? ಆತನ ನಿಲುವು ಹೇಗಿರಬೇಕು? ಕುಣಿಯುವಾಗ ಅನುಸರಿಸಬೇಕಾದ ಭಂಗಿ ಯಾವುದು? ಕುಣಿತದ ಮೂಲಕ ಪದ್ಯದ ಒಳಗೆ ಅಡಗಿರುವ ಭಾವವನ್ನು ಹೇಗೆ ಬಿತ್ತರಿಸಬೇಕು? ಎಂಬುದನ್ನೆಲ್ಲಾ ಇಲ್ಲಿ ತಿಳಿಸಿಕೊಡುತ್ತಾರೆ.

ಅಷ್ಟೇ ಅಲ್ಲದೆ ಪಾತ್ರಗಳಿಗೆ ಅನುಸಾರವಾಗಿ ಯಕ್ಷಗಾನದಲ್ಲಿ ನೃತ್ಯದ ಕಾರ್ಯಬಾಹುಳ್ಯವನ್ನು ಹಂಚಿ ಹಾಕಲಾಗಿದೆ ಎಂಬುದು ಕಾರಂತರ ನಿಶಿತಮತಿಗೆ ಗೋಚರಿಸಿದ ಸತ್ಯ. ಸ್ತ್ರೀ ಪಾತ್ರಗಳು ಮಾಡುವ ನೃತ್ಯ ವಿಧಾನಗಳಲ್ಲಿ ಲಾಸ್ಯಕ್ಕೆ, ಶೃಂಗಾರಕ್ಕೆ ಹೆಚ್ಚು ಗಮನವಿದೆ. ಅದೇ ಪುರುಷ ವೇಷಕ್ಕೆ ಬಂದಾಗ ಅವು ಹೆಚ್ಚು ವೀರರಸದ ಕಡೆಗೆ ಪೌರುಷ, ಕೆಚ್ಚು ಮುಂತಾದ ಭಾವಗಳನ್ನು ಅಭಿವ್ಯಕ್ತಿಸುವ ಕಡೆಗೆ ಇದೆ. ಅದೇ ಪೋಷಕ ಪಾತ್ರಗಳು, ಹನುಮಂತ, ವಿದೂಷಕ ಮುಂತಾದ ಪಾತ್ರಗಳ ಕುಣಿತದಲ್ಲಿ ಹಿಗ್ಗು, ಹಾಸ್ಯ, ಸಂತಸ ಮುಂತಾದ ಲಘು ಪ್ರವೃತ್ತಿ ಕಡೆಗೆ ಸೂಚಿಸುವಂತಿದೆ ಎನ್ನುತ್ತಾರೆ. "ಅವರ ಕುಣಿತದಲ್ಲಿ ಪ್ರಧಾನ ಭಾವವನ್ನು ನೃತ್ಯಗತಿಯಿಂದ ತೀಕ್ಷ್ಣಗೊಳಿಸುವುದನ್ನು ಕಾಣಬಹುದು" ಎನ್ನುತ್ತಾರೆ. ಉಳಿದ ಕಲೆಗಳಿಗೆ ಹೋಲಿಸಿದರೆ ಯಕ್ಷಗಾನದಲ್ಲಿ ನೃತ್ಯ ಮಾಧ್ಯಮದ ಕಾರ್ಯ ಕಡಿಮೆ ಎಂದೇ ಹೇಳಬಹುದು. ಯಕ್ಷಗಾನದಲ್ಲಿ ಮುಖ, ಹಸ್ತ, ಪಾದಗಳನ್ನು ಬಿಟ್ಟರೆ ಉಳಿದ ಅಂಗಗಳು ವೇಷಭೂಷಣಗಳಿಂದ ಮುಚ್ಚಿಕೊಂಡಿರುವುದರಿಂದ ಭಾವಾಭಿವ್ಯಕ್ತಿಯು ಈ ಮೂರೇ ಅಂಗಗಳಲ್ಲಿ ವ್ಯಕ್ತವಾಗಬೇಕಾಗಿದೆ. ಹಾಡುಗಾರಿಕೆಯನ್ನು, ಕೇಳಿ, ಹಿಮ್ಮೇಳದವರ ವಾದನವನ್ನು ಅನುಸರಿಸಿ ಕುಣಿಯಬೇಕಾಗುತ್ತದೆ. ರಂಗಸ್ಥಳದಲ್ಲಿ ತೋರಿಸಬೇಕಾದ ವಿವಿಧ ಕ್ರಿಯೆಗಳನ್ನು ಕುಣಿತದಲ್ಲಿ ತೋರಿಸಲು ಸಾಧ್ಯ.

ದುಃಖ, ಸಂತೋಷ, ಕೋಪ, ನಗು ಮುಂತಾದ ಭಾವಕೋಶಗಳನ್ನು ಮುಖದಲ್ಲಿ ಪ್ರಕಟಗೊಳಿಸುವುದು ಮಾತ್ರವಲ್ಲದೇ ದೇಹದ ಭಂಗಿಗಳಲ್ಲಿ

ಅಂಗಾಂಗಗಳಲ್ಲಿ ಬಿಂಬಿಸಲು ಸಾಧ್ಯವಾಗುತ್ತದೆ ಎಂಬುದು ಕಾರಂತರ ನಿಲುವು. ಯಕ್ಷಗಾನ ನೃತ್ಯ ಪರಂಪರೆಯಲ್ಲಿ ನೃತ್ಯಲೇಖನ ಮತ್ತು ಗುಂಪು ನೃತ್ಯಗಳಿಲ್ಲ ಎಂದಿರುವ ಕಾರಂತರು ಹಿಮ್ಮೇಳದ ಗೀತ ವಾದನದೊಡನೆ ನಿಶ್ಚಿತವಾದ ಪದಗತಿ ಹಾಗೂ ಅಂಗಭಂಗಿಗಳನ್ನು ಕಲಾವಿದ ಪ್ರದರ್ಶಿಸಬೇಕು. ಯುದ್ಧ ಸನ್ನಿವೇಶದ ನೃತ್ಯ, ಪ್ರಯಾಣ ನೃತ್ಯ, ಬೇಟೆಯಾಡುವ ನೃತ್ಯ, ಮುಂತಾದವೆಲ್ಲ ಮಾಡುವಾಗ ಕಲಾವಿದನು ಯಕ್ಷಗಾನದ ಪಾರಂಪರಿಕ ನೃತ್ಯ ಶೈಲಿಯನ್ನು ಮೀರಬಾರದು ಎಂದು ತಿಳಿಸಿದ್ದಾರೆ. ಪಾತ್ರಪ್ರವೇಶದ ನೃತ್ಯ ಹಾಗೂ ಒಡ್ಡೋಲಗಳ ನೃತ್ಯಗಳೆಲ್ಲ ಯಕ್ಷಗಾನದ್ದವೇ ಆಗಿದ್ದು, ಸ್ವಂತಿಕೆಯಿಂದ ಕೂಡಿದೆ. ಯಾವುದೇ ಉಪಕರಣಗಳ ಅಗತ್ಯವಿಲ್ಲದೇ ರಂಗ ಸಜ್ಜಿಕೆಗಳಿಲ್ಲದೇ ಕುಣಿತದ ಶೈಲಿಯ ಮೂಲಕ, ಸಾಂಕೇತಿಕವಾದ ಚಲನೆಯ ಮೂಲಕ ಕಲಾವಿದರಾದವರು ಸೂಕ್ತ ವಾತಾವರಣವನ್ನು ಸೃಜಿಸಬೇಕು ಎನ್ನುತ್ತಾರೆ. ಸಾಧಾರಣದ ರಂಗಸ್ಥಳದಲ್ಲೇ ಪುರಾಣ ಲೋಕದ ವೈಭೋವೋಪೇತ ದೃಶ್ಯವನ್ನು ಬಿಂಬಿಸಬಲ್ಲ ಶಕ್ತಿ ಯಕ್ಷಗಾನ ಕಲೆಗೆ ಇದೆ ಎಂಬುದು ಕಾರಂತರ ಅಭಿಮತ.

ಕಾರಂತರು ಯಕ್ಷಗಾನದ ವೇಷಭೂಷಣಗಳ ಕುರಿತು ಬಹು ದೀರ್ಘವಾಗಿ ಚರ್ಚಿಸಿದ್ದಾರೆ. ಇದರ ಹಿಂದೆ ಅಗಾಧವಾದ ಕಲ್ಪನಾ ಸೃಷ್ಟಿ ಕೆಲಸ ಮಾಡಿದೆ ಎಂಬುದು ಅವರ ಅಭಿಪ್ರಾಯ. ಯಕ್ಷಗಾನದ ಸಾಂಪ್ರದಾಯಿಕ ವೇಷಭೂಷಣಗಳು ಪಾತ್ರಗಳ ಸ್ವಭಾವಕ್ಕೆ ಅನುಗುಣವಾಗಿ ಇರುತ್ತವೆ. ದುಷ್ಟ ಸ್ವಭಾವದವನು ರಾಜನಾದರೂ ರಾಕ್ಷಸ ಪಾತ್ರದ ವೇಷಭೂಷಣ ಧರಿಸುತ್ತಾನೆ. ಬಣ್ಣಗಾರಿಕೆಯಲ್ಲಿ ಈ ಕ್ರಮವನ್ನು ಕಾಣಬಹುದು. ಎಳೆಯ ಪ್ರಾಯದ, ಯೌವ್ವನದ ಭಾವಗಳನ್ನು ಬಿಂಬಿಸುವ ಪಾತ್ರಗಳು ಪಗಡಿ, ಮುಂಡಾಸನ್ನು ಹೊಂದಿರುತ್ತವೆ. ರಾಕ್ಷಸ ಪಾತ್ರದ ಕಿರೀಟದ ಗಾತ್ರ ಬಹಳ ದೊಡ್ಡದಾಗಿರುತ್ತದೆ. ಹೆಣ್ಣು ಬಣ್ಣದ ವೇಷದ ವಿಧಾನವೇ ಬೇರೆ ಇರುತ್ತದೆ. ರಾಕ್ಷಸಿಯರ ಪಾತ್ರಗಳು ತುಂಬಾ ಉಗ್ರವಾಗಿರುತ್ತವೆ. ತಳಪಾಯದ ಬಣ್ಣ ಕೆಂಪು ಇಲ್ಲವೇ ಕಪ್ಪು ಇರುತ್ತದೆ. ಮುಖದ ಮೇಲೆ ಚಿಟ್ಟೆ ಬರೆದುಕೊಳ್ಳುತ್ತಾರೆ. ವಾಲಿ, ಸುಗ್ರೀವ, ಅಶ್ವತ್ಥಾಮ, ಕೃಪ, ಜಾಂಬವಂತ ಹೀಗೆ ಒಬ್ಬೊಬ್ಬರ ವೇಷಗಾರಿಕೆಯೂ ಬೇರೆಬೇರೆಯಾಗಿರುತ್ತದೆ. ಸರಳ ಪಾತ್ರಗಳ ಚಾರ, ದೂತ, ವನಪಾಲಕ, ಕಾವಲಿನವ, ಬ್ರಾಹ್ಮಣ, ಅಂಬಿಗ ಮುಂತಾದ ಪಾತ್ರಗಳು ತಲೆಗೆ ಮುಂಡಾಸು ಧರಿಸುತ್ತಾರೆ. ಆದರೆ ಅವುಗಳಲ್ಲೂ ಯಾವಾಗಲೂ ಕೂಡ ಕೆಲವು ಸಾಂಪ್ರದಾಯಿಕ ಪಾಲನೆ ಅಗತ್ಯವೆನ್ನುತ್ತಾರೆ. ಹೀಗೆ ಕಾರಂತರು ಈ ಕೃತಿಯಲ್ಲಿ ಪ್ರತಿ ಪಾತ್ರದ ವೇಷಭೂಷಣದ ಬಗ್ಗೆ, ಬಣ್ಣಗಾರಿಕೆಯ ಬಗ್ಗೆ ತಮ್ಮ ಆಳವಾದ ಚಿಂತನೆಯನ್ನು, ತಮ್ಮ ಸಂಶೋಧನಾತ್ಮಕ ನಿಲುವನ್ನು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಈ ಅಧ್ಯಾಯವನ್ನು ಓದಿದಾಗ ನಮ್ಮ ಪೂರ್ವಜರು ಯಕ್ಷಗಾನದಂತಹ ಜನಪದ ಕಲೆಯನ್ನು ಬಳಕೆಗೆ ತರುವಲ್ಲಿ ಎಷ್ಟು ಚಿಂತನೆ ನಡೆಸಿದ್ದಾರೆ ಎಂಬುದು ತಿಳಿಯುತ್ತದೆ. ಶತಮಾನಗಳ ಕಾಲ ಈ ಕಲೆ ಬದಲಾಗುತ್ತಾ, ಬೆಳೆಯುತ್ತಾ

ಬಂದಿದೆ. ಸಂವಾದಿ ಕಲೆಗಳಿಂದ ಕೊಳುಕೊಡೆ ಮಾಡಿಕೊಂಡಿದೆ. ಆದ್ದರಿಂದ ಈ ಕಲೆ ಜೀವಂತವಾಗಿದೆ. ಶಿವರಾಮಕಾರಂತರು ಯಕ್ಷಗಾನ ಸ್ತ್ರೀ ವೇಷವು ಈ ರಂಗಕ್ಕೆ ಅಸಮತೋಲನವಾಗಿದೆ ಎಂದು ಅಶ್ವತ್ಥದ ಎಲೆಯಾಕಾರದ ಶಿರೋಭೂಷಣವನ್ನು ಬಳಕೆಗೆ ತಂದಿದ್ದರು. ಅದು ಇಂದು ಎಲ್ಲಾ ಮೇಳಗಳಿಂದ, ಕಲಾವಿದರಿಂದ ಒಪ್ಪಿತಗೊಂಡು ಬಳಕೆಗೆ ಬಂದಿದೆ. ಇದು ಯಕ್ಷಗಾನಕ್ಕೆ ಕಾರಂತರು ಕೊಟ್ಟ ಕೊಡುಗೆಯಾಗಿದೆ.

ಡಾ. ಶಿವರಾಮಕಾರಂತರು ಯಕ್ಷಗಾನ ಪ್ರಸಂಗಗಳನ್ನು ಸಂಗ್ರಹಿಸುವಾಗ ಅನೇಕ ತಾಡವೋಲೆಗಳಲ್ಲಿ ಇದ್ದ ಪ್ರಸಂಗ ಸಾಹಿತ್ಯ ಸಿಕ್ಕಿತು. ಇವುಗಳ ಕಾಲನಿರ್ಣಯ ಮಾಡುವಲ್ಲಿ ಕೂಡಾ ಕಾರಂತರ ಕೊಡುಗೆ ದೊಡ್ಡದು. ಅಜಪುರ ವಿಷ್ಣು ಕವಿಯ "ವಿರಾಟಪರ್ವದ" ಕಾಲವನ್ನು ಕ್ರಿ.ಶ. 1564 ಎಂದು ತಿಳಿಸಿರುವ ಅವರು 15ನೇ ಶತಮಾನದಿಂದ ಪ್ರಸಂಗ ರಚನೆ ಪ್ರಾರಂಭಗೊಂಡಿದೆ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಈಚೆಗೆ ಕೆಂಪಣ್ಣ ಕವಿಯ "ಕರಿರಾಯನ ಚರಿತೆ" ಎಂಬ ಯಕ್ಷಗಾನ ಕಾವ್ಯದ ಕಾಲವನ್ನು ಕ್ರಿ.ಶ.1502 ಎಂದು ಡಾ.ಕಬ್ಬಿನಾಲೆ ವಸಂತಭಾರದ್ವಜರು ತಿಳಿಸಿದ್ದಾರೆ. ಇದಲ್ಲದೆ ಈಚೆಗೆ ದೊರೆತಿರುವ "ಆದಿಪರ್ವ" ಎಂಬ ಯಕ್ಷಗಾನ ಪ್ರಸಂಗದ ಕಾಲ ಕ್ರಿ.ಶ.1350 ಎಂಬ ಅಭಿಪ್ರಾಯಕ್ಕೆ ಪ್ರೊ. ಎಂ.ಎ. ಹೆಗಡೆಯವರು ಬಂದಿದ್ದಾರೆ. ಪ್ರಸಂಗದಲ್ಲಿ ಬಳಕೆಯಾದ ಛಂದಸ್ಸನ್ನು ಇದಕ್ಕೆ ಆಧಾರವಾಗಿಟ್ಟುಕೊಂಡಿದ್ದಾರೆ. ಕಾರಂತರ ನಂತರ ಈ ಎಲ್ಲಾ ಬೆಳವಣಿಗೆ ನಡೆದಿದೆ. ಕಾರಂತರು ಯಕ್ಷಗಾನದ ಪ್ರಾಚ್ಯತೆಯನ್ನು ನಿರ್ಧರಿಸುವಾಗ ಆಂಧ್ರದಲ್ಲಿ ಬಳಕೆಯಲ್ಲಿರುವ ಯಕ್ಷಗಾನ ಕಾವ್ಯಗಳ ಕಾಲವನ್ನು ಕುಚುಪುಡಿ, ಕೇಳಿಕೆ, ರಾಮನಾಟ್ಟಂ ಮುಂತಾದ ಸಂವಾದಿ ಕಲೆಗಳ ಹುಟ್ಟು ಮತ್ತು ಬೆಳವಣಿಗೆಗಳನ್ನು ಗಮನಿಸಿ ತಮ್ಮ ವಾದವನ್ನು ಈ ಪುಸ್ತಕದಲ್ಲಿ ಚರ್ಚಿಸಿದ್ದಾರೆ. ಇಪ್ಪತ್ತನೆ ಶತಮಾನದ ಪೂರ್ವಾರ್ಧದಲ್ಲಿ ಕಾರಂತರು ಪ್ರಸಂಗ ಸಾಹಿತ್ಯದ ಸಂಪಾದನೆ ಬಗ್ಗೆ ಪಟ್ಟ ಶ್ರಮ ಹಾಗೂ ಕಾಲನಿರ್ಣಯದ ಬಗ್ಗೆ ತೆಗೆದುಕೊಂಡ ನಿಲುವುಗಳೆಲ್ಲವೂ ಕೂಡಾ ಪ್ರಶಂಸಾರ್ಹವಾದುದು. ಈ ಬಗೆಯ ಸಂಶೋಧನೆಗೆ ಕಾರಂತರು ಒಂದು ದಾರಿಯನ್ನು ಹಾಕಿಕೊಟ್ಟ ಹರಿಕಾರರಾಗಿದ್ದಾರೆ.

ಯಕ್ಷಗಾನದ ಇತರೆ ಕಲಾಪ್ರಕಾರಗಳ ಬಗ್ಗೆ ಕೂಡಾ ಕಾರಂತರು ತಮ್ಮ ಯಕ್ಷಗಾನ ಬಯಲಾಟದಲ್ಲಿ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಗೊಂಬೆಯಾಟಗಳ ಬಗ್ಗೆ ಚರ್ಚೆ ಮಾಡಿರುವ ಕಾರಂತರು ಗೊಂಬೆಯಾಟಗಳಿಗೂ ಕರ್ನಾಟಕದಲ್ಲಿ ಅದರಲ್ಲೂ ಕರಾವಳಿ ಹಾಗೂ ಮಲೆನಾಡಿನಲ್ಲಿ ಪ್ರಸಾರದಲ್ಲಿರುವ ಗೊಂಬೆಗಳ ಬಗ್ಗೆ ದೀರ್ಘವಾದ ವಿವರಗಳನ್ನು ನೀಡಿದ್ದಾರೆ. ಸೂತ್ರದ ಗೊಂಬೆಯಾಟ, ಸಲಾಕೆ ಗೊಂಬೆಯಾಟ, ತೊಗಲು ಗೊಂಬೆಯಾಟದ ಬಗ್ಗೆ ಸಾಕಷ್ಟು ವಿವರಗಳನ್ನು ಸಂಗ್ರಹಿಸಿ

ಓದುಗರ ಮುಂದೆ ಇಟ್ಟಿದ್ದಾರೆ. ಗೊಂಬೆಯಾಟದ ಮೇಳದವರು ಯಕ್ಷಗಾನವನ್ನು ಅನುಸರಿಸುವುದನ್ನು ಕಡಿಮೆ ಮಾಡಿ ಅದರ ಸ್ವಾಯತ್ತತೆಯನ್ನು, ಅಸ್ಮಿತೆಯನ್ನು ವಿಸ್ತರಿಸಬೇಕು ಎಂದಿದ್ದಾರೆ. ಕಾರಂತರು "ದೇಶ ಸುತ್ತಿ ಕೋಶ ಓದಿ" ಇರುವುದರಿಂದ ಈ ಬಗೆಯ ಕೃತಿ ರಚಿಸಲು ಸಾಧ್ಯವಾಗಿದೆ.

ಡಾ. ಕೆ.ಎಂ. ಕೃಷ್ಣರಾವ್ ಯಕ್ಷಗಾನ ಸಾಹಿತ್ಯದ ಕುರಿತು ಮೊದಲಿಗೆ ಪುಸ್ತಕವೊಂದನ್ನು ಹೊರತಂದವರು. ಅವರ "ಯಕ್ಷಗಾನ ಸಾಹಿತ್ಯ" (ಮಿಂಚಿನಬಳ್ಳಿ ಪ್ರಕಾಶನ, ಧಾರವಾಡ–1956)ದಲ್ಲಿ ಮೂಡಲಪಾಯ, ಪಡುವಲಪಾಯದ ಎಲ್ಲಾ ಯಕ್ಷಗಾನ ಪ್ರಸಂಗ ಕೃತಿಗಳ ಕುರಿತು, ಆ ಸಾಹಿತ್ಯದ ವೈಶಿಷ್ಟಗಳ ಕುರಿತು ವಿವರಗಳಿವೆ. ಶಿವರಾಮಕಾರಂತರು ತಮ್ಮ ಕೃತಿಯಲ್ಲಿ ಪಡುವಲಪಾಯದ ಪ್ರಸಂಗಕಾರರ ತಾಡವೋಲೆಗಳ ಆಧಾರದಿಂದ ಅಜಪುರದ ವಿಷ್ಣುವಿನ "ವಿರಾಟಪರ್ವ"ವೇ ಮೊದಲ ಕೃತಿ ಎಂಬುದಾಗಿ ಹೇಳಿದ್ದಾರೆ. ಆದರೆ ಈಗ ಸಾಕಷ್ಟು ಸಂಶೋಧನೆಗಳು ನಡೆದಿದ್ದು, ಅವನಿಗಿಂತ ಇನ್ನೂರು ವರ್ಷದ ಹಿಂದೆಯೇ ರಚಿತವಾದ ಯಕ್ಷಗಾನ ಪ್ರಸಂಗಗಳು ದೊರೆತಿವೆ. ಕಾರಂತರು ಇಲ್ಲಿ ನಗಿರೆಯ ಸುಬ್ಬ, ದೇವಿದಾಸ ಅಜ್ಞಾತ ಕವಿಯೆಂದು ಹೆಸರಿಸಿದ ಪಾರ್ತಿಸುಬ್ಬ (ಕಣಿಪುರದ ಕೃಷ್ಣಭಕ್ತ), ಧ್ವಜಪುರದ ನಾಗಪಯ್ಯ, ಹಳೇಮಕ್ಕಿರಾಮ, ರಾಮ, ಹಟ್ಟಿಯಂಗಡಿ ರಾಮಭಟ್ಟ, ನಿತ್ಯಾನಂದ ಅವಧೂತ, ಅಜಪುರದ ಸುಬ್ಬ, ವೆಂಕಟ, ವೆಂಕಣ್ಣ, ವಾಸುದೇವ ಪ್ರಭು, ಭೀಮಕವಿ, ಮಯ್ಯವಟಿ ವೆಂಕಟ, ಎಣ್ಣೆಮಡಿ ವೆಂಕಟರಮಣಯ್ಯ, ಗೆರೆಸೊಪ್ಪ ಶಾಂತಪ್ಪಯ್ಯ, ನಂದಳಿಕೆ ಲಕ್ಷ್ಮೀನಾರಾಯಣಪ್ಪ (ಮುದ್ದಣ್ಣ), ಬೋರಾಡಿ ವೆಂಕಟರಮಣಯ್ಯ, ಹಲಸಿನಹಳ್ಳಿ ನರಸಿಂಹಶಾಸ್ತ್ರಿ ಮುಂತಾದ ಯಕ್ಷಗಾನ ಕವಿಗಳ ಕುರಿತು ವಿವರ ನೀಡಿದ್ದಾರೆ. ಈ ಅಧ್ಯಾಯದಲ್ಲಿ ಅಜ್ಞಾತ ಕವಿ ಎಂದು ಹೆಸರಿಸಿರುವ ರಾಮಾಯಣ ಪ್ರಸಂಗಗಳ ರಚನೆ ಮಾಡಿರುವವನ ಬಗ್ಗೆ ಕಾರಂತರ ಅಭಿಪ್ರಾಯವನ್ನು ವಿದ್ವಾಂಸರು ಒಪ್ಪದೇ ಸಾಕಷ್ಟು ವಾದ ವಿವಾದ ನಡೆಯಿತು. ಕುಕ್ಕಿಲ ಕೃಷ್ಣಭಟ್ಟರು ಈ ಬಗ್ಗೆ ಸಾದ್ಯಂತವಾಗಿ ಚರ್ಚಿಸಿ ಆತ ಕುಂಬಳೆ ಸೀಮೆಯ "ಪಾರ್ತಿಸುಬ್ಬ"ನೆಂಬುದನ್ನು ಸಮರ್ಥಿಸಿದ್ದರಿಂದ ಇದೀಗ ಈ ಪ್ರಸಂಗಗಳ ಕವಿ "ಪಾರ್ತಿಸುಬ್ಬ" ಎಂಬುದೇ ನಿರ್ಣಯವಾಗಿದೆ. ಕರ್ನಾಟಕ ಯಕ್ಷಗಾನ ಅಕಾಡೆಮಿ ಕೊಡಮಾಡುವ ಬಹುದೊಡ್ಡ ಪ್ರಶಸ್ತಿಯನ್ನು "ಪಾರ್ತಿಸುಬ್ಬ ಪ್ರಶಸ್ತಿ" ಎಂದು ಕರೆಯಲಾಗುತ್ತದೆ. ಹೀಗಿದ್ದರೂ ಉಳಿದ ಕವಿಗಳ ಬಗ್ಗೆ ಹಾಗೂ ಉಳಿದ ಪ್ರಸಂಗಗಳ ಕುರಿತು ಕಾರಂತರು ನಡೆಸಿರುವ ಸಂಶೋಧನೆ ದಾಖಲಾರ್ಹವಾದುದು. ಅವರ ಕ್ಷೇತ್ರ ಕಾರ್ಯದಲ್ಲಿನ ಪರಿಶ್ರಮ, ಗತಕಾಲದ ವಿವರದಲ್ಲಿರುವ ಸತ್ಯವನ್ನು ಹೊರತರಲು ಪ್ರಯತ್ನಿಸುವ ಬಗೆ, ಚರ್ಚಿಸುವ ವಿಧಾನಗಳೆಲ್ಲಾ ಮೌಲಿಕವಾದದ್ದು.

ಒಟ್ಟಿನಲ್ಲಿ ಶಿವರಾಮಕಾರಂತರ "ಯಕ್ಷಗಾನ ಬಯಲಾಟ" ಕೃತಿ ರಚನೆಯಾಗಿ 65 ವರ್ಷಗಳು ಕಳೆದಿವೆ.

ಈ ಏಳು ದಶಕಗಳಲ್ಲಿ ಯಕ್ಷಗಾನದ ಬಗ್ಗೆ ಸಾಕಷ್ಟು ಸಂಶೋಧನೆಗಳು, ಚರ್ಚೆಗಳು, ವಿಚಾರ ಸಂಕಿರಣಗಳು ನಡೆದಿವೆ. 55ಕ್ಕೂ ಹೆಚ್ಚು ಪಿ.ಹೆಚ್.ಡಿ. ಪ್ರೌಢ ಪ್ರಬಂಧಗಳು ಬಂದಿವೆ. ವಿಶ್ವವಿದ್ಯಾಲಯಗಳಲ್ಲಿ, ತರಬೇತಿ ಕೇಂದ್ರಗಳಲ್ಲಿ ಯಕ್ಷಗಾನ ಪಠ್ಯದ ವಸ್ತುವಾಗಿದೆ. ಹೀಗಿದ್ದು ಈ ಎಲ್ಲಾ ಚಟುವಟಿಕೆಗಳಿಗೆ ಮೂಲ ಆಸ್ತಿಭಾರವೆಂದರೆ ಡಾ.ಶಿವರಾಮಕಾರಂತರ "ಯಕ್ಷಗಾನ ಬಯಲಾಟ" ಎಂದರೆ ತಪ್ಪಾಗಲಾಗದು. ಇದೊಂದು ಮಾದರಿಯ ಗ್ರಂಥದಂತಿದೆ. ಯಕ್ಷಗಾನದ ಬಗ್ಗೆ ಏನೇ ಚರ್ಚೆ ನಡೆಯಬೇಕಾದರೂ ಕಾರಂತರ ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ಮೊದಲಿಗೆ ಇಟ್ಟುಕೊಂಡು ಮುಂದೆ ಚರ್ಚೆ ಬೆಳೆಸಬೇಕಾದ ಪರಿಸ್ಥಿತಿ ಇದೆ. ಅದಕ್ಕೆ ಕಾರಣ ಆ ಕೃತಿಯಲ್ಲಿ ಅಡಗಿರುವ "ಕಾರಂತ ಪ್ರತಿಭೆ", ಅವರ ಇಪ್ಪತ್ತು ವರ್ಷಗಳ ಶ್ರಮ, ಚಿಂತನೆ, ಸಂಶೋಧನಾಸಕ್ತಿಗಳೆಲ್ಲ ಸೇರಿ ಈ ಕೃತಿ ಹೊರ ಬಂದಿದೆ. ಆದ್ದರಿಂದಲೇ ಅದು ಸರ್ವಮಾನ್ಯವಾಗಿದೆ. ಈ ಏಳು ದಶಕಗಳಲ್ಲಿ ಈ ಕೃತಿಯ ಒಂದೊಂದು ಅಧ್ಯಾಯವನ್ನು ಆಧರಿಸಿಯೇ ಚರ್ಚೆಗಳು ನಡೆದಿವೆ. ಸ್ತ್ರೀ ಪಾತ್ರದ ಸುಧಾರಣೆಗೆ ಕಾರಂತರು ಕೊಟ್ಟ ಕೊಡುಗೆ ಎಲ್ಲಾ ಕಾಲಕ್ಕೂ ಉಳಿಯುವಂಥದ್ದಾಗಿದೆ. ಕಾರಂತರ ಸನಿಹಕ್ಕೆ ಬಂದ ಕಲಾವಿದರೆಲ್ಲಾ ತಮ್ಮನ್ನು ಸುಧಾರಿಸಿಕೊಂಡು ಅಪ್ಪಟ ಕಲಾವಿದರಾಗಲು ಪ್ರಯತ್ನಿಸಿದರು. ಅವರನ್ನು ಅನುಸರಿಸಿದ ಉಳಿದ ಕಲಾವಿದರೂ ಕೂಡ ತಮ್ಮ ಕಲಾಭಿವ್ಯಕ್ತಿಯಲ್ಲಿ ಬದಲಾವಣೆ ತಂದರು. ಹೀಗೆ ಡಾ.ಶಿವರಾಮಕಾರಂತರು "ಯಕ್ಷಗಾನ"ದ ಯುಗ ಪ್ರವರ್ತಕರೆಂದೇ ಜನ ಭಾವಿಸಿದ್ದಾರೆ. ಯಕ್ಷಗಾನ ಹಾಗೂ ಕಾರಂತರು ಈ ಎರಡೂ ಪದಗಳು ಒಂದನ್ನು ಬಿಟ್ಟು ಇನ್ನೊಂದಿಲ್ಲ ಎನ್ನುವಂತಾಗಿದೆ.

(ಹೂವಿನಹಡಗಲಿಯ "ರಂಗಚೈತನ್ಯ ಬಯಲಾಟ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ"ದವರ ವಿಶೇಷ ಸಂಚಿಕೆಗಾಗಿ ಬರೆದ ಲೇಖನ – 2023)

*

ಯಕ್ಷಗಾನ ಮತ್ತು ಕಥಕಳಿ

ತುಳುನಾಡು ಯಕ್ಷಗಾನ ಹಾಗೂ ನೆರೆಯ ಕೇರಳದ ನಡುವಿನ ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ, ಸಾಮಾಜಿಕ ನಂಟು ಬಹು ಪ್ರಾಕ್ತನವಾದುದು. ಈ ಎರಡೂ ಪ್ರದೇಶದ ಧಾರ್ಮಿಕ ಆಚರಣೆಗಳಲ್ಲಿ ಬಹಳಷ್ಟು ಸಾಮ್ಯವಿದೆ. ಅದೇ ರೀತಿ ಈ ಎರಡೂ ಪ್ರದೇಶಗಳ ಸಾಂಪ್ರದಾಯಿಕ ಕಲೆಗಳಲ್ಲೂ ಕೂಡ ಒಂದು ಬಗೆಯ ಕೊಳುಕೊಡೆ ಸಂಬಂಧ ಕಂಡು ಬರುತ್ತದೆ. ತುಳುನಾಡಿನ ಯಕ್ಷಗಾನ ಹಾಗೂ ಕೇರಳದ "ರಾಮನಾಟ್ಟಂ" ನಡುವೆ ಇರುವ ಸಂಬಂಧ ಬಹು ಗಾಢವಾದದ್ದು. "ರಾಮನಾಟ್ಟಂ" ಪರಿಷ್ಕರಣೆಯ ಫಲವೇ "ಕಥಕಳಿ"ಯಾಗಿದ್ದು ಯಕ್ಷಗಾನದೊಂದಗಿನ ಸಂಬಂಧ ಅಧ್ಯಯನ ಯೋಗ್ಯವಾಗಿದೆ. ಇವೆರಡೂ ದ್ರಾವಿಡ ಮೂಲದ ಸಾಂಪ್ರದಾಯಿಕ ಕಲೆಗಳು. 1980ರಲ್ಲಿ ಪ್ರಕಟವಾದ "ಯಕ್ಷಗಾನ ಮಕರಂದ"ದಲ್ಲಿ (ಪೊಳಲಿ ಶಂಕರನಾರಾಯಣಶಾಸ್ತ್ರಿ, ಸಂಸ್ಮರಣ ಗ್ರಂಥ, ಪ್ರ.ಸಂಪಾದಕರು ಮುಳಿಯ ಮಹಾಬಲಭಟ್ಟ) ಶ್ರೀ ವೆಂಕಟರಾಜ ಪುಣಿಂಚತ್ತಾಯರು, "ಕಥಕ್ಕಳಿ ಯಕ್ಷಗಾನ ಕೇಳಿಕೆ" ಎಂಬ ದೀರ್ಘ ಲೇಖನ (ಪುಟ 484–501) ಬರೆದಿದ್ದು ಈ ಮೂರೂ ಕಲೆಗಳ ನಡುವೆ ಇರುವ ಸಂಬಂಧಗಳ ಬಗ್ಗೆ ಗಮನ ಹರಿಸಿದ್ದಾರೆ. ಕೇಳಿಕೆಯು ತೆಲುಗು ಮೂಲದ, ಯಕ್ಷಗಾನವು ಕನ್ನಡ ಮೂಲದ, ಕಥಕ್ಕಳಿಯು ಮಲಯಾಳಂ ಮೂಲದ ಕಲೆಗಳಾಗಿದ್ದು ಈ ಮೂರೂ ಕಲೆಗಳ ಮೂಲ ಉಗಮ ಒಂದೇ ಎಂಬ ನಿಲುವಿಗೆ ಬರುತ್ತಾರೆ. ಇಲ್ಲಿ ಅವರು ಯಕ್ಷಗಾನ ಹಾಗೂ ಕಥಕಳಿಯಲ್ಲಿ ಸಾಮಾನ್ಯವಾಗಿರುವ ಅಂಶಗಳನ್ನು ವಿವರಿಸುತ್ತಾರೆ. ಕಾಲದ ಪರಿಧಿಯಲ್ಲಿ "ಕಥಕ್ಕಳಿ" ಗಳಿಸಿಕೊಂಡ ಬದಲಾವಣೆಗಳನ್ನು ತಿಳಿಸಿ ಅದಕ್ಕೆ ಕಾರಣರಾದವರ ಕೊಡುಗೆ ಚರ್ಚಿಸಿದ್ದಾರೆ. ಕೇಳಿಕೆಗೆ ಹೋಲಿಸಿದರೆ ಯಕ್ಷಗಾನದಲ್ಲೂ ಕೆಲವೊಂದು ಬದಲಾವಣೆಯಾಗಿದೆ ಎಂದು ತಿಳಿಸಿರುತ್ತಾರೆ. ಕೇಳಿಕೆ ಮಾತ್ರ ಇನ್ನೂ ಹೆಚ್ಚು ಮೂಲ ರೂಪದಲ್ಲಿದೆ ಎಂಬುವುದು ಈ ಲೇಖನದಿಂದ ತಿಳಿದು ಬರುತ್ತದೆ. ಹೀಗೆ

ಪುಣಿಂಚತ್ತಾಯರು ಸೂಚಿಸಿರುವ ವಿಚಾರಗಳು ಪ್ರೌಢಪ್ರಬಂಧಕ್ಕೆ ವಸ್ತುವಾಗಬಲ್ಲದು ಎಂಬುವುದು ಗಮನಾರ್ಹ. ಇದೂ ಅಲ್ಲದೆ ಕೆಲವು ಬೇರೆ ವಿದ್ವಾಂಸರು ಕೂಡ ರಾಮನಾಟ್ಟಂ, ಕೃಷ್ಣನಾಟ್ಟಂ ಕಥಕ್ಕಳಿ ಕುರಿತು ಕನ್ನಡದಲ್ಲಿ ಲೇಖನಗಳನ್ನು ಬರೆದಿದ್ದು ಯಕ್ಷಗಾನದೊಂದಿಗಿನ ತೌಲನಿಕ ಅಧ್ಯಯನಕ್ಕೆ ಇದು ಯೋಗ್ಯ ವಿಚಾರ ಎಂಬುವುದನ್ನು ತಿಳಿಸಿದ್ದರು.

ಈ ಎಲ್ಲಾ ಹಿನ್ನೆಲೆಯಲ್ಲಿ ಈಚೆಗೆ ಪ್ರಕಟಗೊಂಡ ಕೃತಿ ಡಾ.ಮಹಾಲಿಂಗೇಶ್ವರ ಶರ್ಮ ಕುಳಮರ್ವರವರ "ಯಕ್ಷಗಾನ ಮತ್ತು ಕಥಕಳಿ" ತೌಲನಿಕ ಅಧ್ಯಯನ ಕುರಿತು ಚರ್ಚಿಸಬೇಕಾಗಿದೆ. ಈ ಕೃತಿಯ ಮೂಲಕ ಈ ಎರಡೂ ಸಾಂಪ್ರದಾಯಿಕ ಕಲೆಗಳ ನಡುವಿನ ಕೊಳುಕೊಡೆ ಸಾಮ್ಯ ವೈಷಮ್ಯಗಳನ್ನು ಅರಿಯಬೇಕಾಗಿದೆ. ಡಾ. ಮಹಾಲಿಂಗೇಶ್ವರ ಶರ್ಮ ಕುಳಮರ್ವರು (1954-2014) ನಾಲ್ಕು ದಶಕಗಳ ಕೆಳಗೆ ಈ ಎರಡೂ ಕಲೆಗಳ ಕುರಿತು ತಲಸ್ಪರ್ಶಿ ಅಧ್ಯಯನ ನಡೆಸಿ ಕ್ಷೇತ್ರಕಾರ್ಯ ಕೈಗೊಂಡು 1989ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪ್ರೌಢ ಪ್ರಬಂಧವನ್ನು ಸಲ್ಲಿಸಿ ಪಿ.ಹೆಚ್.ಡಿ. ಪದವಿ ಪಡೆದವರು, ಮೊದಲಿಗೆ ಡಾ.ಗುಂಡ್ಮಿ ಚಂದ್ರಶೇಖರ ಐತಾಳರ ಮಾರ್ಗದರ್ಶನದಲ್ಲಿ ಅಧ್ಯಯನ ನಡೆಸಿದರು. ಅವರ ಅಕಾಲಿಕ ನಿಧನದಿಂದ ಡಾ.ಕೆ.ಸುಬ್ರಹ್ಮಣ್ಯಭಟ್ಟರ ಮಾರ್ಗದರ್ಶನದಲ್ಲಿ ಅಧ್ಯಯನ ನಡೆಸಿ ಡಾಕ್ಟರೇಟ್ ಪದವಿ ಗಳಿಸಿಕೊಂಡರು. ಕೇರಳದ ಕೊಡಂಕುಯಿ, ಪೈವಳಿಕೆ, ಕುಂಬ್ಳೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಅಧ್ಯಾಪಕರಾಗಿ ಸೇವೆಸಲ್ಲಿಸಿ ಕೊನೆಯಲ್ಲಿ ಮುಳ್ಳೇರಿಯಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ 2014ರಲ್ಲಿ ನಿವೃತ್ತಿ ಹೊಂದಿದರು. ಈ ಪ್ರೌಢ ಪ್ರಬಂಧ ಅವರ ಜೀವಿತಕಾಲದಲ್ಲಿ ಪ್ರಕಟಗೊಳ್ಳುವ ಭಾಗ್ಯ ಪಡೆದಿರಲಿಲ್ಲ. ಅವರ ಕಾಲಾನಂತರ (2017)ರಲ್ಲಿ ಇದೀಗ ರಾಮಕುಂಜದ ರಾಮಕುಂಜೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರು, ಯಕ್ಷಗಾನ ಕಲಾವಿದರು, ಸಾಹಿತಿಗಳು ಆಗಿರುವ ಶ್ರೀಗಣರಾಜ ಕುಂಬ್ಳೆಯವರು ಈ ಕೃತಿಯನ್ನು ಸಂಪಾದಿಸಿದ್ದಾರೆ. ಇದನ್ನು ತುಮಕೂರಿನ ಅಂಕೂರ್ ಮೀಡಿಯಾ ಪಬ್ಲಿಕೇಷನ್‌ರವರು ಪ್ರಕಟಿಸಿದ್ದಾರೆ. ಪ್ರಕಾಶನದ ಪರವಾಗಿ ಯಕ್ಷಗಾನ ಕಲಾವಿದೆ, ಸಾಹಿತಿ ಹಾಗೂ ಸಂಶೋಧಕಿಯಾಗಿರುವ ಆರತಿ ಪಟ್ರಮೆಯವರು "ಸಾಮಾನ್ಯ ಓದುಗರಿಗೆ ಆಪ್ತವಾಗಬಲ್ಲ ಯಕ್ಷಗಾನ ಕಥಕಳಿಗೆ ಸಂಬಂಧಿಸಿದ ಅನೇಕ ಕೌತುಕಗಳಿಗೆ ಉತ್ತರ ಒದಗಿಸಬಲ್ಲ ಕೃತಿ" ಎಂದಿದ್ದಾರೆ. (ಪುಟ 10) ಸಂಪಾದಕರಾದ ಶ್ರೀ ಗಣರಾಜಕುಂಬ್ಳೆ, ರಾಮಕುಂಜ "ಈ ಸಂಶೋಧನಾ ಕೃತಿಯು ತುಂಬಾ ಮೌಲೀಕವಾದ ಕಲೆಗಳ ಐತಿಹಾಸಿಕ ದಾಖಲೆಗಳನ್ನು ಶೋಧಿಸುತ್ತದೆ, ಅನೇಕ ಮಾಹಿತಿಗಳನ್ನು ಒದಗಿಸುತ್ತದೆ" ಎಂದು ಕೈವಾರಿಸಿದ್ದಾರೆ. ಏನೇ ಆಗಲಿ ಇವರಿಬ್ಬರ ಪ್ರಯತ್ನದಿಂದಾಗಿ ಒಂದು ಮೌಲಿಕ ವಿಚಾರಗಳನ್ನು

ತಿಳಿಸುವ ಅಧ್ಯಯನ ಶೀಲ ಕೃತಿಯೊಂದು ವಿಶ್ವವಿದ್ಯಾಲಯದ ದಾಖಲೆಗಳಲ್ಲಿ ಬಂಧಿಯಾಗುವುದನ್ನು ತಪ್ಪಿಸಿ, ಸಾರಸ್ವತ ಲೋಕದ ಮುಂದೆ ತಂದಿರಿಸಿರುವುದಕ್ಕೆ ಇಬ್ಬರೂ ಅಭಿನಂದನಾರ್ಹರಾಗಿದ್ದಾರೆ.

ಇಲ್ಲಿ ಡಾ. ಮಹಾಲಿಂಗೇಶ್ವರ ಶರ್ಮರಿಗೆ ಇರುವ ಒಂದು ಅನುಕೂಲವೆಂದರೆ ಮೂಲತಃ ಅವರು ಕನ್ನಡಿಗರು. ಅವರು ಸ್ನಾತಕೋತ್ತರ ಪದವಿ ಪಡೆದಿದ್ದು ಕನ್ನಡದಲ್ಲಿ ಪಿ.ಹೆಚ್.ಡಿ. ಮಾಡಿರುವುದು ಕನ್ನಡದಲ್ಲೇ ಮೂವತ್ತೆಂಟು ವರ್ಷಗಳ ವೃತ್ತಿ ಜೀವನ ನಡೆಸಿರುವುದು ಕೇರಳದ ಪ್ರೌಢಶಾಲೆಗಳಲ್ಲಿ ಹೀಗಾಗಿ ಮಲಯಾಳಂ ಹಾಗೂ ಕನ್ನಡ ಭಾಷೆಗಳ ಪರಿಣತಿಯುಳ್ಳವರು ಮಾತ್ರವಲ್ಲದೇ ಕರ್ನಾಟಕ ಹಾಗೂ ಕೇರಳ ಎರಡರ ಸಾಂಸ್ಕೃತಿಕ ಒಳನೋಟ ಹೊಂದಿರುವವರಾಗಿದ್ದಾರೆ. ಆದುದರಿಂದ ಯಕ್ಷಗಾನ ಹಾಗೂ ಕಥಕಳಿ ಮೇಲೆ ಅಧ್ಯಯನ ಮಾಡಲು ಅರ್ಹರಾಗಿದ್ದಾರೆ. ಈ ಎರಡೂ ಕಲೆಗಳ ಒಡನಾಟ ಇರುವುದಲ್ಲದೇ ಕ್ಷೇತ್ರಕಾರ್ಯದಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಳ್ಳುವಾಗ ಸೂಕ್ಷ್ಮ ಗ್ರಹಿಕೆ ಹೊಂದಲು ಮೇಲಿನ ಅಂಶಗಳು ಸಹಾಯಕವಾದವು. ಈ ಕೃತಿಯ ಒಂಭತ್ತು ಅಧ್ಯಾಯಗಳಲ್ಲಿ ತೆಂಕುತಿಟ್ಟು ಯಕ್ಷಗಾನ ಹಾಗೂ ಕಥಕಳಿಗಳ ನಡುವಿರುವ ಸಂಬಂಧ, ಕೊಳುಕೊಡೆ, ವಿಕಾಸ, ಮುಮ್ಮೇಳ, ಹಿಮ್ಮೇಳ, ಪೂರ್ವರಂಗ, ಸಾಹಿತ್ಯ, ವೇಷಭೂಷಣ, ತರಬೇತಿ, ಈಗಿನ ಪ್ರವೃತ್ತಿಗಳ ಬಗೆಗಳಿಗೆಲ್ಲಾ ತಳಸ್ಪರ್ಶಿ ಅಧ್ಯಯನ ಮಾಡಿದ್ದಾರೆ.

ಪ್ರವೇಶ ಎನ್ನುವ ಮೊದಲ ಅಧ್ಯಾಯದಲ್ಲಿ ಡಾ. ಕುಳಮರ್ವರು ಯಕ್ಷಗಾನ ಹಾಗೂ ಕಥಕಳಿಗಳ ಸ್ಥೂಲ ಸ್ವರೂಪವನ್ನು ವಿವರಿಸಿದ್ದಾರೆ. ಚೌಕಿಯ ಬಗ್ಗೆ, ರಂಗಸ್ಥಳದ ಬಗ್ಗೆ ಪ್ರದರ್ಶನದ ಪೂರ್ವಭಾವಿಯಾಗಿ ನಡೆಯುವ ಆಚರಣೆಗಳ ಬಗ್ಗೆ ತಿಳಿಸಿ ಇವುಗಳಲ್ಲಿ ಅಡಗಿರುವ ಸಾಮ್ಯವನ್ನು, ಅದಕ್ಕಿರುವ ಹಿನ್ನೆಲೆಯನ್ನು ಸಂಶೋಧನಾತ್ಮಕವಾಗಿ ತಿಳಿಸುತ್ತಾರೆ. ಕೇರಳ ಹಾಗೂ ದ.ಕನ್ನಡ ಜಿಲ್ಲೆಗಳ ಹೆಚ್ಚಿನ ದೇವಸ್ಥಾನಗಳು ಆಗಮೋಕ್ತವಾಗಿ ನಿರ್ಮಾಣಗೊಂಡಿವೆ. ತುಳುನಾಡಿನಲ್ಲಿ ದೇವಸ್ಥಾನಗಳು ಯಕ್ಷಗಾನಕ್ಕೆ ಆಶ್ರಯಕೊಟ್ಟಂತೆ ಕೇರಳದಲ್ಲೂ ಕೋಡಿಯಟ್ಟಂ, ಕೃಷ್ಣನಾಟ್ಟಂ, ರಾಮನಾಟ್ಟಂಗಳಿಗೆ ಅಲ್ಲಿನ ದೇವಸ್ಥಾನಗಳು ಆಶ್ರಯ ಕೊಟ್ಟಿವೆ. ರಾಮನಾಟ್ಟಂ ಮುಂದುವರಿಕೆಯಾಗಿ ರೂಪುಗೊಂಡ ಕಥಕಳಿ ದೇವಸ್ಥಾನದ ಹೊರಗೆ ರಾಜಾಶ್ರಯದಲ್ಲಿ ಬೆಳೆದ ಕಲೆ. ರಾಜರು ತಮ್ಮ ಕೊಟ್ಟಾರಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸುತ್ತಾರೆ. ಅಲ್ಲಿನ ಕಲಾವಿದರು ಯಕ್ಷಗಾನದ ಕಲಾವಿದರಂತೆ ಮೇಳದೊಂದಿಗೆ ತಿರುಗಾಟ ನಡೆಸಬೇಕಾದ ಅಗತ್ಯವಿಲ್ಲ. ಆಶ್ರಯದಾತರು ತಿಳಿಸಿದ್ದಲ್ಲಿ ಹೋಗಿ ಕಲಾ ಪ್ರದರ್ಶನ ನೀಡಿದರೆ ಆಯಿತು. ಕಥಕಳಿಯುಲ್ಲೂ "ಕೇಳಿ" ನುಡಿಸುವ ಕಾರ್ಯಕ್ರಮವಿರುತ್ತದೆ. ಚೌಕಿಯನ್ನು "ಅಣಿಯಾರ" ಎಂದು ಕರೆಯಲ್ಪಡುತ್ತದೆ.

ಯಕ್ಷಗಾನದಲ್ಲಿ ಚೌಕಿಗೆ ಮಹತ್ವದ ಸ್ಥಾನವಿದೆ. ಅಲ್ಲಿ ಮೇಳದ ದೇವರು ಇದ್ದು ಧಾರ್ಮಿಕ ವಿಧಿ ವಿಧಾನಗಳಿವೆ. ಕಥಕಳಿಯಲ್ಲಿ ವೇಷ ಬರೆದುಕೊಳ್ಳಲು ಮಾತ್ರ "ಅಣಿಯಾರ"ದ ಸ್ಥಾನ. ಯಕ್ಷಗಾನದ ಪ್ರದರ್ಶನ ಚೌಕಿಯಲ್ಲಿ ಪ್ರಾರಂಭಗೊಂಡು ಪೂಜೆಯ ನಂತರ ಭಾಗವತರು ಹಾಗೂ ಹಿಮ್ಮೇಳದವರು ದೀವಿಟಿಗೆಯೊಂದಿಗೆ ಕೋಡಂಗಿಯ ಜೊತೆಯಲ್ಲಿ ರಂಗಸ್ಥಳಕ್ಕೆ ಬರುತ್ತಾರೆ. ಅದೇ ರೀತಿ ಆಟ ಮುಗಿಯುವುದೂ ಕೂಡ ಚೌಕಿಯಲ್ಲೇ ಆಗಿರುತ್ತದೆ. ರಂಗದಿಂದ ಮಂಗಳ ಪದ ಹಾಡುತ್ತಾ ಹಿಮ್ಮೇಳದವರು ಚೌಕಿಯಲ್ಲಿನ ದೇವರನ್ನು ಸ್ತುತಿಸುತ್ತಿರುತ್ತಾರೆ. ಆರತಿ ನಂತರ ಪ್ರದರ್ಶನ ಮುಕ್ತಾಯಗೊಳ್ಳುತ್ತದೆ. ಕಥಕಳಿಯಲ್ಲಿ ಪ್ರದರ್ಶನ ಪ್ರಾರಂಭಗೊಳ್ಳುವುದು ರಂಗದಲ್ಲೇ ಮುಕ್ತಾಗೊಳ್ಳುವುದು, ರಂಗದಲ್ಲೆ. ಡಾ.ಕುಳಮರ್ವರು ಎರಡೂ ಕಲೆಗಳ ಚೌಕಿಯನ್ನು ರೇಖಾ ಚಿತ್ರದ ಮೂಲಕ ನೀಡಿ ಪಾತ್ರಧಾರಿಗಳ ಸ್ಥಾನ ಎಲ್ಲೆಲ್ಲಿ ಇರುತ್ತದೆ ಎಂಬುವುದನ್ನು ತಿಳಿಸಿಕೊಟ್ಟಿದ್ದಾರೆ.

ಕಥಕಳಿಯಲ್ಲಿ ಯಕ್ಷಗಾನದಷ್ಟು ವಿಸ್ತಾರವಾದ ಪೂರ್ವರಂಗ ಇಲ್ಲ. ಎನ್ನುವ ಇವರು ಅಲ್ಲಿ "ಕೇಳಿ"ಯ ನಂತರ ಬಾಲವೇಷಧಾರಿಗಳ ಕುಣಿತ ಮಾತ್ರವಿದ್ದು ಮುಂದೆ "ತೊಡೆಯಂ" ಎನ್ನುವ ದೇವತೆಗಳ ಸ್ತುತಿ ಪರ ಹಾಡುಗಳನ್ನು ಭಾಗವತನು (ಪುನ್ನಾನಿ) ಹಾಡುತ್ತಾನೆ. ಮುಂದೆ ಪುರಪಾಡು (ಒಡ್ಡೋಲಗ) ನಡೆಯುತ್ತದೆ. ನಾಲ್ಕು ಹಂತಗಳಲ್ಲಿ ಪಾತ್ರಧಾರಿ ತನ್ನ ನಟನಾ ಸಾಮರ್ಥ್ಯ ತೋರಿಸುತ್ತಾನೆ. ಸುಮಾರು ಅರ್ಧ ಗಂಟೆಗಳ ಕಾಲ ತೆರೆಯ ಮರೆಯಲ್ಲಿ ಈ ಕಾರ್ಯಕ್ರಮ ನಡೆಯುತ್ತದೆ. ಇದೇ ಸಂದರ್ಭದಲ್ಲಿ ಮುಂದೆ ಭಾಗವತ "ಮೇಳಪ್ಪದ" ಎನ್ನುವ ಸ್ತುತಿ ಪರಗೀತೆಗಳನ್ನು ಹಾಡುತ್ತಾನೆ. ಮುಂದೆ ಕಥೆ ಪ್ರಾರಂಭವಾಗುತ್ತದೆ. ಇಲ್ಲಿ ಇಬ್ಬರು ಭಾಗವತರಿದ್ದು ಎರಡನೇ ಭಾಗವತನನ್ನು "ಶಿಂಕಿಡಿ" ಎನ್ನುತ್ತಾರೆ.

ಡಾ. ಮಹಾಲಿಂಗೇಶ್ವರ ಶರ್ಮರು ಈ ಎರಡೂ ಕಲೆಗಳ ಉಗಮ ವಿಕಾಸದ ಕುರಿತು ಚರ್ಚೆಯನ್ನು ಎರಡನೆಯ ಅಧ್ಯಾಯದಲ್ಲಿ ನೀಡಿದ್ದಾರೆ. ಭಾರತೀಯ ರಂಗಭೂಮಿಯ ಉಗಮದಿಂದ ಪ್ರಾರಂಭಿಸಿ ಕರ್ನಾಟಕದ ಸಾಂಪ್ರದಾಯಿಕ ರಂಗಭೂಮಿಯ ಬಗ್ಗೆ ತಿಳಿಸಿ ಭರತನಾಟ್ಯ ಶಾಸ್ತ್ರದಲ್ಲಿ ಉಕ್ತವಾದ ಅನೇಕ ಸಂಗತಿಗಳನ್ನು ಓದುಗರಿಗೆ ವಿವರಿಸಿದ್ದಾರೆ.

ದೇವತಾರಾಧನೆಯ ಅಂಗವಾಗಿರುವ ನೃತ್ಯ ಸಂಪ್ರದಾಯಗಳು, ಯಕ್ಷಗಾನದ ಮೂಲದಲ್ಲಿ ಇದ್ದಿರಬೇಕೆಂದು ಊಹಿಸುತ್ತಾರೆ. ದೇವರ ನೃತ್ಯ, ನಾಗ ನೃತ್ಯ, ಭೂತ ನೃತ್ಯಗಳನ್ನು ಹಾಗೂ ಭೂತಕೋಲದಲ್ಲಿನ ಮುಖ್ಯ ವರ್ಣಿಕೆಯನ್ನು ವೇಷಭೂಷಣಗಳನ್ನು ವಿವರಿಸಿರುವ ಇವರು, ಇವೆಲ್ಲದರ ಪ್ರಭಾವ ಯಕ್ಷಗಾನದ ಮೇಲಾಗಿರಬೇಕು ಎನ್ನುತ್ತಾರೆ. ಕೇರಳದ "ಕೊಡಿಯಾಟ್ಟಂ" ಕಲೆಗೆ 1500 ವರ್ಷಗಳ

ಇತಿಹಾಸವಿದೆ. ಅಲ್ಲಿನ ದೇವಾಲಯಗಳ "ಕೊತ್ತಂಬಲ" ಎಂಬ ಸಭಾಗೃಹದ ಮಾದರಿಯ ಸ್ಥಳದಲ್ಲಿ ಅದನ್ನು ಪ್ರದರ್ಶಿಸುತ್ತಿದ್ದರು. ಮೊದಲಿಗೆ ಸಂಸ್ಕೃತ ಶ್ಲೋಕವನ್ನು ಆಧರಿಸಿ ಪ್ರದರ್ಶನ ನಡೆಯುತ್ತಿತ್ತು. ಮುದ್ರೆಗಳ ಮೂಲಕ ಅಭಿನಯಿಸುತ್ತಾ ಮುಖವರ್ಣಿಕೆ ಹಾಗೂ ಆಕರ್ಷಕ ವೇಷಭೂಷಣಗಳಿಂದ ಜನರನ್ನು ರಂಜಿಸುತ್ತಿದ್ದರು. ಅದರ ಮುಂದುವರಿದ ಭಾಗವಾದ "ಚಾಕ್ಯಾರಕೂತ್" ಕೂಡಾ ಜನಾಕರ್ಷಣೆಯ ಕಲೆಯಾಗಿತ್ತು. ಇದರೊಂದಿಗೆ ಕೇರಳದಲ್ಲಿ ನೃತ್ಯ ಪ್ರಧಾನವಾದ ಅಷ್ಟಪದಿಯೂ ಬಳಕೆಗೆ ಬಂದಿತ್ತು. ಹದಿನಾರನೇ ಶತಮಾನದಲ್ಲಿ ಕಲ್ಲಿಕೋಟೆ ರಾಜನಾಗಿದ್ದ ಮಾನವೇದ ಸಾಮೂದರಿ ಕೃಷ್ಣಲೀಲಾ ವಿನೋದವನ್ನು ತೋರಿಸುವ "ಕೃಷ್ಣನಾಟ್ಟಂ" ಬಳಕೆಗೆ ತಂದನು. ಇದರಲ್ಲಿ ಕೃಷ್ಣಾವತಾರದ ಕಥೆಗಳನ್ನು ಪ್ರಸಂಗಗಳಾಗಿ ವಿಂಗಡಿಸಿ ಪ್ರದರ್ಶಿಸುತ್ತಿದ್ದು ಅಭಿನಯ, ನರ್ತನ, ಹಾಡುಗಾರಿಕೆ, ವೇಷಭೂಷಣ, ಮುಖವರ್ಣಿಕೆ, ನಾವೀನ್ಯತೆಯಿಂದ ಇದು ಬಹುಬೇಗ ಜನಪ್ರಿಯವಾಯಿತು ಎನ್ನುತ್ತಾರೆ.

ಕೇರಳದಲ್ಲಿ ಒಂದು ಕಲೆಯಿಂದ ಇನ್ನೊಂದು ಕಲೆ ಜನ್ಮ ತಾಳಿದ ಬಗೆಯನ್ನು ಮತ್ತು ಅವು ಬಹು ಬೇಗ ಪ್ರಚಾರಕ್ಕೆ ಬಂದ ಬಗೆಯನ್ನು ಲೇಖಕರು ಬಹು ಸೊಗಸಾಗಿ ವಿವರಿಸಿದ್ದಾರೆ. ದಕ್ಷಿಣ ಕೇರಳದ ಕೊಟ್ಟಾರಕ ದೊರೆಯು "ರಾಮನಾಟ್ಟಂ"ನ ಇನ್ನೊಂದು ಬಗೆಯನ್ನು "ಕೃಷ್ಣನಾಟ್ಟಂ" ಗಿಂತ ಭಿನ್ನವಾಗಿ ಸೃಷ್ಟಿಸಿದ್ದನು. ರಾಮಾಯಣದ ಕತೆಗಳು ಇಲ್ಲಿನ ಕಥನಗಳಾಗಿವೆ. ಈ ರಾಮನಾಟ್ಟಂನ ಪರಿಷ್ಕರಣೆಯ ಫಲವೇ "ಕಥಕಳಿ" ಎಂದು ತಿಳಿಸಿರುವ ಡಾ.ಕುಳಮರ್ವರು ಇಲ್ಲಿ ಮೂರು ಸಂಪ್ರದಾಯಗಳು ಮುಪ್ಪುರಿಗೊಂಡ ಬಗೆಯನ್ನು ಸ್ವಾರಸ್ಯಕರವಾಗಿ ವಿವರಿಸಿದ್ದಾರೆ. ಮೊದಲಿಗೆ ವೆಟ್ಟತ್ ತಂಬೂರಾನ್ ಎನ್ನುವವನು ರಾಮನಾಟ್ಟಂನ ವೇಷಭೂಷಣಗಳಲ್ಲಿ ಪರಿಷ್ಕರಣೆ ತಂದನು. ಚಂಡೆಯ ಬಳಕೆಗೆ ಆದ್ಯತೆ ಕೊಟ್ಟವನು ಈತನೇ. ಮುದ್ರೆಗಳ ಬಳಕೆಯನ್ನು ಹೆಚ್ಚಿಸಿದನು. ಮುಂದೆ ಬಂದ ಕಲ್ಲಟ್ಟಿ ಕೊಟ್ಟನ್ ಇನ್ನಷ್ಟು ಪರಿಷ್ಕರಣೆ ಮಾಡಿದನು. ರಾಮಾಯಣದ ಕಥೆಗಳ ಜೊತೆಗೆ ಮಹಾಭಾರತದಿಂದ ಆಯ್ದ ಕತೆಗಳನ್ನು ಆರಿಸಿಕೊಂಡನು. ಕಥಕಳಿಯನ್ನು ಶಾಸ್ತ್ರೀಯ ಕಲೆಯಾಗಿ ಪರಿಷ್ಕರಿಸಿದ ಕೀರ್ತಿ ಮುಂದೆ ಬಂದ ಕಪ್ಲಿಂಗಾಡ್ ನಂಬೂದಿರಿಗೆ ಸಲ್ಲುತ್ತದೆ. ಈತ ದೊಡ್ಡ ಕಲಾಕಾರನಾಗಿದ್ದು ವೇಷಭೂಷಣ ನೃತ್ಯ, ಅಭಿನಯಗಳಲ್ಲಿ ಶಾಸ್ತ್ರೀಯ ಅಂಶಗಳನ್ನು ಬಳಕೆಗೆ ತಂದನು. ಪ್ರದರ್ಶನಗಳಲ್ಲಿ ವಿವಿಧ ಘಟ್ಟಗಳನ್ನು ವ್ಯವಸ್ಥೆ ಮಾಡಿದನು. ಇದರ ಫಲವಾಗಿ ಅಲ್ಲಿ ತೋಡೆಯಂ, ಪುರಪ್ಪಾಡು, ಮೇಳಪ್ಪದಂಗಳು ಚಾಲ್ತಿಗೆ ಬಂದವು. ಎಲ್ಲಾ ವಿಚಾರಗಳಲ್ಲಿ ನಿರ್ದಿಷ್ಟತೆ ಬಂದಿತು.. ಯಕ್ಷಗಾನಗಳಲ್ಲಿ ತೆಂಕು, ಬಡಗುತಿಟ್ಟುಗಳಿರುವಂತೆ ಕಥಕಳಿಯಲ್ಲೂ ಮೂರು ಸಂಪ್ರದಾಯಗಳಿವೆ. ವೆಟ್ಟತ್ ಸಂಪ್ರದಾಯ, ಕಪ್ಲಿಂಗಾಡ್ ಸಂಪ್ರದಾಯ ಹಾಗೂ ಕಲ್ಲಟ್ಟಿಕೊಟ್ಟನ್ ಸಂಪ್ರದಾಯಗಳು

ಬೇರೆ ಬೇರೆಯಾಗಿಯೇ ಬಳಕೆಯಲ್ಲಿದ್ದವು. ರಾಮನಾಟ್ಟಂಗೆ 1920ರ ಸುಮಾರಿಗೆ ಕಥಕಳಿ ಎಂಬ ಹೆಸರೇ ಖಾಯಂ ಆಯಿತು. ಇಪ್ಪತ್ತನೇ ಶತಮಾನದ ಆರಂಭದಲ್ಲಿ ರಾಷ್ಟ್ರಕವಿಯಾಗಿ ಖ್ಯಾತಿಗೊಂಡಿರುವ ವಲ್ಲತೋಳ್ ನಾರಾಯಣ ಮೆನನ್ ಈ ಕಲೆಯ ಪುನರ್ಜೀವನಕ್ಕೆ ಕಾರಣರಾದರು. ಶಾಸ್ತ್ರೀಯವಾದ ತರಬೇತಿ ಕ್ರಮವನ್ನು ವ್ಯವಸ್ಥೆಗೊಳಿಸಿದರು. ಅನೇಕ ಕಟ್ಟುಪಾಡುಗಳನ್ನು ಬಳಕೆಗೆ ತಂದರು. "ಕೇರಳ ಕಲಾ ಮಂಡಲಂ" ಎಂಬ ಸಂಸ್ಥೆಯ ಮೂಲಕ ಶಾಸ್ತ್ರೀಯವಾದ ತರಬೇತಿ ಕಲಾವಿದರಿಗೆ ಲಭಿಸುವಂತೆ ನೋಡಿಕೊಂಡರು. ಇವರ ಪರಿಶ್ರಮದ ಫಲವಾಗಿ ಕಥಕಳಿ ಇಂದು ಕೇರಳದ ಪ್ರಾತಿನಿಧಿಕ ಕಲೆಯಾಗಿ ವಿಶ್ವ ಮನ್ನಣೆ ಗಳಿಸಿದೆ. ಹೀಗೆ ಕಥಕಳಿ ಎಂಬ ಕಲೆಯು ಕಾಲದಿಂದ ಕಾಲಕ್ಕೆ ಪರಿವರ್ತನೆಗೊಂಡು ಬೆಳೆದು ಬಂದ ಬಗೆಯನ್ನು ಡಾ. ಕುಳಮರ್ವರು ಅಲ್ಲಲ್ಲಿ ಯಕ್ಷಗಾನದೊಂದಿಗೆ ಹೋಲಿಸಿ ಸಮಗ್ರ ಚಿತ್ರಣವನ್ನು ನೀಡಿದ್ದಾರೆ.

ಯಕ್ಷಗಾನ ಹಾಗೂ ಕಥಕಳಿಯ ಹಿಮ್ಮೇಳದ ಕುರಿತು ಡಾ.ಶರ್ಮರು ಸುದೀರ್ಘವಾಗಿ ಚರ್ಚಿಸಿದ್ದಾರೆ. ಕೇರಳದ ದೇವಾಲಯಗಳಲ್ಲಿನ ಹಾಡುಗಾರಿಕೆಯು ಸೋಪಾನ ರೀತಿಯಲ್ಲಿದ್ದು ಅದೇ ರಾಮನಾಟ್ಟಂ ಮತ್ತು ಕಥಕಳಿಗೆ ಬುನಾದಿಯಾಯಿತು ಎಂಬುದನ್ನು ಆಧಾರ ಸಹಿತ ತಿಳಿಸಿದ್ದಾರೆ. ಹಿಮ್ಮೇಳದ ವಾದ್ಯಗಳಲ್ಲಿ ಚಂಡೆಗೆ ಕಥಕಳಿಯಲ್ಲಿ ಹೆಚ್ಚಿನ ಸ್ಥಾನವಿದೆ. ತೆಂಕುತಿಟ್ಟಿನಲ್ಲಿ ಬಳಕೆಯಲ್ಲಿರುವ ಚಂಡೆ, ಜಾಗಟೆ ಹಾಗೂ ಚಕ್ರತಾಳ ಕಥಕಳಿ ಮೂಲದಿಂದಲೇ ಬಂದಿರಬೇಕು. ಬಡಗು, ಬಡಾಬಡಗು ತಿಟ್ಟುಗಳಲ್ಲಾಗಲಿ, ಯಕ್ಷಗಾನದ ಬೇರೆ ಪ್ರಕಾರಗಳಾದ ದೊಡ್ಡಾಟ, ಸಣ್ಣಾಟ, ಮೂಡಲಪಾಯಗಳಲ್ಲಿ ಹಿಂದೆ ಇವುಗಳು ಬಳಕೆಯಲ್ಲಿ ಇದ್ದಿರಲಿಲ್ಲ. ಒಂದು ಕಾಲದಲ್ಲಿ ಬಡಗಿನಲ್ಲಿ ಚಂಡೆ ಇದ್ದಿರಲಿಲ್ಲ. ಈಗಲೂ ಕೂಡ ದೊಡ್ಡಾಟ, ದಾಸರಾಟ, ಆಟ್ಟದಾಟಗಳಲ್ಲಿ ಚಂಡೆಯ ಬಳಕೆ ಇಲ್ಲ. ಇಲ್ಲೆಲ್ಲ ಮದ್ದಳೆ ವಾದಕನಿಗೆ ಹಿರಿಯ ಸ್ಥಾನವಿದೆ, ಸಣ್ಣಾಟ, ಮೂಡಲಪಾಯಗಳಲ್ಲಿ ಚಂಡೆಯ ಬಳಕೆ ಇಲ್ಲ. ಕೇರಳದ ದೇವಾಲಯಗಳಲ್ಲಿ ಚಂಡೆಯ ವಾದನಕ್ಕೆ ಆದ್ಯತೆ ಇದೆ. ಅದೇ ಕಥಕಳಿಗೆ ಬಂದಿದೆ. ಇನ್ನೂ ಯಕ್ಷಗಾನದಲ್ಲಿ ಭಾಗವತನೇ ಪ್ರಧಾನ ವ್ಯಕ್ತಿ. ಬಡಗು ತಿಟ್ಟಿನಲ್ಲಿ ಅವನದ್ದು ಮೊದಲನೇ ವೇಷ ಎಂದು ಭಾವಿಸುತ್ತಾರೆ. ರಂಗದ ಎಲ್ಲಾ ಹೊಣೆಗಾರಿಕೆ ಅವನದೇ. ಪಾತ್ರಗಳನ್ನು ರಂಗದಲ್ಲಿ ಕುಣಿಸುವವನು, ಸಾಹಿತ್ಯದ ಎಲ್ಲಾ ಆಂತರಿಕ ಅಂಶಗಳನ್ನು ಹಾಡಿನ ಮೂಲಕ ಕಲಾವಿದನಿಗೆ, ಆ ಮೂಲಕ ಪ್ರೇಕ್ಷಕರಿಗೆ ದಾಟಿಸುವವನು ಅವನೇ. ಆದರೇ ಕಥಕಳಿಯಲ್ಲಿ ಸಂಪೂರ್ಣ ದಿಗ್ದರ್ಶಕ ಚುಟ್ಟಿಕ್ಕಾರನ್ ಆಗಿರುತ್ತಾನೆ. ವೇಷಧಾರಿಗಳಿಗೆ ಚುಟ್ಟಿ ಬರೆಯುವಲ್ಲಿಂದ ಪ್ರಾರಂಭಿಸಿ ಪಾತ್ರದ ಮನೋಭೂಮಿಕೆ ವಿವರಿಸಿ, ಪಾತ್ರಗಳ ಪ್ರವೇಶ, ಕಥೆಯ ಓಟದ ನಿರ್ಧಾರ, ಎಲ್ಲಿ? ಹೇಗೆ? ಎಲ್ಲಾ

ಹೊಣೆಗಾರಿಕೆ ಅವನದೇ. ಡಾ.ಶರ್ಮರು ಅವನನ್ನು "ಕಥಕಳಿಯ ಬ್ರಹ್ಮ" ಎನ್ನುತ್ತಾರೆ. ಕಥಕಳಿಯಲ್ಲಿ ಚಂಡೆಗಾರನು ಪೊನ್ನಾನಿಯಷ್ಟೆ (ಭಾಗವತ) ಪ್ರಧಾನ ವ್ಯಕ್ತಿ ಡಾ.ಮಹಾಲಿಂಗೇಶ್ವರ ಶರ್ಮರು ಈ ಕೃತಿಯಲ್ಲಿ ಹೇಳಿರುವ "ಏನಿದ್ದರೂ ಜಾಗಟೆ ತೆಂಕಲಿನ ದೇವಾಲಯದಿಂದ, ಭೂತಾರಾಧನೆಯಿಂದ, ಕೃಷ್ಣನಾಟ್ಟಂ, ರಾಮನಾಟ್ಟಂ, ಕಥಕಳಿಯಿಂದ ಯಕ್ಷಗಾನಕ್ಕೆ ಬಂದಿತು ಎಂದು ಹೇಳಬಹುದು" (ಪುಟ 78) ಎಂಬುದು ಸತ್ಯಸಂಗತಿಯಾಗಿದೆ. ಮದ್ದಳೆ ಹಾಗೂ ಚಂಡೆಗಳ ರಚನಾ ಸ್ವರೂಪಗಳನ್ನು ಅಭ್ಯಾಸಿಸಿ ಈ ಕೃತಿಯಲ್ಲಿ ವಿವರಿಸಿದ್ದಾರೆ. ಕೃಷ್ಣನಾಟ್ಟಂನಲ್ಲಿ ಮದ್ದಳೆಯ ಬಳಕೆಯಿಲ್ಲ. ರಾಮನಾಟ್ಟಂನಲ್ಲಿ ಕಥಕಳಿಯಲ್ಲಿ ಮದ್ದಳೆ ಬಳಕೆಯಿದೆ. ರಾಮನಾಟ್ಟಂ, ಕೃಷ್ಣನಾಟ್ಟಂನ ನಂತರ ಬಂದಿರುವುದರಿಂದ ಮದ್ದಳೆಯು ಯಕ್ಷಗಾನದಿಂದ ಅಲ್ಲಿಗೆ ಹೋಗಿರಬೇಕು ಎಂದಿರುವುದು ಮಹತ್ವವೇ. ಹೀಗೆ ಈ ಎರಡೂ ಕಲೆಗಳಲ್ಲಿ ಕೂಡಾ ಕೊಡುಕೊಳುವಿಕೆ ನಡೆದಿದೆ ಎಂಬುವುದಕ್ಕೆ ಹಿಮ್ಮೇಳದ ವಾದ್ಯಗಳೇ ಸಾಕ್ಷಿ.

ಈ ಕೃತಿಯಲ್ಲಿರುವ ದೀರ್ಘ ಅಧ್ಯಾಯಗಳಲ್ಲಿ "ಪೂರ್ವರಂಗ" ವೂ ಒಂದು. ಇಲ್ಲಿ ಡಾ.ಕುಳಮರ್ವರು ಈ ಎರಡೂ ಕಲೆಗಳ ಕಥಾನಕದ ಮೊದಲಿಗೆ ಪ್ರದರ್ಶನಗಳುಳ್ಳ ಪೂರ್ವರಂಗದ ಕಾರ್ಯವಿಧಾನಗಳನ್ನು ತಿಳಿಸಿದ್ದಾರೆ. ಭರತನನಾಟ್ಯ ಶಾಸ್ತ್ರದಲ್ಲಿ ಬಂದಿರುವ ಅನೇಕ ಅಂಶಗಳು ಯಕ್ಷಗಾನ ಹಾಗೂ ಕಥಕಳಿಯ ಪೂರ್ವರಂಗದಲ್ಲಿ ಬಂದಿವೆ. ಪ್ರಯೋಗದಲ್ಲಿ ಸಣ್ಣಪುಟ್ಟ ಬದಲಾವಣೆಗಳಿವೆ. ಮೊದಲಿಗೆ ಲೇಖಕರು ಯಕ್ಷಗಾನದ ಸಭಾಲಕ್ಷಣ ಮತ್ತು ಪ್ರಸಂಗ ಪೀಠಿಕೆಯ ಕುರಿತು ವಿವರಗಳನ್ನು ನೀಡಿದ್ದಾರೆ. ಸಭಾಲಕ್ಷಣದಲ್ಲಿರುವ ಮೂರು ಮುಖ್ಯ ಅಂಶಗಳಾದ ಗೇಯಾಂಶ, ಶಾಸ್ತ್ರಾಂಶ ಮತ್ತು ನಾಟ್ಯಾಂಶಗಳ ಬಗ್ಗೆ ತಿಳಿಸಿ ಈ ಮೂರೂ ಬಗೆಗಳು ಕಥಕಳಿಯ ಪೂರ್ವರಂಗದಲ್ಲಿ ಹೇಗೆ ಬಂದಿದೆ? ಎಂಬುವುದನ್ನು ತಿಳಿಸಿದ್ದಾರೆ. ನಾಟ್ಯ ಶಾಸ್ತ್ರದ ರಚನೆಗಿಂತ ಮೊದಲೇ ಯಕ್ಷಗಾನದಂತಹ ಜಾನಪದ ಕಲೆಗಳು ಇದ್ದವು. ಅವುಗಳನ್ನು ಶಾಸ್ತ್ರೀಯ ಕಲೆಯಾಗಿ ಪರಿಗಣಿಸಿರುವುದಕ್ಕಾಗಿ ಮುಂದೆ ಎಷ್ಟೋ ನಾಟ್ಯ ಶಾಸ್ತ್ರದ ಪದ್ಯಗಳನ್ನು ಸೇರಿಸಿರಬೇಕೆಂದು ಸರಿಯಾಗಿಯೇ ಊಹಿಸಿದ್ದಾರೆ. ಸಭಾಲಕ್ಷಣದಲ್ಲಿ ಬಂದಿರುವ ಗದ್ಯಗಳು ಯಕ್ಷಗಾನದ ನಿಜ ಸ್ವರೂಪವನ್ನು, ಮೂಲ ಸ್ವರೂಪವನ್ನು ತಿಳಿಸುತ್ತದೆ ಎಂದು ಹೇಳಿ ಪಾರ್ತಿಸುಬ್ಬನಂತಹ ಮೇರುಕವಿ ಸಭಾಲಕ್ಷಣದ ರಚನೆಯಲ್ಲಿ ತನ್ನ ಪ್ರತಿಭೆಯನ್ನು ಮೆರೆದಿದ್ದಾನೆ. ಆತನ ಕೊಡುಗೆ ಅಪಾರ ಎಂದು ತಿಳಿಸುತ್ತಾರೆ. ಸಂಜೆ ನಡೆಯುವ "ತಾಳ ಮದ್ದಳೆ"ಯಿಂದ ಪ್ರಾರಂಭಿಸಿ, "ಒಡ್ಡೋಲಗ"ದವರಿಗೆ ನಡೆಯುವ ಹದಿನಾಲ್ಕು ಅಂಶಗಳನ್ನು ವಿವರಿಸಿ, ಇವೆಲ್ಲವೂ ಯಕ್ಷಗಾನದಲ್ಲಿ ಹೇಗೆ ಬಂದಿದೆ ಎಂಬುವುದನ್ನು ತಿಳಿಸಿಕೊಡುತ್ತಾರೆ. ಕಥಕಳಿಯು "ಕೇಳಿ"ಯಿಂದ ಪ್ರಾರಂಭಿಸಿ. "ಮೇಳಪ್ಪದಂ" ಎಂಬ ಏಳು ಅಂಶಗಳನ್ನು ಹೇಗೆ ಪೂರ್ವರಂಗದಲ್ಲಿ ಪ್ರಸ್ತುತಪಡಿಸುತ್ತದೆ

ಎಂಬುವುದನ್ನು ತಿಳಿಸಿದ್ದಾರೆ. ಕೇಳಿ, ವಿಳಕ, ಅರಂಗತ ಕೇಳಿ, (ಗಣಪತಿ ಕೌತುಕ ಇತ್ಯಾದಿ) ತೋಡೆಯಂ, ಮಂಗಳ ಶ್ಲೋಕ, ಪುರಪ್ಪಾಡ್, ಮೇಳಪ್ಪದಂ ಇವೇ ಆ ಏಳು ಅಂಶಗಳಾಗಿವೆ.

ಡಾ. ಮಹಾಲಿಂಗೇಶ್ವರ ಶರ್ಮ ಯಕ್ಷಗಾನ ನಿಂತಿರುವುದು ಸಂಗೀತ, ಸಾಹಿತ್ಯ, ನೃತ್ಯ, ವೇಷಗಾರಿಕೆ, ಅಭಿನಯ ಎಂಬ ಪಂಚಾಂಗದ ಮೇಲೆ ಎನ್ನುತ್ತಾರೆ. ಇಲ್ಲಿ ಈ ಐದೂ ಕಲೆಗಳ ಸಮಷ್ಟಿ ರೂಪ ಯಕ್ಷಗಾನ ಕಲೆಯಾಗಿದೆ ಎಂದು ತಿಳಿಸಿ, ಇವೆಲ್ಲವೂ ತಮ್ಮದೇ ಆದ ಅಸ್ಮಿತೆಯಿಂದ ಕೂಡಿವೆ ಎಂದು ತಿಳಿಸುತ್ತಾರೆ. ಯಕ್ಷಗಾನ ಸಂಗೀತಕ್ಕೆ, ಸಾಹಿತ್ಯಕ್ಕೆ ತನ್ನದೇ ಆದ ವೈಶಿಷ್ಟವಿದೆ ಎಂದು ವಿವರಿಸಿದ್ದಾರೆ. ಬೇರೆ ವಿದ್ವಾಂಸರು ಕೊಟ್ಟ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಕೊಟ್ಟಿದ್ದಾರೆ. ಇದೇ ರೀತಿ ನೃತ್ಯ ವಿಧಾನ, ಅಭಿನಯ ವಿಧಾನ, ಬಣ್ಣಗಾರಿಕೆ ಎಲ್ಲವೂ ಬೇರೆ ಕಲೆಗಳಿಗಿಂತ ಭಿನ್ನವಾಗಿವೆ. ಕಥಕಳಿಯಲ್ಲಿ ಆಶು ಸಾಹಿತ್ಯವಿರುವುದಿಲ್ಲ. ಆದುದರಿಂದ ಅಲ್ಲಿ ನಾಲ್ಕು ಅಂಗಗಳು ಪ್ರಧಾನವೆಂದು ತಿಳಿಸುತ್ತಾರೆ. ಅಭಿನಯ ಹಾಗೂ ಮುದ್ರೆಗಳು ಮಾತಿನ ಕಾರ್ಯವನ್ನು ನಿರ್ವಹಿಸುತ್ತವೆ. ಆದುದರಿಂದ ಕಥಕಳಿ ಭಿನ್ನವಾಗಿದೆ. ಹಾಗೂ ಅದರಿಂದಾಗಿಯೇ ಶಾಸ್ತ್ರೀಯವಾಗಿದೆ. ಕಥಕಳಿಯ ಸಂಗೀತದ ಮೇಲೆ ಕರ್ನಾಟಕ ಸಂಗೀತದ ಪ್ರಭಾವವಿದೆ. ಆದರೆ ಮೂಲತಃ ಆ ಸಂಗೀತ ಭಿನ್ನವಾಗಿದ್ದು ಸೋಪಾನ ರೀತಿಯ ಸ್ವತಂತ್ರ ಶೈಲಿ. ಡಾ.ಕುಳಮರ್ವರು ಮುಖವರ್ಣಿಕೆಯ ಬಗ್ಗೆ ಸಾಕಷ್ಟು ವಿವರ ತಿಳಿಸಿದ್ದಾರೆ. ಬಳಸುವ ವಸ್ತುಗಳನ್ನು ಮುಖ ವರ್ಣಿಕೆಯನ್ನು ಮಾಡಿಕೊಳ್ಳುವ ವಿಧಾನವನ್ನು ತೌಲನಿಕವಾಗಿ ವಿಮರ್ಶಿಸಿದ್ದಾರೆ. ಉಡುಗೆ, ತೊಡುಗೆಗಳ ಬಗ್ಗೆ ಲೇಖಕರು ನೀಡುವ ವಿವರಗಳಲ್ಲಿ ಅವರ ಕ್ಷೇತ್ರಕಾರ್ಯದ ಶ್ರಮವನ್ನು ಗಮನಿಸಬಹುದಾಗಿದೆ. ತೆಂಕುತಿಟ್ಟಿನ ವೇಷಗಾರಿಕೆಯ ಮೇಲೆ ಕಥಕಳಿ ಉಂಟುಮಾಡಿದ ಪ್ರಭಾವಗಳನ್ನು ಅದರಿಂದ ಆದ ಬದಲಾವಣೆಗಳನ್ನು ಸಮಗ್ರವಾಗಿ, ಸಾಧಾರವಾಗಿ ತಿಳಿಸಿಕೊಡುತ್ತಾರೆ. ಮುಖವರ್ಣಿಕೆಯ ವಿನ್ಯಾಸವನ್ನು ಅದರ ಹಿನ್ನೆಲೆಯನ್ನು ವಿವರಿಸುವಾಗ ಕಥಕಳಿಯಲ್ಲಿ ಕಾಲಕಾಲಕ್ಕೆ ಆದ ಮಾರ್ಪಾಡುಗಳನ್ನು ತಿಳಿಸಿ ಕೊಡುತ್ತಾರೆ. ಇದೇ ಬಗೆಯಾಗಿ ನಾಟ್ಯಾಂಶದ ವಿಚಾರದಲ್ಲಿ ಡಾ.ಶರ್ಮರು ಬಹಳಷ್ಟು ತುಲನಾತ್ಮಕ ಚರ್ಚೆ ಮಾಡುತ್ತಾರೆ. ಒಡ್ಡೋಲಗದ ನಡೆ, ಬೇರೆಬೇರೆ ಪಾತ್ರಗಳ ಹೆಜ್ಜೆಗಾರಿಕೆ, ಕುಣಿತ ವಿಧಾನಗಳನ್ನು ಪರಿಭಾವಿಸಿ ಕಥಕಳಿಯಲ್ಲಿ ಅವು ಬರುವ ಬಗೆಯನ್ನು ಪ್ರಸ್ತಾಪಿಸಿದ್ದಾರೆ.

ಪ್ರಸಂಗ ಸಾಹಿತ್ಯದ ಬಗ್ಗೆ ಒಂದು ಅಧ್ಯಾಯ ಇಲ್ಲಿ ಬಂದಿದ್ದು, ಹೆಚ್ಚು ಬಳಕೆಯಲ್ಲಿರುವ ಪ್ರಸಂಗಗಳು ಯಾವುವು? ಎಂಬುವುದನ್ನು ತಿಳಿಸಿಕೊಡುತ್ತಾರೆ. ರಾಮಾಯಣದ ಪ್ರಸಂಗಗಳನ್ನು ತೌಲನಿಕವಾಗಿ ಪರಿಶೀಲಿಸಿದ್ದಾರೆ. ಅದೇ ರೀತಿ

ಮಹಾಭಾರತ ಹಾಗೂ ಭಾಗವತ ಪ್ರಸಂಗಗಳು ಈ ಎರಡೂ ಕಲೆಗಳಲ್ಲಿ ಹೇಗೆ ಬಳಕೆಯಾಗುತ್ತವೆ ಎಂಬುವುದನ್ನು ತಿಳಿಸಿಕೊಡುತ್ತಾರೆ. ಮಹಾಭಾರತಕ್ಕೆ ಸಂಬಂಧಿಸಿದಂತೆ ಕಥಕಳಿಯಲ್ಲಿ ಬರುವ ಬಕವಧ, ಕಲ್ಯಾಣ ಸೌಗಂಧಿಕಾ, ನಿವಾತ ಕವಚ, ಕಿರ್ಮೀರ ವಧೆ, ಕಾಲಕೇಯ ವಧೆ, ನಳಚರಿತಂ ಮುಂತಾದುವು ಬಹಳ ಪ್ರಸಿದ್ಧಿ ಪಡೆದವುಗಳಾಗಿವೆ. ಅದೇ ರೀತಿಯಲ್ಲಿ ಭಾಗವತದಲ್ಲಿ ಕಾಳೀಯ ಮರ್ದನಂ, ರಾಸಕ್ರೀಡೆ, ಸ್ವಯಂವರಂ, ಬಾಣಯುದ್ಧಂ ಮುಂತಾದವು ಖ್ಯಾತಿಗೊಂಡ ಪ್ರಸಂಗಗಳಾಗಿವೆ. ಡಾ.ಕುಳಮರ್ವರು ಯಕ್ಷಗಾನ ಹಾಗೂ ಕಥಕಳಿಯಲ್ಲಿ ನೀಡುವ ತರಬೇತಿಗಳ ಬಗ್ಗೆ ಕೂಡ ಕೆಲವು ವಿವರಗಳನ್ನು ನೀಡಿದ್ದಾರೆ. ತ್ರಿಶೂರಿನಲ್ಲಿರುವ "ಕೇರಳ ಕಲಾ ಮಂಡಲಂ"ನಲ್ಲಿ ಕಥಕ್ಕಳಿಯ ವಿವಿಧ ಅಂಶಗಳ ಶಾಸ್ತ್ರೀಯವಾದ ಅಭ್ಯಾಸ ನಡೆಯುತ್ತಿದೆ. ಇದಕ್ಕೆ ಸರ್ಕಾರದ ಮಾನ್ಯತೆಯಿದೆ. ಭಾಗವತಿಕೆ ಆರು ವರ್ಷ, ನೃತ್ಯ ಅಭಿನಯಕ್ಕೆ ಆರುವರ್ಷ, ಚುಟ್ಟಿ ಚಂಡೆ, ಮದ್ದಲೆ ಹೀಗೆ ಎಲ್ಲಾ ಪ್ರಕಾರಗಳಲ್ಲೂ ಕೂಡ ಆರು ವರ್ಷಗಳ ಅಭ್ಯಾಸ ಕ್ರಮವಿದೆ. ಹನ್ನೆರಡು ವರ್ಷದೊಳಗಿನ ಬಾಲಕರನ್ನು ಮಾತ್ರ ಸೇರಿಸಿಕೊಳ್ಳುತ್ತಾರೆ. ಪ್ರತಿ ಅಂಗದ ಕಲಿಕೆಯ ವಿವರವನ್ನು ಡಾ.ಕುಳಮರ್ವರು ನೀಡಿದ್ದಾರೆ. ಇದನ್ನು ಗಮನಿಸಿದಾಗ ಯಕ್ಷಗಾನ ತರಬೇತಿ ಕೇಂದ್ರಗಳಲ್ಲಿ ನಡೆಯುತ್ತಿರುವ ತರಬೇತಿಗೆ ಬಹಳಷ್ಟು ಸುಧಾರಣೆ ಅಗತ್ಯ ಎನಿಸುತ್ತದೆ. ನಮ್ಮಲ್ಲಿ ಒಂದೆರಡು ವರ್ಷ ತರಬೇತಿ ಪಡೆದವರು ಮೇಳಕ್ಕೆ ಸೇರಿಸಿಕೊಳ್ಳುತ್ತಾರೆ. ಇದರಿಂದಾಗಿ ಅವರಿಗೆ ಸೂಕ್ತ, ಪ್ರೌಢ ತರಬೇತಿ ನಡೆದಿರುವುದಿಲ್ಲ. ಇದರಿಂದಾಗಿಯೇ ಇಂದು ರಂಗಸ್ಥಳದಲ್ಲಿ ಅನೇಕ ಅಪಸವ್ಯಗಳು ನಡೆಯುತ್ತಿವೆ. ಕಥಕಳಿಯಲ್ಲಿ "ಕಲಾ ಮಂಡಲಂ" ಅಲ್ಲದೇ ಬೇರೆಬೇರೆ ಕಡೆಗಳಲ್ಲೂ ಕೂಡಾ ಕಥಕಳಿ ಕಲಿಸಿಕೊಡುತ್ತಾರೆ. ಶಾಲೆಗಳಲ್ಲೂ ಕೂಡ ಮಕ್ಕಳಿಗೆ ಕಥಕಳಿಯ ತರಬೇತಿ ಕೆಲವೆಡೆ ಇದೆ. ಆದರೆ "ಕಲಾ ಮಂಡಲಂ" ನಿಂದ ತರಬೇತಿಗೊಂಡರೆ ವಿಶೇಷವಾದ ಮಾನ್ಯತೆ ಇದೆ. ಅಲ್ಲಿ ಪೂರ್ಣ ಕಲಾವಿದನೊಬ್ಬ ತಯಾರಿಯಾಗಿ ಹೊರ ಬರುತ್ತಾನೆ. ರಂಗದಲ್ಲಿ ಮಿಂಚುತ್ತಾನೆ. ಆದುದರಿಂದಲೇ "ಶಾಸ್ತ್ರೀಯ ಕಲೆ" ಎಂಬ ಪಟ್ಟ ಲಭಿಸಿದೆ.

ಲೇಖಕರು ಕೊನೆಯ ಅಧ್ಯಾಯದಲ್ಲಿ "ಆಧುನಿಕ ಪ್ರವೃತ್ತಿ" ಎಂಬ ಶೀರ್ಷಿಕೆಯಲ್ಲಿ ಈಚಿನ ವರ್ಷಗಳಲ್ಲಿ ಈ ಎರಡೂ ಕಲೆಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ. ಕಳೆದ ಎಪ್ಪತ್ತು ಎಂಭತ್ತು ವರ್ಷಗಳಲ್ಲಿ ಯಕ್ಷಗಾನ ರಂಗದಲ್ಲಿ ನಡೆದ ಅನೇಕ ಬದಲಾವಣೆಗಳನ್ನು ಅದರ ಹಿನ್ನಲೆಯನ್ನು ಸಮೀಕ್ಷಿಸಿದ್ದಾರೆ. ಹೆಚ್ಚಾಗಿ ತೆಂಕುತಿಟ್ಟಿನ ಯಕ್ಷಗಾನವನ್ನು ಡಾ.ಶರ್ಮರು ಕ್ಷೇತ್ರಕಾರ್ಯಕ್ಕೆ ಆರಿಸಿಕೊಂಡಿದ್ದಾರೆ. ಅದೇ ರೀತಿ ತಾಳ ಮದ್ದಳೆ ಬಗ್ಗೆ, ತುಳು ಪ್ರಸಂಗಗಳ ಬಗ್ಗೆ, ಡೇರೆ ಮೇಳಗಳ ಬಗ್ಗೆ ವಿವರಗಳಿವೆ. ಕಥಕಳಿಯಲ್ಲಿ ಕಾಲಕಾಲಕ್ಕೂ

ಆದ ಬದಲಾವಣೆ ತಿಳಿಸಿದ ಇವರು ಇಂದು ಕಥಕಳಿ ಸ್ಥಿತಿಯನ್ನು ತಿಳಿಸಿಕೊಡುತ್ತಾರೆ. ಹೀಗೆ ಈ ಅಧ್ಯಾಯದಲ್ಲೂ ಕೂಡ ಆಧುನಿಕ ಕಾಲಮಾನದಲ್ಲಿ ಈ ಎರಡೂ ಕಲೆಗಳು ತಮ್ಮ ಅಸ್ತಿತ್ವನ್ನು, ಅಸ್ಮಿತೆಯನ್ನು ಹೇಗೆ ಪ್ರಸ್ತುತ ಪಡಿಸಿಕೊಂಡಿವೆ ಎಂಬ ಅಂಶ ತಿಳಿಸಿಕೊಡುತ್ತಾರೆ.

ಕೊನೆಯ ಅಧ್ಯಾಯವಾದ ಉಪಸಂಹಾರದಲ್ಲಿ (ಅಧ್ಯಾಯ 9) ಇವೆರಡೂ ಕಲೆಗಳ ಮೂಲ ಯಾವುದೋ ಒಂದು ನೆಲೆಯಿಂದ ಬಂದಿರಬೇಕೆಂಬ ನಿಲುವಿಗೆ ಬರುತ್ತಾರೆ. ಅದು ದ್ರಾವಿಡ ಮೂಲದ್ದು ಎನ್ನುವ ಅವರು ಭರತನ ನಾಟ್ಯ ಶಾಸ್ತ್ರಕ್ಕಿಂತ ಮುನ್ನವೇ ದೇಶಿಯದ ರಂಗ ಕಲೆಗಳಾಗಿದ್ದವು ಎನ್ನುತ್ತಾರೆ. ಸಂಸ್ಕೃತದ ಪ್ರಾಬಲ್ಯ ಕೂಡಿದ ನಂತರ ದೇಶಿಯ ಭಾಷೆಯಲ್ಲಿ ಸಾಹಿತ್ಯ ರಚನೆ ಹಾಗೂ ದೇಶಿಯ ಕಲೆಗಳ ಪುನರ್ಜೀವನ ನಡೆಯಿತು. ಇದರ ಫಲವೇ ಯಕ್ಷಗಾನ ಕಥಕಳಿಯಂತಹ ಕಲೆಗಳು ಜನಜೀವನದ ಭಾಗವಾದವು. ಚಕ್ರತಾಳ ಹಾಗೂ ಚಂಡೆಗಳು ರುದ್ರರಮಣೀಯತೆಯನ್ನು ಉಂಟು ಮಾಡುವಂತವುಗಳು ಕೇರಳದ ದೇವಾಲಯಗಳ ಮೂಲಕ ಹಾಗೂ ಕಥಕಳಿಯ ಮೂಲಕ ಇವು ತೆಂಕುತಿಟ್ಟಿನಲ್ಲಿ ಬಳಕೆಗೆ ಬಂದವು. ಇದೇ ರೀತಿ ಮುಖವರ್ಣಿಕೆ, ಚುಟ್ಟಿಗಳ ಬಳಕೆ, ವೇಷಭೂಷಣಗಳಲ್ಲೂ ಕೂಡ ಕಥಕಳಿಯ ಪ್ರಭಾವ ಕಾಣಬಹುದು. ಕಥಕಳಿಯ ತರಬೇತಿಯು ಕೂಡಾ ಯಕ್ಷಗಾನ ತರಬೇತಿ ಕೇಂದ್ರಗಳಿಗೆ ಮಾದರಿಯಾಗಿರಬೇಕಾಗಿದೆ ಎನ್ನುತ್ತಾರೆ.

ಹೀಗೆ ಡಾ. ಮಹಾಲಿಂಗೇಶ್ವರ ಶರ್ಮರು ಈ ಕೃತಿಯ ಮೂಲಕ ಯಕ್ಷಗಾನಾಸಕ್ತರಿಗೆ ಅನೇಕ ಹೊಸ ವಿಚಾರಗಳನ್ನು ತಿಳಿಸಿಕೊಟ್ಟಿದ್ದಾರೆ. ಪ್ರತಿ ಅಧ್ಯಾಯಗಳಲ್ಲೂ ಡಾ.ಕುಳಮರ್ವರು ಕ್ಷೇತ್ರ ಕಾರ್ಯದ ಶ್ರಮದ ಅರಿವಾಗತ್ತದೆ. ವಿಚಾರವನ್ನು ಮಂಡಿಸುವಾಗ ಪೂರ್ವ ವಿಚಾರಗಳನ್ನೆಲ್ಲಾ ಮೊದಲಿಗೆ ತಿಳಿಸಿ ಮುಂದೆ ತಮ್ಮ ನಿಲುವನ್ನು ಆಧಾರದೊಂದಿಗೆ ಅಥೆಂಟಿಕ್ ಆಗಿ ತಿಳಿಸುತ್ತಾರೆ. ಕನ್ನಡಿಗರು ಅದರಲ್ಲೂ ಕಲಾ ಪ್ರೇಮಿಗಳು, ಯಕ್ಷಗಾನ ಅಭಿಮಾನಿಗಳು ತಪ್ಪದೇ ಓದಬೇಕಾದ ಕೃತಿಯಾಗುವಂತೆ ಮಾಡಿದ್ದಾರೆ. ಸಾಕಷ್ಟು ಹೊಸ ಮಾಹಿತಿಗಳ ದಾಖಲೆಗಳನ್ನು ಒದಗಿಸುವ ಮೂಲಕ ಪುಸ್ತಕ ಸದಾಕಾಲ ಜೊತೆಯಲ್ಲೇ ಇರಿಸಿಕೊಳ್ಳಬೇಕಾಗುವಂತೆ ಮಾಡಿದ್ದಾರೆ. ಈ ಸಾರ್ಥಕ ಪ್ರಯತ್ನಕ್ಕೆ ಲೇಖಕರಿಗೆ ಧನ್ಯವಾದಗಳು.

(ವಿಜಯಕರ್ನಾಟಕ ಪತ್ರಿಕೆಯ ಲವಲವಿಕೆ ವಿಭಾಗದಲ್ಲಿ ಬಂದ ಪುಸ್ತಕ ವಿಮರ್ಶೆಯ ಲೇಖನದ ವಿಸ್ತ್ರತ ರೂಪ)

*

ಡಾ. ಕಬ್ಬಿನಾಲೆಯವರ "ಯಕ್ಷಗಾನ ಕವಿಕಾವ್ಯ ವಿಚಾರ"

ಕರ್ನಾಟಕ ಯಕ್ಷಗಾನ ಅಕಾಡೆಮಿ ಕೊಡ ಮಾಡುವ 2021ರ ಸಾಲಿನ ಪಾರ್ತಿಸುಬ್ಬ ಪ್ರಶಸ್ತಿಗೆ ಭಾಜನರಾಗಿರುವ ಡಾ.ಕಬ್ಬಿನಾಲೆ ವಸಂತ ಭಾರದ್ವಾಜರು ಬಹುಶ್ರುತ ವಿದ್ವಾಂಸರು, ಛಂದಶಾಸ್ತ್ರಕೋವಿದರು, ಮೂರು ಮಹಾಕಾವ್ಯಗಳನ್ನು ರಚಿಸಿರುವ ಕವಿಗಳು, ಕತೆ, ಕವನ, ವಿಮರ್ಶೆ, ಗ್ರಂಥಸಂಪಾದನೆ, ತುಳು ಸಾಹಿತ್ಯ ರಚನೆ ಮುಂತಾದ ಹತ್ತು ಹಲವು ಸಾಹಿತ್ಯಿಕ ಕೃಷಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಇವೆಲ್ಲಕ್ಕಿಂತ ಮಿಗಿಲಾಗಿ ಯಕ್ಷಗಾನ ರಂಗಕ್ಕೆ ಅವರು ನೀಡಿರುವ ಕೊಡುಗೆ ಅನನ್ಯವೂ, ಅಪೂರ್ವವೂ ಅಗಿದೆ. ಸ್ವತಃ ಯಕ್ಷ ಕವಿಯಾಗಿರುವ ಭಾರದ್ವಾಜರು 51ಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿರುವುದೇ ಅಲ್ಲದೆ ಅಮೂಲ್ಯವಾದ ಅನೇಕ ಪ್ರಸಂಗಗಳನ್ನು ಸಂಶೋಧಿಸಿ, ಸಂಪಾದಿಸಿಕೊಟ್ಟಿದ್ದಾರೆ. ತಾಳಮದ್ದಳೆಯ ಅರ್ಥಧಾರಿಯಾಗಿ, ಪ್ರದರ್ಶನಗಳ ವೇಷಧಾರಿಯಾಗಿ, ಯಕ್ಷಗಾನ ಅಷ್ಟಾವಧಾನಿಯಾಗಿ, ಹಿಮ್ಮೇಳದ ಜ್ಞಾನವುಳ್ಳವರಾಗಿ, ಈ ಕಲೆಯ ಅಂಗೋಪಾಂಗಗಳ ಬಗ್ಗೆ ಅಧಿಕೃತವಾದ ನಿಲುವುಳ್ಳವರು. "ಯಕ್ಷಗಾನ ಸಾಹಿತ್ಯ ಚರಿತ್ರೆ", "ಯಕ್ಷಗಾನ ಕವಿಚರಿತ್ರೆ", "ಯಕ್ಷಗಾನ ಛಂದಸ್ಸು", "ಯಕ್ಷಗಾನ ಕವಿಕಾವ್ಯ ವಿಹಾರ" ಮುಂತಾದ ಕೃತಿಗಳ ಮೂಲಕ ಯಕ್ಷಸಾಹಿತ್ಯ ವಿಶ್ವದ ಕದ ತೆರೆದವರು. ಯಕ್ಷ ಸಾಹಿತ್ಯದ ಸಂಶೋಧನಾಸಕ್ತರಿಗೆ ಈ ಎಲ್ಲಾ ಕೃತಿಗಳು ಅಪೂರ್ವ ಮಾಹಿತಿಗಳನ್ನು ನೀಡಿರುವುದೇ ಅಲ್ಲದೆ ಚಿಂತನೆಗೆ ಹಚ್ಚಬಲ್ಲ ಉದ್ಬೋಧ ಆಕರಗಳಾಗಿವೆ. ಈ ಹಿನ್ನೆಲೆಯಲ್ಲಿ 2021ರಲ್ಲಿ ಪ್ರಕಟಗೊಂಡ "ಯಕ್ಷಗಾನ ಕವಿಕಾವ್ಯ ವಿಚಾರ" ಆದರಣೀಯ ಕೃತಿಯಾಗಿದೆ. ಮೂವತ್ತು ಯಕ್ಷಕವಿಗಳ ಬದುಕಿನ ವಿವರ, ಕಾವ್ಯ ಧರ್ಮ ಮತ್ತು ಮನೋಧರ್ಮದ ಪರಿಚಯ, ಪ್ರಸಂಗ ರಚನಾ ಪ್ರತಿಭೆಯ ಅನಾವರಣಗಳು ಇಲ್ಲಿ ಮುಪ್ಪುರಿಗೊಂಡಿವೆ. ಏಳುನೂರು ವರ್ಷಗಳ "ಹಿರಿಯ" ಆದಿಪರ್ವಕಾರನಿಂದ ಮೊದಲ್ಗೊಂಡು ಇಂದಿನ ಕವಿಗಳಲ್ಲಿ "ಮುಂಚೂಣಿ"ಯಲ್ಲಿರುವ ಗಣೇಶ ಕೊಲೆಕಾಡಿಯವರೆಗಿನ ಕವಿಗಡಣದ ಪ್ರಸಂಗಗಳ ತಲಸ್ಪರ್ಶಿ ಅಧ್ಯಯನ, ಪ್ರದರ್ಶನಗಳಲ್ಲಿ ಅವು ಮಿಂಚಬಲ್ಲ ಶಕ್ತಿಯೇ ಮುಂತಾದ

ವಿಚಾರಗಳನ್ನು ಇಲ್ಲಿ ಕಾಣಬಹುದು. ಕನ್ನಡ ಸಾಹಿತ್ಯ ಲೋಕಕ್ಕೆ ಈ ಕವಿಗಳು ಅಳಿಲು ಸೇವೆಯ ಮಾದರಿಯಲ್ಲಿ ಸಂಪದ್ಭರಿತ ಕೊಡುಗೆ ನೀಡಿದ್ದಾರೆ. ಆದರೆ ಅವರ ಸಾಹಿತ್ಯ ಕೃಷಿಯ ಬಗ್ಗೆ ಯಾವುದೇ ವಿಸ್ತೃತ ಚರ್ಚೆ ಇದುವರೆಗೆ ಆಗಿಲ್ಲ. ಈ ಕೃತಿಯಿಂದ ಆ ಕೊರತೆ ನಿವಾರಣೆಯಾಗಿದೆ. ಪ್ರಸಂಗಸಾಹಿತ್ಯದ ಸ್ವಾರಸ್ಯವನ್ನು ನಾಡಿನ ಸಾಹಿತ್ಯಾಸಕ್ತರಿಗೆ ತೋರಿಸಿ ಕೊಡುವ ಕಾರ್ಯ ಇದಾಗಿದೆ.

ನೂರು ವರ್ಷಗಳ ಹಿಂದೆ ಇದೇ ಬಗೆಯ ಕಾರ್ಯವನ್ನು ಅಂದಿನ ಕನ್ನಡ ವಿದ್ವಾಂಸರು, ಪಂಡಿತರು, ಸಂಶೋಧಕರು ಕನ್ನಡ ಸಾಹಿತ್ಯದ ಹಳೆಗನ್ನಡ ಹಾಗೂ ನಡುಗನ್ನಡ ಕವಿಗಳ ಕುರಿತು ಮಾಡಿದ್ದರು. ಆರ್. ನರಸಿಂಹಾಚಾರ್ ಅವರು ಕನ್ನಡ ಕವಿಚರಿತ್ರೆಯಲ್ಲಿ ಸಾಕಷ್ಟು ಕವಿಗಳನ್ನು ಹಾಗೂ ಅವರ ಕಾವ್ಯಗಳ ವಿವರವನ್ನು ಮೊದಲ ಬಾರಿಗೆ ನೀಡಿದ್ದರು. ಮುಂದೆ ಬಂದ ಡಿ.ಎಲ್. ನರಸಿಂಹಾಚಾರ್, ಮುಳಿಯ ತಿಮ್ಮಪ್ಪಯ್ಯ, ಮಂಜೇಶ್ವರ ಗೋವಿಂದ ಪೈ, ಟಿ.ಎಸ್. ವೆಂಕಣ್ಣಯ್ಯ, ತಿ.ನಂ. ಶ್ರೀಕಂಠಯ್ಯ, ರಂ.ಶ್ರೀ ಮುಗಳಿ, ತ.ಸು. ಶ್ಯಾಮರಾವ್, ಕುವೆಂಪು, ಮಾಸ್ತಿ, ಎ.ಆರ್. ಕೃಷ್ಣಶಾಸ್ತ್ರಿ, ಶಂ.ಬಾ. ಜೋಷಿ ಮುಂತಾದವರು ಈ ಕವಿಗಳ ಜೀವನ ವಿಚಾರ, ಕಾವ್ಯ ವಿಚಾರ, ಕಾವ್ಯ ಶಕ್ತಿಯ ಪರಿಚಯವನ್ನು ಮಾಡಿಕೊಟ್ಟಿದ್ದು, ಪ್ರಚಾರೋಪನ್ಯಾಸಗಳ ಮೂಲಕ ನಾಡಿನ ಉದ್ದಗಲಕ್ಕೆ ತೆರಳಿ ಕನ್ನಡದ ಹಳೆಯ ಕವಿಗಳನ್ನು ಜನರಿಗೆ, ಸಾಹಿತ್ಯ ವಿದ್ಯಾರ್ಥಿಗಳಿಗೆ ಹತ್ತಿರ ಮಾಡಿಸಿದರು. ಈ ಬಗೆಯ ಕಾರ್ಯ ಯಕ್ಷಕವಿಗಳಿಗೆ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಡಾ. ಕಬ್ಬಿನಾಲೆಯವರು ಹತ್ತುವರ್ಷಗಳ ಹಿಂದೆ ತಮ್ಮ ಕವಿ-ಕಾವ್ಯ ವಿಹಾರದಲ್ಲಿ 20 ಯಕ್ಷ ಕವಿಗಳನ್ನು ಅವರ ಕಾವ್ಯಗಳನ್ನು ಪರಿಚಯಿಸಿದ್ದರು. ಇದೀಗ ಮತ್ತೆ 30 ಕವಿಗಳನ್ನು ಹಾಗೂ ಕಾವ್ಯಗಳನ್ನು ಇಲ್ಲಿ ಸೇರ್ಪಡೆಗೊಳಿಸಿದ್ದಾರೆ. ಸಾವಿರದಷ್ಟಿರುವ ಯಕ್ಷ ಕವಿಗಳಲ್ಲಿ ಹೀಗೆ ಐವತ್ತು ಕವಿಗಳ ವಿವರ ಯಕ್ಷಲೋಕಕ್ಕೆ ಲಭ್ಯವಾಗುವಂತೆ ಆಗಿದೆ. ಅಧ್ಯಯನ ಮಾಡುವವರಿಗೆ ಇದು ಆಡುಂಬೊಲವಾಗಿದೆ. ಮುಂದೆ ಈ ಬಗೆಯ ಅಧ್ಯಯನ ಮಾಡಲು ಮಾದರಿಯೊಂದನ್ನು ವಸಂತ ಭಾರದ್ವಾಜರು ತೋರಿಸಿ ಕೊಟ್ಟಿದ್ದಾರೆ.

ಹಿಂದಣ ಕಾಲದ ಯಕ್ಷಕವಿಗಳಾದ ಆದಿಪರ್ವಕಾರ, ಕೆಂಪಣ್ಣಗೌಡ, ಪರಮೇಶ್ವರ ಭಟ್ಟ, ಪೆರುವಡಿ ಸಂಕಯ್ಯ ಭಾಗವತ, ಗೇರುಸೊಪ್ಪೆ ಶಾಂತಪ್ಪಯ್ಯ, ಅಳಿಯ ಲಿಂಗರಾಜ, ಕಿಬ್ಬಚ್ಚಲು ಮಂಜಮ್ಮ, ನಂಜುಂಡ ಭಾಗವತ, ಕಡಂದಲೆ ರಾಮರಾಯ ಹಾಗೂ ಕೆರೋಡಿ ಸುಬ್ಬರಾಯರ ಕುರಿತು ಡಾ. ಕಬ್ಬಿನಾಲೆಯವರು ಅನೇಕ ಹೊಸ ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಪ್ರೊ. ಎಂ.ಎ. ಹೆಗಡೆಯವರು ಸಂಪಾದಿಸಿ ಪ್ರಕಟಿಸಿರುವ "ಆದಿಪರ್ವ" ಪ್ರಸಂಗದ ಛಂದಸ್ಸಿನ ಕುರಿತು ಲೇಖಕರು ಹೇಳಿರುವ ಮಾತುಗಳು ಒಪ್ಪತಕ್ಕದ್ದಾಗಿದೆ. ಈ ಪ್ರಸಂಗದ ಮೇಲೆ ಶ್ರೀಮದ್ವಾಚಾರ್ಯರ

ತತ್ವವಿಚಾರಗಳ ಪ್ರಭಾವ ಇರುವುದನ್ನು ಡಾ.ಕಬ್ಬಿನಾಲೆಯವರು ಗುರುತಿಸಿದ್ದಾರೆ ಹಾಗೂ ಭಾಷೆಯ ಬಳಕೆಯಲ್ಲಿ ಕವಿಯ ವಿಶೇಷತೆಯನ್ನು ತಿಳಿಸಿದ್ದಾರೆ. ಮೂಡಲಪಾಯದ ಮೂರು ಯಕ್ಷಗಾನ ಕಾವ್ಯಗಳನ್ನು ರಚಿಸಿರುವ ನಾಗಮಂಗಲ ತಾಲ್ಲೂಕಿನ ಅಂದೇನಹಳ್ಳಿಯವನಾದ ಕೆಂಪಣ್ಣ ಕವಿಯ ಕಾಲವನ್ನು ಲೇಖಕರು ಕ್ರಿ.ಶ.1502 ಇರಬೇಕೆಂದು ತರ್ಕಿಸಿದ್ದಾರೆ. ಆತನು ಬರೆದ "ಕರಿಬಂಟನ ಕಾಳಗ", "ನಳಚರಿತ್ರೆ" ಹಾಗೂ "ಶನಿಮಹಾತ್ಮೆ" ಪ್ರಸಂಗಗಳಲ್ಲಿರುವ ಆತನ ಕವಿತಾಶಕ್ತಿಯನ್ನು ಪದ್ಯಗಳ ಮೂಲಕ ಉದಾಹರಿಸಿದ್ದಾರೆ. ಕೆಂಪಣ್ಣ ಕವಿಯು ಉಪಮಾಲಂಕಾರಗಳನ್ನು ನೀಡುವುದರಲ್ಲಿ ನಿಸ್ಸೀಮ. ಆತನ ವರ್ಣನೆಗಳು ಸಜೀವವಾಗಿದ್ದು, ಆಕರ್ಷಕವಾಗಿವೆ. "ಯಕ್ಷಗಾನ ಕವಿ ಸಾರ್ವಭೌಮ" ಎಂಬ ಬಿರುದನ್ನು ಹೊಂದಿರುವ ಹರಿಹರಪುರದ ಹತ್ತಿರದ ಹುಣಸೆಮನೆಯ ಪರಮೇಶ್ವರ ಭಟ್ಟ (ಕ್ರಿ.ಶ.1650)ನು "ಕಾಲನೇಮಿ ಕಾಳಗ" ಹಾಗೂ "ಪ್ರಭಾವತಿ ಸ್ವಯಂವರ" ಎಂಬ ಎರಡು ಪ್ರಸಂಗಗಳನ್ನು ಬರೆದವನು. ಡಾ. ವಸಂತಭಾರದ್ವಾಜರು ಕಾಲನೇಮಿ ಕಾಳಗದಲ್ಲಿ ಕಂಡುಬರುವ ಶಬ್ದಾಲಂಕಾರಗಳನ್ನು ಹಾಗೂ ಭಾಷಾ ಪ್ರೌಢಿಮೆಯನ್ನು ಮೆಚ್ಚಿಕೊಂಡಿದ್ದಾರೆ. ಎರಡೂ ಪ್ರಸಂಗಗಳಲ್ಲಿ ನಾದ ಗುಣವಿದೆ. ವರ್ಣನಾ ಚಾತುರ್ಯವಿದೆ. ಶೈಲಿಯಲ್ಲಿ ಲಾಲಿತ್ಯವಿದೆ ಎಂದಿದ್ದಾರೆ. ತೆಂಕುತಿಟ್ಟಿನಲ್ಲಿ ಪ್ರಸಿದ್ಧವಾಗಿರುವ "ಕೃಷ್ಣಾರ್ಜುನ ಕಾಳಗ"ವನ್ನು ಬರೆದಿರುವ ಸಂಕಯ್ಯ ಭಾಗವತರು (1820–1897) ಇದಲ್ಲದೇ ಅತಿಕಾಯ ಕಾಳಗ, ಇಂದ್ರಜಿತು ಕಾಳಗ, ಮಯಿರಾವಣ ಕಾಳಗ, ಘಟೋದ್ಭಜ ಕಾಳಗ, ದುಂದುಭಿ ಆಖ್ಯಾನ ಬಭ್ರುವಾಹನ ಕಾಳಗವೆಂಬೆಲ್ಲಾ ಪ್ರಸಂಗಗಳನ್ನು ರಚಿಸಿದ್ದಾನೆ. ತುಳುವಿನಲ್ಲೂ ಕೂಡ "ವಾಲಿ ಸುಗ್ರೀವೆರೆ ಕಾಳಗೊ" ಎಂಬ ಪ್ರಸಂಗ ಬರೆದಿರುವುದು ವಿಶೇಷವಾಗಿದೆ. ವಿಟ್ಲದ ಅರಸರಲ್ಲಿ ಆಸ್ಥಾನಕವಿಯಾಗಿದ್ದಲ್ಲದೇ, ವಿಟ್ಲದ ಮೇಳದಲ್ಲಿ ಭಾಗವತನಾಗಿ ಕೂಡಾ ಖ್ಯಾತನಾಗಿದ್ದ ಆತನ ರಸಪಾಕ ಸೃಷ್ಟಿಯನ್ನು ಸೋದಾಹರಣವಾಗಿ ವಿವರಿಸಿರುವ ಡಾ.ಕಬ್ಬಿನಾಲೆಯವರು "ಗಾಯಕನಾದವನು ಕವಿಯಾದಾಗ ಮಾತ್ರ ಇಂತಹ ರಸಪಾಕ ಸೃಷ್ಟಿ ಸಾಧ್ಯ" ಎನ್ನುತ್ತಾರೆ. ಉತ್ತರಕನ್ನಡ ಜಿಲ್ಲೆಯ ಗೆರೆಸೊಪ್ಪೆಯಲ್ಲಿ ಜನಿಸಿ ಮಂಗಳೂರಿನ ಜಿಲ್ಲಾ ನ್ಯಾಯಾಲಯದಲ್ಲಿ ಸದರನ್ ಅಮೀನ್ ಆಗಿದ್ದ ಶಾಂತಪ್ಪಯ್ಯನು ಕರ್ಣಪರ್ವ, ಪುತ್ರಕಾಮೇಷ್ಠಿ, ರಾಜಸೂಯಾಧ್ವರ, ರಾವಣ ದಿಗ್ವಿಜಯ, ಲವಣ ಸಂಹಾರ, ಸುಭದ್ರಾ ಕಲ್ಯಾಣವೇ ಮುಂತಾದ ಹಲವು ಪ್ರಸಂಗಗಳನ್ನು ರಚಿಸಿದ್ದನು. ಕರ್ಣಪರ್ವ ಮತ್ತು ಪುತ್ರಕಾಮೇಷ್ಠಿಗಳು ಮಾತ್ರ ಲಭ್ಯವಿದೆ. ವಸಂತ ಭಾರದ್ವಾಜರು ಶಾಂತಪ್ಪಯ್ಯನ ವಿವಿಧ ಭಾಷಾ ಜ್ಞಾನವನ್ನು ಅವನ ಪದ್ಯಗಳಲ್ಲಿ ಕಂಡು ಬರುವ ಭಾವಸ್ವಾರಸ್ಯವನ್ನು ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. ಹತ್ತೊಂಭತ್ತನೇ ಶತಮಾನದ ಕಿಬ್ಬಚ್ಚಲು ಮಂಜಮ್ಮರ (1830–1900) ಅನುಭಾವಿಕ ಪದ್ಯರಚನಾ ಸಾಮರ್ಥ್ಯವನ್ನು ಮೆಚ್ಚಿಕೊಂಡಿರುವ ಲೇಖಕರು ಮಲೆನಾಡಿನ ಈ ಕವಯತ್ರಿಯ "ಜೀವಪರಮರ

ಕಲ್ಯಾಣ"ಮತ್ತು "ಮನೋಬುದ್ಧಿಸಂವಾದ" ವೆಂಬ ಎರಡು ಯಕ್ಷಗಾನ ಪ್ರಸಂಗಗಳ ಮೇಲೆ ಕ್ಷಕಿರಣ ಬೀರಿದ್ದಾರೆ. "ಆಧ್ಯಾತ್ಮದ ಅನುಸಂಧಾನದಿಂದ ಅಮೂರ್ತ ವಿಚಾರಗಳನ್ನು ಮೂರ್ತವಾಗಿಸಿ ವಿವಿಧ ಪಾತ್ರಗಳ ಮೂಲಕ ಪ್ರಸಂಗವನ್ನು ರಚಿಸಿದ ಕಿಬ್ಬಚ್ಚಲು ಮಂಜಮ್ಮನ ಸೃಜನಶೀಲತೆ ಮೆಚ್ಚುವಂತಹುದು" ಎಂದಿರುವುದು ಸರಿಯಾಗಿದೆ.

ಮೂಡಲಪಾಯ ಯಕ್ಷಗಾನಕ್ಕೆ ಅಸಂಖ್ಯಪ್ರಸಂಗಗಳನ್ನು ಕೊಟ್ಟಿರುವ ಅಳಿಯ ಲಿಂಗರಾಜ(1823–1874)ನ ಕುರಿತು ಡಾ.ಕಬ್ಬಿನಾಲೆಯವರು ಈಗಾಗಲೇ ಸಾಕಷ್ಟು ಸಂಶೋಧನಯನ್ನು ನಡೆಸಿದವರು ಹಾಗೆ ಅವನ ಪ್ರಸಂಗಗಳನ್ನು ಸಂಪಾದಿಸಿದವರೂ ಕೂಡ ಈಕೃತಿಯಲ್ಲಿ ಆತನ ಕವಿತಾ ಸಾಮರ್ಥ್ಯವನ್ನು ಪ್ರಾಸಪ್ರೀತಿಯನ್ನು, ಶಬ್ದಾಲಂಕಾರ ವೈಭವವನ್ನು, ಭಾಷಾಶೈಲಿಯ ಕುರಿತು ವಿವರವನ್ನು ಚರ್ಚಿಸಿದ್ದಾರೆ. ಆತನ ಇಂದ್ರಕೀಲ, ದ್ರೌಪದೀ ಸ್ವಯಂವರ, ಮದಾಲಸಾ ಪರಿಣಯ, ವಾಲಿಸುಗ್ರೀವರ ಕಾಳಗ, ಗುಹಚರಿತೆ, ನಳಕೂಬರ ವಿಲಾಸ ಮುಂತಾದ ಪ್ರಸಂಗಗಳ ವಿಶೇಷತೆಯನ್ನು ತಿಳಿಸಿ ಕೊಟ್ಟಿದ್ದಾರೆ. ಇದೇ ರೀತಿ ಮೈಸೂರುಸೀಮೆಯ ನುಂಜುಂಡ ಭಾಗವತ (1847–1907)ನ ವೃಷಬೇಂದ್ರ ವಿಲಾಸ, ವಿರೋಚನ ವಧೆ ಮುಂತಾದಪ್ರಸಂಗಗಳ ಸಂವಾದ ಸಾಮರಸ್ಯವನ್ನು ವಿವರಿಸಿ ಆತನ ಕವಿತಾಶಕ್ತಿಯ ಬಗ್ಗೆ ಚರ್ಚಿಸಿದ್ದಾರೆ.

ಇಪ್ಪತ್ತನೆಯ ಶತಮಾನದಲ್ಲಿ ಯಕ್ಷಗಾನ ಕೃತಿರಚನೆ ಮಾಡಿದ ಯಕ್ಷಕವಿಗಳಾಗಿರುವ ಕಡಂದಲೆ ರಾಮರಾಯ, ಕೆರೋಡಿ ಸುಬ್ಬರಾಯ, ಜತ್ತಿಈಶ್ವರ ಭಾಗವತ, ಬವುಲಾಡಿ ಹಿರಿಯಣ್ಣ ಹೆಬ್ಬಾರ್, ಕವಿಭೂಷಣ ವೆಂಕಪ್ಪಶೆಟ್ಟಿ, ಹಿರಿಯ ಬಲಿಪನಾರಾಯಣ ಭಾಗವತ ಮುಂತಾದವರ ಪ್ರಸಂಗ ರಚನಾ ಸಾಮರ್ಥ್ಯವನ್ನು ಡಾ. ಕಬ್ಬಿನಾಲೆಯವರು ಬಹು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಆ ಕಾಲದ ಯಕ್ಷಗಾನ ಪ್ರದರ್ಶನಗಳಿಗೆ ಈ ಕವಿಗಳ ಕೊಡುಗೆಯನ್ನು ಪ್ರಸ್ತಾಪಿಸಿದ್ದಾರೆ. ಅದೇ ರೀತಿ ಈಚಿನ ಕವಿಗಳಾದ ಕಡತೋಕ ಮಂಜುನಾಥ ಭಾಗವತ, ತಲೆಂಗಳ ರಾಮಕೃಷ್ಣಭಟ್, ಡಾ.ಸದಾಶಿವಭಟ್ಟ, ಡಾ.ಎಸ್ ನಾರಾಯಣಶೆಟ್ಟಿ, ಅಂಬಾತನಯ ಮುಬ್ರಾಡಿ, ಕಿರಿಯ ಬಲಿಪನಾರಾಯಣ ಭಾಗವತ, ಡಾ.ವೈ. ಚಂದ್ರಶೇಖರ ಶೆಟ್ಟಿ, ಗಣೇಶ ಭಟ್ಟ ಪಟ್ಟಾಜೆ, ಪ್ರೊ. ಎಂ.ಎ ಹೆಗಡೆ, ಅಗರಿಭಾಸ್ಕರ ರಾವ್, ಅನಂತರಾಂ ಬಂಗಾಡಿ, ಬೊಟ್ಟಿಕೆರೆ ಪುರುಷೋತ್ತಮ ಪೂಂಜ ಸಿದ್ದನಕಟ್ಟೆ ವಿಶ್ವನಾಥಶೆಟ್ಟಿ, ಗಣೇಶ ಕೊಲೆಕಾಡಿ ಮುಂತಾದವರ ಕೃತಿಗಳ ಹೂರಣವನ್ನು ತಿಳಿಸುತ್ತಾ ಅವು ರಂಗಸ್ಥಳಕ್ಕೆ ತೋರಣವಾದ ಬಗೆಯನ್ನು ಚರ್ಚಿಸಲಾಗಿದೆ. ಇಪ್ಪತ್ತನೆಯ ಶತಮಾನದ ಯಕ್ಷಗಾನ ರಂಗಸ್ಥಳದಲ್ಲಿ ಈ ಯಕ್ಷಕವಿಗಳ ಪ್ರಸಂಗಗಳು ಬಹುಪ್ರದರ್ಶನವನ್ನು ಕಂಡು ಜನಮನವನ್ನು ರಂಜಿಸಿವೆ. ಅಂತೆಯೇ ಈ ಪ್ರಸಂಗಕಾರರ ಕಾವ್ಯರಚನೆಯೂ ಕೊಡ ರಸ ಸೃಷ್ಟಿಯಾಗಲು ಅನುಕೂಲ

ವಾಗುವಂತಹ ಸನ್ನಿವೇಶಗಳನ್ನು ವೈವಿಧ್ಯಮಯ ಛಂದೋಬಳಕೆಯಿಂದ ಹಾಡಿಗೆ ಒಗ್ಗುವ ಸಾಮರ್ಥ್ಯವನ್ನು ಹೊಂದಿವೆ ಎಂದು ತಿಳಿಸಿದ್ದಾರೆ.

ಡಾ. ನಾರಾಯಣ ಶೆಟ್ಟರ ಪ್ರಸಂಗಗಳ ಕುರಿತು ಕಬ್ಬಿನಾಲೆಯವರು ವಿಶೇಷವಾದ ವಿಚಾರಗಳನ್ನು ತಿಳಿಸಿ "ಅವು ತಮ್ಮ ಅನನ್ಯ ಛಂದೋಬಂಧಗಳಿಂದ ಪರಿಪುಷ್ಟವಾದವು" ಎನ್ನುತ್ತಾರೆ. ಶೆಟ್ಟರು ಪ್ರಾಚೀನವಾದ ಛಂದಸ್ಸುಗಳನ್ನು ಬಳಸಿರುವುದೇ ಅಲ್ಲದೆ ಸ್ವತಂತ್ರವಾದ ಸ್ವೋಪಜ್ಞವಾದ ಕೆಲವು ಮಟ್ಟುಗಳನ್ನು ಸೃಜಿಸುವ ಮೂಲಕ ಕೊಡುಗೆ ನೀಡಿದ್ದಾರೆ. ಅವರ "ಛಂದಸ್ವತಿ" ಪ್ರಸಂಗ ಸಂಪುಟದಲ್ಲಿನ ಭಾಷೆ, ಶೈಲಿ, ಛಂದಸ್ಸು, ಅಲಂಕಾರಗಳು ಅಧ್ಯಯನ ಯೋಗ್ಯವಾಗಿದ್ದು ಮಾದರಿಯಂತಿವೆ. ಡಾ.ನಾರಾಯಣ ಶೆಟ್ಟರನ್ನು ಗುರುವೆಂದೇ ಬಗೆದು ಪ್ರಸಂಗ ರಚನೆ ಮಾಡುತ್ತಿರುವ ಶ್ರೀ ಗಣೇಶ ಕೊಲೆಕಾಡಿಯವರಲ್ಲೂ ಕೂಡ ಇದೇ ಬಗೆಯ ರಚನೆಗಳ ಮುಂದುವರಿಕೆಯನ್ನು ಕಾಣಬಹುದು. "ಶೆಟ್ಟರ ರೀತಿಯಲ್ಲೇ ಹಲವಾರು ಹೊಸ ಪದ್ಯ ಬಂಧಗಳನ್ನು ಸೃಜಿಸಿದವರು ಮತ್ತು ಅವರ ಶಿಲ್ಪ ನಿರ್ಮಿತಿಯಲ್ಲಿ ಶಾಸ್ತ್ರಾನುಸಂಧಾನವಿದೆ" ಎನ್ನುತ್ತಾರೆ.

ಯಕ್ಷಗಾನ ಅಕಾಡೆಮಿ "ಪಾರ್ತಿಸುಬ್ಬ ಪ್ರಶಸ್ತಿ (2011)" ಪುರಸ್ಕೃತರಾದ ಖ್ಯಾತ ಭಾಗವತ ಕಡತೋಕ ಮಂಜುನಾಥ ಭಾಗವತರ ಇಪ್ಪತ್ತು ಪ್ರಸಂಗಗಳ ಕುರಿತು ಡಾ.ಕಬ್ಬಿನಾಲೆಯವರು ಸುದೀರ್ಘವಾಗಿ ಚರ್ಚಿಸಿದ್ದಾರೆ. "ಶ್ರೀ ಇಡಗುಂಜಿ ಕ್ಷೇತ್ರ ಮಹಾತ್ಮೆ"ಯ ಬಗ್ಗೆ ಭಾರದ್ವಾಜರು ಬರೆದಿರುವ "ಇಲ್ಲಿನ ಸಾಲುಗಳು ಮಾನವೀಯತೆಯನ್ನು ವ್ಯಾಖ್ಯಾನಿಸುವಂತಿವೆ. ಜೀವನ ಮೌಲ್ಯಗಳನ್ನು ಒಂದೊಂದಾಗಿ ಪಾಠ ಮಾಡುವಂತಿವೆ. ಯಕ್ಷಗಾನದ ಮೂಲಕ ಇಂತಹ ಉದಾತ್ತ ಬೋಧೆಯಾಗಿರುವುದು ಕನ್ನಡ ಸಾಹಿತ್ಯದ ಹೆಮ್ಮೆ" ಎನ್ನುವುದು ಮನನೀಯ. ಅದೇ ರೀತಿ ಇನ್ನೋರ್ವ "ಪಾರ್ತಿಸುಬ್ಬ ಪ್ರಶಸ್ತಿ (2019)" ಪುರಸ್ಕೃತ ಅಂಬಾತನಯ ಮುದ್ರಾಡಿಯವರ ಪ್ರಸಂಗ ಸಾಹಿತ್ಯದ ವಿಶೇಷತೆಗಳ ಬಗ್ಗೆ ಕೂಡ ಓದುಗರ ಗಮನ ಸೆಳೆಯುವ ಮಾತುಗಳನ್ನು ಬರೆದಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮ, ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್. ಮುಂತಾದ ಯಕ್ಷಗಾನ ಪ್ರಸಂಗಗಳನ್ನು ರಚಿಸಿರುವ ಶೇಡಿಗುಮ್ಮೆ ವಾಸುದೇವಭಟ್ಟರು ಮೂವತ್ತೊಂದು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ. ವಾಸುದೇವ ಭಟ್ಟರು ಹಳೆಯ ಕಥೆಯನ್ನು ಹೊಸ ರೀತಿಯಲ್ಲಿ ಹೇಳುವುದರಲ್ಲಿ ಪರಿಣಿತರು. ರಂಗಕ್ಕೆ ಹೊಂದುವಂತೆ ಪುರಾಣದ ಎಳೆಯನ್ನು ಇಟ್ಟುಕೊಂಡು ನವೀನ ಕಲ್ಪನೆಯನ್ನು ಸೃಜಿಸುವುದರಲ್ಲಿ ಎತ್ತಿದ ಕೈ. ಇವರ ಪ್ರಸಂಗಗಳು ಪಾಂಡಿತ್ಯ ಪೂರ್ಣವಾಗಿದ್ದು ಆಧುನಿಕ ಆಶಯಗಳಿಂದ ಕೂಡಿದೆ. "ಸಚಿನ್ ತೇಂಡೂಲ್ಕರ್" ಕುರಿತ ಪ್ರಸಂಗವು ಪ್ರದರ್ಶನಗೊಳ್ಳದೇ ಇದ್ದರೂ ಆಧುನಿಕ ಕ್ರೀಡಾ ವಿಷಯವೊಂದರ ಸುತ್ತ ರಚಿತವಾದ ಪ್ರಸಂಗವೆಂಬ ಅನನ್ಯತೆಯಪಟ್ಟವನ್ನು ಅಲಂಕರಿಸಿದೆ" ಎನ್ನುತ್ತಾರೆ.

ಏಳು ಶತಕಗಳ ಇತಿಹಾಸವುಳ್ಳ ಯಕ್ಷಗಾನ ಕವಿಕಾವ್ಯ ಪರಂಪರೆಯನ್ನು ಮುನ್ನೆಲೆಗೆ ತಂದು ಸರ್ವಗ್ರಾಹ್ಯವಾಗುವಂತೆ ಮಾಡುತ್ತಿರುವರಲ್ಲಿ ಬಹುಶ್ರುತ ವಿದ್ವಾಂಸ, ಛಂದಶಾಸ್ತ್ರ ಪರಿಣಿತ, ಮೂರು ಮಹಾಕಾವ್ಯಗಳನ್ನು ರಚಿಸುವುದರೊಂದಿಗೆ ಐವತ್ತೊಂದು ಯಕ್ಷಗಾನ ಪ್ರಸಂಗಗಳನ್ನು ಬರೆದಿರುವ ಭಾವಸಂಪನ್ನ ಕವಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜರು ಪ್ರಮುಖರು. ಇವರ ಸಮುಜ್ವಲ ಪ್ರತಿಭೆಯ ಮೂಸೆಯಿಂದ ಹೊರ ಬಂದಿರುವ ಯಕ್ಷಗಾನ ಛಂದಸ್ಸು, ಯಕ್ಷಗಾನ ಕವಿಕಾವ್ಯ ವಿಚಾರ, ಯಕ್ಷಗಾನ ಪ್ರಸಂಗ ಸಾಹಿತ್ಯ, ಯಕ್ಷಗಾನ ಕವಿ ಚರಿತ್ರೆ, ಹಾಗೂ ಯಕ್ಷಗಾನ ಸಾಹಿತ್ಯ ಚರಿತ್ರೆ, ಯಕ್ಷಗಾನ ಕಲೆ ಇರುವಷ್ಟು ಕಾಲವೂ ಉಳಿಯಲಿರುವ ಕೃತಿಗಳಾಗಿವೆ. ಇವುಗಳ ಸಾಲಿಗೆ ಮತ್ತೊಂದು ಹೊಸ ಸೇರ್ಪಡೆ ಯಕ್ಷಕವಿಗಳ ಯಕ್ಷಗಾನ ಕವಿಕಾವ್ಯ ವಿಚಾರ ಬದುಕಿನ ವಿವರ, ಕಾವ್ಯ ಧರ್ಮ ಮತ್ತು ಮನೋಧರ್ಮದ ಪರಿಚಯ ಪ್ರಸಂಗ ರಚನಾ ಪ್ರತಿಭೆಯ ಅನಾವರಣಗಳು ಇಲ್ಲಿ ಮುಪ್ಪುರಿಗೊಂಡಿವೆ. ಏಳುನೂರು ವರ್ಷಗಳ "ಹಿರಿಯ ಆದಿಪರ್ವಗಾರನಿಂದ ಮೊದಲುಗೊಂಡು ಇಂದಿನ ಕಿವಿಗಳಲ್ಲಿ ಮುಂಚೂಣಿಯಲ್ಲಿರುವ ಗಣೇಶ ಕೊಲೆಗಾಡಿಯವರ ಪ್ರಸಂಗಗಳ ಬಗೆಗಿನ ತಲಸ್ಪರ್ಶಿ ಅಧ್ಯಾಯನವಿಲ್ಲಿದೆ. ಇಂದಿನ ಕಾಲದ ಕವಿಗಳಾದ ಕೆಂಪಣ್ಣಗೌಡ, ಪರಮೇಶ್ವರ ಭಟ್ಟ, ಅಳಿಯ ಲಿಂಗರಾಜರಿಂದ ಪ್ರಾರಂಭಿಸಿ ಆಧುನಿಕ ಕವಿಗಳಾಗಿರುವ ಡಾ. ಸದಾಶಿವ ಭಟ್ಟ, ಅಂಬಾತನಯ ಮುದ್ರಾಡಿ, ಪ್ರೊ. ಎಂ.ಎ. ಹೆಗಡೆ, ಪುರುಷೋತ್ತಮ ಪುಂಜ ಮುಂತಾದವರ ಕೃತಿಗಳ ಪೂರ್ಣ" ತಿಳಿಸುತ್ತಾ ಅವರು ರಂಗಸ್ಥಳಕ್ಕೆ "ತೋರಣ"ವಾದ ಬಗೆಯನ್ನು ಇಲ್ಲಿ ಚರ್ಚಿಸಲಾಗಿದೆ.

ಪ್ರಸಂಗಗಳ ಅಧ್ಯಯನಕ್ಕೆ ಯಾವುದು ಮಾನದಂಡವಾಗಬೇಕೆಂಬುವುದರ ಬಗ್ಗೆ ಡಾ. ಭಾರದ್ವಾಜರಿಗೆ ಸ್ಪಷ್ಟತೆ ಇದೆ. ಖಚಿತ ನಿಲುವಿದೆ, ಪ್ರಬುದ್ಧ ಪಾಂಡಿತ್ಯವಿದೆ, ಪ್ರಸಂಗಗಳಲ್ಲಿರಬೇಕಾದ ಸಮವಾದ ಪ್ರಜ್ಞೆ, ಛಂದೋವೈವಿದ್ಯ, ಅಲಂಕಾರಿಕ ಶಕ್ತಿ ಹಾಗೂ ವರ್ಣ ಸಾಮರ್ಥ್ಯಗಳನ್ನು ಡಾ. ಕಬ್ಬಿನಾಲೆಯವರು ತಮ್ಮ ಒಳನೋಟ ಮತ್ತು ಸೂಕ್ಷ್ಮ ಗ್ರಹಿಕೆಯ ಮೂಲಕ ಸಮರ್ಪಕವಾಗಿ ಗುರುತಿಸಿದ್ದಾರೆ. ಸಾವಿರಕ್ಕೂ ಹೆಚ್ಚಿರುವ ಯಕ್ಷಕವಿಗಳ ಕಾವ್ಯದ ಸೊಗಡನ್ನು ವಿಮರ್ಶೆಯ ನಿಕಷಕ್ಕೆ ಒಡ್ಡುವ ಕಾರ್ಯಕ್ಕೆ ಇದೊಂದು ಮಾದರಿಯಾಗಿದೆ. ಅವರಿಂದ ಹಾಗೂ ಅವರಂತಹ ನಿತಾಂತ ಪಂಡಿತರಿಂದ ಇಂತಹ ರಚನೆಗಳು ಇನ್ನಷ್ಟು ಬಂದು ಯಕ್ಷ ಸರಸ್ವತಿಯ ಶ್ರೀಮುಡಿಯನ್ನು ಶೃಂಗರಿಸುವ ಕಾರ್ಯಗಳು ಭರದಿಂದ ನಡೆಯಲಿ ಎಂದು ಆಶಿಸೋಣ.

("ಯಕ್ಷಗಾನ ಕವಿಕಾವ್ಯ ವಿಚಾರ" ಪುಸ್ತಕದ ಕುರಿತು "ಹರ್ಷವಾಣಿ" ಪತ್ರಿಕೆಯಲ್ಲಿ ಬಂದ ವಿಮರ್ಶಾ ಲೇಖನ)

*

ಚಿಕಿತ್ಸಕ ದೃಷ್ಟಿಯ "ವ್ಯಾಸಭಾರತ ಭಿನ್ನ ವಿನ್ಯಾಸ"

ರಾಮಾಯಣ ಮತ್ತು ಮಹಾಭಾರತಗಳು ಭಾರತೀಯ ಸಂಸ್ಕೃತಿಯ ಎರಡು ಮೇರು ಶಿಖರಗಳು. ಒಂದು ಆದಿಕವಿ ವಾಲ್ಮೀಕಿಯಿಂದ ರಚಿತವಾದರೆ ಇನ್ನೊಂದು ವ್ಯಾಸಮುನಿ ಪುಂಗವರಿಂದ ನಿರೂಪಿತಗೊಂಡಿತು. ಒಂದು ಸೂರ್ಯವಂಶದ ಕತೆಯಾದರೆ ಇನ್ನೊಂದು ಚಂದ್ರವಂಶದವರ ಇತಿಹಾಸವಾಗಿದೆ. ಕಳೆದ ಮೂರು ಸಾವಿರ ವರ್ಷಗಳಿಂದ ಭಾರತೀಯ ಭಾಷೆಯ ಪ್ರಮುಖ ಕವಿಗಳು ಈ ಎರಡು ಕೃತಿಗಳಿಗೆ ಒಂದಿಲ್ಲೊಂದು ಬಗೆಯಿಂದ ಋಣಿಗಳಾಗಿದ್ದಾರೆ. ಕಾಲದ ಪ್ರವಾಹದಲ್ಲಿ ರಾಮಾಯಣಕ್ಕಿಂತ ಮಹಾಭಾರತ ಪಡೆದುಕೊಂಡ ಹರವು ವಿಶಾಲ ಹಾಗೂ ವೈವಿಧ್ಯಮಯ. ಮೊದಲಿಗೆ "ಜಯ" ಎಂಬ ಹೆಸರಿನಿಂದ ಎರಡು ಸಾವಿರ ಶ್ಲೋಕಗಳಷ್ಟಿದ್ದ ಈ ಕೃತಿ ಲಕ್ಷ ಶ್ಲೋಕಕ್ಕೂ ಮೀರಿ ಬೆಳೆದಿದ್ದು ವಿಸ್ಮಯವೇ ಸರಿ. ಅನೇಕ ಸೃಜನಶೀಲ ಮನಸ್ಸುಗಳು ಈ ಕೃತಿಗೆ ತಮ್ಮ ಕಲ್ಪನೆಯ, ಚಿಂತನೆಯ ತೊಡುಗೆಗಳನ್ನಿಟ್ಟು ಸಿಂಗರಿಸಿ ನೋಡಿ ಆನಂದ ಪಟ್ಟಿದ್ದಾರೆ. ಅಂತ ಸೃಜನಶೀಲ ದನಿಗಳಲ್ಲಿ ವಿಭಿನ್ನವಾದದ್ದು ಕನ್ನಡಿಗರಾದ ಆರ್.ಆರ್.ಪಾಂಗಾಳ್ ಅವರದ್ದು. ಅವರ "ವ್ಯಾಸಭಾರತ ಭಿನ್ನ ವಿನ್ಯಾಸ"ವೆಂಬುದು ಮಹಾಭಾರತವನ್ನು ವಿಭಿನ್ನ ದೃಷ್ಟಿಕೋನದಿಂದ, ವಾಸ್ತವ ಪ್ರಜ್ಞೆಯಿಂದ, ಚಿಕಿತ್ಸಕ ದೃಷ್ಟಿಯಿಂದ ನೋಡಿ ತಾವು ಕಂಡುಕೊಂಡ ಹೊಳಹುಗಳನ್ನು ಬಹು ಹೃದ್ಯವಾಗುವಂತೆ ದಾಖಲಿಸಿದ ಕೃತಿ, 37 ಅಧ್ಯಾಯಗಳಲ್ಲಿ 900ಕ್ಕೂ ಹೆಚ್ಚಿನ ಪುಟಗಳಲ್ಲಿ ಇಡೀ ಭಾರತದ ಕತೆಯನ್ನು ವಾಸ್ತವವಾಗಿ ಪರಾಂಬರಿಸಿದ ಪರಿ ವಿನೂತನ. ದಣಿವರಿಯದ ಚಿಂತನೆ ಇಲ್ಲಿನ ಪುಟಪುಟಗಳಲ್ಲೂ ದಾಖಲಾಗಿದೆ. ಮಹಾಭಾರತದ ಕತೆಗೆ ಸಂಬಂಧಿಸಿದಂತೆ ಇದೊಂದು ಕನ್ನಡದ ವಿಶಿಷ್ಟ ಕೊಡುಗೆಯಾಗಿದೆ.

ಕನ್ನಡದಲ್ಲಿ ಮಹಾಭಾರತದ ಕತೆಗೆ ಹೊಸ ಆಯಾಮ ನೀಡಿರುವವರಲ್ಲಿ ಆದಿಕವಿ ಪಂಪನು ಅಗ್ರಗಣ್ಯ. ಆತನ ಪಂಪಭಾರತ "ವ್ಯಾಸ ಮುನೀಂದ್ರರುಂದ್ರ

ವಚನಾಮೃತ ವಾರ್ಧಿಯನ್ ಈಸುವೆಂ" ಎಂದು ಹೇಳಿದರೂ ತನ್ನ ದೊರೆ ಅರಿಕೇಸರಿಯನ್ನು ಅರ್ಜುನನಿಗೆ ಸಮೀಕರಿಸ ಹೋಗಿ ಭಾರತವನ್ನು "ವಿಕ್ರಮಾರ್ಜುನ ವಿಜಯ" ಮಾಡಿದ. ಅಂತೆಯೇ ಕವಿ ಚಕ್ರವರ್ತಿ ರನ್ನ ತೈಲಪನನ್ನು ಸಮೀಕರಿಸಿ "ಸಾಹಸ ಭೀಮ ವಿಜಯ" ರಚಿಸಿದ. ಮಧ್ಯಕಾಲೀನ ಕನ್ನಡ ಸಾಹಿತ್ಯ ಲೋಕಕ್ಕೆ ಕಾಲಿಟ್ಟರೆ ಭಾಗವತ ಸಂಪ್ರದಾಯದ ನಾರಣಪ್ಪ ಮಹಾಭಾರತವನ್ನು "ತಿಳಿಯ ಹೇಳುವೆ ಕೃಷ್ಣಕಥೆಯನು ಇಳೆಯ ಜಾಣರು ಮೆಚ್ಚುವಂದದಿ" ಎಂದು ತಿಳಿಸಿ ಲೀಲಾಮಾನುಷ ಕೃಷ್ಣನ ಕಾರುಣ್ಯವನ್ನು ಕೊಂಡಾಡಿದ. ಮುಂದೆ ಬಂದ ಸಾಳ್ವನ "ಸಾಳ್ವ ಭಾರತ", ಲಕ್ಷ್ಮೀಶ ಕವಿಯ "ಜೈಮಿನಿ ಭಾರತ", ಕನಕದಾಸರ "ನಳಚರಿತ್ರೆ", ಗೋಪ ಕವಿಯ "ಚಿತ್ರಭಾರತ" ವಾದಿರಾಜರ ಭಾರತ ತಾತ್ಪರ್ಯ ನಿರ್ಣಯ, ಚಕ್ಕದೇವರಾಜರ "ಭಾರತ ಟೀಕು" ಮುಂತಾದ ರಚನೆಗಳು ವಿಭಿನ್ನ ದೃಷ್ಟಿಕೋನದ ಹಿನ್ನೆಲೆಯಿಂದ ರಚಿತವಾದವು. ಯಕ್ಷಗಾನ ಸಾಹಿತ್ಯಕ್ಕೆ ಪಾರ್ತಿಸುಬ್ಬ , ಧ್ವಜಪುರದ ನಾಗಪ್ಪಯ್ಯ, ಪಾಂಡೇಶ್ವರ ವೆಂಕಟರಾಮ, ಹಟ್ಟಿಯಂಗಡಿ ರಾಮಬಟ್ಟ, ಕಡಂದಲೆ ರಾಮರಾಯರೇ ಮುಂತಾದ ಯಕ್ಷಕವಿಗಳೂ ಅನೇಕ ಹೊಸ ಎಳೆಗಳನ್ನು ನೆಯ್ದು ಮಹಾಭಾರತದ ಹಾಸುಬೀಸಿಗೆ ಅಬ್ಬರ ಬಿರುಸುಕೊಟ್ಟಿದ್ದಾರೆ. ಅದೇರೀತಿ ಯಕ್ಷಗಾನದ ಪಾತ್ರಧಾರಿಗಳು, ತಾಳಮದ್ದಲೆಯ ಅರ್ಥಧಾರಿಗಳು ಕೂಡ ಸಂಸ್ಕೃತದ ವ್ಯಾಸಪ್ರಣೀತ ಭಾರತವನ್ನು ತಮ್ಮ ಪ್ರತಿಭೆ ಮೂಲಕ ವಿವರಿಸುತ್ತಾ, ವಿಶ್ಲೇಷಿಸುತ್ತಾ ಬೆಳೆಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಡೆಂಗೊಡ್ಲು , ಡಿವಿಜಿ, ದೇರಾಜೆ, ದೇವುಡು, ಮಾಸ್ತಿ, ಪುತಿನ, ತೋಳ್ಪಾಡಿ, ಭೈರಪ್ಪ ಮುಂತಾದವರೆಲ್ಲಾ ತಮ್ಮತಮ್ಮ ಕೊಡುಗೆಗಳನ್ನು ಧಾರೆಯೆರೆದಿದ್ದಾರೆ. ಹೀಗೆ ಕನ್ನಡ ಸಾಹಿತ್ಯದಲ್ಲಿ ಮಹಾಭಾರತ ವಿಪುಲವಾಗಿ, ಸದೃಢವಾಗಿ ಬೇರೂರಿದೆ. ಆ ಪರಂಪರೆಗೆ ಪಾಂಗಳರ ಕೊಡುಗೆ ವೈಶಿಷ್ಟ ಪೂರ್ಣವೂ, ಮಹತ್ತರವೂ ಆಗಿ ಉಲ್ಲೇಖಾರ್ಹವಾಗಿದೆ.

ಪಾಂಗಳರು ತಮ್ಮ "ವ್ಯಾಸಭಾರತ ಭಿನ್ನ ವಿನ್ಯಾಸ"ವನ್ನು ಒಂದು ವೈಚಾರಿಕ ನೆಲೆಗಟ್ಟು ಎಂದಿದ್ದಾರೆ. ಇದೊಂದು ರೀತಿಯಲ್ಲಿ ಟೀಕು ಇದ್ದಂತೆ. ಮೂಲಕತೆಗಿಂತ ಭಿನ್ನ ಚಿಂತನೆಯಿದ್ದು ಅಲ್ಲಿನ ಘಟನೆಗಳಿಗೆ ತಮ್ಮ ಮೂಸೆಯಲ್ಲಿ ಮೂಡಿದ ಚಿಂತನೆಗಳ ಲೇಪನವನ್ನು ಮಾಡುವ ಮೂಲಕ ಕೃತಿ ಇನ್ನಷ್ಟು ಮೆರುಗುವಂತೆ ನೋಡಿಕೊಂಡಿದ್ದಾರೆ. ಅಲ್ಲಿನ ಅನೇಕ ಸಂದಿಗ್ಧ ವಿಚಾರಗಳಿಗೆ ವಾಸ್ತವದ ಉತ್ತರವನ್ನು ನೀಡಲು ಪ್ರಯತ್ನಿಸಿದ್ದಾರೆ. ಪ್ರತಿ ಪಾತ್ರದ ಒಳತೋಟಿಯನ್ನು ಬಿಚ್ಚಿದರೂ ಕೂಡ ಕಲ್ಪನೆಗೆ ವಿರುದ್ಧವಾದ ಒಳನೋಟ ನೀಡಿದ್ದಾರೆ. ಮೂಲ ಮಹಾಭಾರತವು ಪದ್ಯ ಸಾಹಿತ್ಯಗಳಲ್ಲಿ "ಮಿತ್" ಸೃಷ್ಟಿಗೆ ಪೂರಕವಾಗಿದ್ದರೆ, ಪಾಂಗಾಳರ ಕೃತಿಯು ಗದ್ಯ ರೂಪದಲ್ಲಿದ್ದು "ಮಿತ್"ನ್ನು ಒಡೆಯುವಲ್ಲಿ ಯಶಸ್ವಿಯಾಗಿದೆ. ಲೇಖಕರು ಪ್ರತಿ ಅಧ್ಯಾಯವನ್ನು ಪ್ರಾರಂಭಿಸುವಾಗ ಅಲ್ಲಿನ ಚಿತ್ರವೊಂದನ್ನು ನೀಡುತ್ತಾ ಪಾತ್ರಕ್ಕೆ ಸಂಬಂಧಿಸಿದ ಘಟನೆಗಳ

ವಿಶ್ಲೇಷಣೆಗೆ ತೊಡಗುತ್ತಾರೆ. ಕೃತಿ ವೈಚಾರಿಕವಾಗಿದ್ದರೂ ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ. "ಭಿನ್ನವಿನ್ಯಾಸದ" ಮೊದಲನೆ ಅಧ್ಯಾಯ ಪ್ರಾರಂಭವಾಗುವುದು ಭೀಷ್ಮನು ಶರಶಯ್ಯೆಯಲ್ಲಿ ಮಲಗಿರುತ್ತಾನೆ. ಕಾವಲಿನವನೊಡನೆ ಬರುವ ಮಾತುಕತೆಯಲ್ಲಿ ಹಿನ್ನೋಟದ ಚಿತ್ರಣವಿದೆ. ಭೀಷ್ಮನ ಒಳಗುದಿಯ ನೋವಿದೆ. ಮುಂದೆ ಅಶ್ವತ್ಥಾಮ, ವ್ಯಾಸರು ಭೀಷ್ಮ ಮಲಗಿದ್ದಲ್ಲಿಗೆ ಬಂದಿದ್ದು, ಅದರೊಂದಿಗೆ ಕೃತಿಗೆ ಪಾಂಡವರ ಪ್ರವೇಶವೂ ಆಗುತ್ತದೆ. ಅಶ್ವತ್ಥಾಮನ ಹಿನ್ನೋಟದದಲ್ಲಿ ಗುರುಕುಲ ಶಿಕ್ಷಣದ ಸೈದ್ಧಾಂತಿಕ ವಿಚಾರವಿದೆ. ಭೀಷ್ಮನ ಉದ್ದೇಶ, ದ್ರೋಣ, ಕೃಪರ ವಿಚಾರ, ಸತ್ಯವತಿಯು ಯೋಜನಗಂಧಿಯಾದ ವಿಚಾರ, ಅದರೊಂದಿಗೆ ವ್ಯಾಸರ ಕತೆಯು ಬರುತ್ತದೆ.

ಪಾಂಗಾಳರು ಪಾಂಚಾಲರ ಹಾಗೂ ಕುರುಸಾಮ್ರಾಜ್ಯಗಳ ದ್ವೇಷದ ಕತೆಯನ್ನು ಇಲ್ಲಿ ಹೇಳುವ ಮೂಲಕ ರಾಜಕೀಯ ರಂಗದ ಚದುರಂಗದಾಟದ ವಿಚಾರಧಾರೆಗಳಿವೆ. ಭೀಷ್ಮನ ವೃತ್ತಾಂತಕ್ಕೆ ಹೊಸ ತಿರುವು ಇಲ್ಲಿದೆ. ಕೃಷ್ಣನ ವಿಚಾರದಲ್ಲಿ ಪಾಂಗಾಳರು ನಿಜದ ಸಮೀಪಕ್ಕೆ ಬಂದಿದ್ದಾರೆ. ಧೃತರಾಷ್ಟ್ರನ ವಿಚಾರಧಾರೆಯಲ್ಲೂ ಕೂಡ ಕೃಷ್ಣನ ಬಗ್ಗಿರುವ ಯೋಚನಾಲಹರಿ ಪ್ರಧಾನವಾಗುತ್ತದೆ. ಗಾಂಧಾರಿಯು ರಾಜಿ ಮಾಡಿಕೊಳ್ಳುವ ಮನೋವೃತ್ತಿಯ ವಿಶ್ಲೇಷಣೆ ಚೆನ್ನಾಗಿದೆ. ಐದನೆಯ ಅಧ್ಯಾಯದಲ್ಲಿ ಬರುವ ಉಗ್ರಸೇನ, ಕೃಷ್ಣ ಮುಂತಾದವರ ಸ್ವಗತಗಳು ಬಹು ಮಾರ್ಮಿಕವಾಗಿವೆ. ಧರ್ಮದ ಕುರಿತ ಜಿಜ್ಞಾಸೆಯಲ್ಲಿ ಅನೇಕ ಹೊಸವಿಚಾರಗಳನ್ನು ಹೇಳುತ್ತಾರೆ. ಜರಾಸಂಧನ ಕತೆಗೆ ಕೂಡ ವಾಸ್ತವದ ಸ್ಪರ್ಶವನ್ನು ಪಾಂಗಾಳರು ನೀಡಿದ್ದಾರೆ. ಕೃಷ್ಣನ ಉದ್ದೇಶ ಗಣರಾಷ್ಟ್ರಗಳ ಸ್ಥಾಪನೆ ಎನ್ನುವುದು ಹೊಸ ಚಿಂತನೆಯಿಂದ ಕೂಡಿದೆ. ಜಗತ್ತು ಹೆಚ್ಚು ಹೆಚ್ಚು ಪ್ರಜಾಪ್ರಭುತ್ವದ ಕಡೆಗೆ ಹೊರಳಿದಾಗ ಇಂತಹ ಚಿಂತನೆಗಳ ಮೌಲಿಕವಾಗುತ್ತವೆ. ಕೃಷ್ಣನ ಕುರಿತು ಲೇಖಕರು ಕೊಡುವ ವಾಸ್ತವ ಸ್ಪರ್ಶ ವಿನೂತನವಾದದ್ದು (ಪುಟ101), ಅದೇ ರೀತಿ ಕೃಪ ಮತ್ತು ಕೃಪೆಯರ ಸಂವಾದದಲ್ಲಿ ಕೂಡಾ ಈ ಬಗೆಯ ಬದುಕಿನ ತೊಳಲಾಟಗಳನ್ನು ಕಾಣಬಹುದು.

ಈ ಪುಸ್ತಕದಲ್ಲಿ ಒಟ್ಟು ಏಳುನೂರ ಐವತ್ತು ಚಿಂತನೆಗಳು ಸೃಜನಾತ್ಮಕವಾಗಿ ಹರಳುಗಟ್ಟಿದ್ದನ್ನು ನೋಡಬಹುದು. ಇವತ್ತಿನ ಸಮಕಾಲೀನ ಬದುಕಿಗೆ ಅಗತ್ಯವಾಗುವ ಅನೇಕ ವಿಚಾರಗಳು ಇಲ್ಲಿನ ಚಿಂತನೆಗಳಲ್ಲಿ ಬರುತ್ತದೆ. ಪೌರಾಣಿಕ ಪಾತ್ರಗಳಾದರೂ ಅವರಾಡುವ ಮಾತುಗಳು ಎಲ್ಲಾಕಾಲಕ್ಕೂ ಹೊಂದುತ್ತದೆ. ಇದಕ್ಕೆ ಕೆಲವನ್ನು ಉದಾಹರಣೆಗಾಗಿ ಗಮನಿಸಬಹುದು.

1. ಪ್ರತಿಯೊಂದು ಘಟನೆಗಳು ಭೂತದ ಅತೀತದ ಸೋಪಾನದ ಮೇಲೆ ಕಟ್ಟಿರುವ ಸೌಧಗಳು (ಪುಟ–4)

2, ಉತ್ತಮ ಮಾನವ ಗುಣವೇ ದೈವಶಕ್ತಿ ಅಲ್ಲವೇ? ದೈವಶಕ್ತಿ ಇಲ್ಲದೇ ಮಾನವ ಶಕ್ತಿ ಒಂದೇ ಉಳಿಯಲು ಸಾಧ್ಯವೇ? (ಪುಟ 100)

3. ಅವಮಾನ, ದ್ವೇಷ, ತಿರಸ್ಕಾರದಿಂದ ಬಾಳುತ್ತಿದ್ದ ಬಾಳು ಮರಣ ಸದೃಶ್ಯವಲ್ಲವೇ? (ಪುಟ 69)

4. ಅನ್ಯಾಯವನ್ನು ವಿರೋಧಿಸದೇ ಇರುವುದೂ ನಿಷ್ಕ್ರಿಯವಾಗಿ ಇರುವುದೂ ಅಧರ್ಮ (ಪುಟ 111)

5. ದೊರೆಗಳು ಪ್ರೀತಿ ತೋರಿದ್ದಲ್ಲಿ ಅದರಲ್ಲಿ ಬಾಳುವ ಪ್ರಜೆಗಳು ರಾಜಾಶ್ರಯದಲ್ಲಿ ರಾಜಾಜ್ಞೆಯನ್ನು ಮೀರುವುದಿಲ್ಲ. ಆ ಸ್ವಾತಂತ್ರ್ಯವೀಯುವುದು ಆಳುವವರ ಕರ್ತವ್ಯ (ಪುಟ 216)

6. ಸಾಮಾನ್ಯ ಜನಕ್ಕೆ ಧರ್ಮ ಎಂಬುದೇ ಅಡ್ಡ ಗೋಡೆಯ ಮೇಲಿನ ದೀಪ (ಪುಟ 280)

7. ಆತ್ಮ ಪ್ರಶಂಸೆ ಎಷ್ಟು ಕೆಟ್ಟದೋ ಅಂತೆಯೇ ಆತ್ಮಗ್ಲಾನಿಯು. ಪಶ್ಚಾತ್ತಾಪದ ಅಗ್ನಿಯಲ್ಲಿ ಬೆಂದವರಿಗೆ ಬೇರೆ ಮುಕ್ತಿ ಬೇಕಿಲ್ಲ. (ಪುಟ 291)

8. ಪ್ರಜೆಗಳಿಗಾಗಿಯೇ ದೊರೆಯೆಂಬುವುದನ್ನು ಮರೆತೆಯೇ? ವಂಶ ಪಾರಂಪರತೆಯೂ ಅಧಿಕಾರ ಸಿದ್ಧಪಡಿಸುವುದಿಲ್ಲ. (ಪುಟ 472)

9. ಎಷ್ಟೊಂದು ಮೇಧಾವಿಯಾದರೂ, ಎಷ್ಟೊಂದು ಜಾಗ್ರತೆವಹಿಸಿದರೂ ಕೆಲವೊಮ್ಮೆ ಎಡವುತ್ತಾರೆ. ಅದು ದೈವ ನಿಯಾಮಕ. ಅನೇಕ ಮತಗಳನ್ನು ಸದಾ ನೆನಪಿನಲ್ಲಿರಿಸಿಕೊಳ್ಳುವ ಮಾದರಿಯಲ್ಲಿದೆ. (ಪುಟ 102)

ಇಲ್ಲಿ ಪಾಂಗಾಳರು ತಮ್ಮ ಜೀವನದ ವಿಚಾರಧಾರೆಗಳನ್ನು ಪಾತ್ರಗಳ ಮೂಲಕ ತೋರಿಸಿಕೊಟ್ಟಿದ್ದಾರೆ.

ಈ ಕೃತಿಯ ಪ್ರಾರಂಭದಲ್ಲಿ ಸಂಕ್ಷೇಪವಾಗಿ ವ್ಯಾಸಭಾರತದ ಕತೆಯನ್ನು ಪಾಂಗಾಳರು ಕೊಟ್ಟಿದ್ದಾರೆ. ಸುಮಾರು ನೂರಾನಾಲ್ಕು ಪುಟಗಳಷ್ಟು ವಿಸ್ತಾರವಾಗಿ ಮಹಾಭಾರತದ ಕತೆ ಬಂದಿದೆ. ಇದರಿಂದಾಗಿ ಮುಂದೆ ಕೃತಿಯಲ್ಲಿ ಬಂದಿರುವ ವಿಶ್ಲೇಷಣೆಯನ್ನು ತಾಳೆ ಹಾಕಿ ನೋಡಬಹುದಾಗಿದೆ. ಇದು ಪ್ರತಿಯೊಬ್ಬ ಕನ್ನಡಿಗನೂ ಓದಬೇಕಾದ ಕೃತಿಯಾಗಿದೆ. ಪಾಂಗಾಳರು ಧರ್ಮ, ಜ್ಞಾನವನ್ನು ವಾಸ್ತವದ ನೆಲೆಗಟ್ಟಿನಲ್ಲಿ ಹೇಗೆ ತಿಳಿಸಿಕೊಟ್ಟಿದ್ದಾರೆ ಎಂಬುವುದಕ್ಕೆ ಕೆಳಗಿನ ಒಂದೆರಡು ಉದಾಹರಣೆಯನ್ನು ಗಮನಿಸಬಹುದು.

"ವಸುದೇವ ಬಲರಾಮರ ನಡುವೆ ನಡೆದ ಸಂಭಾಷಣೆ"ಯ ತುಣುಕೊಂದನ್ನು ಹೀಗೆ ಕೊಟ್ಟಿದ್ದಾರೆ.

"ಕೆಲವೊಮ್ಮೆ ನನಗನಿಸುವುದುಂಟು ತಪ್ಪು ಸಂಪೂರ್ಣ ಕಂಸನದಲ್ಲ. ಕಂಸನಂಥವರನ್ನು ಹುಟ್ಟು ಹಾಕಿದ, ಬೆಳೆಯಲು ಬಿಟ್ಟ, ಹೆದರಿ ಸಹಿಸಿಕೊಂಡ ಈ ಸಮಾಜದ ತಪ್ಪು. ಅಂತಹ ತಪ್ಪು ಮಾಡುವ ಸಮಾಜ ರಾಕ್ಷಸರು ಕೊಡುವ ಕೀಟಲೆಯನ್ನು ಅನುಭವಿಸಲೇ ಬೇಕು. ಅತ್ತರೆ ಉಪಯೋಗವಿಲ್ಲ. ಅತ್ತಷ್ಟೂ ರಾಕ್ಷಸೀ ಪ್ರವೃತ್ತಿ ಬೆಳೆಯುತ್ತಾ ಹೋಗುತ್ತದೆ. ಅದಕ್ಕೆ ಉತ್ತೇಜನ ಸಿಕ್ಕಿದಂತಾಗುತ್ತದೆ. ಎದೆ ತಟ್ಟಿ ನಿಂತು ಅದನ್ನು ಮೆಟ್ಟಿ ಹಾಕುವ ದೈವಶಕ್ತಿ ಇದ್ದಲ್ಲಿ ಮಾತ್ರ ಉದ್ಧಾರ ಆದೀತು. (ಪುಟ 100)"

"ರಾಜಕಾರಣ ಎಷ್ಟೊಂದು ಕ್ಲಿಷ್ಟ. ಗೋಜಲು ಅಲ್ಲವೇನಪ್ಪ. ಎಲ್ಲರೂ ಅವರವರ ಪಾಡಿಗೆ ಹಾಯಾಗಿದ್ದರೆ ಎಲ್ಲಿಯ ಯುದ್ಧ? ಎಲ್ಲಿಯ ಮತ್ಸರ? ಭಗವಂತ ಇತ್ತ ಆಯುಷ್ಯವನ್ನು ನಾಲ್ಕು ಸತ್ಕಾರ್ಯ ಮಾಡಿ ಕಳೆದರೆ ಆಗದೇ! ಎಲ್ಲಾ ಕಡೆಯೂ ಶಾಂತಿ ನೆಲೆಸದೇ!" (ಪುಟ 101)

"ಸಿಂಹಾಸನದ ಮೇಲೆ ಯಾರು ಕುಳಿತರೇನು? ದುಡಿಯುವ ಆಳುಗಳಿಗೆ ಸಿಂಹಾಸನ ಮುಖ್ಯವೇ ಹೊರತು, ಅದರ ಮೇಲೆ ಕುಳಿತಿರುವ ವ್ಯಕ್ತಿಯಲ್ಲ. ನಾಳೆ ಸಿಂಹಾಸನ ಉರುಳಿತೋ, ಇನ್ನೊಂದು ಸಿಂಹಾಸನ ಹುಡುಕಿಕೊಂಡು ಹೋಗುತ್ತಾರೆ. ದೇಶ ಪ್ರೇಮ, ಸ್ವಾಮಿ ನಿಷ್ಠೆ ಎಲ್ಲಾ ಸುಳ್ಳು. ಹೊಟ್ಟೆ ತುಂಬಲು ಅವಕಾಶ ದೊರೆಯುವುದೋ ಅದಕ್ಕೆ ಜನರು ನಿಷ್ಠರು. ಒಂದು ರೀತಿಯ ಸ್ವಾರ್ಥಿಗಳು. ಮೊದಲು ಸ್ವಾರ್ಥಕ್ಕೆ, ಬಳಿಕ ಅದಕ್ಕೆ ಪೂರಕವಾಗಿ, ಪೋಷಕವಾಗಿ ನಮ್ಮವರು, ಬಂಧುಗಳು, ಮಿತ್ರರು, ರಾಜ, ಪ್ರಜೆ, ರಾಷ್ಟ್ರ, ಧರ್ಮ, ಮಿಕ್ಕುಳಿದವು" (ಪುಟ 122)

ಹೀಗೆ ಈ ರೀತಿಯ ಜಿಜ್ಞಾಸೆಗಳು ಈ ಕೃತಿಯ ಉದ್ದಕ್ಕೂ ಬರುತ್ತದೆ. ಮಹಾಭಾರತದ ಪಾತ್ರಗಳನ್ನು, ಸನ್ನಿವೇಶಗಳನ್ನು ಇಟ್ಟುಕೊಂಡು ಜಿಜ್ಞಾಸೆಯನ್ನು ಏರ್ಪಡಿಸಲಾಗಿದೆ. ಈ ಎಲ್ಲಾ ಜಿಜ್ಞಾಸೆಗಳಲ್ಲಿ ಲೇಖಕರ ಸೂಕ್ಷ್ಮ ಸಂವೇದನೆಯನ್ನು, ನೂತನ ದೃಷ್ಟಿಕೋನವನ್ನು ನೋಡಬಹುದಾಗಿದೆ. ಕೃಷ್ಣನ ಮೂಲ ಉದ್ದೇಶ ಧರ್ಮ ಸಂಸ್ಥಾಪನೆ ಎಂಬುವುದನ್ನು ಲೇಖಕರು ಒಪ್ಪಿಕೊಂಡಿದ್ದಾರೆ. ಅವರ ಅನೇಕ ಬಗೆಯ ಬರವಣಿಗೆಗಳಲ್ಲಿ ಇದು ವ್ಯಕ್ತವಾಗುತ್ತದೆ. ಕೃಷ್ಣನ ಜನನ ವೃತ್ತಾಂತ, ಕಂಸವಧಾ ಪ್ರಕರಣ, ದ್ರೌಪದಿಯ ವಿವಾಹ ಸಂದರ್ಭ, ರಾಜಸೂಯದ ಸಂದರ್ಭಗಳಲ್ಲೆಲ್ಲಾ ಈ ಜಿಜ್ಞಾಸೆ ಹೆಚ್ಚು ಪ್ರಖರವಾಗುತ್ತದೆ. ಆ ಮೂಲಕ ಪಾಂಗಾಳರ ಈ ಕೃತಿಗೆ ಹಿರಿಮೆ-ಗರಿಮೆಗಳು ಲಭಿಸುತ್ತದೆ.

ಕೃತಿಗೆ ಮುನ್ನುಡಿಯನ್ನು ಬರೆದ ಪ್ರೊ.ಜಿ. ವೆಂಕಟಸುಬ್ಬಯ್ಯನವರು ಈ ಗ್ರಂಥವನ್ನು ಓದಿದಾಗ ಇದೊಂದು ಮಾನವ ಶಾಸ್ತ್ರೀಯ ದೃಷ್ಟಿಯಿಂದ ಕೂಡಿದ ಸಂಶೋಧನೆಯ ಬರಹ ಎಂಬ ಭಾವನೆ ಉಂಟಾಗುತ್ತದೆ. ವೈಜ್ಞಾನಿಕ ಮನೋಭಾವದ ವ್ಯಕ್ತಿ ಇತಿಹಾಸವನ್ನು ಹೇಗೆ ಪರಿಶೀಲಿಸಬಹುದು ಎಂಬುವುದಕ್ಕೆ ಇದೊಂದು ದೃಷ್ಟಾಂತ" ಎಂದಿದ್ದಾರೆ. ಅವರ ಮಾತು ಅಕ್ಷರಶಃ ಸತ್ಯ. ಈ ವಿಚಾರದಲ್ಲಿ ಒಂದೇ ಹೆಸರಿನ ವ್ಯಕ್ತಿಗಳು ಬೇರೆಬೇರೆ ಕಾಲದಲ್ಲಿ ಇದ್ದಿರಬೇಕೆಂಬ ಸೂಚನೆಯು ಪಾಂಗಾಳರಿಗೆ ಖಚಿತವಾದ ಸಂಗತಿಯಾಗಿದೆ. ಇದಕ್ಕಾಗಿಯೇ ಗ್ರಂಥದ ಕೊನೆಯಲ್ಲಿ ಲೇಖಕರು ವಂಶವೃಕ್ಷದ ಪಟ್ಟಿಯನ್ನು, ಅದೇರೀತಿ ಅಕ್ಷೋಹಿಣಿ ಸೈನ್ಯದ ಕುರಿತು, ಸೇನಾವ್ಯೂಹದ ಕುರಿತು ಸಂಶೋಧನಾತ್ಮಕ ಚಿತ್ರಗಳನ್ನು ಕೊಟ್ಟಿದ್ದಾರೆ. ಮಹಾಭಾರತ ಕಾಲದ ಭೌಗೋಳಿಕ ನಕ್ಷೆಗಳನ್ನು ಕೂಡಾ ನೀಡಿದ್ದಾರೆ. ಅನೇಕ ಅವಾಸ್ತವದ ಸಂಗತಿಗಳಿಗೆ ತಮ್ಮ ಚಿಂತನೆಗಳಿಂದ ವಾಸ್ತವದ ಚಿತ್ರಣ ಕೊಟ್ಟಿದ್ದಾರೆ. ಈ ಮೂಲಕ ಆ ಘಟನೆಗಳು, ಸಂಘಟನೆಗಳು, ಪಾತ್ರಗಳು ಆಧುನಿಕರಿಗೆ ಹೆಚ್ಚು ಆಪ್ತವಾಗುತ್ತವೆ. ವ್ಯಾಸನ ಹುಟ್ಟಿನ ಕತೆ ಇರಬಹುದು, ಕುಂತಿಗೆ ಮಕ್ಕಳಾದ ಬಗೆಯ ಸಂಗತಿ ಇರಬಹುದು. ಇಲ್ಲೆಲ್ಲಾ ಲೇಖಕರು ಕೊಡುವ ಉತ್ತರ ವಿನೂತನವಾಗಿದ್ದು ಆಧುನಿಕ ಮನಸ್ಸಿಗೆ ಒಪ್ಪಿಗೆಯಾಗುವಂತಿದೆ.

ಡಾ. ಆರ್.ಆರ್. ಪಾಂಗಾಳರು ಪಾತ್ರಗಳ ಸ್ವಗತವನ್ನು ಕೊಡುವ ಪರಿ ಬಹು ವಿಶಿಷ್ಟವಾಗಿದೆ. ಉದಾಹರಣೆಗೆ ಪುಟ 311 ಹಾಗೂ ಮುಂದೆ ಪುಟ 368 ರಲ್ಲಿ ಬರುವ ಚಿಂತನೆಗಳು, ಎದುರು ಪಾತ್ರದೊಂದಿಗೆ ಆಡುವ ಮಾತುಗಳಲ್ಲಿ ಆ ಪಾತ್ರದ ಎಲ್ಲಾ ವಿಚಾರಗಳು ಸವಿವರವಾಗಿ ಚಿತ್ರಿತವಾಗಿವೆ. ಗಾಂಧಾರಿಗೆ ಎದುರಾಗಿ ಧೃತರಾಷ್ಟ್ರನಾಡುವ ಈ ಮಾತುಗಳನ್ನು ಗಮನಿಸಬಹುದು.

"ಹೊಸತೇನನ್ನೂ ಕಾಣಲಾಗದವರು ನಾವು ಹಳೆಯ, ನಾವು ಅನುಭವಿಸಿದ, ಕೇಳಿದ ಘಟನೆಗಳನ್ನು ಮೆಲಕು ಹಾಕುತ್ತಾ ನಾನು ಗಾಂಧಾರಿಯು ಕಾಲ ಕಳೆದಿದ್ದೇವೆ. ಇನ್ನು ಮುಂದೆಯೂ ಹೊಸ ಲೋಕಕಲ್ಯಾಣ ಯೋಜನೆಗಳನ್ನು ಕಲ್ಪಿಸಿಕೊಳ್ಳಲು ಈ ಅಂಧತ್ವ ಒಂದು ತಡೆ ಎಂಬುವುದರ ಅರಿವು ಈಗ ನನಗಾಗುತ್ತಿದೆ. ಪ್ರತಿಯೊಬ್ಬರೂ ದಾರ್ಶನಿಕರಾಗ ತೊಡಗಿದರೆ ಕೇಳುವ ಕಿವಿಗಳಿಗಿಂತ ಹೇಳುವ ಬಾಯಿಗಳೇ ಅಧಿಕವಾದಾವು."

"ಒಂದಲ್ಲ ಒಂದು ವಿಧದಲ್ಲಿ ಕೃಷ್ಣ ಅವರವರ ಗುಣಕ್ಕೆ ಅನುಸಾರವಾಗಿ ಬಂದು ನಮ್ಮನ್ನು ಕಾಡುತ್ತಾನಲ್ಲಾ."

"ದುಶ್ಯಾಸನನ ನೇರ ಮಾತುಗಳಿಂದ ನನ್ನ ಸ್ಥಾನವನ್ನು, ತಮ್ಮ ನಿಲುವುಯೇನು? ಎಂಬುದನ್ನು ನಿರ್ದಿಷ್ಟ ಪಡಿಸಿದ. ಸಿಂಹಾಸನಕ್ಕೆ ಅಂಟಿಕೊಳ್ಳುತ್ತಲೇ ಕಿತ್ತು ಎಸೆದ."

ಹೀಗೆ ಆತನ ಹಾಗೂ ಗಾಂಧಾರಿಯ ಮಾತುಗಳಲ್ಲಿ ಅವರವರ ವ್ಯಕ್ತಿತ್ವವೇ ಪ್ರಮುಖವಾಗಿ ಬಂದಿವೆ.

ಮಹಾಭಾರತಕ್ಕೆ ಸಂಬಂಧಿಸಿದಂತೆ ತಾಳಮದ್ದಳೆಯ ಖ್ಯಾತ ಅರ್ಥಧಾರಿಯ ದೇರಾಜೇ ಸೀತಾರಾಮಯ್ಯನವರು "ಕುರುಕ್ಷೇತ್ರಕ್ಕೊಂದು ಆಯೋಗ" ಎಂಬ ಕೃತಿ ಬರೆದಿದ್ದಾರೆ. ಇಲ್ಲಿ ಅವರು ಅರ್ಥಗಾರಿಕೆಗೆ ಅನುಕೂಲವಾಗುವಂತಹ ತಮ್ಮ ಮತುಗಾರಿಕೆಯನ್ನು ಬರಹ ರೂಪಕ್ಕೆ ಇಳಿಸಿದ್ದಾರೆ. ಹದಿನೈದು ಪಾತ್ರಗಳ ಒಳದನಿ ಆ ಪುಸ್ತಕದಲ್ಲಿದೆ. ಅಲ್ಲಿ ವಾಗ್ವಾದಕ್ಕೆ ಸಮರ್ಥನೆಗೆ ಅನುಕೂಲವಾಗುವ ರೀತಿಯಲ್ಲಿ ಹೆಣೆಯಲಾಗಿದೆ. ಆದರೆ ಪಾಂಗಾಳರ ಈ ಗ್ರಂಥ ಅದಕ್ಕಿಂತ ತುಂಬಾ ಬೇರೆಯಾಗಿದೆ. ನಾಟಕ ರೂಪಕ್ಕೆ, ಸಂವಾದಕ್ಕೆ, ವಿರುದ್ಧವಾದ ಇದೊಂದು ರೀತಿಯಲ್ಲಿ ಕಾದಂಬರಿಯ ರೀತಿ ಓದಿಸಿಕೊಂಡು ಹೋಗುತ್ತದೆ. ಇಲ್ಲಿ ಹೆಚ್ಚಾಗಿ ಭೀಷ್ಮನ ಮೂಲಕ ಬರುವ ಹಿನ್ನೋಟ, ಆತ ಮುಖ್ಯನೊಂದಿಗೆ ಮಾತನಾಡುವ ಪರಿಯೆಲ್ಲಾ ಭಾವಪೂರ್ಣವಾಗಿವೆ. ಆತನ ಅಂತರಂಗ ಒಳತೋಟಿಯನ್ನೆಲ್ಲಾ ಪಾಂಗಾಳರು ತೆರೆದಿಟ್ಟಿದ್ದಾರೆ. ಇಪ್ಪತ್ತರಡನೇ ಅಧ್ಯಾಯದಲ್ಲಿ ಇದನ್ನು ಗಮನಿಸ ಬಹುದು. ಶರಶಯ್ಯೆಯಲ್ಲಿದ್ದ ಭೀಷ್ಮ ಯುಧಿಷ್ಠರನ ಪಟ್ಟಾಭಿಷೇಕದ ದಿನ ಹೇಗೆ ಪ್ರತಿಕ್ರಿಯಿಸಿದ ಎಂಬುದನ್ನು ಲೇಖಕರು ಬಹು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಶಕುನಿಯ ಬಗ್ಗೆ ಭೀಷ್ಮನಾಡುವ ಮಾತುಗಳು ಅರ್ಥಪೂರ್ಣವಾಗಿವೆ. "ಇಲ್ಲಿ ಹೀಗೆ ಮಲಗಿದವನಿಗೆ ಕನಸಿನ ಆಧಾರಬಿಟ್ಟು ಬೇರೇನು ಸಿಕ್ಕೀತು ಹೇಳು? ಒಂದಿಲ್ಲೊಂದು ವಿಧದ ಕನಸು ಹೇಳಿಕೇಳಿ ಬರುತ್ತದೆಯೇ! ಒಳ್ಳೆಯದೋ? ಕೆಟ್ಟದ್ದೋ? ಯಾರಿಗೆ ಗೊತ್ತು? ಏನಿದ್ದರೂ ಅದು ನಮಗೆ ಒಂದಾದ ಬಳಿಕ ಇನ್ನೊಂದು, ಕ್ರಮ ಪ್ರಕಾರ ಬರಬೇಕೆಂಬುದಿಲ್ಲ. ಅದಕ್ಕೆ ಮುಂದೆ ಉತ್ತರ ಗೋಗ್ರಹಣದ ಸಂದರ್ಭವನ್ನು ಭೀಷ್ಮರು ತಿಳಿಸುತ್ತಾರೆ. ಕುಮಾರವ್ಯಾಸನಲ್ಲಿ ಈ ಗೋಗ್ರಹಣ" ಹಾಸ್ಯರಸ ಪೂರಿತವಾಗಿದೆ. ಆದರೆ ಪಾಂಗಾಳರು ಅದೊಂದು ಯುದ್ಧ ತಂತ್ರದ ಭಾಗ ಎಂಬಂತೆ ನಿರೂಪಿಸಿದ್ದಾರೆ. ಪ್ರತಿ ನಿರ್ಣಯಕ್ಕೂ ಖರಾರುವಾಕ್ಕಾದ ಲೆಕ್ಕಾಚಾರವನ್ನು ಇಲ್ಲಿ ಭೀಷ್ಮರ ಮೂಲಕ ಲೇಖಕರು ವಿವರಿಸುತ್ತಾರೆ. ಹೀಗೆ ವ್ಯಾಸ ಭಾರತಕ್ಕೆ ಭಿನ್ನವಾದ ಆಯಾಮವನ್ನು, ವಿನ್ಯಾಸವನ್ನು ನೀಡುತ್ತಾರೆ. ವಿರಾಟಪರ್ವದ ಕತೆ ಹೇಳುತ್ತಾ ಧರ್ಮರಾಜನು ಸಿಂಹಾಸನವನ್ನು ಏರಿದ ವರ್ಣನೆಯು ಭೀಷ್ಮರ ಮಾತಿನ ಮೂಲಕ ಬರುತ್ತದೆ. ಮುಖ್ಯಸ್ಥನು ಭೀಷ್ಮರದ್ದು ಹೊಸ ಚಿತ್ತಭ್ರಮಣೆಯೆಂದು ಬಗೆಯುತ್ತೇನೆ. ಅದನ್ನು ಇಪ್ಪತ್ತೈದನೇ ಅಧ್ಯಾಯದಲ್ಲಿ ಗಮನಿಸಬಹುದು. ಭೀಷ್ಮರಿಗೆ ಪಾಂಡವರು ಹೊಸ ಅಧಿಕಾರದಲ್ಲಿ ತಮ್ಮ ಹಳೆಯ ವ್ಯಕ್ತಿತ್ವವನ್ನು ಕಳಚಿಕೊಳ್ಳುವರೋ ಎಂಬ ಭಯವಿದೆ. ಅದಕ್ಕೆ ಅವರು ಕೊಡುವ ಕಾರಣವೂ ಕೂಡಾ ವಿಶೇಷವಾಗಿವೆ.

"ಅಧಿಕಾರ ಎಂತಹವರ ತಲೆಯನ್ನು ಕೆಡಿಸೀತು. ಧೃತರಾಷ್ಟ್ರ ಬಾಲಕನಾಗಿರುವಾಗ ಹಾಗೇ ಸ್ವಾರ್ಥಿಯಾಗಿದ್ದನೆ? ಅಧಿಕಾರ ಅವನಲ್ಲಿ ಎಂತಹ ಬದಲಾವಣೆ ತಂದಿತು. ದುರ್ಯೋಧನ ನನ್ನ ಬೆರಳು ಹಿಡಿದು ಬೆಳೆದವನು. ಅವನು ನನ್ನನ್ನೇ ಗೃಹಬಂಧನದಲ್ಲಿ ಇಡಲು ಪ್ರಯತ್ನ ಮಾಡುತ್ತಿದ್ದನೇ? ನನ್ನನ್ನು, ಮಿಕ್ಕುಳಿದ ಹಿರಿಯರನ್ನು, ಈ ಹಸ್ತಿನೆಯನ್ನು ತನ್ನ ಮುಷ್ಟಿಯೊಳಗಿಟ್ಟುಕೊಳ್ಳಲು ಮಾಡಿದ ಪ್ರಯತ್ನ ಏನಾಯಿತು? ಅವನ ಮುಷ್ಟಿ ಅಷ್ಟು ದೊಡ್ಡದಿತ್ತೇ?" (ಪುಟ 551) ಈ ಮಾತುಗಳಲ್ಲಿ ಇಂದಿನ ರಾಜಕಾರಣದ ವಾಸನೆ ಬಡಿಯುತ್ತದೆ. ಪೌರಾಣಿಕ ಹಿನ್ನಲೆಯಲ್ಲಿ ಸಮಕಾಲೀನ ಚಿಂತನೆಗಳು, ವಿಚಾರಗಳು ಬಂದು ಗ್ರಂಥವು ಓದುಗರಿಗೆ ಬಹು ಸನಿಹವಾಗುವಂತೆ ಲೇಖಕರು ಮಾಡಿದ್ದಾರೆ.

ಭೀಷ್ಮನಿಗೆ ಪಟ್ಟ ಕಟ್ಟುವ ಸಂದರ್ಭದ ಚಿತ್ರಣವನ್ನು ಪಂಪ ಬಹು ಸೊಗಸಾಗಿ ನಿರೂಪಿಸಿದ್ದಾನೆ. "ಕುಲಂಕುಲಮಲ್ತು, ಚಲಂಕುಲಂ, ಅಭಿಮಾನ ಒಂದೇ ಕುಲ" ಎಂದು ಹೇಳಿದ ಕರ್ಣನು ಯುದ್ಧಕ್ಕೆ ಬರುವುದಿಲ್ಲವೆಂದಾಗ ಭೀಷ್ಮನು ಹೇಳುವ ಶಾಂತಚಿತ್ತದ ಮಾತಾದ" ಸೂಳ್ ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್" ಎಂಬುವುದು ಪ್ರಬುದ್ಧರ ಮಾತಿನಂತೆ ಕಂಡು ಬರುತ್ತದೆ. ಪಂಪ ಕವಿಯ ಚಿತ್ರಕ ಶಕ್ತಿ ಇಂತಹುದನ್ನು ಬೆರಗುಗೊಳಿಸುವಂತದ್ದು. ಅದೇ ಪ್ರಸಂಗವನ್ನು ಡಾ. ಆರ್.ಆರ್. ಪಾಂಗಾಳರು ತಮ್ಮ ಕೃತಿಯ ಇಪ್ಪತ್ತೆಂಟನೇ ಅಧ್ಯಾಯದಲ್ಲಿ ಅಷ್ಟೆ ಹೃದಯತುಂಬುವಂತೆ ವಿವರಿಸಿದ್ದಾರೆ. ಕರ್ಣ, ಭೀಷ್ಮ, ದ್ರೋಣರ ಬಗ್ಗೆ ಹೇಳುತ್ತಾ "ಭೀಷ್ಮ ಈಗ ಹಣ್ಣುಹಣ್ಣು ಮುದುಕ ಏನಾದೀತು? ಅವರಿಂದ ಈ ಗುರುಗಳು ಅಷ್ಟೇ ಮುದುಕರು. ಅಲ್ಲದೇ ಬ್ರಾಹ್ಮಣರು ದರ್ಭೆ ಕೈಯಲ್ಲಿ ಹಿಡಿದುಕೊಂಡು ಯುದ್ಧಕ್ಕೆ ಹೋಗಲಾದೀತೇ?" ಎಂದು ಅಣಕಿಸುತ್ತಾನೆ. ಅಶ್ವತ್ಥಾಮನ ಪ್ರತಿಮಾತು, ದುರ್ಯೋಧನನ ಸಮಾಧಾನ, ಎಲ್ಲಾ ಕಣ್ಣಿಗೆ ಕಟ್ಟುವಂತೆ ಬಂದಿದೆ (ಪುಟ 638). ಇಲ್ಲಿ ಸಂಜಯನ ಬಗ್ಗೆ, ಆತನ ಕಾರ್ಯಶೈಲಿಯ ಬಗ್ಗೆ ದುರ್ಯೋಧನನಾಡುವ ಮಾತುಗಳಲ್ಲಿ ಇಂದಿನ ಮಾಧ್ಯಮ ಪ್ರತಿನಿಧಿಗಳು, ಪತ್ರಿಕಾಕರ್ತರ ಬಗ್ಗೆ ಹೇಳುತ್ತಿದ್ದಂತಿದೆ." ಹೋರಾಡುವವರು ಯೋಧರು, ಸುದ್ದಿವಾಹಕರು ಅಲ್ಲಿ ಓಡಾಡುವವರನ್ನು ಕಂಡು ಅದಕ್ಕೆ ಬಣ್ಣ ಹಚ್ಚಿ, ಪ್ರಸಾರ ಮಾಡುವುದಷ್ಟೇ ಅವರ ಕೆಲಸ. ಹೇಡಿಯನ್ನು ಶೂರರಾಗಿ, ನಾಯಕನನ್ನು ಖಳನಾಯಕನನ್ನಾಗಿ ಪ್ರಪಂಚಕ್ಕೆ ತಿಳಿಸುವುದಕ್ಕೆ ನಿಜವನ್ನು ಏನು ಎಂದು ಅರಿಯದ ಜನ ಅದನ್ನೇ ನಂಬುತ್ತಾರೆ. (ಪುಟ 639). ಇದು ಪೌರಾಣಿಕ ಆವರಣದಲ್ಲಿ ಬಂದ ಸಮಕಾಲೀನ ಸಂಗತಿಗಳ ಕುರಿತಂತಿದೆ.

ಒಟ್ಟಿನಲ್ಲಿ ಡಾ. ಆರ್.ಆರ್. ಪಾಂಗಾಳರು ಮಹಾಭಾರತದ ಕಥನಗಳಿಗೆ ಹೊಸ ನೆಲೆಗಟ್ಟನ್ನು ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಅವರ ಕಲ್ಪನಾ ಶಕ್ತಿ ಅಸಹಜ

ಎನಿಸುವುದೇ ಇಲ್ಲ. ಈ ಅವಾಸ್ತವದ ಘಟನೆಗಳಿಗೆ ವಾಸ್ತವದ ಸ್ಪರ್ಶಮಣಿಯನ್ನು ಮೆತ್ತಿಸಿದ್ದಾರೆ. ಹೊಸ ಬೆಳಕಿನಲ್ಲಿ ಪಾತ್ರಗಳನ್ನು, ಘಟನೆಗಳನ್ನು ಕಾಣುವಂತೆ ಮಾಡಿದ್ದಾರೆ. ಕನ್ನಡ ಸಾರಸ್ವತ ಲೋಕಕ್ಕೆ ಇದೊಂದು ಅಪೂರ್ವ ಕೃತಿ ಎಂಬುವುದರಲ್ಲಿ ಎರಡು ಮಾತಿಲ್ಲ. ಅನೇಕ ಘಟನೆಗಳಲ್ಲಿ ಅವರ ಸಂಶೋಧನಾತ್ಮಕವಾದ, ಚಿಕಿತ್ಸಕಾ ದೃಷ್ಟಿ, ಸಮಗ್ರವಾಗಿ ಕಡೆದಿರಿಸುವ ಸಂಕಲ್ಪದ ದರ್ಶನವಾಗುತ್ತವೆ. ಇದಕ್ಕಾಗಿ ಡಾ. ಪಾಂಗಾಳರು ಅಭಿನಂದನಾರ್ಹರು.

(ಡಾ. ಆರ್. ಆರ್. ಪಾಂಗಾಳರ ಅಭಿನಂದನಾ ಗ್ರಂಥಕ್ಕಾಗಿ ಬರೆದ ಲೇಖನ)

*

ಮಲೆನಾಡು ಯಕ್ಷಗಾನ ಲೋಕದ ಪಾತಾಳ ಗರಡಿ

ಪ್ರಕೃತಿ ಮಾತೆ ತನ್ನೆಲ್ಲ ಸೊಬಗು, ಸೌಂದರ್ಯವನ್ನು ಮಲೆನಾಡಿನ ಬೆಟ್ಟಗುಡ್ಡಗಳ ಮೇಲೆ ಧಾರೆ ಎರೆದಿದ್ದಾಳೆ. ಅದೇರೀತಿ ಕಲಾ ಮಾತೆ ಇಲ್ಲಿನ ಜನತೆಯ ಮೇಲೆ ಕೃಪೆ ಬೀರಿ ಅವರನ್ನು ಸಾಂಸ್ಕೃತಿಕವಾಗಿ ಶ್ರೀಮಂತರಾಗುವಂತೆ ಮಾಡಿದ್ದಾಳೆ. ಆದುದರಿಂದಲೇ ಇಲ್ಲಿನ ಜನ ಅದರ ಆತಿಥ್ಯಕ್ಕೆ ಪ್ರೀತಿವಿಶ್ವಾಸದ ಮಾತುಗಳಿಗೆ, ಸೌಜನ್ಯಪರ ನಡವಳಿಕೆಗೆ, ಸಂಸ್ಕಾರಪೂರಿತ ಬದುಕಿಗೆ ಖ್ಯಾತರಾಗಿದ್ದಾರೆ. ಇವೆಲ್ಲದಕ್ಕೂ ಹಿನ್ನೆಲೆಯಾಗಿರುವುದು ಅಲ್ಲಿ ಪ್ರಚಲಿತವಾಗಿದ್ದ ಯಕ್ಷಗಾನ ಕಲೆ ಎಂಬುವುದು ಹೆಚ್ಚಿನವರಿಗೆ ತಿಳಿದಿಲ್ಲ. ಅಲ್ಲಿನ ಜನತೆಗೆ ತಾವು ಸದಾ ಮೆಲ್ಲುತ್ತಿರುವ ಎಲೆಅಡಿಕೆ ಎಷ್ಟು ಪ್ರಿಯವೋ ಯಕ್ಷಗಾನವೂ ಅಷ್ಟೇ ಬಿಡಲಾಗದ ನಂಟಾಗಿದೆ. ಅಲ್ಲಿ ಯಕ್ಷಗಾನದ ಅಭಿಮಾನಿಗಳು, ಆಸಕ್ತರು, ಕಲಾವಿದರು, ಪೋಷಕರು ಅಸಂಖ್ಯ ಸಂಖ್ಯೆಯಲ್ಲಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ನಡೆದ, ನಡೆಯುತ್ತಿರುವ ಬದಲಾವಣೆಗಳ ಪರ್ವದಿಂದ ಹೊರಗಿನವರ ಗಮನ ಈ ಕಡೆ ಹರಿದೇಇಲ್ಲ. ಕರಾವಳಿಯ ಭಾಗದಲ್ಲಿ ಕಾಣಿಸಿಕೊಳ್ಳುತ್ತಿರುವ ಯಕ್ಷಗಾನದ ಅಬ್ಬರ ಪ್ರಚಾರ ಇಲ್ಲಿ ಕಾಣುವುದೇ ಇಲ್ಲವಾದರೂ ಮಲೆನಾಡಿನ ಆಂತರ್ಯದಲ್ಲಿ ನಾಡಿಮಿಡಿತದಲ್ಲಿ ಯಕ್ಷಗಾನಕ್ಕಾಗಿರುವ ತುಡಿತ ಜೀವಂತವಾಗಿದೆ. ಇದೀಗ ಯುವ ಬರಹಗಾರ, ಹವ್ಯಾಸಿ ವೇಷಧಾರಿ, ಅರ್ಥಧಾರಿ ಶ್ರೀರವಿ ಮಡೋಡಿಯವರು ತಮ್ಮ "ಮಲೆನಾಡಿನ ಯಕ್ಷ ಚೇತನಗಳು" ಕೃತಿಯ ಮೂಲಕ ಈ ಪರಿಸರದ ಯಕ್ಷಗಾನ ಕಲಾವಿದರ ಅದಮ್ಯ ಕಲಾಚೇತನದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಯಕ್ಷಗಾನದ ಇತಿಹಾಸದಲ್ಲಿ ಇರುವ ಅರಕೆಯೊಂದನ್ನು ತುಂಬಿಸಿಕೊಟ್ಟಿದ್ದಾರೆ.

ಚಿಕ್ಕಮಗಳೂರು, ಶಿವಮೊಗ್ಗ, ಉತ್ತರಕನ್ನಡ ಜಿಲ್ಲೆಯಲ್ಲಿ ಹಬ್ಬಿರುವ ಮಲೆನಾಡಿನ ಪ್ರದೇಶವಾದ ಮೂಡಿಗೆರೆಯಿಂದ ಯಲ್ಲಾಪುರದವರೆಗಿನ ಪ್ರದೇಶ ಒಂದು ಕಾಲಕ್ಕೆ ಯಕ್ಷಗಾನದ ತವರಾಗಿತ್ತು. ಅಲ್ಲಿ ಸೀಮೆಗೊಂದರಂತೆ ಮೇಳಗಳಿದ್ದವು. ಅಲ್ಲಿನವರು

ಯಕ್ಷಗಾನವನ್ನು ಕಲಿತು ಹವ್ಯಾಸಿ ಸಂಘಟನೆಗಳನ್ನು ಮಾಡಿ ಮುಂದೆ ಅದೇ ಮೇಳಗಳಾಗಿ ಮಾರ್ಪಡಿಸುವಲ್ಲಿ ತಮ್ಮ ತನುಮನಧನವನ್ನು ಧಾರೆ ಎರೆದಿದ್ದಾರೆ. ವರ್ಷಕ್ಕೆ ನಲವತ್ತು ಐವತ್ತರಷ್ಟು ತಿರುಗಾಟ ನಡೆಸಿ ಅಲ್ಲಿನ ಕಲಾಸಕ್ತರ ಮನವನ್ನು ತಣಿಸುತ್ತಿದ್ದರು. ಘಟ್ಟದ ಕೆಳಗಿನ ಕಲಾವಿದರೂ ಕೂಡ ಒಮ್ಮೊಮ್ಮೆ ಇವರಿಗೆ ಸಾತ್ ನೀಡುತ್ತಿದ್ದರು. ಕೆಳದಿ ಸಂಸ್ಥಾನದ ಆಶ್ರಯದಲ್ಲಿ ಸಾಹಿತ್ಯ ಪ್ರಸರಣದೊಂದಿಗೆ ಪ್ರಸಂಗ ರಚನೆಗಳು ಸಾಕಷ್ಟು ಇಲ್ಲಿ ನಡೆದಿರಬೇಕು. ಅದೇ ರೀತಿ ಅನೇಕ ಕಲಾವಿದರು ಅಲ್ಲಿ ಜನ್ಮ ತಳೆದು ಯಕ್ಷಗಾನ ಪ್ರಸಂಗಗಳ ಮೂಲಕ ತಮ್ಮ ಕಲಾಭಿವ್ಯಕ್ತಿಯನ್ನು ಮಾಡುತ್ತಿದ್ದರು. ಕಳೆದ ಶತಮಾನದ ಪೂರ್ವಾರ್ಧದಲ್ಲಂತೂ ಅನೇಕ ಮೇಳಗಳು ಸಕ್ರಿಯವಾಗಿದ್ದವು. ಹೂವಿನ ಕೋಲು, ಜಾಗರ (ತಾಳ ಮದ್ದಳೆ) ಮುಂತಾದವೆಲ್ಲಾ ಅವ್ಯಾಹತವಾಗಿ ನಡೆಯುತ್ತಿದ್ದವು. ಆದರೆ ಇವ್ಯಾವುದೂ ಹೊರಲೋಕದ ಗಮನಕ್ಕೆ ಬಾರದೇ ಹೋದದ್ದು ವಿಷಾದದ ವಿಷಯ. ರವಿಮಡೋಡಿ ಈ ಪುಸ್ತಕದ ಮೂಲಕ ಇದುವರೆಗೂ ಗಣನೆಗೆ ಬಾರದ ಇಂತಹ ಅಸಂಖ್ಯ ವಿಚಾರಗಳನ್ನು ದಾಖಲಿಸುವ ಮೂಲಕ ಯಕ್ಷಗಾನ ಇತಿಹಾಸದಲ್ಲಿನ ನ್ಯೂನತೆಯೊಂದನ್ನು ಸರಿಪಡಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ಇದಕ್ಕಾಗಿ ಅವರು ಅಭಿನಂದನಾರ್ಹರು.

ಶ್ರೀರವಿ ಮಡೋಡಿಯವರು ವೃತ್ತಿಯಲ್ಲಿ ಸಾಫ್ಟವೇರ್ ಎಂಜಿನಿಯರ್ ನೆಲೆಸಿರುವುದು ಬೆಂಗಳೂರಿನಲ್ಲಿ. ಆದರೆ ಹುಟ್ಟೂರಿನ ಯಕ್ಷಗಾನದ ಗೀಳನ್ನು ಹೃದಯಲ್ಲಿ ಬಚ್ಚಿಟ್ಟುಕೊಂಡವರು. ಇಲ್ಲಿ ಯಕ್ಷಗಾನವನ್ನು ಕಲಿತು ಹವ್ಯಾಸಿ ಕಲಾ ಸಂಘಟನೆಯೊಂದನ್ನು ಮಾಡಿ ಅದರಲ್ಲಿ ಮುಖ್ಯ ಪಾತ್ರಧಾರಿಯಾಗಿ ನಾನೂರಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ ಭಾಗಿಯಾಗಿ ಹವ್ಯಾಸಿ ರಂಗದಲ್ಲಿ ಮೆರೆದವರು. ಇಷ್ಟಕ್ಕೆ ವಿರಮಿಸದೆ "ಯಕ್ಷವಾಹಿನಿ" ಸಂಸ್ಥೆಯ ಮೂಲಕ ಪ್ರಸಂಗ ಸಾಹಿತ್ಯಕ್ಕೆ ಆಧುನಿಕ ತಂತ್ರಜ್ಞಾನದ ಸ್ಪರ್ಶವನ್ನು ನೀಡಿದವರು. ಆ ಮೂಲಕ ಪ್ರಸಂಗ ಸಾಹಿತ್ಯ ಚಿರಂತನವಾಗಿ ಉಳಿಯುವಂತೆ ಚಿರನೂತನವಾಗಿ ಲಭ್ಯವಾಗುವಂತೆ ಮಾಡುವಲ್ಲಿ ತೊಡಗಿಸಿ ಕೊಂಡವರು. ಯುವ ಲೇಖಕರಾಗಿಯೂ ಕಾಣಿಸಿಕೊಳ್ಳುತ್ತಿರುವ ರವಿ ಮಡೋಡಿಯವರು ಫೇಸ್ಬುಕ್ ಮೂಲಕ ತಮ್ಮ ಊರಿನ ಕಲಾವಿದರ ಕುರಿತು ಮೊದಲಿಗೆ ಬೆಳಕಿಗೆ ತಂದರು. ಈ ವಿಚಾರ ಬರೆದವರು ಆ ಮೂಲಕ ಮಲೆನಾಡಿನ ಯಕ್ಷಗಾನದ ನೆಲವನ್ನು ಅಗೆಯಲು ಹೋದವರು. ಹಾಗೇ ಅಗೆಯುತ್ತಾ ಇಳಿಯುತ್ತಾ ಹೋದಂತೆ ಅನೇಕ ಜನರ ಆದರಗಳು ಅವರಿಗೆ ಸಿಕ್ಕವು. ಸಾಕಷ್ಟು ಜನರನ್ನು ಸಂಪರ್ಕಿಸಿ, ಶೋಧನೆಯ ಮೂಲಕ ಅವರ ವಿಚಾರಗಳನ್ನು ಶೋಧಿಸಿ, ಅಲ್ಲಿರುವ ಯಕ್ಷಗಾನದ ಕುರಿತಾದ ಬಂಗಾರದ ಗಟ್ಟಿಯನ್ನು ಈ ಪುಸ್ತಕದಲ್ಲಿ ಓದುಗರಿಗೆ ಒದಗಿಸಿದ್ದಾರೆ. ಅವರ ಅವಿರತ ಶ್ರದ್ಧೆ, ಆಸಕ್ತಿ, ಯಕ್ಷಗಾನ ಕುರಿತಾದ ಪ್ರೀತಿ,

ಮಂಡಿಸುವ ವಿಧಾನ ಎಲ್ಲದರಲ್ಲೂ ಮೇಲುಗೈ ಸಾಧಿಸಿದ್ದಾರೆ. ಇಲ್ಲಿ ಇಪ್ಪತ್ತಾರು ಯಕ್ಷಗಾನ ಕಲಾವಿದರ ಬದುಕಿನ ಚಿತ್ರಣವಿದೆ. ಇವರೆಲ್ಲರೂ ಮಲೆನಾಡಿನವರು. ಹೆಚ್ಚಿನವರು ಯಾವ ಪ್ರಸಿದ್ಧಿಯನ್ನು ಪಡೆದವರಲ್ಲ. ಆದರೆ ಅವರು ಮಾಡಿದ ಸಾಧನೆ, ಅವರು ಗೈದ ಕೆಲಸವು ಯಾರಿಗೂ ಕಮ್ಮಿ ಇಲ್ಲದೇ ಇರುವಂತಹದ್ದು. ಈ ಕೃತಿಯ ಮೂಲಕ ರವಿಯವರು ಒಂದು ಸಾಂಸ್ಕೃತಿಕ ಲೋಕವನ್ನು ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಆ ಪ್ರದೇಶದ ಜನತೆಯ ಯಕ್ಷಗಾನ ಪ್ರೀತಿಯನ್ನು, ಅವರ ಬದುಕಿನ ಕತೆವ್ಯಥೆಗಳನ್ನು ಆಕರ್ಷಕವಾಗಿ ವರ್ಣಿಸಿದ್ದಾರೆ.

"ಮಲೆನಾಡಿನ ಯಕ್ಷ ಚೇತನಗಳು" ಒಂದು ರೀತಿಯಲ್ಲಿ ಪಾತಾಳ ಗರಡಿಯಿದ್ದಂತೆ ಮೆಲ್ನೋಟಕ್ಕೆ ಕಾಣದ ಅನೇಕ ಸಂಗತಿಗಳನ್ನು ಲೇಖಕರು ಆಳದಿಂದ ಹೊರ ತೆಗೆದಿದ್ದಾರೆ. ಹನ್ನಾರು ಮೇಳದ ಕುರಿತವಿವರ, ಮರಗುಡಿ ಮೇಳದ ಖ್ಯಾತಿ, ಅಣಲಗಾರ ಮೇಳ, ಬೆಳಿಯೂರು ಮೇಳ, ಹಣಜಿ ಬೈಲು ಮೇಳ, ಚಂಡಿಕೇಶ್ವರ ಮೇಳ, ಕರೂರು ಮೇಳ, ಹಾಲಕ್ಕಿ ಬೆಟ್ಟ ವಿನಾಯಕ ಯಕ್ಷಗಾನ ಕಲಾ ಸಂಘ, ಬಾಳೆಹೊಳೆ ಮೇಳ, ನಾಗರಕುಡಿಕೆ ಮೇಳ, ಚಿಕ್ಕ ಹೊನ್ನೆಸರ ಮೇಳ, ಹುಕ್ಲಮಕ್ಕಿ ಮೇಳ, ಕೆಡಲಸರ ಮೇಳ, ಮೇಗರವಳ್ಳಿ ಮೇಳ, ಬೊಮ್ಮಾಲಪುರ ಮೇಳ ಮುಂತಾದ ಹತ್ತು ಹಲವು ಮೇಳಗಳಲ್ಲಿ ಭಾಗವಹಿಸಿದ ಕಲಾವಿದರ ವಿಚಾರಗಳು ಈ ಕೃತಿಯಲ್ಲಿ ಅಡಕವಾಗಿದೆ. ಅನೇಕ ಮೇಳಗಳಲ್ಲಿ ನಾನಾ ಕಾರಣಗಳಲ್ಲಿ ಕಾಲಗರ್ಭದಲ್ಲಿ ಅಡಗಿಹೋದ ವಿಚಾರಗಳು, ವಿವರಗಳು ದಾಖಲಾಗಿವೆ. ಅಡಗಿಹೋದ ಬಗೆಯ ವಿವರಗಳನ್ನು ನೀಡುವಾಗ ಲೇಖಕರ ಬರಹ ಬಹು ಆರ್ದ್ರವಾಗುತ್ತದೆ. ಲೇಖಕರು ಭಾವಪರವಶರಾಗುತ್ತಾರೆ.

1957ರಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಹನ್ನಾರ ಮೇಳವು ಲಿಂಗನಮಕ್ಕಿ ಜಲಾಶಯ ನಿರ್ಮಾಣದಿಂದ ಸಂಪೂರ್ಣವಾಗಿ ನಿಂತು ಹೋಗಿ ಗುರು ವೀರಭದ್ರನಾಯಕರು ಹಾಗೂ ನಾಗೋಡಿ ಕಾಮತ್‌ರಿಂದ ಮೇಳದ ಸಕಲ ಪರಿಕರವು ಕೊಲ್ಲೂರಿಗೆ ಹಸ್ತಾಂತರಗೊಂಡು ಬಡಗಿನ ಮೊದಲ ಟೆಂಟ್ ಮೇಳವಾಗಿ ಪರಿವರ್ತನೆಗೊಂಡಿತ್ತು ಎಂದು ಹೇಳುವಲ್ಲಿ ರವಿ ಮಡೋಡಿಯವರಲ್ಲಿ ಎದ್ದ ಹತಾಶೆ, ವಿಷಾದ, ನೋವುಗಳೆಲ್ಲ ಬರವಣಿಗೆಯಲ್ಲಿ ದಟ್ಟೈಸಿವೆ. ಆ ಪ್ರದೇಶದ ಕಲಾವಿದರ ಕುರಿತು ಹೇಳುವಾಗೆಲ್ಲ ಅಲ್ಲಿನ ಪ್ರದೇಶಕ್ಕೆ ಬೆಳಕನ್ನು ನೀಡುವ ಯೋಜನೆ, ಆ ಪ್ರದೇಶದ ಜನರಿಗೆ, ಅಲ್ಲಿನ ಕಲಾಬದುಕಿಗೆ ಕತ್ತಲೆ ಕವಿಸಿದ ರೀತಿಯನ್ನು ಓದುವಾಗ ಎಂಥವರ ಕಣ್ಣೂ ಒದ್ದೆಯಾಗುತ್ತದೆ. ಈ ದೃಷ್ಟಿಯಿಂದ "ಮಲೆನಾಡಿನ ಯಕ್ಷ ಚೇತನಗಳು" ಕೇವಲ ಯಕ್ಷಕಲಾವಿದರ ಕುರಿತಾಗಿ ಇರದೇ ಇತಿಹಾಸದಲ್ಲಿ ಒಂದು ಮರೆಯಾಗಿ ಹೋದ ಸಾಂಸ್ಕೃತಿಕ ಲೋಕದ ಚಿತ್ರಣಗಳ ಸಂಕಲನವಾಗಿದೆ.

ಕಲಾವಿದರು ಮನೆಮಾರು ಕಳೆದುಕೊಂಡು ಬೇರೆಯೆಡೆಗೆ ವಲಸೆ ಹೋದರೂ ತಮ್ಮೊಳಗೆ ಇರುವ ಯಕ್ಷಗಾನದ ಕುರಿತಾದ ಪ್ರೀತಿಯನ್ನು, ಹತ್ತಿಕ್ಕಲಾರದ ತುಡಿತವನ್ನು ಹತ್ತಿಕ್ಕ ಕೊಳ್ಳಲಾಗದೇ ಯಕ್ಷಗಾನ ಪರಿಚಯ ಇಲ್ಲದಂತ ಪ್ರದೇಶದಲ್ಲೂ ಬೆಳೆಸಿದಂತಹ ಪರಿಯನ್ನು ಇಲ್ಲಿ ಚಿತ್ರಿಸಲಾಗಿದೆ. ಯಕ್ಷಗಾನ ಕಲೆಯನ್ನು ಮೆಚ್ಚಿ, ನಚ್ಚಿಕೊಂಡ ಕುಟುಂಬಗಳು ಮೇಳ ನಿಂತರೂ ಅದರ ಕುರುಹಾಗಿ ಉಳಿದ ಮೇಳದ ರಾಜಕೀರೀಟವನ್ನು, ಗಣಪತಿಯ ಮೂರ್ತಿಯನ್ನು ದೇವರಮನೆಯಲ್ಲಿಟ್ಟು ಜತನದಿಂದ ಕಾಯ್ದುಕೊಂಡು, ಪೂಜಿಸುತ್ತಿರುವುದು ಯಕ್ಷಗಾನ ಕಲೆಯ ಆಂತರಿಕ ಸತ್ವವನ್ನು ಹಾಗೂ ಅದು ಜನತೆಯ ಮೇಲೆ ಮಾಡುವ ಪ್ರಭಾವದ ಶಕ್ತಿಯನ್ನು ಓದುಗರಿಗೆ ಪರಿಚಯಿಸುತ್ತದೆ.

ರವಿ ಮಡೋಡಿಯವರು ಇಲ್ಲಿ ಅನೇಕ ಯಕ್ಷಗಾನದ ಪ್ರತಿಭಾವಂತ ಕಲಾವಿದರ ಬದುಕನ್ನು ಹಾಗೂ ಕಲಾಭಿವ್ಯಕ್ತಿಯ ಪರಿಯನ್ನು ಕಟ್ಟಿಕೊಡುವುದರೊಂದಿಗೆ ಮಲೆನಾಡಿನ ಯಕ್ಷಚೇತನಗಳು ಎಳವೆಯಲ್ಲೇ ಯಕ್ಷಗಾನವನ್ನು ಕಲಿತು ಸಣ್ಣ ವೇಷಗಳಿಂದ ಪ್ರಾರಂಭಿಸಿ, ಕ್ರಮಕ್ರಮವಾಗಿ ದೊಡ್ಡ ವೇಷಧಾರಿಗಳಾಗಿ, ಮುಖ್ಯ ಪಾತ್ರಧಾರಿಗಳಾಗುವ ಬೆಳವಣಿಗೆಯ ಪರಿಯ ಚಿತ್ರಣವಿದೆ. ಯಕ್ಷಗಾನದಲ್ಲಿ ಕಲಾವಿದನೊಬ್ಬ ಬೆಳೆಯುವ ಕ್ರಮವೇ ಈ ಬಗೆಯದು ಅಂತೆಯೇ ಕೆಲವರು ತಮ್ಮ ಓದುವ ಹವ್ಯಾಸದಿಂದ, ಜೊತೆಗೆ ಬೇರೆ ಅರ್ಥಧಾರಿಗಳ ಸಹಚರ್ಯದಿಂದ ಮಾತುಗಾರಿಕೆ ಕಲಿತು ಜಾಗರಗಳಲ್ಲಿ ಭಾಗವಹಿಸಿ ಉತ್ತಮ ಅರ್ಥಧಾರಿಗಳಾಗಿ ಹೊರಹೊಮ್ಮಿದ ವಿವರಗಳು ಇಲ್ಲಿವೆ. ಘಟ್ಟದ ಕೆಳಗಿನ ಮೇಳದ ಕಲಾವಿದರು ಮಳೆಗಾಲದಲ್ಲಿ ಮಲೆನಾಡಿಗೆ ಬಂದು ಇಲ್ಲಿನವರಿಗೆ ಯಕ್ಷಗಾನ ಕಲಿಸುತ್ತ ಅವರೊಂದಿಗೆ ಬೆರೆತು ಅವರ ಮೇಳಗಳಲ್ಲಿ ಭಾಗವಹಿಸಿ ಪ್ರದರ್ಶನ ನೀಡುತ್ತಿದ್ದ ವಿಚಾರಗಳು ಈ ಕೃತಿಯಲ್ಲಿ ಬಂದಿವೆ. ಅದೇ ರೀತಿ ಇಲ್ಲಿನ ಕಲಾವಿದರು ಘಟ್ಟದ ಕೆಳಗಿನ ಮೇಳಗಳಲ್ಲಿ ಭಾಗವಹಿಸಿ ಯಶಸ್ವಿಯಾಗಿ ಹೆಸರು ಗಳಿಸಿದ ವಿಚಾರಗಳು ಕೂಡಾ ಇವೆ. ಹೀಗೆ "ಕೊಳುಕೊಡೆ" ಸತತವಾಗಿ ನಡೆಯುತ್ತಿತ್ತು. ಇಂತಹ ಕೊಳುಕೊಡೆ ದಾಖಲೆಗಳನ್ನು ರವಿಯವರು ಸಮರ್ಥವಾಗಿ ದಾಖಲಿಸಿದ್ದಾರೆ.

"ಮಲೆನಾಡಿನ ಯಕ್ಷಚೇತನ"ಗಳು ವಿವಿಧ ಬಗೆಯ ಯಕ್ಷಚೇತನಗಳ ಚಿತ್ರಣಗಳೂ ಆಗಿವೆ. ಇಲ್ಲಿ ಹವ್ಯಾಸಿ ಭಾಗವತರು, ಅರ್ಥಧಾರಿಗಳು ವೇಷಧಾರಿಗಳು, ಸಂಘಟಕರು, ಕಲಾ ಪೋಷಕರು ಇರುವಂತೆ ಪರೋಕ್ಷವಾಗಿ ಈ ಪ್ರದೇಶದಲ್ಲಿ ಯಕ್ಷಗಾನ ಕಲೆ ಉಳಿಸಿ ಬೆಳಸಲು ಸಹಕರಿಸಿದ, ಸಹಕರಿಸುತ್ತಿರುವ ಸಹಸ್ರಾರು ಜನರ ನಾಡಿಮಿಡಿತಗಳನ್ನು, ಆಸೆ ಆಕಾಂಕ್ಷೆಗಳನ್ನು ಮಡೋಡಿಯವರು ಗುರುತಿಸಿದ್ದಾರೆ. ಅನಂತ ಹೆಗಡೆ ಕೊಳಗಿ, ನಗರ ಜಗನ್ನಾಥ ಶೆಟ್ಟಿ ಮುಂತಾದವರು ಇಲ್ಲಿನ ಹವ್ಯಾಸಿ

ಮೇಳದ ಕಲಾವಿದರಾಗಿದ್ದು ಮುಂದೆ ವೃತಿಪರ ಮೇಳದ ಕಲಾವಿದರಾಗಿ ಯಶಸ್ಸು ಪಡೆದಿದ್ದನ್ನು ಇಲ್ಲಿ ಗಮನಿಸಬಹುದು. ಅದೇ ರೀತಿ ಇಲ್ಲಿಂದ ಯಕ್ಷಚೇತನಗಳ ಮಕ್ಕಳು ಶಿಷ್ಯರು ಕೂಡಾ ಮುಂದೆ ಇವರ ಪ್ರೋತ್ಸಾಹದ ಹಾಗೂ ತರಬೇತಿಯ ಫಲವಾಗಿ ವೃತ್ತಿ ಕಲಾವಿದರಾಗಿ ಇಂದು ರಂಗದಲ್ಲಿ ಮಿಂಚುತ್ತಿರುವುದನ್ನು ಕಾಣಬಹುದು. ಅನಂತಹೆಗಡೆ ಕೊಳಗಿಯವರ ಪುತ್ರ ಕೇಶವ ಹೆಗಡೆ ಕೊಳಗಿಯವರು ಹಾಗೂ ರಾಮಚಂದ್ರ ಭಾಗವತ ಕವಾಳೆಯವರ ಸುಪುತ್ರ ಗಣಪತಿ ಭಾಗವತ ಕವಾಳೆಯವರು, ಬಡಗುತಿಟ್ಟಿನ ಪ್ರಸಿದ್ಧ ಭಾಗವತರಾಗಿದ್ದಾರೆ. ಕವಾಳೆಯವರ ಮೊಮ್ಮಕ್ಕಳಾದ ಗುರುಮೂರ್ತಿವೈದ್ಯ, ಗಣೇಶ ಗುಂಡ್ಕಲ್ ಪ್ರಸಿದ್ಧ ತಬಲ ವಾದಕರಾಗಿ ಹಿಂದೂಸ್ತಾನಿ ಸಂಗೀತದಲ್ಲಿ ಜನಾನುರಾಗಿಗಳಾಗಿದ್ದಾರೆ. ಧರೆಮನೆ ಶ್ರೀಪಾದಯ್ಯನವರ ಸುಪುತ್ರರಾದ ಶ್ರೀಧರ್ ಡಿ.ಎಸ್.ರವರು ಪ್ರಸಿದ್ಧ ಯಕ್ಷಕವಿಯಾಗಿಯೂ, ಅರ್ಥಧಾರಿಯಾಗಿಯೂ ಯಕ್ಷಗಾನ ಸೇವೆಯಲ್ಲಿ ನಿರತರಾಗಿದ್ದಾರೆ. ಅದೇ ರೀತಿ ಗಿಂಡಿಮನೆ ಪಟೇಲ್ ರಾಮಚಂದ್ರಪ್ಪನವರ ಪುತ್ರರಾದ ಶ್ರೀ ಗಿಂಡಿಮನೆ ಮೃತ್ಯುಂಜಯರವರು ಖ್ಯಾತ ಯಕ್ಷಗಾನ ಪ್ರಸಂಗಕಾರರಾಗಿದ್ದಾರೆ. ಹೀಗೆ ಯಕ್ಷಚೇತನಗಳ ಮುಂದಿನ ವಂಶದ ಬಗ್ಗೆ ಲೇಖಕರು ಅನೇಕ ವಿವರಗಳನ್ನು ನೀಡಿದ್ದಾರೆ. ಮೂಡುಗೋಡು ಗಣೇಶ ಭಾಗವತರು ಅನೇಕ ಶಿಷ್ಯರನ್ನು ತಯಾರು ಮಾಡಿದ್ದಾರೆ. ಮಾತ್ರವಲ್ಲದೇ ತಮ್ಮಲ್ಲಿರುವ ಭಾಗವತಿಕೆಯ ಪರಂಪರೆಯನ್ನು ಮುಂದಿನ ಜನಾಂಗಕ್ಕೆ ದಾಟಿಸಿದ್ದಾರೆ. ಇವರದು ಅನನ್ಯ ಶೈಲಿಯಾಗಿದ್ದು ಕರಾವಳಿಯ ದಾಸ ಭಾಗವತರು ಹಾಗೂ ಶೇಷಗಿರಿ ಭಾಗವತರ ಒಡನಾಟದಿಂದಾಗಿ ಸ್ವಂತ ಶೈಲಿಯನ್ನು ರೂಪಿಸಿಕೊಂಡಿದ್ದರು. ಡಾ.ಶಿವರಾಮಕಾರಂತರು ಕೂಡಾ ಇವರ ಅನನ್ಯತೆಯನ್ನು ಗುರುತಿಸಿದ್ದಾರೆ. ಗುಂಡುಮನೆ ರಾಮಯ್ಯನವರು ಸ್ವತಃ ಹೆಸರುವೆತ್ತ ಕಲಾವಿದರಾಗಿದ್ದು ಮಾತ್ರವಲ್ಲದೇ ತಮ್ಮ ಸಂಘಟನಾ ಶಕ್ತಿಯಿಂದ ಬಾಳೆಹೊಳೆ ಮೇಳವು ಖ್ಯಾತಿ ಪಡೆಯುವಂತೆ ನೋಡಿಕೊಂಡವರಾಗಿದ್ದರು. ಅವರ ಶಿಷ್ಯರು ಯಕ್ಷಗಾನದ ನಾನಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದು ಕೇವಲ ಇಪ್ಪತ್ತಾರು ಜನ ಯಕ್ಷಗಾನ ಕಲಾವಿದರ ಪರಿಚಯ ಪುಸ್ತಕವಾಗದೆ, ಒಂದು ಕಾಲದ ಪರಂಪರೆಯ ಚಿತ್ರಣವುಳ್ಳ ಪುಸ್ತಕವಾಗಿ ಇತಿಹಾಸ ನಿರ್ಮಿಸಿದೆ. ಪ್ರತಿಯೊಬ್ಬ ಕಲಾವಿದರ ಕುರಿತಾಗಿ ಲೇಖಕರು ನಾನಾ ಮೂಲಗಳಿಂದ ವಿಷಯಗಳನ್ನು ಸಂಗ್ರಹಿಸಿದ್ದಾರೆ. ಅವರ ಕುಟುಂಬ ವರ್ಗದವರಿಂದ ಮಾತ್ರವಲ್ಲದೇ ಅಭಿಮಾನಿಗಳಿಂದ ಸಹಕಲಾವಿದರಿಂದ ಊರಿನ ಹಿರಿಯ ವ್ಯಕ್ತಿಗಳಿಂದ, ಮಾಹಿತಿ ಕಲೆ ಹಾಕಿದ್ದಾರೆ. ಮುಳುಗಡೆಯಾದ ಮಾಹಿತಿ ಪ್ರದೇಶದಿಂದ ವಲಸೆ ಹೋದವರ ನೆಲೆಯನ್ನು ಹುಡುಕುವಲ್ಲಿ ರವಿ ಪಟ್ಟಿರುವ ಶ್ರಮ ಮೆಚ್ಚಲೇ ಬೇಕಾದದ್ದು.

ಇಲ್ಲಿನ ಕಲಾವಿದರ ಮಕ್ಕಳ ಮೊಮ್ಮಕ್ಕಳ ಗಮನಕ್ಕೆ ಬಾರದೇ ಹೋಗಿದ್ದು ಊರಿನವರ ಯಕ್ಷಗಾನ ಆಸಕ್ತರ ಮಾಹಿತಿಗಳಿಂದ ರವಿ ಮಡೋಡಿ ಇಲ್ಲಿ ಪ್ರಸ್ತುತ ಪಡಿಸಿರುವುದು ಕುಟುಂಬಸ್ಥರ ಗಮನಕ್ಕೆ ಬಂದು ಲೇಖಕರಿಗೆ ಅವರು ಋಣಿಗಳಾಗಿದ್ದಾರೆ. ಫೇಸ್ಬುಕ್ ಮೂಲಕ ಪ್ರಾರಂಭವಾದ ಈ ಲೇಖನ ಮಾಲೆ ಇನ್ನಷ್ಟು ಬೆಳೆಯಲಿದೆ ಎಂದು ಲೇಖಕರು ತಿಳಿಸಿದ್ದಾರೆ. ಅವೆಲ್ಲವೂ ದಾಖಲೆಗೊಂಡಾಗ ಇಡೀ ಮಲೆನಾಡು ಪ್ರದೇಶದಲ್ಲಿ, ಕಳೆದ ಶತಮಾನದ ಯಕ್ಷಗಾನ ಪಡೆದುಕೊಂಡ ವ್ಯಾಪಕತೆಯ ಪರಿಚಯ ಲಭ್ಯವಾಗಲಿದೆ. ಗುಂಡು ಸೀತಾರಾಮರಾವ ತಲವಾಟ ಅವರ ಕುರಿತಾದ ಅವರ ಲೇಖನ ಧೀರ್ಘವಾಗಿದ್ದು ಅನೇಕ ಹೊಸ ಸಂಗತಿಗಳನ್ನು ತಿಳಿದುಕೊಳ್ಳ ಬಹುದಾಗಿದೆ. ಸ್ವತಃ ಅರ್ಥಧಾರಿಯಾಗಿ, ವೇಷಧಾರಿಯಾಗಿ, ಪ್ರಸಂಗಕಾರರಾಗಿ ಯಕ್ಷಗುರುವಾಗಿ, ಸಂಘಟನಕಾರರಾಗಿ ಅವರು ಮಾಡಿದ ಸಾಧನೆ ವಿಶೇಷವಾದದ್ದು. ಯಕ್ಷಗಾನ ರಂಗದ ಅನೇಕ ಹಿರಿಯ ಕಲಾವಿದರ ಸಂಪರ್ಕವಿದ್ದ ಅವರು ಅನೇಕ ಉತ್ತಮ ಯಕ್ಷಗಾನ ಕೃತಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಅವು ಅಮೃತೇಶ್ವರಿ ಮೇಳದ ತಿರುಗಾಟದಲ್ಲಿ ಜಯಭೇರಿ ಭಾರಿಸಿದ ಪ್ರಸಂಗಗಳು ಆಗಿವೆ. ಲಿಂಗದಕ್ಕೆ ಮಹಾಬಲಯ್ಯನವರ ಕುರಿತು ಬರೆಯುವಾಗ ಬಹುಮುಖಿ ಕಲಾವ್ಯಕ್ತಿತ್ವದ ಪರಿಚಯುವಾಗುತ್ತದೆ. ಹನ್ನಾರು ಸೀಮೆಯಲ್ಲಿ ಅವರು ಜನಪ್ರಿಯರಾಗಿದ್ದರು. ಶೇಣಿಯವರೊಂದಿಗೆ, ವೀರಭದ್ರನಾಯಕರೊಂದಿಗಿನ ಅವರ ಒಡನಾಟದ ವಿಚಾರಗಳು ಬಂದಿವೆ. ವೇಷಭೂಷಣ ಪರಿಕರಗಳನ್ನು ತಯಾರಿಸುವುದರಲ್ಲಿ ಸಿದ್ಧಹಸ್ತರಾದ ಅವರು ಇಡುಗುಂಜಿ ಮೇಳವೇ ಮೊದಲಾದ ವೃತ್ತಿನಿರತ ಮೇಳಗಳಿಗೆ ಸಿದ್ಧ ಪಡಿಸಿಕೊಡುತ್ತಿದ್ದಾರೆಂಬ ವಿಚಾರ ಹೊಸತು. ಹೀಗೆ ಸಣ್ಣಸಣ್ಣ ಅನೇಕ ಸಂಗತಿಗಳು ಬಂದಿದ್ದು ಅದನ್ನೆಲ್ಲಾ ಕ್ರೋಢೀಕರಿಸಿ ನೋಡಿದಾಗ ಮಲೆನಾಡಿನ ಕಲಾಬದುಕಿನ ಒಂದು ಸಮಗ್ರ ಚಿತ್ರಣ ಈ ಗ್ರಂಥದಿಂದ ಲಭಿಸುತ್ತದೆ.

ಶುಂಠಿ ಶೇಷಗಿರಿಯಪ್ಪ, ಸುಬ್ಬರಾಯ ಶರ್ಮ ಕಲಗಾರರು, ಕೆಸುವಿನ ಮನೆ ಲಕ್ಷ್ಮೀನಾರಾಯಣ ಹೆಗಡೆ, ಗುಂಡೂ ನಾಗಪ್ಪಯ್ಯ, ಶಣ್ಣಣ್ಣ ಭಾಗವತರು, ಜಿ. ನಾರಾಯಣ ರಾವ್, ಹುಕ್ಲುಮಕ್ಕಿ ಮಂಜುನಾಥ ಹೆಗಡೆ, ಶ್ರೀಪಾದಯ್ಯದರೆಮನೆ ಮುಂತಾದವರ ವಿಚಾರಗಳೊಂದಿಗೆ ಅವರ ಸಂಸಾರ ತಾಪತ್ರಯಗಳು ಕಲಾಬದುಕಿನೊಂದಿಗೆ ತಳಕು ಹಾಕಿಕೊಂಡ ಬಗೆಯ ಚಿತ್ರಣಗಳು ಇಲ್ಲಿ ಬಂದಿವೆ. ಒಂದೆಡೆ ಬಡತನ, ಇನ್ನೊಂದೆಡೆ ಸದಾ ಸುರಿಯುವ ಮಳೆ, ಸಾರಿಗೆಸಂಪರ್ಕ ಕೊರತೆ, ದೂರದೂರ ಇರುವ ಗ್ರಾಮಗಳು, ಆರ್ಥಿಕ ಚಟುವಟಿಕೆಗಳ ಅಲಭ್ಯತೆ ಇವೆಲ್ಲದರ ನಡುವೆ ಯಕ್ಷಗಾನಕ್ಕಾಗಿ ಇಲ್ಲಿನ ಚೇತನಗಳು ನಡೆಸಿದ ಹೋರಾಟದ ಜೀವಂತ ಚಿತ್ರಣವನ್ನು ರವಿ ಮಡೋಡಿಯವರು ಕಟ್ಟಿ ಕೊಟ್ಟಿದ್ದಾರೆ.

ಪುಸ್ತಕಕ್ಕೆ ಬೆನ್ನುಡಿ ಬರೆದಿರುವ ಶ್ರೀ ರವೀಂದ್ರ ಭಟ್ಟರು ಹೇಳಿರುವ "ಯಾವಾಗಲೂ ತಾರಾಲೋಕದ ತಾರೆಗಳಿಗೆ ಅಲ್ಲಿ ಮರ್ಯಾದೆ. ತಾರೆಗಳ ಬಗ್ಗೆ ಬರೆಯುವುದಕ್ಕೆ ಅಲ್ಲಿ ಸಾಕಷ್ಟು ಜನ ಇದ್ದಾರೆ. ಅದು ಸುಲಭ ಕೂಡ. ತಾರೆಗಳ ಬಗ್ಗೆ ಬರೆದವರಿಗೂ ಲಾಭ ಇದೆ. ಆದರೆ ಎಲೆ ಮರೆಕಾಯಿಯಂತೆ ಇರುವ ಯಕ್ಷಗಾನ ಕ್ಷೇತ್ರಕ್ಕೆ ತಮ್ಮದೇ ಕೊಡುಗೆಯನ್ನು ನೀಡಿ ಅಪರಿಚಿತರಾಗಿಯೇ ಉಳಿದು ಬಿಡಬಹುದಾದ ಬಹಳಷ್ಟು ಮಂದಿಯನ್ನು ಹುಡುಕಿ ಕೊಟ್ಟಿರುವುದು ಮಡೋಡಿಯವರ ಔದಾರ್ಯ. ಎಲ್ಲರೂ ಮೆಚ್ಚುವ ಕೆಲಸ. ಮಲೆನಾಡಿನ ಮೂಲೆಯಲ್ಲಿ ತಮ್ಮಷ್ಟಕ್ಕೆ ತಾವು ಕಲಾ ಪ್ರೇಮವನ್ನು ಪ್ರದರ್ಶಿಸಿದ ಜನರನ್ನು ಹುಡುಕಿದ, ಅವರ ಬಗ್ಗೆ ಮಾಹಿತಿ ಕಲೆ ಹಾಕಿದ ಪರಿ ನಿಜಕ್ಕೂ ಅನನ್ಯ. ಯಕ್ಷಗಾನ ಕ್ಷೇತ್ರಕ್ಕೆ ಇದು ಅತಿ ದೊಡ್ಡ ಕೊಡುಗೆ" ಎಂದಿರುವುದು ಅಕ್ಷರಶಃ ಸತ್ಯ. ಕರಾವಳಿಯ ಎಷ್ಟೋ ಜನ ಯಕ್ಷಗಾನ ಆಸಕ್ತರಿಗೆ ತಿಳಿಯದ ಅನೇಕ ಹೊಸ ವಿಚಾರ ತಿಳಿಸಿ ಅವರ ಕಣ್ತೆರೆಸುವ ಕೆಲಸವನ್ನು ಲೇಖಕರು ಮಾಡಿದ್ದಾರೆ.

ಒಟ್ಟಿನಲ್ಲಿ ಯುವ ಲೇಖಕರಾಗಿ ಯಕ್ಷಗಾನಕ್ಕಾಗಿ ಸದಾ ಹಂಬಲಿಸುವ ರವಿ ಮಡೋಡಿಯವರ ಚೊಚ್ಚಲ ಕೃತಿ ಓದುಗರನ್ನು ಹೊಸ ಪ್ರಪಂಚಕ್ಕೆ ಕೊಂಡೊಯ್ಯುತ್ತದೆ. ಯಕ್ಷಗಾನ ಕಲೆಯ ಹಿಂದೆ ಇರುವ ಬದುಕಿನ ಚಿತ್ರಣ ಯಕ್ಷಗಾನದಷ್ಟೇ ಸೊಗಸಾಗಿ ಇಲ್ಲಿ ನಿರೂಪಿತವಾಗಿವೆ. ಇಂದಿನ ಯುವ ಜನಾಂಗಕ್ಕೆ ಮಾದರಿಯಾಗ ಬಲ್ಲ ಅನೇಕ ವಿಚಾರಗಳು ಇಲ್ಲಿ ಬಂದಿವೆ. ಪ್ರತಿಯೊಂದು ಲೇಖನದ ಕೊನೆಯಲ್ಲಿ ಉಪಸಂಹಾರದ ರೂಪದಲ್ಲಿ ಲೇಖಕರು ಬರೆದಿರುವ ಒಂದೆರಡು ಪ್ಯಾರಾಗಳು ಬಹಳ ಅರ್ಥಪೂರ್ಣವಾಗಿವೆ. ಆ ಬಗೆಯಲ್ಲಿನ ಮುಕ್ತಾಯ ಯಕ್ಷಚೇತನಗಳ ಕುರಿತಾಗಿ ಯಕ್ಷಗಾನ ಕುರಿತಾಗಿಯೂ, ಇಂದಿನ ಜನತೆಯ ಕುರಿತಾಗಿಯೂ ಇದ್ದು ಮನನ ಯೋಗ್ಯವಾಗಿದೆ. ಚಿಂತನೆಗೆ ಹಚ್ಚುತ್ತವೆ. ಇದಕ್ಕಾಗಿ ರವಿ ಮಡೋಡಿಯವರನ್ನು ಇನ್ನೊಮ್ಮೆ ಹಾರ್ದಿಕವಾಗಿ ಅಭಿನಂದಿಸೋಣ.

("ಯಕ್ಷರಂಗ" ಪತ್ರಿಕೆಯಲ್ಲಿ ಪುಸ್ತಕ ಪರಿಚಯ ರೂಪದ ಲೇಖನ)

*

ಯಕ್ಷ ಸಂಶೋಧನೆಯ ಬೀಜ ರೂಪದ ಕೃತಿ "ಯಕ್ಷನಾಟಕಗಳು"

ಯಕ್ಷಗಾನ ಕುರಿತಾದ ಗ್ರಂಥ ರಚನೆಯಲ್ಲಿ ಎರಡನೆಯ ಕೃತಿಯೆಂಬ ಹೆಗ್ಗಳಿಕೆ ಪಡೆದಿರುವ ಹಾಸಣಗಿಯವರ "ಯಕ್ಷ ನಾಟಕಗಳು" ಹೊಸ ರೂಪದಲ್ಲಿ ಎರಡನೆಯ ಮುದ್ರಣಗೊಂಡು ಓದುಗರ ಮೆಚ್ಚುಗೆ ಗಳಿಸಿರುವುದು ಗಮನಾರ್ಹ. ಇದಕ್ಕೆ ಕಾರಣರಾದ ಎಚ್.ಆರ್. ಅಮರನಾಥರಿಗೆ ಯಕ್ಷಗಾನಾಸಕ್ತರೆಲ್ಲರೂ ಋಣಿಗಳಾಗಿದ್ದಾರೆ. 1950ರ ದಶಕದಲ್ಲಿ ಯಕ್ಷಗಾನ ಕುರಿತಾದ ಜಿಜ್ಞಾಸೆ, ಚರ್ಚೆಗಳು ತಾರಕಕ್ಕೆ ಏರಿದ್ದವು. ಮುಳಿಯ ತಿಮ್ಮಪ್ಪಯ್ಯ, ಗೋವಿಂದ ಪೈ, ಶಿವರಾಮಕಾರಂತ, ಸೇಡಿಯಾಪು ಕೃಷ್ಣಭಟ್, ಭೀಮರಾವ್ ಚಿಟಗುಪ್ಪಿ, ಆದ್ಯ ರಂಗಾಚಾರ್ಯ, ಕೆ.ಎಂ.ಕೃಷ್ಣರಾವ್, ಜಿ.ಆರ್.ಪಾಂಡೇಶ್ವರ, ಕುಕ್ಕಿಲ ಕೃಷ್ಣಭಟ್ಟ, ಮುಂತಾದವರೆಲ್ಲಾ ಚರ್ಚೆಗಳ ಮುಂಚೂಣಿಯಲ್ಲಿದ್ದರು. ರಾಷ್ಟ್ರಬಂಧು, ಜಯಕರ್ನಾಟಕಗಳಲ್ಲಿ ಬಂದಿರುವ ಲೇಖನಗಳು ಉತ್ತರ, ಪ್ರತ್ಯುತ್ತರ ರೂಪದಲ್ಲಿ ಬರುತ್ತಿದ್ದವು. ಪುಸ್ತಕ ರೂಪದಲ್ಲಿ ಮುಳಿಯರ "ಪಾರ್ತಿಸುಬ್ಬ" (1945), ಮೊತ್ತಮೊದಲಿಗೆ ಪ್ರಕಟಗೊಂಡಿತ್ತು. ಯಕ್ಷಗಾನಕ್ಕೆ ಸಂಬಂಧಿಸಿದಂತೆ ಎರಡನೆಯ ಕೃತಿಯಾಗಿ ಪ್ರಕಟಗೊಂಡಿದ್ದೆಂದರೆ ಹಾಸಣಗಿಯವರ "ಯಕ್ಷನಾಟಕಗಳು". 1950ರಲ್ಲಿ ಪ್ರಕಟಗೊಂಡ ಈ ಕೃತಿಗೆ ಹೀಗೆ ಐತಿಹಾಸಿಕ ಮಹತ್ವ ಲಭಿಸಿದೆ. ಆ ಕಾಲದಲ್ಲಿ ಯಕ್ಷಗಾನದ ಕುರಿತಾಗಿ ಅಧಿಕೃತವಾಗಿ ಮಾತನಾಡುತ್ತಿದ್ದ ಗಣಪತಿರಾವ್ ಪಾಂಡೇಶ್ವರ ಅವರ ಮುನ್ನುಡಿ ಈ ಪುಸ್ತಕಕ್ಕೆ ಮುಕುಟ ಪ್ರಾಯವಾಗಿದೆ. ಮುಖ್ಯವಾದ ನಾಲ್ಕು ಅಧ್ಯಾಯಗಳು 35 ವಿಷಯಗಳ ಕುರಿತು ಹಾಸಣಗಿಯವರು ತಮ್ಮ ಪ್ರೌಢವಾದ ಚಿಂತನ ಯೋಗ್ಯ ವಿಚಾರಗಳನ್ನು ದಾಖಲಿಸಿದ್ದಾರೆ. ಪರಿಶಿಷ್ಟ ರೂಪದಲ್ಲಿ ಎರಡು ಪ್ರಸಂಗ ಕೃತಿಗಳ ಕುರಿತ ವಸ್ತುನಿಷ್ಠ ವಿಮರ್ಶೆ ಹಾಗೂ 106 ಪ್ರಸಂಗಗಳ ಪಟ್ಟಿಯನ್ನು ನೀಡಿದ್ದಾರೆ. ಇಂತಹ ಅಪರೂಪದ ಕೃತಿ 65 ವರ್ಷಗಳ ನಂತರ ಮರು ಮುದ್ರಣ ಕಂಡಿದ್ದು,

ಅದರಲ್ಲಿ ಅನೇಕ ಹೊಸ ಎಳೆಗಳನ್ನು ಸಂಪಾದಕರಾಗಿ ಶ್ರೀ. ಎಚ್.ಆರ್. ಅಮರನಾಥರು ನೆಯ್ದಿರುವುದು ವಿಶೇಷವಾಗಿದೆ. ಯಕ್ಷನಾಟಕ ಕುರಿತು ಖಚಿತ ನಿಲುವುಳ್ಳ ಖ್ಯಾತ ವಿದ್ವಾಂಸ, ಸಾಹಿತಿ ಡಾ. ಜಿ.ಎಸ್. ಭಟ್ ಸಾಗರ ಅವರು ಸುದೀರ್ಘವಾದ ಮುನ್ನುಡಿ ರೂಪದ ಬರಹವನ್ನು ನೀಡಿ ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಅಲ್ಲದೆ ಅನುಬಂಧದಲ್ಲಿ ನಾಲ್ಕು ಲೇಖನಗಳನ್ನು ಹೊಸದಾಗಿ ಸೇರಿಸುವ ಮೂಲಕ ವಿಭಿನ್ನ ಆಯಾಮ ಕೃತಿಗೆ ಲಭಿಸುವಂತೆ ಮಾಡಿದ್ದಾರೆ.

ಪುಸ್ತಕವನ್ನು ಓದಲು ಎತ್ತಿಕೊಂಡಾಗ ಮೊದಲು ಗಮನ ಬರುವುದು ಕೃತಿಯ ಶೀರ್ಷಿಕೆಯ ಕಡೆಗೆ. 72 ವರ್ಷಗಳ ಹಿಂದೆ "ಯಕ್ಷನಾಟಕಗಳು" ಎಂದು ಹೆಸರಿಸಿ, ಅದಕ್ಕೆ ಲೇಖಕರು ಸಾಕಷ್ಟು ಸಮರ್ಥನೆಯನ್ನು ಮೊದಲ ಅಧ್ಯಾಯದಲ್ಲಿ ನೀಡಿದ್ದಾರೆ. ಐದು ನಾಟಕಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಿರುವ ಹಾಸಣಗಿಯವರು ಪೂರ್ವ ಇತಿಹಾಸವನ್ನು, ಹಿಂದೆ ಇದ್ದ ಗೊಂದಲಗಳನ್ನು, ಯಕ್ಷಗಾನ ಪದದ ಕುರಿತಾದ ಮಾಹಿತಿಗಳನ್ನೆಲ್ಲ ವಿವರಿಸಿದ್ದಾರೆ. ಯಕ್ಷಗಾನವು ಆಧರಿಸಿರುವ ಪದ್ಯ ಸಾಹಿತ್ಯಕ್ಕೆ "ಯಕ್ಷಗಾನ" ಎಂದೇ ಹೇಳಿಕೊಂಡಿದ್ದಾರೆ. ಆಂಧ್ರದಲ್ಲಿ "ಯಕ್ಷಗಾನಮು" ಎಂದೇ ಕರೆಯುವ ತೆಲುಗು ಸಾಹಿತ್ಯ ಪ್ರಕಾರವೂ ಇದೆ. 500 ವರ್ಷಗಳಷ್ಟು ಇತಿಹಾಸವೂ, ಲಕ್ಷಣಕಾರರೂ ಕೂಡ ಅಲ್ಲಿ ಈ ಪ್ರಕಾರದ ಲಕ್ಷಣಗಳನ್ನು ವಿವರಿಸಿದ್ದಾರೆ. ಕನ್ನಡದಲ್ಲಿ ಸುಮಾರು 650 ವರ್ಷಗಳ ಹಿಂದೆ ಈ ಪ್ರಕಾರದ ರಚನೆ ಮೊದಲಾಗಿರಬೇಕು. ಇದೊಂದು ಕಿರುಕಾವ್ಯ ಪ್ರಕಾರವಾಗಿ ನಮ್ಮಲ್ಲಿ ಬಳಕೆಗೆ ಬಂದಿದೆ. ಇದನ್ನು ಆಧರಿಸಿ ಪ್ರದರ್ಶನಗಳು ರೂಪುಗೊಂಡವು. ಆಟ, ಬಯಲಾಟ, ದಶಾವತಾರಾಟ, ಕೇಳಿಕೆ, ಮೂಡಲಪಾಯ, ಅಟ್ಟದಾಟ, ದೊಡ್ಡಾಟ, ತಾಳಮದ್ದಲೆ, ಗೊಂಬೆಯಾಟ ಮುಂತಾದ ಹೆಸರಿನಲ್ಲಿ ಪ್ರದರ್ಶನಗಳು ನಡೆಯುತ್ತಿದ್ದವು. ಆದರೆ 19ನೇ ಶತಮಾನದ ಅಂತ್ಯ ಹಾಗೂ 20ನೇ ಶತಮಾನದ ಆದಿ ಭಾಗದಲ್ಲಿ ಕರಾವಳಿ ಹಾಗೂ ಮಲೆನಾಡಿನ ಭಾಗದಲ್ಲಿ ಮೊದಲಿಗೆ ಪ್ರದರ್ಶನವನ್ನು "ಯಕ್ಷಗಾನ" ಎಂದು ಕರೆಯಲು ಪ್ರಾರಂಭಿಸಿದರು. ಮುಂದೆ ಬಯಲುನಾಡಿಗೂ ಇದು ವಿಸ್ತರಿಸಿತು. ಈ ಕುರಿತು ಪ್ರದರ್ಶನಕ್ಕೆ ಈಗ ಯಕ್ಷಗಾನ ಎಂಬ ಹೆಸರೇ ಜಗಜ್ಜಾಹಿರಾಗಿದೆ. ಅಷ್ಟೇ ಅಲ್ಲ ಬಯಲುನಾಡಿನ ಯಕ್ಷಗಾನಕ್ಕೆ ಮೂಡಲಪಾಯವೆಂತಲೂ, ಕರಾವಳಿ ಮಲೆನಾಡಿನದ್ದು ಪಡವಲುಪಾಯವೆಂತಲೂ ವಿದ್ವಾಂಸರು ವಿಭಜಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಹಾಸಣಗಿಯವರ ವಾದವನ್ನು ಗಮನಿಸಬೇಕಾಗಿದೆ. ಲೇಖಕರು ಯಕ್ಷಗಾನ ಎಂಬುವುದು ಸಂಗೀತದ ಒಂದು ಶೈಲಿ, ಒಂದು ಸಂಗೀತ ಪದ್ಧತಿಯ ಭೇದ, ಅದು ಇಡೀ ಪ್ರದರ್ಶನದಲ್ಲಿ ಒಂದು ಆಗಿರುವುದರಿಂದ ಆ ಹೆಸರು ಪ್ರದರ್ಶನಕ್ಕೆ ಸೂಕ್ತವಲ್ಲ ಎನ್ನುತ್ತಾರೆ. ಸಂಸ್ಕೃತದ ಲಾಕ್ಷಣೀಕರ ಪ್ರಕಾರ ಅನೇಕ ಕಲೆಗಳ ಏಕೀಕರಣವೇ ನಾಟಕವೆಂದಿರುವುದರಿಂದ ಯಕ್ಷಗಾನದಲ್ಲಿ ಅನೇಕ ಕಲೆಗಳು

ಇರುವುದರಿಂದ ಇದು ನಾಟಕ ಪ್ರಕಾರಕ್ಕೆ ಸೇರುತ್ತದೆ. ಆದುದರಿಂದ "ಯಕ್ಷನಾಟಕ"ಗಳು ಎಂದೇ ಕರೆಯುವುದು ಸೂಕ್ತ ಎನ್ನುತ್ತಾರೆ. ಪ್ರದರ್ಶನಕ್ಕೆ "ಯಕ್ಷಗಾನ" ಎಂಬ ಹೆಸರು ಮೂಲದಲ್ಲಿ ಇಲ್ಲ ಎಂಬ ಅವರ ಮಾತು ಒಪ್ಪತಕ್ಕದ್ದಾಗಿದೆ.

ಯಕ್ಷಗಾನವನ್ನು "ಯಕ್ಷನಾಟಕ" ಎಂದು ಕರೆಯಬೇಕೆಂಬ ಹಾಸಣಗಿಯವರ ಆಶಯವೇನೋ ಹಿರಿದು. ಆದರೆ ಅದು ಈಡೇರದೇ ಇರುವುದು ಇತಿಹಾಸವಾಗಿದೆ. ಪುಸ್ತಕದ ಇಬ್ಬರು ಮುನ್ನುಡಿಕಾರರು ಕೂಡಾ ಈ ಪ್ರಸ್ತಾಪದ ಅವಾಸ್ತವಿಕತೆಯನ್ನು ಎತ್ತಿದ್ದಾರೆ. ಯಕ್ಷಗಾನ ಎಂಬುವುದು ಈಗ ಕರ್ನಾಟಕದ ಪ್ರಾತಿನಿಧಿಕ ಕಲೆಯಾಗ ಬೇಕೆಂಬ ಕೂಗು ಎದ್ದಿರುವ ಸಂದರ್ಭದಲ್ಲಿ ಲೇಖಕರ ಆಶಯ ಸಂಪೂರ್ಣ ಹಿನ್ನೆಲೆಗೆ ಸರಿದಿದೆ. ಕೃತಿಯ ಎರಡನೆಯ ಅಧ್ಯಾಯದಲ್ಲಿ ಯಕ್ಷನಾಟಕಗಳ ಉಗಮ, ಪ್ರಭಾವ ಹಾಗೂ ಕಾಲದ ಬಗ್ಗೆ ಚರ್ಚೆ ಬಂದಿದೆ. ಹಾಸಣಗಿಯವರು ಈ ಕಲಾಪ್ರಕಾರದ ತಳಹದಿಯು ಗೊಂಬೆಯಾಟ ಆಗಿದ್ದು ಮುಂದೆ ತಾಳಮದ್ದಲೆ ಹಾಗೂ ಪ್ರದರ್ಶನಗಳು ಬಂದಿರಬೇಕು ಎನ್ನುತ್ತಾರೆ. ಸಂಸ್ಕೃತ ನಾಟಕಗಳ ಪ್ರಭಾವ ಪೂರ್ವರಂಗದಲ್ಲಿ ಹೇಗೆ ಇದೆ ಎಂಬುದರ ಬಗೆಗಿನ ಲೇಖಕರ ವಿಶ್ಲೇಷಣೆ ಬಹಳ ಚೆನ್ನಾಗಿದೆ. ಸಂಸ್ಕೃತ ನಾಟಕದ ಲಕ್ಷಣಕಾರರು ಹೇಳಿರುವ ಅನೇಕ ಅಂಶಗಳು "ಯಕ್ಷನಾಟಕ"ಗಳಲ್ಲಿ ಬಂದಿರುವುದನ್ನು ಪಟ್ಟಿ ಮಾಡಿ ಇದನ್ನೂ ಕೂಡ ಶೀರ್ಷಿಕೆಯ ಸಮರ್ಥನೆಗೆ ಬಳಸಿದ್ದಾರೆ. "ಯಕ್ಷನಾಟಕಗಳ ಕಾಲ" ಎಂಬ ಕಿರು ಅಧ್ಯಾಯದಲ್ಲಿ ರಾ.ಭಾ. ಹಾಸಣಗಿಯವರು ಭಾರತೀಯ ರಂಗ ಸಂಪ್ರದಾಯಗಳ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಅವುಗಳೊಂದಿಗೆ "ಯಕ್ಷನಾಟಕ" ಕ್ಕಿರುವ ಸಂಬಂಧವನ್ನು ಚರ್ಚಿಸಿದ್ದಾರೆ. ಯಕ್ಷನಾಟಕಗಳು ಕನ್ನಡ ನಾಡಿನಲ್ಲಿ ಕ್ರಿ.ಶ. 10ನೆಯ ಶತಮಾನದಿಂದಲೂ ಇರಬೇಕೆಂಬ ಅಭಿಪ್ರಾಯಕ್ಕೆ ಬರುತ್ತಾರೆ. ಸಂಸ್ಕೃತ ನಾಟಕಗಳ ಉಚ್ಛ್ರಾಯ ಕಾಲದಲ್ಲೇ ದೇಶೀಯ ನಾಟಕ ಪರಂಪರೆ ಪ್ರಭಾವಗೊಂಡು ಉಗಮಿಸಿರಬೇಕೆಂಬ ನಿಲುವಿಗೆ ಬರುತ್ತಾರೆ. ವಿಜಯನಗರ ಕಾಲದಲ್ಲಿ ಯಕ್ಷನಾಟಕವು ಇದ್ದಿತ್ತು ಎಂಬುದನ್ನು ಸಮರ್ಥಿಸಲು ರತ್ನಾಕರವರ್ಣಿಯವರು ಹೇಳಿರುವ "ಎಕ್ಕಡಿಗರು" ಎಂಬ ಪದವನ್ನು ಸಮರ್ಥನೆಗೆ ಕೊಡುತ್ತಾರೆ. "ಯಕ್ಷನಾಟಕ" ನಾಡಾಡಿಗಳ ಕಲೆಯೆಂದು ಕರೆಯಬೇಕಿಲ್ಲ ಎನ್ನುವ ಹಾಸಣಗಿಯವರು ಅದರ ಹಿರಿಮೆಯನ್ನು ಪಟ್ಟಿ ಮಾಡಿಕೊಟ್ಟಿದ್ದಾರೆ.

"ಯಕ್ಷನಾಟಕ"ಗಳ ವೈಶಿಷ್ಟ್ಯ ಎಂಬ ಅಧ್ಯಾಯದಲ್ಲಿ ಹಾಸಣಗಿಯವರು ಈ ಕಲೆಯ ಸಮಗ್ರವಾದ ವಿವರಣೆ ಕೊಡುತ್ತಾರೆ. ಇಲ್ಲಿ 18 ಉಪವಿಭಾಗಗಳನ್ನು ಮಾಡಿಕೊಂಡು ಈ ಕಲೆಯ ಎಲ್ಲಾ ಅಂಗಗಳ ವಿಶಿಷ್ಟತೆಯನ್ನು ಸಾಧಾರವಾಗಿ ವಿಮರ್ಶಿಸುತ್ತಾರೆ. ರಸೋತ್ಪತ್ತಿಯು ನಾಟಕದ ಗುರಿ ಅಂತಹ ರಸೋತ್ಕರ್ಷವಾದ ಪ್ರಸಂಗಗಳನ್ನು ಉಲ್ಲೇಖಿಸಿ ಬೇರೆಬೇರೆ ರಸಗಳು "ಯಕ್ಷನಾಟಕ"ದಲ್ಲಿ ಪಡಿ ಮೂಡಿದ

ಬಗೆಯನ್ನು ಚಿತ್ರಿಸಿದ್ದಾರೆ. ಪದ್ಯ ಸಾಹಿತ್ಯದಲ್ಲಿನ ಹಾಗೂ ನಾಟ್ಯದ ಮಾತಿನಲ್ಲಿ ಬರುವ ಗದ್ಯದಲ್ಲಿನ ವಿಶಿಷ್ಟತೆ ತಿಳಿಸಿದ್ದಾರೆ. ನಟರು ಹೇಗಿರಬೇಕು? ಅವರ ಅಭಿನಯ ಮತ್ತು ಮಾತುಗಳು ಹೇಗಿರಬೇಕು ಎಂಬುವುದಕ್ಕೆ ತಮ್ಮದೇ ಆದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಪ್ರದರ್ಶನಗಳಲ್ಲಿ ಭಾಗವಹಿಸುವ ನಟರ ಸ್ವಾತಂತ್ರ್ಯ ಎಷ್ಟಿರಬೇಕು ಎಂಬುವುದಕ್ಕೆ ಕೂಡ ಲಕ್ಷಣಶಾಸ್ತ್ರದ ವಿಚಾರವನ್ನು ಉದಾಹರಿಸಿದ್ದಾರೆ. ಮುಂದೆ ಪ್ರತಿಯೊಂದು ಪಾತ್ರವನ್ನು ತೆಗೆದುಕೊಂಡು ಆ ಪಾತ್ರಗಳ ಅಭಿವ್ಯಕ್ತಿ ಹೇಗಿರಬೇಕೆಂಬುವುದನ್ನು ತಿಳಿಸಿಕೊಟ್ಟಿದ್ದಾರೆ. ಅದೇ ರೀತಿ ವೇಷಭೂಷಣಗಳ ಕುರಿತು ಕೂಡಾ ಹಾಸಣಗಿಯವರು ಅನೇಕ ವಿಚಾರಗಳನ್ನು ದಾಖಲಿಸಿದ್ದಾರೆ. ಕಿರೀಟಗಳ ಬಳಕೆ ಹೇಗೆ? ಪೊಗಡೆಗಳಲ್ಲಿನ ವೈವಿಧ್ಯ, ಮುಖ್ಯ ಪ್ರಸಾಧನದಲ್ಲಿ ವಹಿಸಲೇ ಬೇಕಾದ ವಿಚಾರ ಎಚ್ಚರಿಕೆಯ ಬಗ್ಗೆ ಲೇಖಕರ ವಿಚಾರವನ್ನು ಇಲ್ಲಿ ಕಾಣಬಹುದು. ಇವೆಲ್ಲಾ ಲೇಖಕರಿಗೆ ಈ ಕಲೆಯ ಕುರಿತು ಆಮೂಲಾಗ್ರ ಪರಿಚಯವಿದೆ ಎಂಬುವುದು ಸ್ಪಷ್ಟವಾಗುತ್ತದೆ. ನಾಟ್ಯವಿಚಾರ ಹಾಗೂ ನಾಟ್ಯಾಂಗಗಳ ಬಗ್ಗೆ ಮಾತನಾಡುವಾಗ ಹಾಸಣಗಿಯವರು ಸಂಸ್ಕೃತ ನಾಟ್ಯ ಶಾಸ್ತ್ರವನ್ನು ಸುದೀರ್ಘವಾಗಿ ಪ್ರಸ್ತಾಪಿಸಿದ್ದಾರೆ. ತಾಳಮದ್ದಲೆ ಕುರಿತು ಅನೇಕ ಒಳ ನೋಟದ ವಿಚಾರಗಳನ್ನು ಲೇಖಕರು ಪ್ರಸ್ತಾಪಿಸಿದ್ದಾರೆ. 75 ವರ್ಷಗಳ ಹಿಂದಿನ ತಾಳ ಮದ್ದಲೆ, ರಂಗಭೂಮಿಯ ಪರಿಚಯ ಇದರಿಂದ ಆಗುತ್ತದೆ. ಅರ್ಥಧಾರಿ ಹಾಗೂ ಭಾಗವತರ ನಡುವಿನ ಸಾಮರಸ್ಯದ ಪ್ರಸ್ತಾಪ ಇಲ್ಲಿ ಬಂದಿದೆ.

ಹಾಸಣಗಿಯವರ "ಯಕ್ಷನಾಟಕಗಳು" ಪುಸ್ತಕದ ನಾಲ್ಕನೇ ಅಧ್ಯಾಯವು ಆಗಬೇಕಾದ ಸುಧಾರಣೆ ಕುರಿತದ್ದಾಗಿದೆ. ಏಳು ದಶಕಗಳ ಹಿಂದೆಯೇ ಅವರು ಸೂಚಿಸಿದ ಸುಧಾರಣೆಗಳು ಇಂದಿಗೂ ಸೂಕ್ತವಾಗಿದೆ. ತಮ್ಮ ಕಾಲದ ಹಿಂದೆ ಇದ್ದ ಪ್ರಸ್ತುತಿಯನ್ನು ಪ್ರಸ್ತಾಪಿಸಿ ಆಗಬೇಕಾದ ಸುಧಾರಣೆಗಳನ್ನು ಒಂದೊಂದಾಗಿ ಹೇಳಿದ್ದಾರೆ. ಸಂಭಾಷಣೆಯಲ್ಲಿ ಬರುತ್ತಿರುವ ಅತೀ ಮಾತುಗಳನ್ನು ವಿರೋಧಿಸುವ ಅವರು ಭಾಷೆಯು ಗ್ರಾಮ್ಯಮಟ್ಟದಿಂದ ಮೇಲಕ್ಕಿರಬೇಕೆಂಬ ಅಭಿಪ್ಸೆ ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ರಚನೆಗಳಲ್ಲಿನ ಸುಧಾರಣೆ ಬಗ್ಗೆ ಕೂಡಾ ಲೇಖಕರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಪುಸ್ತಕದ ಕೊನೆಯ ಭಾಗವಾಗಿ ಕಡಂದಲೆ ರಾಮರಾಯರ "ದ್ರೌಪದಿ ಪ್ರತಾಪ" ಹಾಗೂ ಹಲಸಿನಹಳ್ಳಿ ನರಸಿಂಹ ಶಾಸ್ತ್ರಿಗಳ "ರುಕ್ಮಾಂಗದ ಚರಿತೆ" ಯನ್ನು ಪ್ರಾಯೋಗಿಕವಾಗಿ ವಿಮರ್ಶೆಗೆ ಒಳಪಡಿಸಿದ್ದಾರೆ. ಪ್ರತಿ ಪ್ರಸಂಗದ ವಸ್ತು ವಿಚಾರವನ್ನು ಸಂಕ್ಷಿಪ್ತವಾಗಿ ತಿಳಿಸಿ ಮುಂದೆ ಪಾತ್ರದ ವಿವೇಚನೆಗೆ ತೊಡಗುತ್ತಾರೆ. ಪಾತ್ರದ ಅಭಿವ್ಯಕ್ತಿಯನ್ನು ಕವಿ ಹೇಗೆ ನಿರೂಪಿಸಿದ್ದಾನೆ ಎಂಬುದನ್ನು ತಿಳಿಸಿ ಕೊಡುತ್ತಾರೆ. ಸ್ವಾರಸ್ಯಪೂರ್ಣವಾದ ಸಂಭಾಷಣೆಯ ಉದಾಹರಣೆಯನ್ನೂ, ಪ್ರಸಂಗದ ವಿಶಿಷ್ಟತೆಯನ್ನು ತಿಳಿಸಿ ಕೊಡುತ್ತಾರೆ. ಪ್ರಸಂಗಕಾರರ ಆಶಯವನ್ನು ತಿಳಿಸಿ ಅದು

ಪ್ರಸಂಗದಲ್ಲಿ ಪ್ರತಿಬಿಂಬಿಸಿದ ಬಗ್ಗೆ ತಿಳಿಸಿಕೊಡುತ್ತಾರೆ. ಹೀಗೆ ಹಾಸಣಗಿಯವರು ಪ್ರಸಂಗಗಳ ವಿಮರ್ಶೆ ಹೇಗೆ ಮಾಡಬೇಕೆಂಬ ಬಗ್ಗೆ ಮಾದರಿ ಹಾಕಿ ಕೊಟ್ಟಿದ್ದಾರೆ. ಇದಕ್ಕಾಗಿ ಲೇಖಕರು ಅಭಿನಂದನಾರ್ಹರು.

ಯಕ್ಷನಾಟಕಗಳ ವೈಶಿಷ್ಟ ಎಂಬ ಅಧ್ಯಾಯದಲ್ಲಿ ದೃಶ್ಯಕಾವ್ಯದ ಲಕ್ಷಣವನ್ನು ಮೊದಲಿಗೆ ವಿವರಿಸಿ ಯಕ್ಷನಾಟಕಗಳಲ್ಲಿ ಈ ಲಕ್ಷಣಗಳಿರುವುದನ್ನು ಪ್ರತಿಪಾದಿಸುತ್ತಾರೆ. ವೀರ ಹಾಗೂ ಶೃಂಗಾರ ರಸಗಳೇ ಹೆಚ್ಚಾಗಿ ಯಕ್ಷನಾಟಕಗಳಲ್ಲಿ ಕಂಡು ಬರುತ್ತವಾದರೂ ಪಟ್ಟಾಭಿಷೇಕ, ಪಂಚವಟಿಯಂತಹ ಪ್ರಸಂಗಗಳಲ್ಲಿ ಕರುಣರಸ ಪ್ರಧಾನವಾಗಿದೆ. ಧೀರೋದ್ಧಾತ್ತ ನಾಯಕರು ಇಲ್ಲಿದ್ದಾರೆ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಭಕ್ತಿರಸ ಪ್ರಧಾನವಾದ ಪ್ರಹ್ಲಾದ ಚರಿತ್ರೆ, ರುಕ್ಮಾಂಗದ ಚರಿತ್ರೆಗಳು ರಂಗದಲ್ಲಿ ಮಿಂಚಿವೆ. ಸಂಸ್ಕೃತ ನಾಟಕಗಳ ಲಕ್ಷಣದಂತೆ ರಸ, ನಾಯಕಾದಿಗಳನ್ನು ಅನುಸರಿಸಿ ಬರೆಯಲಾಗಿದೆ ಎನ್ನುತ್ತಾರೆ. ಪ್ರಸಂಗ ಸಾಹಿತ್ಯದ ವಿಶೇಷತೆಯಾದ ಪದ್ಯಮಯತೆ, ಗೇಯತೆಯ ವಿವರ ಇಲ್ಲಿದೆ. ವೇಷಭೂಷಣಗಳ ಬಗ್ಗೆ, ದೇವಾನುದೇವತೆಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ. ಯಕ್ಷಗಾನದಲ್ಲಿರುವ ಕಿರೀಟ, ಪೊಗಡೆ, ನಾಟ್ಯ, ನಾಟ್ಯಾಂಗಗಳು ಮುಂತಾದವೆಲ್ಲದರ ಕುರಿತು ಚರ್ಚೆ ಮಾಡಿದ್ದಾರೆ. ಸಂಸ್ಕೃತ ನಾಟಕ ಹಾಗೂ ಲಕ್ಷಣ ಶಾಸ್ತ್ರಗಳ ಬಗ್ಗೆ ಅಪಾರ ಪಾಂಡಿತ್ಯವಿರುವ ರಾ.ಭ. ಹಾಸಣಗಿಯವರು ತಮ್ಮ ವಿಚಾರ ಮಂಡಿಸುವಾಗೆಲ್ಲ ಯಕ್ಷಗಾನಕ್ಕೂ ಹಾಗೂ ಸಂಸ್ಕೃತ ನಾಟಕಗಳಿಗೂ ಇರುವ ಸಾಮ್ಯ ವ್ಯತ್ಯಾಸಗಳನ್ನು ಪಟ್ಟಿ ಮಾಡುತ್ತಾರೆ. ಈ ದೃಷ್ಟಿಯಿಂದ ಲೇಖಕರು ಹೊಸ ದೃಷ್ಟಕೋನ ಹೊಂದಿರುವುದು ತಿಳಿದು ಬರುತ್ತದೆ.

ಎರಡನೆಯ ಮುದ್ರಣಕ್ಕೆ ವಿಶೇಷವಾಗಿ ಅನುಬಂಧದ ರೂಪದಲ್ಲಿ ನಾಲ್ಕು ಲೇಖನಗಳನ್ನು ಸೇರ್ಪಡೆಗೊಳಿಸಲಾಗಿದೆ. ಅದಲ್ಲದೆ ಮೊದಲ ಲೇಖನ ಹಾಸಣಗಿಯವರು ಹಿಂದೊಮ್ಮೆ ಬರೆದು ಅಪ್ರಕಟಿತವಾಗಿರುವಂತಹುದು. ತಾಳಮದ್ದಲೆ ಕುರಿತು ಸುದೀರ್ಘವಾದ ಚಿಂತನೆ ಇಲ್ಲಿದೆ. ಜಾಗರಣೆ ಅಥವಾ ಬೈಠಕ್ ಎಂದು ಕರೆಸಿಕೊಳ್ಳುವ ಈ ಕಲಾಪ್ರಕಾರದ ರೀತಿನೀತಿಗಳು ಹೇಗಿವೆ? ಹೇಗಿದ್ದರೆ ಚೆಂದ ಎಂಬೆಲ್ಲದರ ವಿವರ ಬಂದಿದೆ. ಅರ್ಥಧಾರಿ ವಹಿಸಬೇಕಾದ ಎಚ್ಚರಿಕೆಯ ಬಗ್ಗೆ ಮಾತುಗಾರಿಕೆಯ ಇತಿಮಿತಿಯ ಬಗ್ಗೆ ಚರ್ಚೆಯನ್ನು ಹಾಸಣಗಿಯವರು ಸಾಧಾರವಾಗಿ ಮಾಡುತ್ತಾರೆ. ಮುಂದಿನ ಎರಡು ಲೇಖನಗಳನ್ನು ಡಾ.ಕೆರೆಮನೆ ಮಹಾಬಲ ಹೆಗಡೆ ಹಾಗೂ ಪ್ರೊ.ಡಿ.ಜಿ.ಹೆಗಡೆಯವರು ಬೇರೆಬೇರೆ ಸಂದರ್ಭದಲ್ಲಿ ಹಾಸಣಗಿಯವರ ಕುರಿತು ಬರೆದಿದ್ದಾಗಿದ್ದು ಇಲ್ಲಿ ಸಂಕಲಿಸಲಾಗಿದೆ. ಮಹಾಬಲ ಹೆಗಡೆಯವರ ಬರಹದಲ್ಲಿ ಆತ್ಮೀಯತೆ ಇದ್ದರೆ ಡಿ.ಜಿ. ಹೆಗಡೆಯವರ ಲೇಖನದಲ್ಲಿ ಅವರ ವ್ಯಕ್ತಿತ್ವದ

ನೇರ ಚಿತ್ರಣವಿದೆ. ಅವರೊಬ್ಬ ನಿಷ್ಠೂರವಾದಿಯಾಗಿದ್ದರೂ ಅಸಾಧಾರಣ ಚಿಂತನೆಯಿಂದ, ನೇರನಡೆನುಡಿಯಿಂದ ಆಪ್ತರಾಗಿದ್ದರು ಎನ್ನುತ್ತಾರೆ. ಅನುಬಂಧದ ಕೊನೆಯ ಲೇಖನ ಸಂಪಾದಕರದಾಗಿದ್ದು ಯಕ್ಷಗಾನದ ಸಾಂಸ್ಕೃತಿಕ ಮೌಲ್ಯಗಳ ಕುರಿತು ಜಿಜ್ಞಾಸೆಯಿಂದ ಕೂಡಿದ್ದಾಗಿದೆ. ಇಲ್ಲಿ ಹೆಚ್.ಆರ್. ಅಮರನಾಥ ಅವರು ಯಕ್ಷಗಾನದ ಕುರಿತಾದ ಹೊಸ ಚಿಂತನೆಯನ್ನು ಹರಿಯ ಬಿಟ್ಟಿದ್ದಾರೆ. ಪಾರಂಪರಿಕ ಮೌಲ್ಯ ಪ್ರತಿಪಾದನೆ, ಆಸ್ತಿಕತೆಯ ಕಡೆಗೆ ಒಲವು, ಪುನರ್ಜನ್ಮದ ಪ್ರತಿಪಾದನೆ, ಕರ್ಮಸಿದ್ಧಾಂತ ಹಾಗೂ ಋಣಾನುಬಂಧದ ಪ್ರತಿಪಾದನೆ ಮುಂತಾದ ಮೌಲ್ಯಗಳು ಇಲ್ಲಿ ಜೀವಂತವಾಗಿವೆ ಎನ್ನುತ್ತಾರೆ. ಕಾಲ ಬದಲಾದರೂ ಯಕ್ಷಗಾನ ಮೇಳಗಳು ಈ ವಿಚಾರದಲ್ಲಿ ರಾಜಿ ಮಾಡಿಕೊಂಡಿಲ್ಲ ಎಂದು ತಿಳಿಸಿರುತ್ತಾರೆ. "ಯಕ್ಷನಾಟಕ"ಗಳು ಕಲೆಯ ಆಶಯಕ್ಕೆ ಈ ಲೇಖನ ಭಿನ್ನವಾಗಿದ್ದರೂ ಹೊಸ ಚಿಂತನೆಯಿಂದ ಕೂಡಿದ್ದು ಸಂಪಾದಕರ ಲೇಖನವಾದದ್ದರಿಂದ ಪುಸ್ತಕಕ್ಕೆ ಹೊಸ ಆಯಾಮ ಲಭಿಸಿದಂತಾಗಿದೆ. ಹಾಸಣಗಿಯವರ ಸಂಕ್ಷಿಪ್ತ ಜೀವನ ಪರಿಚಯವಿದ್ದು ಯಕ್ಷಗಾನ ಚಿಂತಕರ ಮಾಹಿತಿ ಯಕ್ಷಲೋಕಕ್ಕೆ ದೊರಕಿದಂತಾಗಿದೆ. 1908ರಲ್ಲಿ ಜನ್ಮತಾಳಿದ ಹಾಸಣಗಿಯವರು ಶಿಕ್ಷಕ ವೃತ್ತಿಯನ್ನು ಅವಲಂಬಿಸಿ ಸುದೀರ್ಘ ಜೀವನ ನಡೆಸಿ ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಐದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಪುರಸ್ಕಾರವನ್ನು ಪಡೆದವರು. ಶಿವರಾಮಕಾರಂತ, ಬಿ.ಹೆಚ್. ಶ್ರೀಧರ, ಶಿವರಾಮ ಹೆಗಡೆ ಮುಂತಾದವರ ಒಡನಾಟದಲ್ಲಿದ್ದು ಚಿಂತಕರಾಗಿದ್ದ ವಿಚಾರ ತಿಳಿದು ಬರುತ್ತದೆ. ಹೀಗೆ ಅನುಬಂಧಗಳಿಂದಾಗಿ ಅನೇಕ ಹೊಸ ಸಂಗತಿಗಳು ಯಕ್ಷಗಾನ ಆಸಕ್ತರಿಗೆ ಲಭಿಸಿದಂತಾಗಿದೆ. ಇದಕ್ಕಾಗಿ ಅಮರನಾಥರು ಅಭಿನಂದನಾರ್ಹರು.

ಕಳೆದ ಶತಮಾನದ ಪೂರ್ವಾರ್ಧಕ್ಕೆ ಸಂಬಂಧಿಸಿದ ಕೃತಿಯಾಗಿರುವ "ಯಕ್ಷನಾಟಕ"ಗಳು ಈ ಶತಮಾನಕ್ಕೂ ಪ್ರಸ್ತುತ ಇಲ್ಲಿ ಲೇಖಕರು ಯಕ್ಷಗಾನದ ಮೂಲದ ಬಗ್ಗೆ ಹಾಗೂ ತಾವು ಕಂಡ ಯಕ್ಷಗಾನ, ತಾಳಮದ್ದಲೆಯ ಸ್ವರೂಪದ ಬಗ್ಗೆ ಬರೆದಿರುವ ವಿಚಾರಗಳು ಅಪೂರ್ವವಾಗಿವೆ. ಶೀರ್ಷಿಕೆಯ "ಯಕ್ಷನಾಟಕ"ಗಳು ಚಾಲ್ತಿಗೆ ಬಾರದೇ ಇದ್ದರೂ ಇಲ್ಲಿನ ವಿಷಯಗಳು, ಲೇಖಕರ ಆಶಯಗಳು, ಆಗ್ರಹಗಳು ಸದಾ ಜೀವಂತವಾಗಿರುವಂತಹವು. ಎರಡನೆಯ ಮುದ್ರಣದ ಸಂದರ್ಭದಲ್ಲಿ ಡಾ. ಜಿ.ಎಸ್. ಭಟ್ಟ ಸಾಗರ ಅವರು ಬರೆದಿರುವ "ಸ್ಥಿತ್ಯಂತರಗಳ ಚಾರಿತ್ರಿಕ ದಾಖಲೆ" ಎಂಬ ಮುನ್ನುಡಿ ರೂಪದ ಲೇಖನದಲ್ಲಿ ಹೇಳಿರುವ ಇಲ್ಲಿನ ಟಿಪ್ಪಣಿ ರೂಪದ ಚಿಂತನೆಗಳು ಮಹಾ ಪ್ರಬಂಧಗಳಿಗೆ ಬುನಾದಿ ಬರಹಗಳಾಗಿ ಸಲ್ಲುತ್ತದೆಯಾದ್ದರಿಂದ ಈ ಗ್ರಂಥಕ್ಕೆ ಚಾರಿತ್ರಿಕ ಮಾತ್ರವಲ್ಲ, ಲಾಕ್ಷಣಿಕ ಮಹತ್ವವೂ ಇದೆ ಎಂಬುದು ಅಕ್ಷರಶಃ ಸತ್ಯ. ಅನೇಕ ಪ್ರೌಢ ಪ್ರಬಂಧಗಳ ಬೀಜ ರೂಪದ

ಲೇಖನಗಳನ್ನು ಹಾಸಣಗಿಯವರು ಬರೆದು ಕೃತಕೃತ್ಯರಾಗಿದ್ದಾರೆ. ಯಕ್ಷಗಾನ ವಿದ್ವತ್ ಲೋಕ ಗಮನಿಸಲೇಬೇಕಾದ ಕೃತಿಯಾಗಿರುವ "ಯಕ್ಷನಾಟಕಗಳು" ಎಂಬುದನ್ನು ಸಂಪಾದಿಸಿ, ಪ್ರಕಟಿಸಿರುವ ಅವರ ಪುತ್ರರಾದ ಹೆಚ್.ಆರ್.ಅಮರನಾಥರ ಈ ಕೈಂಕರ್ಯ ಕೂಡಾ ಯಕ್ಷಲೋಕಕ್ಕೆ ಕೊಟ್ಟ ಕೊಡುಗೆಯಾಗಿದೆ. ಹಾಸಣಗಿಯವರ ಚಿಂತನೆಯ ಬೀಜಗಳನ್ನು ಯಕ್ಷಗಾನ ಸಂಶೋಧಕರು ಆರಿಸಿಕೊಂಡು ಬಳಸಿ, ಬೆಳಸಿ ಯಕ್ಷಸಾಹಿತ್ಯವನ್ನು ಶ್ರೀಮಂತಗೊಳಿಸುವ ಹೊಣೆಗಾರಿಕೆ ವಹಿಸಬೇಕಾಗಿದೆ.

("ಮರೆಯದ ಮಹಾನುಭಾವರು" – ವಿದ್ವಾನ್ ರಾ.ಭ. ಹಾಸಣಗಿಯವರ ಸಂಸ್ಮರಣ ಗ್ರಂಥದಲ್ಲಿ ಬಂದ ಲೇಖನ)

*

ಯಕ್ಷಗಾನ – ಜೀವಂತಿಕೆಯ ತುಡಿತದತ್ತ

ಪಡುಕಡಲು, ನಡುಕಾಡು, ಮೂಡುಬಯಲಿನಿಂದ ಕೂಡಿರುವ ಕರ್ನಾಟಕ ನೈಸರ್ಗಿಕವಾಗಿ ಶ್ರೀಮಂತವಾಗಿದೆ. ಸಾಂಸ್ಕೃತಿಕವಾಗಿಯೂ ಶ್ರೀಮಂತವಾದಂತೆ. ಸಂಸ್ಕೃತಿಯು ಸಾಕಾರವಾಗುವುದು ಕಲೆಗಳಲ್ಲಿ. ಕರ್ನಾಟಕದ ಅನೇಕ ಜೀವಂತ ಕಲೆಗಳಲ್ಲಿ ಯಕ್ಷಗಾನವೂ ಒಂದು. ಈ ನಾಡಿನ ಸಾಂಸ್ಕೃತಿಕ ಹಿರಿಮೆಗೆ ಯಕ್ಷಗಾನದ ಕೊಡುಗೆಯಂತೂ ಅನನ್ಯ. ಕರಾವಳಿ ಮಲೆನಾಡಿನಲ್ಲಿ ಕಾಣಿಸಿಕೊಳ್ಳುವ "ಬಯಲಾಟ" ಸಂಪ್ರದಾಯವನ್ನು ಜನತೆ "ಯಕ್ಷಗಾನ"ವೆಂದೇ ಗುರುತಿಸಿದ್ದಾರೆ. ಆದರೆ ಈಗ ಅದು ಅಷ್ಟಕ್ಕೆ ಸೀಮಿತವಾಗದೆ ರಾಜ್ಯದೆಲ್ಲೆಡೆಗೆ ದಾಂಗುಡಿಯಿಡುತ್ತಾ, ಪ್ರದರ್ಶನಗೊಳ್ಳುತ್ತಾ ಕರ್ನಾಟಕದ ಪ್ರಾತಿನಿಧಿಕ ಕಲೆಯಾಗಿ ಪ್ರತಿಷ್ಠಾಪನೆಗೊಂಡಿದೆ. ಅಷ್ಟೇ ಏಕೆ ಹೊರರಾಜ್ಯದ, ಹೊರದೇಶದ ಅನೇಕ ಕಡೆಗಳಲ್ಲಿ ಪ್ರದರ್ಶನಗಳು ನಡೆಯುತ್ತಿರುತ್ತವೆ. ಈ ಮೂಲಕ ಶ್ರೀಗಂಧ, ಚಿನ್ನ, ಆನೆಗಳಂತೆ ಯಕ್ಷಗಾನವೂ ಕರ್ನಾಟಕಕ್ಕೆ ಹಿರಿಮೆಗರಿಮೆಯನ್ನು ತಂದುಕೊಟ್ಟಿದೆ.

ಯಕ್ಷಗಾನವು ಮೂಲತಃ ದೇಸಿ ಶೈಲಿಯ ಕಲೆ. ಜನಪದರ ಉತ್ಕೃಷ್ಟ ಸೃಜನಶೀಲತೆಯನ್ನು ಇಲ್ಲಿ ಕಾಣಬಹುದು. ಹೊಸಗನ್ನಡದ ಅರುಣೋದಯಕ್ಕೆ ಮೊದಲು ನಾಟಕ ಕೃತಿಗಳು ಕನ್ನಡದಲ್ಲಿ ರಚನೆಯಾಗಿಲ್ಲ. ಹಾಗೆಂದು ಕನ್ನಡದಲ್ಲಿ ರಂಗಭೂಮಿ ಇರಲಿಲ್ಲವೆಂದು ಅರ್ಥವಲ್ಲ. ಯಕ್ಷಗಾನದಂತಹ ಸಾಂಪ್ರದಾಯಿಕ ರಂಗಕಲೆಗಳು ಕನ್ನಡ ರಂಗಭೂಮಿಯನ್ನು ಉಳಿಸಿಬೆಳೆಸಿವೆ. ಕನ್ನಡದ ಕಿರು ಹಾಡುಗಳ ಪ್ರಕಾರವನ್ನು "ಯಕ್ಷಗಾನ ಪ್ರಬಂಧ"ವೆಂದೇ ಕರೆದಿದ್ದು ಇವನ್ನು ಆಧರಿಸಿ ಯಕ್ಷಗಾನ ಪ್ರದರ್ಶನಗಳು ನಡೆಯುತ್ತಿದ್ದವು. ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಪುನರುತ್ಥಾನದಲ್ಲಿ ಈ ಕಲಾ ಪ್ರಕಾರದ ಬೇರುಗಳನ್ನು ಕಾಣಬಹುದು. ಕುಣಿತ, ಬಣ್ಣಗಾರಿಕೆ, ಅಭಿನಯ, ಹಾಡಿನ ಮಟ್ಟುಗಳಲ್ಲಿ ಯಕ್ಷಗಾನದ ಪ್ರಾಚೀನತೆಯನ್ನು ಗುರುತಿಸಬಹುದು. ಕರ್ನಾಟಕದ ಹೊರಗೆ ಇದೇ ಬಗೆಯ ಕಲಾಪ್ರಕಾರಗಳು ಈ

ಕಾಲಮಾನದ ಆಸುಪಾಸಿನಲ್ಲಿ ಅಸ್ತಿತ್ವದಲ್ಲಿದ್ದುದು ಕಂಡು ಬರುತ್ತದೆ. ಕಥಕ್ಕಳಿ, ಕೂಚುಪುಡಿ, ತೆರಕ್ಕೂತು, ವೀಧಿನಾಟಕಂ, ಯಕ್ಷಗಾನಮು, ಕೂಡಿಯಾಟ್ಟಂ ಮುಂತಾದವೆಲ್ಲಾ ಒಂದಿಲ್ಲೊಂದು ಬಗೆಯಲ್ಲಿ ಯಕ್ಷಗಾನದಂತಿದ್ದು ಅಲ್ಲೂ ನಾನಾ ಪ್ರಭೇದಗಳು ಕಂಡು ಬರುತ್ತವೆ. ಉತ್ತರ ಕರ್ನಾಟಕದಲ್ಲಿ ಸಣ್ಣಾಟ, ದೊಡ್ಡಾಟ, ದಾಸರಾಟ, ಕೃಷ್ಣಪಾರಿಜಾತ, ರಾಧನಾಟ, ಡಪ್ಪಿನಾಟ ಮುಂತಾದುವು ಪ್ರಚಲಿತವಾಗಿದ್ದರೆ ದಕ್ಷಿಣ ಕರ್ನಾಟಕದಲ್ಲಿ ಘಟ್ಟದ ಕೋರೆ, ಮೂಡಲಪಾಯ, ಕೇಳಿಕೆ ಮುಂತಾದ ಬಗೆಗಳಿವೆ.

ಕರಾವಳಿ ಮತ್ತು ಮಲೆನಾಡಿನಲ್ಲಿ ಖ್ಯಾತವಾಗಿರುವ ಬಯಲಾಟದಲ್ಲಿ ತೆಂಕುತಿಟ್ಟು, ಬಡಗುತಿಟ್ಟು, ಬಡಾಬಡಗುತಿಟ್ಟುಗಳೆಂಬ ಮೂರು ತಿಟ್ಟುಗಳಿವೆ. ಯಕ್ಷಗಾನ ಕಲೆಯ ಅಂಗಗಳೇ ಆದ ತಾಳಮದ್ದಳೆ, ಹೂವಿನಕೋಲು, ಯಕ್ಷಗಾನ ಗೊಂಬೆಯಾಟ, ಚಿಕ್ಕಮೇಳಗಳೂ ಜೀವಂತವಾಗಿವೆ. ಹೀಗೆ ಇವೆಲ್ಲಾ ಒಟ್ಟು ಯಕ್ಷಗಾನ ಕಲೆಯ ವೈವಿಧ್ಯವನ್ನು, ವಿಸ್ತಾರವನ್ನು, ವ್ಯಾಪಕತೆಯನ್ನು ಬಿತ್ತರಿಸುತ್ತವೆ.

ಹೆಚ್ಚಾಗಿ ರಾಮಾಯಣ, ಮಹಾಭಾರತ, ಭಾಗವತಾದಿಗಳಿಂದ ಆಯ್ದುಕೊಂಡ ಕಿರು ಕಥನಗಳನ್ನು ಆಧರಿಸಿ ಬರೆದ ಯಕ್ಷಗಾನ ಕೃತಿಗಳ ರಚನೆಗಳು ಕನ್ನಡ ಹಾಗೂ ತೆಲುಗಿನಲ್ಲಿ ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತವೆ. ಹೀಗೆ ಬರೆದಿರುವ ಕೃತಿಗಳ ಸಂಖ್ಯೆ ಈಗ ಐದಾರು ಸಾವಿರಗಳನ್ನು ದಾಟಿವೆ. ದಾಸ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿ ಪ್ರಸಂಗಗಳು ಭಕ್ತಿ ಸಾಹಿತ್ಯದ ಅಂಶಗಳನ್ನು ಮೈಗೂಡಿಸಿಕೊಂಡಿವೆ. ಮೇಳಗಳ ಮೂಲಕ ದೇವಸ್ಥಾನಗಳು ಈ ಕಲೆಯನ್ನು ಪೋಷಿಸಿದಂತೆ ಜನತೆ ಹರಕೆಹೊತ್ತು ಆಟವಾಡಿಸುವ ಮೂಲಕ ಯಕ್ಷಗಾನ ಉಳಿಯಲು ಬೆಳೆಯಲು ಕಾರಣರಾದರು. ಇದರಿಂದಾಗಿಯೇ "ಹರಕೆ ಮೇಳಗಳು" "ಹರಕೆ ಆಟ"ಗಳೆಂಬ ಪದಗಳು ಚಾಲ್ತಿಗೆ ಬಂದವು. ಯಕ್ಷಗಾನದ ವಿಧಿವಿಧಾನಗಳೆಲ್ಲ ಧಾರ್ಮಿಕ ಪರಿವೇಷ್ಠದಲ್ಲೇ ಇದೆ. ಮಧೂರು, ಕಟೀಲು, ಕದ್ರಿ, ಕುಂಡಾವು, ಧರ್ಮಸ್ಥಳ, ಮಂದಾರ್ತಿ, ಸೌಕೂರು, ಅಮೃತೇಶ್ವರಿ, ಮಾರಣಕಟ್ಟೆ, ಗುಂಡಬಾಳೆ ಮುಂತಾದ ಪ್ರಸಿದ್ಧ ದೇವಾಲಯಗಳಲ್ಲಿ ಬಹಳಷ್ಟು ವರ್ಷಗಳಿಂದ ಯಕ್ಷಗಾನ ಮೇಳಗಳಿದ್ದ ದಾಖಲೆಗಳಿವೆ. ಈಗಲೂ ಕೂಡ ಕಟೀಲು, ಧರ್ಮಸ್ಥಳ, ಮಂದಾರ್ತಿ, ಮಾರಣಕಟ್ಟೆ, ಮುಂತಾದ ದೇವಸ್ಥಾನದ ಮೇಳಗಳು "ಹರಕೆ ಆಟ"ಗಳ ಸೇವೆಯನ್ನು ನಡೆಸುತ್ತಿವೆ.

ಕಳೆದ ನೂರು ವರ್ಷಗಳಲ್ಲಿ ಯಕ್ಷಗಾನ ಅನೇಕ ಸ್ಥಿತ್ಯಂತರಗಳನ್ನು ಕಂಡಿದೆ. ಈ ಬದಲಾವಣೆ ಕೆಲವರ ದೃಷ್ಟಿಯಲ್ಲಿ ಪರಂಪರೆಗೆ ಆದಚ್ಯುತಿ. ಇನ್ನು ಕೆಲವರ ದೃಷ್ಟಿಯಲ್ಲಿ ಕಲೆಯ ಮುಂದುವರಿಕೆಗೆ ಅಗತ್ಯ ಎಂಬುದು. 1940ರ ಸುಮಾರಿಗೆ ಅಡಿಯಿಟ್ಟ ಡೇರೆ ಮೇಳಗಳು ಪ್ರದರ್ಶನದ ಗತಿಗೆ ಹೊಸ ಆಯಾಮಗಳನ್ನು

ಕೊಟ್ಟವು. ಶ್ರೀ ಇರಾ ಸೋಮನಾಥೇಶ್ವರ ಯಕ್ಷಗಾನ ಮಂಡಳಿ, ಕದ್ರಿ ಮಂಜುನಾಥ ಯಕ್ಷಗಾನ ಮೇಳ, ಕರ್ನಾಟಕ ಯಕ್ಷಗಾನ ನಾಟಕ ಮಂಡಳಿ, ಗುರು ಪ್ರಸಾದಿತ ಯಕ್ಷಗಾನ ಮಂಡಳಿ ಸಾಲಿಗ್ರಾಮ, ಪೆರ್ಡೂರು ಮೇಳ ಮುಂತಾದ ಡೇರೆ ಮೇಳಗಳು ಕೆಲವು ವರ್ಷಗಳಲಿ ವಾಣಿಜ್ಯೀಕರಣದ ಅಂಶಗಳನ್ನು ತಂದು ಕಲಾತ್ಮಕತೆಗೆ ಧಕ್ಕೆ ತರಬಲ್ಲಷ್ಟು ಕಮರ್ಷಿಯಲ್ ಆಗ ಹೊರಟವು. ಪೈಪೋಟಿಯಿಂದಾಗಿ ಆರಾಧನೆಯ ಅಂಗದಂತಿದ್ದ ಯಕ್ಷಗಾನ, ಜನಮನವನ್ನು ರಂಜಿಸಲು ಹೊರಟು ವೃತ್ತಿ ನಾಟಕ ಮಂಡಳಿಯ ತದ್ರೂಪವಾಗಲು ಪ್ರಯತ್ನಿಸಿದ್ದು ಈಗ ಇತಿಹಾಸಕ್ಕೆ ಸಂದ ಸಂಗತಿ.

ಇಂದಿಗೂ ಯಕ್ಷಗಾನ ರಂಗಭೂಮಿಯಲ್ಲಿ ಹರಕೆ ಮೇಳಗಳು ಅಧಿಕವಾಗಿಯೇ ಇವೆ. ಶ್ರೀಕ್ಷೇತ್ರ ಕಟೀಲು ದೇವಳದವರದ್ದು ಆರು ತೆಂಕುತಿಟ್ಟಿನ ಮೇಳಗಳಿವೆ. ಶ್ರೀಕ್ಷೇತ್ರ ಮಂದಾರ್ತಿ ದೇವಸ್ಥಾನದವರದ್ದು ಐದು ಬಡಗು ತಿಟ್ಟಿನ ಮೇಳಗಳಿವೆ. ಇವಲ್ಲದೇ ಧರ್ಮಸ್ಥಳ, ಮಾರಣಕಟ್ಟೆ, ಅಮೃತೇಶ್ವರಿ ಮುಂತಾದ ದೇವಸ್ಥಾನದ ಮೇಳದ ಹರಕೆಯಾಟಗಳು ನಡೆಯುತ್ತಿವೆ. ಉತ್ತರ ಕನ್ನಡದ ಗುಂಡಬಾಳೆಯಲ್ಲಿ ದೇವರಿನ ಎದುರಿನ ಬಯಲಿನಲ್ಲಿ ಸೇವೆಯ ರೂಪದಲ್ಲಿ ದಿನವೂ ಯಕ್ಷಗಾನ ಪ್ರದರ್ಶನ ನಡೆಯುತ್ತದೆ. ಹೀಗಿದ್ದೂ ಹರಕೆ ಹೊತ್ತ ಭಕ್ತರ ಹರಕೆಗಳನ್ನು ಅವರು ಕೇಳಿದ ಕಾಲಕ್ಕೆ ನಡೆಸಲು ಸಾಧ್ಯವಾಗುತ್ತಿಲ್ಲ. ಹದಿನೈದು ಇಪ್ಪತ್ತು ವರ್ಷಗಳ ಮುಂದೆ ನಡೆಯಲಿರುವ ಯಕ್ಷಗಾನಕ್ಕೆ ಈಗಲೇ ಬುಕ್ಕಿಂಗ್ ಮಾಡುವ ಪರಿಸ್ಥಿತಿ ಇದೆ. ದೇವರ ಮೇಲಿನ ಗಾಢ ನಂಬಿಕೆಯ ಜೊತೆಯಲ್ಲೇ ಯಕ್ಷಗಾನದ ಮೇಲಿನ ಪ್ರೀತಿ, ವಿಶ್ವಾಸ ಕೂಡ ಇದಕ್ಕೆ ಸಾಕ್ಷಿಯಾಗಿದೆ. ಆದರೆ ಮಧ್ಯರಾತ್ರಿಯ ನಂತರ ನೋಡುಗರ ಸಂಖ್ಯೆ ಇಳಿಮುಖವಾಗುತ್ತಿರುವುದು ಚಿಂತಿಸಬೇಕಾದ ಸಂಗತಿಯಾಗಿದೆ.

ಯಕ್ಷಗಾನ ವೃತ್ತಿ ರಂಗಭೂಮಿಯ ಎರಡು ಟಿಸಿಲುಗಳಾದ ಡೇರೆ ಮೇಳಗಳು ಹಾಗೂ ಹರಕೆ ಮೇಳಗಳು ಕರಾವಳಿ ಹಾಗೂ ಮಲೆನಾಡಿನಲ್ಲಿ ಇಂದಿಗೂ ಮನೆಮಾತಾಗಿವೆ. ಕಾಂಟ್ರಾಕ್ಟ್ ಪದ್ಧತಿಯಿಂದಾಗಿ ಡೇರೆ ಮೇಳದ ಪ್ರದರ್ಶನಗಳು ಯಶಸ್ವಿಯಾಗಿ ನಡೆಯುತ್ತಿವೆ. ಇಂದಿಗೂ ಜನರು ಹಣಕೊಟ್ಟು ಯಕ್ಷಗಾನವನ್ನು ನೋಡುತ್ತಿರುವುದು. ಈ ಕಲೆಯ ಹಿರಿಮೆಯಾಗಿದೆ. ಅನೇಕ ಕಲಾವಿದರು ತಾರಾಮೌಲ್ಯಗಳನ್ನು ಗಳಿಸಿ ಅವರದೇ ಆದ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ನವಂಬರ್ ನಿಂದ ಮೇ ಅಂತ್ಯದವರೆಗಿನ ಆರೇಳು ತಿಂಗಳುಗಳ ಕಾಲ ದಿನಂಪ್ರತಿ ಮೂವತ್ತೈದಕ್ಕೂ ಹೆಚ್ಚು ಮೇಳಗಳ ಪ್ರದರ್ಶನಗಳು ಒಂದಿಲ್ಲೊಂದು ಕಡೆಯಲ್ಲಿ ನಡೆಯುತ್ತಲೇ ಇರುತ್ತವೆ. ಅವುಗಳ ಅಬ್ಬರದ ಪ್ರಚಾರಗಳು, ವದಂತಿಗಳು, ಮುಸುಕಿನ ಗುದ್ದಾಟಗಳು, ಸಾಮಾನ್ಯರ ದಿನವಹಿ ಚರ್ಚೆಗೆ ಗ್ರಾಸ ಒದಗಿಸುತ್ತವೆ. ಈಗೀಗ ಮಳೆಗಾಲದಲ್ಲೂ ಯಕ್ಷಗಾನದ ಪ್ರದರ್ಶನಗಳು ನಿಂತಿಲ್ಲ. ಸಭಾಭವನ, ದೊಡ್ಡ

ಹಾಲ್‌ಗಳಲ್ಲೂ ಯಕ್ಷಗಾನ ಇರುತ್ತದೆ. ಹಿರಿಯ ಕಲಾವಿದರು, ನಿವೃತ್ತ ಕಲಾವಿದರು, ಹವ್ಯಾಸಿಗಳು ಭಾಗವಹಿಸಿ ಪ್ರದರ್ಶನಗಳನ್ನು ರಂಜನೀಯಗೊಳಿಸುತ್ತಿದ್ದಾರೆ. ಮೂರು ತಿಟ್ಟುಗಳಲ್ಲೂ ತಮ್ಮದೇ ಆದ ಛಾಪನ್ನು ನೆಟ್ಟು ಖ್ಯಾತಿಗೊಂಡ ಕಲಾವಿದರ ದಂಡೇ ಈ ರಂಗಭೂಮಿಯನ್ನು ಆಳುತ್ತಿದೆ.

ಅವರಲ್ಲಿ ಮುಖ್ಯರಾದವರೆಂದರೆ ಚಿಟ್ಟಾಣಿ ರಾಮಚಂದ್ರಹೆಗಡೆ, ಜಲವಳ್ಳಿ ವೆಂಕಟೇಶರಾವ್, ಕೆ. ಗೋವಿಂದಭಟ್ಟ, ಕುಂಬಳೆ ಸುಂದರರಾವ್, ಗೋಡೆನಾರಾಯಣ ಹೆಗಡೆ, ಕೊಳಗಿ ಅನಂತಯ್ಯ ಹೆಗಡೆ, ಕೊಳ್ಯುರು ರಾಮಚಂದ್ರರಾವ್, ಪಾತಾಳ ವೆಂಕಟರಮಣಭಟ್ಟ, ಗಣಪತಿ ಹೆಗಡೆ ಸಾಲಕೊಡು, ಶ್ರೀಪಾದಹೆಗಡೆ ಹಡಿನಬಾಳ, ಕುಂಬ್ಳೆ ಶ್ರೀಧರ್ ರಾವ್, ಬಲಿಪ ನಾರಾಯಣ ಭಾಗವತರು, ಪುತ್ತಿಗೆ ರಘುರಾಮ ಹೊಳ್ಳ, ಪಟ್ಲಾ ಸತೀಶ್ಶೆಟ್ಟಿ, ಪದ್ಯಾಣ ಗಣಪತಿ ಭಟ್ಟ, ಕೊಳಗಿ ಕೇಶವ ಹೆಗಡೆ, ಸುಬ್ರಹ್ಮಣ್ಯ ದಾರೇಶ್ವರ, ರಾಘವೇಂದ್ರ ಮಯ್ಯ, ಗೋಪಾಲ ಆಚಾರಿ, ಐರೋಡಿ ಗೋವಿಂದಪ್ಪ, ಆರಾಡಿ ರಾಮಕೃಷ್ಣ ಹೆಗಡೆ, ಆರ್ಕೋಡು ಮೋಹನದಾಸ್ ಶೆಣೈ, ಕೃಷ್ಣಯಾಜಿ, ಎಂ.ಎನ್. ನಾಯಕ್ ಮುಂತಾದವರು. ಹಿಂದೆ ಈ ರಂಗಭೂಮಿಯಲ್ಲಿ ಮೆರೆದ ಅತಿರಥಮಹಾರಥರನ್ನು ಜನತೆ ಈಗಲೂ ನೆನೆಸಿಕೊಳ್ಳುತ್ತಾರೆ. ಸಂಘಸಂಸ್ಥೆಗಳು ಅವರ ಹೆಸರಿನಲ್ಲಿ ಪ್ರಶಸ್ತಿ ಪುರಸ್ಕಾರಗಳನ್ನು ನೀಡುತ್ತಿವೆ. ಜನತೆಯಲ್ಲಿ ಅವರು ಗಳಿಸಿದ ತಾರಾಮೌಲ್ಯ ಇನ್ನೂ ಮಾಸಿಲ್ಲ. ಅಂತವರಲ್ಲಿ ಹಾರಾಡಿ ರಾಮಗಾಣಿಗ, ಕೆರೆಮನೆ ಶಿವರಾಮ ಹೆಗಡೆ, ಗುರುವೀರಭದ್ರನಾಯಕ, ಆಳಿಕೆ ರಾಮರೈ, ಶೇಣಿ ಗೋಪಾಲಕೃಷ್ಣಭಟ್ಟ, ಹಾರಾಡಿ ಕೃಷ್ಣಗಾಣಿಗ, ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭುಹೆಗಡೆ, ಕೆರೆಮನೆ ಗಜಾನನ ಹೆಗಡೆ, ಹಿರಿಯ ಬಲಿಪ ನಾರಾಯಣ ಭಾಗವತ, ರಾಮದಾಸ ಸಾಮಗ, ಅಗರಿ ಶ್ರೀನಿವಾಸ ಭಾಗವತ, ಶಂಕರ ನಾರಾಯಣ ಸಾಮಗ, ಕಾಳಿಂಗ ನಾವಡ, ದುರ್ಗಪ್ಪ ಗುಡಿಗಾರ, ಬಣ್ಣದ ಮಾಲಿಂಗ, ಉಪ್ಪಳ್ಳಿ ಶೇಷ ಮುಂತಾದವರು ಮುಖ್ಯರಾಗಿದ್ದಾರೆ.

ಕಳೆದ ಎಪ್ಪತ್ತೈದು ವರ್ಷಗಳಿಂದ ಯಕ್ಷಗಾನ ಪದದೊಂದಿಗೆ ಡಾ. ಶಿವರಾಮಕಾರಂತ ಹೆಸರು ತಳುಕು ಹಾಕಿಕೊಂಡಿದೆ. ಅವರ ನಿರಂತರ ಚಿಂತನೆ, ನಡೆಸಿದ ಪ್ರಯೋಗ, ಮಾಡಿದ ಸಾಧನೆಗಳಿಂದ ಯಕ್ಷಗಾನಕ್ಕೆ ರಾಷ್ಟ್ರೀಯ ಮನ್ನಣೆ ದೊರೆಯಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಗಳಿಸಿರುವ ಡಾ.ಕಾರಂತರ "ಯಕ್ಷಗಾನ ಬಯಲಾಟ" ಪ್ರಕಟಗೊಂಡು (1958) ಅರವತ್ತು ವರ್ಷಗಳಾಗುತ್ತಿವೆ. ಈ ಅರವತ್ತೂ ವರ್ಷಗಳಲ್ಲಿ ಯಕ್ಷಗಾನ ಅನೇಕ ಬಗೆಯಲ್ಲಿ ಬದಲಾವಣೆಗೆ ಮೈಯೊಡ್ಡಿದೆ. ಪರೋಕ್ಷವಾಗಿ ಕಾರಂತರಿಂದ ಸ್ಫೂರ್ತಿ ಪಡೆದ ಅನೇಕ ವಿದ್ಯಾವಂತರು ಈ ರಂಗವನ್ನು ಪ್ರವೇಶಿಸಿದ್ದರಿಂದ "ಆಟ-ಬಯಲಾಟ" ಎಂಬುದು

"ಯಕ್ಷಗಾನ"ವಾಯಿತು. ಇಂದೆಲ್ಲಾ ಕರಾವಳಿ ಮಲೆನಾಡುಗಳಲ್ಲಿ ಕಂಡು ಬರುತ್ತಿದ್ದ ಹವ್ಯಾಸಿಗಳು ಇದೀಗ ಬೆಂಗಳೂರು, ಮೈಸೂರು, ಧಾರವಾಡ, ಮುಂಬೈ, ದೆಹಲಿ ಮಾತ್ರವಲ್ಲದೇ ಹೊರದೇಶಗಳಾದ ದುಬೈ, ಅಬುದಾಬಿ, ಲಂಡನ್, ಕೆನಡಾ, ಅಮೆರಿಕಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಯಕ್ಷಗಾನದ ವ್ಯಾಪ್ತಿ ಇವರಿಂದಾಗಿ ಹೆಚ್ಚು ವಿಸ್ತಾರವಾಗುತ್ತಿದೆ. ಯಕ್ಷಗಾನದ ಹವ್ಯಾಸಿಗಳು ಯಕ್ಷಗಾನದಲ್ಲಿ ಪಾತ್ರಧಾರಿಗಳಾಗುವುದು ಮಾತ್ರವಲ್ಲದೇ ಪ್ರದರ್ಶನಗಳನ್ನು ಏರ್ಪಡಿಸುವ, ಕಲಾವಿದರಿಗೆ ಸನ್ಮಾನ, ನಿಧಿ ಸಮರ್ಪಣೆ ಮಾಡುವ, ಗೋಷ್ಠಿ ಸಮ್ಮೇಳನಗಳನ್ನು ಆಯೋಜಿಸುವ ಕೈಂಕರ್ಯಗಳನ್ನು ನಡೆಸುತ್ತಿದ್ದಾರೆ. ಹೊಸ ಪ್ರೇಕ್ಷಕ ವರ್ಗ ಇವರಿಂದಾಗಿ ಸೃಷ್ಟಿಗೊಳ್ಳುತ್ತಿದೆ. ಮೇಳಗಳಿಂದ ನಿವೃತ್ತಿಗೊಂಡ ಕಲಾವಿದರು ಮಾರ್ಗದರ್ಶನ ಮಾಡುತ್ತಾ, ತರಬೇತಿ ನೀಡುತ್ತಾ, ಅತಿಥಿ ಕಲಾವಿದರಾಗಿ ಭಾಗವಹಿಸುತ್ತಾ ಸಹಕರಿಸುತ್ತಿದ್ದಾರೆ.

ಮಾಹಿತಿ ತಂತ್ರಜ್ಞಾನದ ಸಮರ್ಪಕ ಬಳಕೆ, ಹವ್ಯಾಸಿಗಳ ಇನ್ನೊಂದು ಹೆಚ್ಚುಗಾರಿಕೆ ಫೇಸ್ಬುಕ್ ಯೂಟ್ಯೂಬ್, ವಾಟ್ಸಅಪ್ಗಳ ಮೂಲಕ ಪರಸ್ಪರ ವಿಚಾರ ವಿನಿಮಯವಿದ್ದು ಸುದ್ದಿ ಪ್ರಸರಣ, ಸಂಘಟನೆ ಮಾಡಿಕೊಳ್ಳುತ್ತಿದ್ದಾರೆ. ಪ್ರದರ್ಶನಗಳ ಉತ್ತಮ ದೃಶ್ಯಾವಳಿಗಳು, ಸುಶ್ರಾವ್ಯವಾಗಿರುವ ಯಕ್ಷಗಾನದ ಹಾಡುಗಳು, ಹಿಂದಿನ ಕಲಾವಿದರ ಅಭೂತಪೂರ್ವ ಸಾಧನೆಗಳ ದೃಶ್ಯಗಳು ಕ್ಷಣ ಮಾತ್ರದಲ್ಲಿ ಇವರಿಂದಾಗಿ ದೇಶದ ಗಡಿ ದಾಟಿ ಗಮ್ಯಸ್ಥಾನ ತಲುಪಿ ಯಕ್ಷಗಾನ ವಿಶ್ವಗಾನವಾಗುವಂತೆ ಮಾಡುತ್ತಿದ್ದಾರೆ. ಋಷಿವಾಕ್ಯಕ್ಕೆ ವಿಜ್ಞಾನ ಕಲೆ ಹೀಗೆ ಇಲ್ಲಿ ಮೇಳೈಸಿದೆ. ಡಿಜಿಟಲ್ ತಂತ್ರಜ್ಞಾನದ ಸಮರ್ಪಕ ಬಳಕೆಯಲ್ಲಿ ಯಕ್ಷಗಾನಾಸಕ್ತರು ತೊಡಗಿಕೊಂಡಿರುವುದು ಶ್ಲಾಘನೀಯವೇ ಸರಿ.

ಕರಾವಳಿ ಮತ್ತು ಮಲೆನಾಡಿನಲ್ಲಿ ಹೆಸರಿಸಲು ಕಷ್ಟವಾಗುವಷ್ಟು ಅಸಂಖ್ಯ ಹವ್ಯಾಸಿ ಸಂಘಗಳಿವೆ. ಇವುಗಳ ಚಟುವಟಿಕೆಗಳಂತೂ ಅಗಣಿತ ಬೆಂಗಳೂರು ನಗರವೊಂದರಲ್ಲೆ ಐವತ್ತಕ್ಕೂ ಹೆಚ್ಚಿನ ಯಕ್ಷಗಾನ ಸಂಘಟನೆಗಳಿವೆ. ಯಕ್ಷ ದೇಗುಲ, ಕರ್ನಾಟಕ ಕಲಾದರ್ಶಿನಿ, ಯಕ್ಷ ಕಲಾ ಅಕಾಡೆಮಿ, ಕಲಾ ಕದಂಬ ಸೆಂಟರ್, ರಂಗಸ್ಥಳ ಯಕ್ಷ ಮಿತ್ರ ಕೂಟ, ಗಾನ ಸೌರಭ ಯಕ್ಷಗಾನ ಶಾಲೆ, ಕರ್ನಾಟಕ ಸಾಂಸ್ಕೃತಿಕ ಪ್ರತಿಷ್ಠಾನ, ಯಕ್ಷಕದಂಬ, ತೆಂಕುತಿಟ್ಟಿನ ಯಕ್ಷಗಾನ ಪ್ರತಿಷ್ಠಾನ, ಸಿರಿ ಕಲಾಮೇಳ, ಕರಾವಳಿ ಯಕ್ಷಗಾನ ಕಲಾವಿದರು, ಗಾಳಿ ಯಕ್ಷಕಲಾ ಬಳಗ ಮುಂತಾದುವು ಪ್ರಮುಖ ತಂಡಗಳಾಗಿವೆ. ಬೆಂಗಳೂರಿನಲ್ಲಿ ಮೊದಲು ಮಳೆಗಾಲಕ್ಕೆ ಮಾತ್ರ ಸೀಮಿತವಾಗಿದ್ದ ಯಕ್ಷಗಾನ ಪ್ರದರ್ಶನಗಳು ಈಗ ಹವ್ಯಾಸಿಗಳಿಂದಾಗಿ ವರ್ಷವಿಡೀ ನಡೆಯುತ್ತಿವೆ. ಶನಿವಾರ ಭಾನುವಾರವಂತೂ ಮೂರು-ನಾಲ್ಕು ಕಡೆಗಳಲ್ಲಿ ಯಕ್ಷಗಾನ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಕೆಲವು ಸಂಸ್ಥೆಗಳಂತೂ ಮಕ್ಕಳಿಗೆ,

ಮಹಿಳೆಯರಿಗೆ ತರಬೇತಿಗಳನ್ನು ನಡೆಸುತ್ತಿದ್ದು ಅವರೆಲ್ಲಾ ಈ ಕಲೆಯ ಕಡೆಗೆ ಆಕರ್ಷಕರಾಗುವಂತೆ ಮಾಡುತ್ತಿವೆ. ಈಗ ಉತ್ತರ ಕರ್ನಾಟಕದವರು, ಬಯಲು ನಾಡಿನವರು ಕೂಡ ಬೆಂಗಳೂರಿನಲ್ಲಿ ಯಕ್ಷಗಾನದ ಪ್ರೇಕ್ಷಕರಾಗುತ್ತಿರುವುದು ಹೊಸ ಬೆಳವಣಿಗೆಯಾಗಿದೆ. ಹೀಗೆ ಮುಂಬೈನಲ್ಲೂ ಬಹಳಷ್ಟು ಸಂಘಟನೆಗಳಿದ್ದು ಪದವೀಧರ ಯಕ್ಷಗಾನ ಸಮಿತಿ, ತರುಣ ಯಕ್ಷಗಾನ ಮಂಡಳಿ, ಮುಂಬೈ ಬಂಟರ ಸಂಘ, ಡಿ.ಎಸ್.ಕೆ.ಬಿ. ಅಸೋಸಿಯೇಷನ್ ಪ್ರಮುಖವಾಗಿವೆ. ದೆಹಲಿಯ "ಯಕ್ಷ ಮಂಜೂಷ" ಹಿಂದಿಯಲ್ಲಿ ಯಕ್ಷಗಾನ ಕಲಿತು ಯಕ್ಷಗಾನದ ಹಿಂದಿ ಅವತರಣಿಕೆಯನ್ನು ಉತ್ತರದ ರಾಜ್ಯಗಳಲ್ಲಿ ಪ್ರದರ್ಶಿಸಿ ಕನ್ನಡೇತರರಿಗೆ ಈ ಕಲೆಯನ್ನು ಪರಿಚಯಿಸುತ್ತಿದ್ದಾರೆ. ದುಬೈ, ಅಬುದಾಬಿಗಳಲ್ಲೂ ಹಲವು ಹವ್ಯಾಸಿ ಕಲಾವಿದರಿದ್ದಾರೆ. ದುಬೈನ "ಯಕ್ಷ ಮಿತ್ರ"ರು ಬಹಳಷ್ಟು ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುತ್ತಾರೆ. ಇದೇರೀತಿ ಲಂಡನ್ ಹಾಗೂ ಅಮೇರಿಕಾದ ದೊಡ್ಡ ನಗರಗಳಲ್ಲಿ ಯಕ್ಷಗಾನದ ಆಸಕ್ತರಿದ್ದಾರೆ. ಅಮೇರಿಕಾದ ಹವ್ಯಾಸಿ ಐಟಿ ಉದ್ಯೋಗಿಗಳು ತಮ್ಮದೇ ಆದ ಹವ್ಯಾಸಿ ಯಕ್ಷಗಾನ ಸಂಘ ಕಟ್ಟಿ ಯಕ್ಷಗಾನ ಕಲಿತು, ಕಲಿಸುತ್ತಾ ಯಕ್ಷಗಾನ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತಾರೆ. ಕೆನಡಾದ ಟೊರೆಂಟೋದಲ್ಲಿರುವ "ಯಕ್ಷ ಮಿತ್ರ" ಎಂಬ ಹವ್ಯಾಸಿ ಸಂಸ್ಥೆ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತದೆ. ಹೀಗೆ ಯಕ್ಷಗಾನದ ಯಶೋಗಾಥೆಯಲ್ಲಿ ಹವ್ಯಾಸಿಗಳ ಪಾತ್ರ ಹಿರಿದಾಗುತ್ತಿದೆ.

ಯಕ್ಷಗಾನದಲ್ಲಿದ್ದ ಪಾರಂಪರಿಕ ಶಿಕ್ಷಣದ ವಿಧಾನ ಈಗ ಇಲ್ಲವಾದ್ದರಿಂದ ತರಬೇತಿ ಕೇಂದ್ರಗಳ ಅಗತ್ಯ ಹೆಚ್ಚಿದೆ. ಡಾ.ಕಾರಂತರ ಮಾರ್ಗದರ್ಶನದಲ್ಲಿ 1971ರಲ್ಲಿ ಪ್ರಾರಂಭಗೊಂಡ ಉಡುಪಿಯ "ಯಕ್ಷಗಾನ ಕೇಂದ್ರ"ವು ಮುಂಚೂಣಿಯಲ್ಲಿದ್ದು ನೀಲಾವರ ರಾಮಕೃಷ್ಣಯ್ಯ, ಮಹಾಬಲ ಕಾರಂತ, ನೀಲಾವರ ಲಕ್ಷ್ಮೀನಾರಾಯಣಯ್ಯ, ಗೋರ್ಪಾಡಿ ವಿಠಲ ಪಾಟೀಲ, ಬನ್ನಂಜೆ ಸಂಜೀವ ಸುವರ್ಣ ಮುಂತಾದವರ ಸಮರ್ಥ ಗುರುತನದಲ್ಲಿ ಮುನ್ನಡೆಗಳಿಸಿದೆ. ಇದಲ್ಲದೆ ಹಂಗಾರಕಟ್ಟೆ ಕಲಾಕೇಂದ್ರ, ಪೆರ್ಲದ ಪಡ್ರೆ ಚಂದು ಸ್ಮಾರಕ ಕೇಂದ್ರ, ಗುಣವಂತೆಯ ಶ್ರೀಮಯ ಯಕ್ಷಗಾನ ಕೇಂದ್ರ, ಧರ್ಮಸ್ಥಳದ ತರಬೇತಿ ಕೇಂದ್ರ ಮುಂತಾದವು ಮುಖ್ಯವಾಗಿವೆ. ಕಳೆದ ನಲವತ್ತು ವರ್ಷಗಳಲ್ಲಿ ಕೇಂದ್ರದಲ್ಲಿ ತರಬೇತಿಗೊಂಡ ಕೆಲವರು ಯಕ್ಷಗಾನ ರಂಗದ ಸಂಪತ್ತುಗಳಾಗುತ್ತಿದ್ದಾರೆ. ಇದೇ ರೀತಿ ಕಳೆದ ನಾಲ್ಕು ದಶಕಗಳಲ್ಲಿ ಮಕ್ಕಳ ಮೇಳಗಳು ಗಳಿಸಿಕೊಂಡ ಆಕರ್ಷಣೆ ಕೂಡ ದಾಖಲಾರ್ಹ. ಸಾಲಿಗ್ರಾಮ ಮಕ್ಕಳ ಮೇಳದ ಸೀಮೋಲಂಘನದ ಫಲವಾಗಿ ಅನೇಕ ಮಕ್ಕಳ ಮೇಳಗಳು ಹುಟ್ಟಿಕೊಂಡವು. ಸಮರ್ಥ ಗುರುಗಳ ಮಾರ್ಗದರ್ಶನದಲ್ಲಿ ಎಳೆಯ ಬಾಲಕರು, ಉತ್ತಮ ಪ್ರದರ್ಶನ ನೀಡಿ ಕಲಾರಸಿಕರ ಮನ ತಣಿಸುತ್ತಿದ್ದಾರೆ.

ಯಕ್ಷಗಾನವು ಪುರುಷ ಪ್ರಧಾನ ಕಲೆಯಾಗಿತ್ತು. ಪುರುಷರೇ ಸ್ತ್ರೀ ವೇಷಗಳನ್ನು ಧರಿಸುತ್ತಿದ್ದರು. ಆದರೆ ಈಚಿನ 20-25 ವರ್ಷಗಳಲ್ಲಿ ಮಹಿಳೆಯರು ಯಕ್ಷಗಾನ ರಂಗವನ್ನು ಪ್ರವೇಶಿಸುತ್ತಿರುವುದು ಸ್ವಾಗತಾರ್ಹ. ಕೆಲವು ಮಹಿಳೆಯರಂತೂ ಉತ್ತಮ ಪಾತ್ರಧಾರಿಗಳಾಗಿ ಭಾಗವತರುಗಳಾಗಿ ಪ್ರಸಿದ್ಧರಾಗುತ್ತಿದ್ದಾರೆ. ಹಳ್ಳಿ ನಗರಗಳೆಂಬ ಭೇದವಿಲ್ಲದೆ ಮಹಿಳಾ ಯಕ್ಷಗಾನ ಸಂಘಗಳು ಚಟುವಟಿಕೆಯಿಂದ ಇರುವುದು ಉಲ್ಲೇಖನಾರ್ಹ. ತಾಳಮದ್ದಳೆಗಳಲ್ಲೂ ಮಹಿಳೆಯರು ಅರ್ಥಧಾರಿಗಳಾಗಿ ಮಿಂಚುತ್ತಿದ್ದಾರೆ.

ಯಕ್ಷಗಾನ ತಾಳಮದ್ದಳೆ ಕೂಡ ಬಯಲಾಟದಷ್ಟೇ ಜನಮನ ಗೆದ್ದ ಕಲೆ. ಹಾಡುವ ಪದ್ಯ ಹಾಗೂ ಆಡುವ ಗದ್ಯವೇ ಇಲ್ಲಿ ಪ್ರಧಾನ. ಪ್ರಸಂಗದ ಆಯ್ದ ಪದ್ಯಗಳನ್ನು ಭಾಗವತ ಹಾಡಿ ಅದರ ಆಧಾರದ ಮೇಲೆ ಅರ್ಥಧಾರಿಗಳು ಕಟ್ಟಿಕೊಡುವ "ಮಾತಿನ ಮಂಟಪ"ವಾಗಿದ್ದು ಸರಳ ಕಲಾ ಮಾಧ್ಯಮವಾಗಿದೆ. ಅಲ್ಲಿ ಕುಣಿತ ವೇಷಗಾರಿಕೆಗಳಿರುವುದಿಲ್ಲ. ನಾನೂರು ವರ್ಷಗಳ ಹಿಂದೆ ತಾಳ ಮದ್ದಲೆಯು ದೇವರ ಸೇವೆಯ ರೂಪದಲ್ಲಿತ್ತೆಂಬ ಬಗ್ಗೆ ಶಾಸನ ಉಲ್ಲೇಖವಿದೆ. ಹಿಂದಕ್ಕೆ ಮಳೆಗಾಲದಲ್ಲಿ ಹೆಚ್ಚಾಗಿ ತಾಳಮದ್ದಲೆ ನಡೆಯುತ್ತಿತ್ತು. ರಾತ್ರಿಯಿಡೀ ನಡೆಯುವ ತಾಳಮದ್ದಲೆ ಕಾರ್ಯಕ್ರಮ ಜನರ ರಂಜನೆಗೆ ಕಾರಣವಾಗಿತ್ತು ಆದರೆ ಈಗ ಎಲ್ಲಾ ಕಾಲದಲ್ಲೂ ಎಲ್ಲಾ ಕಡೆಯಲ್ಲೂ ಪ್ರದರ್ಶನಗಳೂ ನಡೆಯುತ್ತಿವೆ. ಪ್ರದರ್ಶನದ ಅವಧಿಯು ಕಡಿಮೆಯಾಗುತ್ತಿವೆ. ಅರವತ್ತು ವರ್ಷದ ಕೆಳಗೆ ಹರಿದಾಸರು ಹಾಗೂ ವಿದ್ವಾಂಸರು ಈ ರಂಗವನ್ನು ಪ್ರವೇಶಿಸಿದ್ದರಿಂದ ಇದೊಂದು "ಜ್ಞಾನಯಜ್ಞ"ವೆಂಬ ಭಾವ ಬಲಿಯಿತು. ಹಿಂದಿನ ಕಾಲದ ಪ್ರಸಿದ್ಧ ಅರ್ಥಧಾರಿಗಳಾಗಿದ್ದ ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಎನ್.ಎಸ್.ಕಿಲ್ಲೆ, ಕವಿಭೂಷಣ ವೆಂಕಪ್ಪಶೆಟ್ಟಿ, ಶೇಣಿ ಗೋಪಾಲಕೃಷ್ಣ ಭಟ್ಟ, ಮಲ್ಪೆ ಶಂಕರನಾರಾಯಣ ಸಾಮಗ, ಕಿರಿಕ್ಕಾಡು ಮಾಸ್ತರ್ ವಿಷ್ಣುಭಟ್ಟ, ರಾಮದಾಸ್ ಸಾಮಗ, ಪೆರ್ಲ ಕೃಷ್ಣಭಟ್ಟ, ದೇರಾಜೆ ಸೀತಾರಾಮಯ್ಯ ಮುಂತಾದವರನ್ನು ಜನತೆ ಇಂದಿಗೂ ನೆನೆಯುತ್ತಾರೆ. ಆಕರ್ಷಕ ಅರ್ಥಗಾರಿಕೆ, ಭಾಷೆಯ ಮೇಲಿನ ಹಿಡಿತ, ರಸದೃಷ್ಟಿ, ಸ್ವಾರಸ್ಯಕರ ಸಂವಾದಗಳು, ಹಿತವಾದ ವೈಚಾರಿಕತೆ ಮತ್ತು ತರ್ಕ, ತಕ್ಕಷ್ಟೆ ಹಾಸ್ಯ, ಕತೆಯ ಬಗ್ಗೆ ನಿಷ್ಠೆ, ಸಮರ್ಪಕವಾದ ಹಿಮ್ಮೇಳ ಮುಂತಾದವು ತಾಳಮದ್ದಳೆಯ ಯಶಸ್ಸಿನ ಮಾನದಂಡಗಳು. ಇವತ್ತು ಈ ಬಗೆಯ ಅರ್ಥಗಾರಿಕೆಯ ಮೂಲಕ ಜನಪ್ರಿಯರಾದವರಲ್ಲಿ ಡಾ. ಎಂ. ಪ್ರಭಾಕರ ಜೋಷಿ, ವಿದ್ವಾನ್ ಉಮಾಕಾಂತ್ ಭಟ್, ಅಂಬಾತನಯ ಮುದ್ರಾಡಿ, ಡಾ. ರಮಾನಂದ, ಬನಾರಿ ಲಕ್ಷ್ಮೀಶ ತೋಳ್ಪಾಡಿ, ಸತ್ಯಮೂರ್ತಿ ದೇರಾಜೆ, ಜಬ್ಬಾರ್ ಸುಮೊ, ಸುಣ್ಣಂಬಳ ವಿಶ್ವೇಶ್ವರ ಭಟ್, ವಾಸುದೇವರಂಗ ಭಟ್, ಕಬ್ಬಿನಾಲೆ ವಸಂತ

ಭಾರದ್ವಾಜ್, ಎಂ.ಎ. ಹೆಗಡೆ, ವಿಶ್ವನಾಥ ಶೆಟ್ಟಿ, ಡಿ.ಎಸ್. ಶ್ರೀಧರ್ ರಾಧಾಕೃಷ್ಣ ಕಲ್ಲಾರ್ ಮುಂತಾದವರು ಮುಖ್ಯರು.

ಯಕ್ಷಗಾನ ಸೂತ್ರದ ಗೊಂಬೆಯಾಟಕ್ಕೆ ಪ್ರಸಂಗ ಸಾಹಿತ್ಯವೇ ಆಧಾರ. ಇಂದು ಎಲ್ಲೆಡೆ ಈ ಕಲಾಪ್ರಕಾರದ ಪ್ರದರ್ಶನ ನಡೆಯುತ್ತಿದೆ. ಯಕ್ಷಗಾನ ಗೊಂಬೆಯಾಟದ ಮೇಳಕ್ಕೆ ರಾಷ್ಟ್ರಪ್ರಶಸ್ತಿ ಬಂದಿದೆ. ಬಡಗು ತಿಟ್ಟಿನಲ್ಲಿ ಉಪ್ಪಿನಕುದ್ರು ಕೊಗ್ಗ ಕಾಮತ್‌ರ "ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮೇಳ" ಪ್ರಸಿದ್ಧವಾಗಿದ್ದರೆ, ತೆಂಕುತಿಟ್ಟಿನಲ್ಲಿ ಕಾಸರಗೋಡಿನ "ಶ್ರೀ ಗೋಪಾಲಕೃಷ್ಣ ಯಕ್ಷಗಾನ ಗೊಂಬೆಯಾಟ ಮೇಳ" ಖ್ಯಾತವಾಗಿದೆ. ಇದೇ ರೀತಿ ಯಕ್ಷಗಾನ ಪ್ರಸಂಗವನ್ನು ಆಧರಿಸಿ ನಡೆಯುವ ಇನ್ನೊಂದು ಕಲಾ ಪ್ರಕಾರವೆಂದರೆ ಹೂವಿನ ಕೋಲು, ನವರಾತ್ರಿಯ ಸಂದರ್ಭದಲ್ಲಿ ಎಳೆಯ ಬಾಲಕರಿಂದ 20 ರಿಂದ 30 ನಿಮಿಷಗಳ ಕಾಲ ಈ ಪ್ರದರ್ಶನ ನಡೆಯುತ್ತದೆ. ಇಲ್ಲೂ ಕುಣಿತ, ವೇಷಗಾರಿಕೆಗಳಿರುವುದಿಲ್ಲ. ಪ್ರಸಂಗದ ಕಿರು ಭಾಗವನ್ನು ಆಯ್ದುಕೊಂಡು ಭಾಗವತ ಹಾಡುವ ಹಾಡಿಗೆ ಕೈಯಲ್ಲಿ ಹೂವಿನ ಕೋಲನ್ನು ಹಿಡಿದ ಹುಡುಗರು ಒಂದೊಂದು ಪಾತ್ರವನ್ನು ವಹಿಸಿಕೊಂಡು ಅರ್ಥ ಹೇಳುತ್ತಾರೆ. ಈಗ ಬೆಂಗಳೂರಿನಂತಹ ನಗರಗಳಲ್ಲೂ ಈ ಕಲಾ ಪ್ರಕಾರವನ್ನು ಪ್ರದರ್ಶಿಸುವ ತಂಡಗಳಿವೆ. ಇದೇ ಮಾದರಿಯಲ್ಲಿ ಚಿಕ್ಕ ಮೇಳವೆಂಬ ಪ್ರಕಾರವಿದೆ. ಇಲ್ಲಿ ಹಿರಿಯರು ಭಾಗವಹಿಸುತ್ತಾರೆ ಮತ್ತು ವೇಷಗಾರಿಕೆ ಇರುತ್ತದೆ. ಯಕ್ಷ ಸಂಗೀತ, ಯಕ್ಷ ರೂಪಕ, ಯಕ್ಷ ನಾಟ್ಯ, ದೀವಟಿಕೆ ಯಕ್ಷಗಾನ, ಏಕಪಾತ್ರ ಯಕ್ಷಗಾನ, ಗಾನ ವೈಭವ, ಏಕವ್ಯಕ್ತಿ ಯಕ್ಷಗಾನ, ಏಕವ್ಯಕ್ತಿ ತಾಳಮದ್ದಳೆ, ಯುಗಳ ಯಕ್ಷಗಾನ ಮುಂತಾದ ವೈವಿಧ್ಯಮಯ ರೂಪದಲ್ಲಿ, ಯಕ್ಷಗಾನವು ಕಲಾರಸಿಕರ ಮನ ತಣಿಸುತ್ತಿದೆ. ಡಾ.ಕಾರಂತರ ಮಾತಿಲ್ಲದ "ಯಕ್ಷಗಾನ ಬ್ಯಾಲೆ" ರಾಜ್ಯದ ಹೊರಗೆ, ವಿದೇಶಗಳಲ್ಲಿ ಹೆಸರು ಮಾಡಿದೆ. ಡಾ.ಶತಾವಧಾನಿ ಗಣೇಶ್‌ರ ಮಾರ್ಗದರ್ಶನದಲ್ಲಿ ಮಂಟಪ ಪ್ರಭಾಕರ ಉಪಾಧ್ಯರ ಮೂಲಕ ಪ್ರಕಟಗೊಂಡ "ಏಕವ್ಯಕ್ತಿ ಯಕ್ಷಗಾನ" ಸಾವಿರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ.

ಇಪ್ಪತ್ತು ವರ್ಷಗಳ ಕೆಳಗೆ ಯಶಸ್ವಿಯಾಗದ ಕಿರು ಅವಧಿಯ ಯಕ್ಷಗಾನ ಪ್ರದರ್ಶನ ಈಗ ಬದಲಾದ ಕಾಲಮಾನದಲ್ಲಿ ಅನಿವಾರ್ಯವಾಗುತ್ತಿದೆ. ಜೀವನ ವ್ಯವಸ್ಥೆಯಲ್ಲಿನ ಏರುಪೇರು, ಸಂಚಾರ ವ್ಯವಸ್ಥೆಯಲ್ಲಿನ ಕ್ರಾಂತಿ, ಹೆಚ್ಚುತ್ತಿರುವ ನಗರೀಕರಣ, ಕುಂದುತ್ತಿರುವ ಕಲಾವಿದರ ದೇಹ ಸಾಮರ್ಥ್ಯ, ನಶಿಸುತ್ತಿರುವ ಸಾಂಪ್ರದಾಯಿಕ ಕಲಾ ಶಿಕ್ಷಣ ಮೇಳದವರಿಗೆ ಸವಾಲಾಗಿ ಪರಿಣಮಿಸಿವೆ. ಈ ಬಗ್ಗೆ ಸಾಕಷ್ಟು ಚರ್ಚೆ, ವಾದವಿವಾದ, ಜಿಜ್ಞಾಸೆಗಳು ನಡೆದು "ಕಾಲಮಿತಿ ಯಕ್ಷಗಾನ"ವೊಂದೇ ಪರಿಹಾರವೆಂಬ ನಿರ್ಣಯಕ್ಕೆ ಬರಲಾಗುತ್ತಿದೆ. ಇಡಗುಂಜಿ ಮೇಳ, ಎಡನೀರು

ಮೇಳ ಇನ್ನಿತರ ಮೇಳಗಳು ಹಾಗೂ ಹವ್ಯಾಸಿ ತಂಡಗಳವರು ಇಂತಹ ಪ್ರದರ್ಶನಗಳನ್ನು ನಡೆಸುತ್ತಿದ್ದಾರೆ. ಈಗ ಹರಕೆ ಮೇಳಗಳ ಪೈಕಿ ಶ್ರೀಕ್ಷೇತ್ರ ಧರ್ಮಸ್ಥಳದವರು "ಕಾಲಮಿತಿ ಯಕ್ಷಗಾನ"ವನ್ನು ಅನುಷ್ಠಾನಕ್ಕೆ ತಂದು ಈ ಮಾರ್ಗದ ಪ್ರವರ್ತಕರಾಗಿದ್ದಾರೆ. ಉಳಿದ ಹರಕೆ ಮೇಳದವರು, ಟೆಂಟ್ ಮೇಳದವರು ಅವರನ್ನು ಅನುಸರಿಸುತ್ತಿದ್ದಾರೆ. ಮುಂದೆ ಹೇಗೆ ನಡೆಯುತ್ತಾರೆಂಬುದರ ಮೇಲೆ ಯಕ್ಷಗಾನದ "ನೂತನ ಆಟ"ವನ್ನು ನಿರೀಕ್ಷಿಸಬಹುದು.

ಹೀಗೆ ಪಾರಂಪರಿಕ ಕಲೆಯಾದ ಯಕ್ಷಗಾನ ತನ್ನ ಹರಹನ್ನು ವಿಸ್ತರಿಸುತ್ತಾ ಜನಾಕರ್ಷಣೆಗಳಿಸಿಕೊಳ್ಳುವಲ್ಲಿ ಪ್ರಯತ್ನಿಸುತ್ತಾ ಜೀವಂತಿಕೆಯ ತುಡಿತದೊಂದಿಗೆ ಮುನ್ನಡೆಯುತ್ತಿದೆ. ಸಾಮುದಾಯಿಕ ಬದುಕಿನಲ್ಲಾದ ಸ್ಥಿತ್ಯಂತರಗಳು ಕಲೆಯ ಮೇಲೂ ಪ್ರಭಾವ ಬೀರುತ್ತವೆ. ತನ್ನ ಸುತ್ತಲಿನ ಬದುಕಿಗೆ ಸ್ಪಂದಿಸುವಲ್ಲಿ ಕಲೆಯ ಅಳಿವು ಉಳಿವಿನ ಪ್ರಶ್ನೆ ಅಡಕವಾಗಿದೆ. ಕಾಲಕ್ಕೆ ಹೊಂದದ ಅಂಶಗಳನ್ನು ಕಳಚಿಕೊಂಡು ಹೊಸತೊರೆ, ಹೊಸ ಝರಿಗಳಿಂದ ಶಕ್ತಿ ಸಂಚಯಿಸಿಕೊಂಡು ಯಕ್ಷಗಾನ ಕಲಾಪ್ರವಾಹ ಭೋರ್ಗರೆಯುತ್ತಾ ಮುಂದುವರೆಯುತ್ತಿದೆ. ಯಕ್ಷಗಾನ ಜೀವಂತಿಕೆಗೆ ಇದೇ ತತ್ವ ಆಧಾರವಾಗಿದೆ. ಯಕ್ಷಗಾನದ ಇತರೇ ಪ್ರಭೇದಗಳಾದ ಸಣ್ಣಾಟ, ದೊಡ್ಡಾಟ, ಘಟ್ಟದ ಕೋರೆ, ಕೃಷ್ಣ ಪಾರಿಜಾತ, ಮೂಡಲಪಾಯ ಮುಂತಾದುವುಗಳು ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳಲಾಗದೆ ಅಳಿವಿನ ಅಂಚಿಗೆ ಸರಿಯುತ್ತಿವೆ. ಆದರೆ ಯಕ್ಷಗಾನ ಕಳೆದ ನೂರು ವರ್ಷದ ಕಾಲಘಟ್ಟದಲ್ಲಿ ಜೀವನ ವ್ಯವಸ್ಥೆಗೆ ಸ್ಪಂದಿಸುತ್ತಾ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹೊಂದಾಣಿಕೆ (Social and Cultural Reengineering) ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಹೀಗಾಗಿಯೇ ಕರ್ನಾಟಕದ ಪ್ರಾತಿನಿಧಿಕ ಕಲೆಯ ಪಟ್ಟವನ್ನು ಏರಿದೆ.

("ಯಕ್ಷಗಾನ ಅಕಾಡೆಮಿ"ಯವರ ಕಾರ್ಯಕ್ರಮದಲ್ಲಿ ಮಾಡಿದ ಭಾಷಣದ ಲೇಖಿನ ರೂಪ)

*

ತತ್ವ ಚಿಂತನೆಗೆ ಕೃಷ್ಣ ಮಹಿಮೆಯ ಲೇಪನ

ಬಯಲಾಟ ಹಾಗೂ ತಾಳ ಮದ್ದಲೆಗಳಲ್ಲಿ ರಾಮಾಯಣ, ಮಹಾಭಾರತ ಹಾಗೂ ಭಾಗವತಗಳಿಗೆ ಸಂಬಂಧಿಸಿದಂತೆ ಇರುವ ಬಿಡಿ ಪ್ರಸಂಗಗಳನ್ನು ಸೇರಿಸಿ ಸಮಗ್ರ ರಾಮಾಯಣ, ಸಮಗ್ರ ಮಹಾಭಾರತ, ಸಮಗ್ರ ಭಾಗವತ ಮುಂತಾದ ಸರಣಿ ಪ್ರದರ್ಶನಗಳು ಸಪ್ತಾಹ, ದಶಾಹ ಮತ್ತು ಹದಿನೆಂಟು ದಿನ ಹೀಗೆಲ್ಲಾ ಹೆಸರಿನಲ್ಲಿ ಕೆಲವೊಂದು ಕಡೆ ನಡೆಯುತ್ತಿದ್ದವು. ಇದಕ್ಕೆ ಬೇರೆ ಬೇರೆ ಕವಿಗಳ ಪ್ರಸಂಗಗಳನ್ನು ಆಯ್ದು ಕೊಳ್ಳಲಾಗುತಿತ್ತು. ಆಗ ಪ್ರೇಕ್ಷಕರಿಗೆ ಕಥೆಯು ಸಮಗ್ರವಾಗಿ ಸಿಕ್ಕಿದರೂ ಕವಿಯೊಬ್ಬನ ಆಶಯ, ಕಾವ್ಯಾದರ್ಶ, ಸಾಹಿತ್ಯಾದಿ ಗುಣಮಟ್ಟಗಳನ್ನು ಸ್ವೀಕರಿಸುವಲ್ಲಿ ಸಮಗ್ರತೆಗೆ ಬಾಧಕ ಬರುತ್ತಿತ್ತು. ಇದನ್ನು ಮನಗಂಡ ಹೊಸ್ತೋಟ ಮಂಜುನಾಥ ಭಾಗವತರು ರಾಮಾಯಣವನ್ನು ಆಧರಿಸಿ ಹತ್ತೊಂಬತ್ತು ಪ್ರಸಂಗಗಳನ್ನು, ಮಹಾಭಾರತವನ್ನು ಆಧರಿಸಿ ಐವತ್ತು ಪ್ರಸಂಗಗಳನ್ನು, ಶ್ರೀರಾಮಕೃಷ್ಣ ಪರಮಹಂಸರ ಮಹಿಮೆಗೆ ಸಂಬಂಧಿಸಿದ ಇಪ್ಪತ್ತೇಳು ಪ್ರಸಂಗಗಳನ್ನು, ಭಾಗವತವನ್ನು ಆಧರಿಸಿ ಇಪ್ಪತ್ತು ಪ್ರಸಂಗಗಳನ್ನು, ಆಂಜನೇಯನ ಜೀವನ ವಿಚಾರವನ್ನು ಆಧರಿಸಿ ಇಪ್ಪತ್ತೇಳು ಪ್ರಸಂಗಗಳನ್ನು ರಚಿಸಿ ಸರಣಿ ಪ್ರಸಂಗ ರಚನೆಗೆ ನಾಂದಿ ಹಾಡಿದವರು. ಈ ಕಾರಣ ಸರಣಿ ಪ್ರಸಂಗ ರಚನೆಯಲ್ಲಿ ಹೊಸ್ತೋಟರನ್ನು ಆದ್ಯರು ಎಂದೇ ಗುರುತಿಸಬಹುದು. ಭಾಗವತದ ದಶಮಸ್ಕಂದ ಇರುವುದು. ಕೃಷ್ಣನ ಮಹಿಮೆಯನ್ನು ಸಾರಲು. ಹೊಸ್ತೋಟ ಮಂಜುನಾಥ ಭಾಗವತರು "ಶ್ರೀಕೃಷ್ಣ ಮಹಿಮೆ" ಎಂಬ ಹೆಸರಿನಲ್ಲಿ (ಪ್ರಕಾಶಕರು – ಯಕ್ಷಶಾಲ್ಮಲ ಪ್ರತಿಷ್ಠಾನ (ರಿ), ಸೋಂದಾ, ಅಂಚೆ: ಮಠದೇವಳ, ಶಿರಸಿ ತಾ.) ಕ್ರಿ.ಶ. 2000ದಲ್ಲಿ ಕೃತಿಯೊಂದನ್ನು ಹೊರತಂದರು. ಇದರಲ್ಲಿ ಶ್ರೀಕೃಷ್ಣಜನ್ಮದಿಂದ ಪ್ರಾರಂಭಗೊಂಡು ಕೃಷ್ಣ ನಿರ್ಯಾಣದವರೆಗಿನ ಇಪ್ಪತ್ತು ಕಥೆಗಳನ್ನು ಆಧರಿಸಿ ಇಪ್ಪತ್ತು ಪ್ರಸಂಗಗಳನ್ನು ರಚಿಸಿದ್ದಾರೆ. ತಮ್ಮ ತಾತ್ವಿಕ ಚಿಂತನೆಗೆ ಕೃಷ್ಣ ಮಹಿಮೆಯ ಲೇಪನವನ್ನು ಇಲ್ಲಿ ಹೊಸ್ತೋಟರು ಹಚ್ಚಿದ್ದಾರೆ.

ಇಪ್ಪತ್ತನೇ ಶತಮಾನದ ಪೂರ್ವಾರ್ಧದವರೆಗೆ ರಚನೆಗೊಂಡಿರುವ ಪ್ರಸಂಗಗಳು ಕಿರುಕಾವ್ಯದಂತಿದ್ದು, ರಂಗಪ್ರದರ್ಶನಕ್ಕಿಂತ ಮಿಗಿಲಾಗಿ ಕವಿಯಾದವನೊಬ್ಬ ತನ್ನ ಕಾವ್ಯರಚನಾ ಶಕ್ತಿಯನ್ನು ಪ್ರಸ್ತುತ ಪಡಿಸಲೆಂದೇ ಬರೆಯುತ್ತಿದ್ದಿರಬೇಕು. ಆದುದರಿಂದಲೇ 350-500 ಪದ್ಯಗಳಿರುವ ಈ ಪ್ರಸಂಗಗಳು ರಂಗಕ್ಕೆ ಬರುವಾಗ ಸಂಗ್ರಹಗೊಳ್ಳುತ್ತಿದ್ದವು. ಭಾಗವತನಾದವನು ತನ್ನ ಅಭಿರುಚಿಗೆ ಅನುಸಾರವಾಗಿ ಬೇಕಾದಷ್ಟು ಪದ್ಯಗಳನ್ನು ಆರಿಸಿಕೊಳ್ಳುತ್ತಿದ್ದ. ಕೆಲವೊಮ್ಮೆ ಕಿಸೆ ಪದ್ಯಗಳನ್ನು ಸೇರಿಸುತ್ತಿದ್ದ, ಕೆಲವೊಮ್ಮೆ ತನ್ನ ಹಾಡಿಗೆ ಅನುಕೂಲವಾಗಲು ಕುಮಾರವ್ಯಾಸನ, ಲಕ್ಷ್ಮೀಶನ, ಷಟ್ಪದಿಗಳನ್ನು ನೇರವಾಗಿ ಬಳಸುತ್ತಿದ್ದುದು ಉಂಟು. ಈ ಬಗೆಯ ವ್ಯವಹಾರದಿಂದ ಯಕ್ಷಕವಿಗಳಿಗೆ ಅನ್ಯಾಯವಾಗುತ್ತಿತ್ತು. ಇದನ್ನು ಮನಗಂಡ ಹೊಸ್ತೋಟ ಮಂಜುನಾಥ ಭಾಗವತರು ತಮ್ಮ ಪ್ರಸಂಗಗಳ ರಚನೆಯಲ್ಲಿ ರಂಗಕ್ಕೆ ಎಷ್ಟು ಅಗತ್ಯವೋ ಅಷ್ಟೇ ಪದ್ಯಗಳನ್ನು ತಮ್ಮ ಪ್ರಸಂಗಗಳಲ್ಲಿ ರಚಿಸುತ್ತಿದ್ದರು. ಇದು ಭಾಗವತರಿಗೂ ಅನುಕೂಲ ಹಾಗೂ ಪಾತ್ರಧಾರಿಗಳಿಗೂ ಅನುಕೂಲ ಇಲ್ಲವಾದರೇ ಪಾತ್ರಧಾರಿಗಳು ಇಡೀ ಪ್ರಸಂಗದ 350-450 ರಷ್ಟು ಪದ್ಯಗಳನ್ನು ಓದಿ ಕವಿ ಆಶಯ, ಅರ್ಥ ಮಾಡಿಕೊಂಡು ರಂಗದ ಮೇಲೆ ಪ್ರಸಂಗಗಳನ್ನು ಪುನರ್ ನಿರ್ಮಾಣ ಮಾಡಬೇಕಾಗುತ್ತಿತ್ತು. ಹೊಸ್ತೋಟರ ರಚನೆಗಳು "ಕಾಲಮಿತಿ ಪ್ರದರ್ಶನ"ಕ್ಕೆ ಹೇಳಿ ಮಾಡಿಸಿದಂತಿದೆ. ಅವರು "ಅಭಿಜಾತ ಕವಿ" ಯಾಗಿರುವಂತೆ "ರಂಗಪ್ರಜ್ಞೆಯುಳ್ಳ ಒಬ್ಬ ನಿರ್ದೇಶಕರು ಆಗಿರುವುದರಿಂದ" ಅವರ ಹೆಚ್ಚಿನ ಪ್ರಸಂಗಗಳು ರಂಗದಲ್ಲಿ ಜಯಭೇರಿ ಭಾರಿಸಿವೆ. ಕಳೆದ ಶತಮಾನದ ಉತ್ತರಾರ್ಧದಲ್ಲಿ ಹೆಚ್ಚಿದ ಹವ್ಯಾಸಿಗಳು ಮಹಿಳಾ ಕಲಾವಿದರು, ಶಾಲಾ ವಿದ್ಯಾರ್ಥಿಗಳಿಗೆ ಹೊಸ್ತೋಟರ ರಚನೆಗಳು ಬಹಳ ಸಹಕಾರಿಯಾಗಿವೆ. "ಶ್ರೀಕೃಷ್ಣ ಮಹಿಮೆ" ಎಂಬ ಭಾಗವತ ಸರಣಿ ಪ್ರಸಂಗಗಳ ಕೃತಿಯಲ್ಲಿ ಮುಖ್ಯವಾಗಿ ಎಂಟು ವಿಭಾಗಗಳಾಗಿವೆ. ಈ ಎಂಟು ವಿಭಾಗಗಳಲ್ಲಿ ಸಂಪೂರ್ಣವಾದ ಶ್ರೀಕೃಷ್ಣ ಜೀವನದ ಕಥೆಯನ್ನು ಹೊಸ್ತೋಟರು ಚಿತ್ರಿಸಿದ್ದಾರೆ. ಇಪ್ಪತ್ತು ಪ್ರಸಂಗಗಳನ್ನು ಬಿಡಿಬಿಡಿಯಾಗಿಯೂ ಪ್ರದರ್ಶಿಸಬಹುದು, ಇಲ್ಲವೇ ವಿಭಾಗಗಳನ್ನು ಆಧರಿಸಿ ಎಂಟು ಭಾಗಗಳಲ್ಲೂ ಪ್ರದರ್ಶಿಸ ಬಹುದಾಗಿದೆ. ಈ ಇಪ್ಪತ್ತೊಂದನೆಯ ಶತಮಾನಕ್ಕೆ ಹೇಳಿ ಮಾಡಿಸಿರುವಂತಹ ವಿಂಗಡಣೆ ಇದಾಗಿದೆ. ಮೊದಲ ಭಾಗವಾದ "ಮುಗ್ಧ ಮುಕುಂದ"ದಲ್ಲಿ ಮೂರು ಪ್ರಸಂಗಗಳಾದ ಶ್ರೀಕೃಷ್ಣ ಜನ್ಮ, ಗಿರಿಪೂಜೆ ಮತ್ತು ಕಂಸವಧೆ ಇದೆ. ಇದನ್ನು ಬೇಕಾದರೆ ಪ್ರದರ್ಶಿಸುವವರು ಶ್ರೀಕೃಷ್ಣ ಬಾಲಲೀಲೆ ಎಂದು ಕರೆದುಬೇಕಾದರೂ ಪ್ರದರ್ಶಿಸಬಹುದಾಗಿದೆ. ಇದೇ ರೀತಿ "ವಿದಗ್ದ ವಿಶ್ವಕ್ಷೇನ" ಎಂಬುವುದರಲ್ಲಿ ಗುರುಕುಲವಾಸ, ಗೋಪಿ ಗೀತ, ಅಕ್ರೂರ ರಾಯಭಾರ ಮತ್ತು ಕಾಲಯವನ ಸಂಹಾರವಿದೆ. ಮೂರನೆಯ ಭಾಗದಲ್ಲಿ "ರಮಾರಮಣ ಗೋವಿಂದ"

ದಲ್ಲಿ ರುಕ್ಮಿಣಿ ಹರಣ, ಪ್ರದ್ಯುಮ್ನ ವಿಜಯವಿದೆ ಮತ್ತು ಮುಂದಿನ "ಆಮೋದ ದಾಮೋದರ"ದಲ್ಲಿ ಜಾಂಬವತಿ ಕಲ್ಯಾಣ ಹಾಗೂ ಶಮಂತಕ ವಿಲಾಸವಿದೆ. ಐದನೇ ಭಾಗವಾದ "ದೇವದೇವೋತ್ತಮ"ದಲ್ಲಿ ಭೌಮಾಸುರ ಕಾಳಗ, ಕಾಳಿಂದಿ ವಿವಾಹವಿದೆ. ಮುಂದಿನ "ಧುರಂಧರಾಚ್ಚುತ"ದಲ್ಲಿ ಉಷಾಪರಿಣಯ ಹಾಗೂ ಸುವರ್ಣ ಸುಪರ್ಣರಿದ್ದಾರೆ. "ಪೂಜಿತ ಪುರುಷೋತ್ತಮ"ದಲ್ಲಿ ಜರಾಸಂಧ ವಧೆ ಮತ್ತು ಶಿಶುಪಾಲ ಶಿರಶ್ಛೇದವಿದೆ. ಕೊನೆಯ ಭಾಗವಾದ "ನಿರ್ಲಿಪ್ತ ನಿರಂಜನ"ದಲ್ಲಿ ಮೂರು ಪ್ರಸಂಗಗಳಿದ್ದು ಶ್ರೀಕೃಷ್ಣನ ಕೊನೆಯ ದಿನಗಳ ಕುರಿತಾಗಿದೆ. ಅವುಗಳೆಂದರೆ ಲಕ್ಷಣ ಸ್ವಯಂವರ, ಗಾಂಧಾರಿ ಶಾಪ ಮತ್ತು ಶ್ರೀಕೃಷ್ಣ ನಿರ್ಯಾಣವಾಗಿದೆ. ಹೊಸ್ತೋಟ ಮಂಜುನಾಥ ಭಾಗವತರು ಯಕ್ಷಗಾನದ ಎಲ್ಲಾ ಅಂಗಗಳಲ್ಲೂ ಪಳಗಿದವರಾಗಿದ್ದು ಸ್ವತಃ ರಂಗನಿರ್ದೇಶಕರು, ರಂಗ ತರಬೇತಿದಾರರು ಆಗಿ ಖ್ಯಾತಿ ಪಡೆದವರಾದ್ದರಿಂದ ಇಲ್ಲಿನ ಪ್ರಸಂಗಗಳು ಪ್ರದರ್ಶನವಾಗುವಲ್ಲಿ ಯೋಗ್ಯವಾಗುವಂತೆ ನೋಡಿಕೊಂಡಿದ್ದಾರೆ.

ಯಕ್ಷಗಾನದಲ್ಲಿ ಸಂಭಾಷಣೆಯ ಭಾಗವು ಪ್ರಮುಖವಾದದ್ದು ಆಶು ಮಾತುಗಾರಿಕೆಗೆ ಸೂಚಕವಾಗಿರುವ ಪದ್ಯಗಳು ಪ್ರಸಂಗವನ್ನು ಯಶಸ್ವಿಗೊಳಿಸುತ್ತವೆ. ಕವಿಯಾದವನು ರಂಗದಲ್ಲಿ ಹೆಚ್ಚು ಆಶು ಸಂವಾದಕ್ಕೆ, ಆಪ್ತ ಮಾತುಕತೆಗೆ ಅನುಕೂಲವಾಗಿರುವಂತಹ ಸನ್ನಿವೇಶಗಳನ್ನು ಸೃಷ್ಟಿಸುತ್ತಾನೆ. ಈ ಬಗೆಯ ಸನ್ನಿವೇಶಗಳಲ್ಲಿ ಎದುರು ಪಾತ್ರಗಳು ರಂಗದಲ್ಲಿ ಸಂವಾದವನ್ನು ಬೆಳಸಲು ಕವಿ ಅವಕಾಶ ನೀಡಬೇಕಾಗುತ್ತದೆ. ಇಷ್ಟೇ ಅಲ್ಲದೇ ಈ ಸಂವಾದಗಳಲ್ಲಿ ಜೀವನ ಮೌಲ್ಯ ಪ್ರತಿಪಾದನೆ ಇರಬೇಕಾಗುತ್ತದೆ. ಪಾತ್ರಗಳ ಸ್ವಭಾವದ ದರ್ಶನವೂ ಇರಬೇಕಾಗುತ್ತದೆ. ಕವಿ ಮೂಲಕತೆಯ ಚೌಕಟ್ಟನ್ನು ಇಟ್ಟುಕೊಂಡು ಇದೆಲ್ಲಾ ನಿರ್ವಹಿಸಬೇಕಾಗುತ್ತದೆ. ಯಕ್ಷಕವಿ ಹೊಸ್ತೋಟರ ಶ್ರೀಕೃಷ್ಣ ಮಹಿಮೆಯಲ್ಲಿನ ಅನೇಕ ಪದ್ಯಗಳು ಬದುಕಿಗೆ ಅಗತ್ಯವಾಗುವ ಸತ್ ಸದ್ ವಿಚಾರಗಳನ್ನು ಹೊರ ಹಾಕುತ್ತವೆ ಸಂವಾದಗಳಲ್ಲಿ ಪಾತ್ರಗಳ ಶೀಲ ಸ್ವಭಾವಗಳ ಚಿತ್ರಣವು ದೊರಕುತ್ತವೆ. ಯುದ್ಧದ ಸನ್ನಿವೇಶವಾದರೆ ವಾದಪ್ರತಿವಾದದ ಆರ್ಭಟವೂ ಇರುತ್ತದೆ. ಹೊಸ್ತೋಟರು ತಮ್ಮ ಭಾಗವತ ಪ್ರಸಂಗಗಳಲ್ಲಿ ಇಂತಹ ಅನೇಕ ಉತ್ತಮ ಸಂವಾದದ ಸನ್ನಿವೇಶಗಳನ್ನು ಸೃಷ್ಟಿಸಿದ್ದಾರೆ. ಆಕರ್ಷಕ ಮಾತುಗಾರಿಕೆಗೆ ಅಗತ್ಯವಾದುದನ್ನು ಬಹುಕಡಿಮೆ ಪದ್ಯಗಳಲ್ಲಿ ಬರೆದಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಕೆಳಗಿನ ಪದ್ಯಗಳನ್ನು ಗಮನಿಸಬಹುದು.

ಕುಚೇಲ ಹಾಗೂ ಕೃಷ್ಣರ ಗೆಳೆತನ ಜಗದ್ವಿಖ್ಯಾತವಾದದ್ದು. ಅವರಿಬ್ಬರ ಮಾತುಗಳ ಮೂಲಕ ಹೊಸ್ತೋಟ ಮಂಜುನಾಥ ಭಾಗವತರು ಬಹು ಸರಳವಾಗಿ ಅವರಿಬ್ಬರ ಸ್ವಭಾವವನ್ನು "ಗುರುಕುಲವಾಸ" ಎಂಬ ಪ್ರಸಂಗದ ಕೆಳಗಿನ ಪದ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ. (ರಾಗ: ಪೂರ್ವಿ ತಾಳ: ಆದಿ)

ಬಾರೋ ಬಾ ಗೆಳೆಯ ನೀ ನಿತ್ತ
ನೋಡುವೆಯಾಕತ್ತ - ಬಾರೋ ಬಾ ಗೆಳೆಯ ನೀನಿತ್ತ
ಊರಾವುದು ಎಂಬುದ ಪೇಳೀಗ
ಸಾರು ನಿನ್ನ ಮೂಲವ ಬಹುಬೇಗ ।
ಯಾರೊಳು ಬೆರೆಯದೆ ಒಬ್ಬನೇ ಇರುವೆ ।
ಕಾರಣವರುಹೈ ನಾನದ ತಿಳಿವೆ । 1 ॥
ತಿರಿದು ತಿಂಬ ಬ್ರಾಹ್ಮಣ ಮಮಪಿತನು ।
ಗುರುಕುಲವಾಸಕೆ ನಾಬಂದಿಹೆನು ।
ಜರೆದು ದೂಡಿದನುವಿಂದನು ಎನ್ನ ।
ಅರಸರ ಸಹವಾಸವೇ ಬೇಡಣ್ಣ । ॥ 2 ॥
ಸಿರಿತನ ಬಡತನ ಶಾಶ್ವತವಲ್ಲ ।
ಬರಿ ಮಡಿವಂತಿಕೆ ಕುಲಛಲ ಸಲ್ಲ ।
ಮರುಗದಿರೈ ಶ್ರೀಕೃಷ್ಣನು ನಾನು ।
ನಿರತನಿನ್ನ ಮಿತ್ರತ್ವ ದೊಳಿಹೆನು । ॥ 3 ॥
ಮುದ್ದು ಮೋಹನಕಾರ ಗಂಭೀರ ।
ವಿದ್ಯಾಭ್ಯಾಸದಿ ನೀನತಿ ಚತುರ ।
ಶುದ್ಧ ಹೃದಯ ನಿನ್ನಯ ಗೆಳೆತನದಿ ।
ವೃದ್ಧಿಗೊಳುವೆ ನಾಮಮ ಜೀವನದಿ । ॥ 4 ॥

(ಯಕ್ಷಗಾನ ಶ್ರೀಕೃಷ್ಣಮಹಿಮೆ. ಪುಟ 28)

"ಅಕ್ರೂರ ರಾಯಭಾರ" ಪ್ರಸಂಗದಲ್ಲಿ ಹಸ್ತನಾವತಿಗೆ ಕೃಷ್ಣನ ರಾಯಭಾರಿಯಾಗಿ ಬಂದ ಅಕ್ರೂರನು ಯದುವಂಶಕ್ಕೆ ಕುರುವಂಶದವರ ಸಹಾಯವನ್ನು ಕೋರುತ್ತಾನೆ. ಆಗ ನಡೆದ ನಾಟಕೀಯ ಸನ್ನಿವೇಶವನ್ನು ಹೊಸ್ತೋಟರು ಬಹಳ ಸಜೀವವಾಗಿ ಚಿತ್ರಿಸಿದ್ದಾರೆ. ಭೀಷ್ಮನು ಕೃಷ್ಣನ ಪ್ರಸ್ತಾಪವನ್ನು ಸ್ವಾಗತಿಸಿ ಮಾತನಾಡುತ್ತಾನೆ. ಆದರೆ ಶಕುನಿಯು ತಂತ್ರಗಾರಿಕೆ ಮಾಡಿ ಉತ್ತರ ವೀಯುವಲ್ಲಿ ಸಮಯ ಕೋರುವಂತೆ ಮಾಡುತ್ತಾನೆ. ಮುಂದೆ ಶಕುನಿ ಧೃತರಾಷ್ಟ್ರರ ಮಂತ್ರಾಲೋಚನೆಯ ವಿವರ ಬರುತ್ತದೆ. ಯಾದವರಿಗೆ ಸಹಾಯ ನೀಡಲು ಧೃತರಾಷ್ಟ್ರ ಒಪ್ಪದಂತೆ ಮಾಡುವಲ್ಲಿ ಶಕುನಿ ಯಶಸ್ವಿಯಾಗುತ್ತಾನೆ. ಮಧ್ಯದಲ್ಲಿ ಅಕ್ರೂರ ಕುಂತಿಯರ ಮಾತುಕತೆ ಇದ್ದದ್ದು ಹಸ್ತಿನೆಯ

ರಾಜಕೀಯದ ಒಳಸುಳಿಗಳೆಲ್ಲ ಗೋಚರವಾಗುತ್ತದೆ. ಧೃತರಾಷ್ಟನಿಂದ ನಕಾರಾತ್ಮಕ ಮಾತು ಬಂದಾಗ ಅಕ್ರೂರ ಒತ್ತಾಯದ ಮಾತನಾಡುತ್ತಾನೆ. ಅದಕ್ಕೆ ಶಕುನಿಯು ಪ್ರತಿಭಟನೆಯ ಮಾತನಾಡುತ್ತಾನೆ. ಈ ಸನ್ನಿವೇಶದ ಎಲ್ಲಾ ಪದ್ಯಗಳಲ್ಲಿ ಬಳಕೆಯಾದ ಪದಗಳು ಸಶಕ್ತವಾಗಿ ಬಂದಿವೆ. ವಾದವಿವಾದಗಳ ಮೂಲಕ ಕವಿ ರಾಜಕೀಯದ ಒಳಸುಳಿಗಳನ್ನೆಲ್ಲಾ ಬಿಚ್ಚಿಡುತ್ತಾರೆ. ಆಡುಮಾತುಗಳಂತೆ ಕಾಣಿಸುವ ಪದಬಂಧಗಳು ಹಾಕಿದಾಗ ನೇರವಾಗಿ ಪ್ರೇಕ್ಷಕರ ಎದೆಗೆ ನಾಟುವಂತಿದೆ.

ಯಾದವರೊಡನಾಟ ಸಲ್ಲ । ನಮ್ಮ ।
ಹಾದಿಗೆ ಮುಳ್ಳಹರವರು ಸುಳ್ಳಲ್ಲ ॥
ಶೋಧಿಸು ಕುಂತಿಯ ಮೂಲ । ನೆರೆ ।
ವಾದರೆ ಪಾಂಡವರಿಗೆ ಅನುಕೂಲ ॥ (ಪುಟ 43)

ಎನ್ನುವ ಶಕುನಿಯ ವಾದ ಸರಣಿ ಬಹು ತಾರ್ಕಿಕವಾಗಿದೆ. ಇದೇ ರೀತಿ ಕುಂತಿಯು ಆಡುವ

"ಹಿಂದೆ ನಾನಿಲ್ಲಿ ಸಾಮ್ರಾಜ್ಞಿಯಾಗಿರ್ದೆನು ।
ಇಂದು ದಾಸಿಗೂ ಕೀಳು ನೋಡು ॥
ಕಂದರಿಗಾಗಿ ತಾಳಿರ್ಪೆ ನೀ ಬವಣೆಯ ।
ನೊಂದು ಕೊಂಡರೆ ಕೇಳ್ವರ್ಯಾರು ॥ (ಪುಟ 44)

ಅವಳ ಅಸಹಾಯಕತೆಯ ಸಜೀವ ಚಿತ್ರಣವಾಗಿದೆ. ಮುಂದೆ ಧೃತರಾಷ್ಟನಲ್ಲಿ ಅಕ್ರೂರನು ಹೇಳುವ

"ಕಾಲಗತಿಯೊಳಿಂತು ಬೇಡುತಿಹೆವು ॥
ಕೀಳೆಂದು ತಾತ್ಸಾರ ತಾಳದಿರಯ್ಯ ॥"

ಎಂಬುದು ಸಾಮಾನ್ಯವಾಗಿ ಮಾತನಾಡುವಾಗ ಹೇಳುವ ನುಡಿಕಟ್ಟಿನಂತಿದೆ.

"ರುಕ್ಮಿಣಿ ಹರಣ" ಪ್ರಸಂಗದಲ್ಲಿ ಕೂಡ ಪಾತ್ರಗಳ ನಡುವಿನ ಸಂವಾದದಲ್ಲಿ ಒಂದು ಸೌಂದರ್ಯವಿದೆ. ಸಹಜತೆ ಇದೆ. ಪಾತ್ರಗಳ ಶೀಲ ಸ್ವಭಾವದ ಯಥಾವತ್ ಚಿತ್ರವಿದೆ. ಸಕಾಲಿಕವಾದ, ಧ್ವನಿಪೂರ್ಣವಾದ ಪದಗಳ ಬಳಕೆಯಿಂದ, ಪದಗುಚ್ಛಗಳ ಜೋಡಣೆಯಿಂದ ಇಡೀ ಸಂದರ್ಭವೇ ಬಹು ನಾಟಕೀಯವಾಗಿ ಕಂಗೊಳಿಸುತ್ತದೆ. ಆಶುಕವಿತ್ವದಲ್ಲಿ ಸಿದ್ಧಿಹೊಂದಿದಂತಿರುವ ಹೊಸ್ತೋಟರು ಇಲ್ಲಿ ಬಹು ಸರಾಗವಾಗಿ ಹೇಳುವ ಮಾತುಗಳೆಲ್ಲ ಸರಿಯಾದ ರಾಗ ಮಟ್ಟುಗಳಲ್ಲಿ ಹೊರ ಬಂದು,

ಛಂದೋಬದ್ಧವಾಗಿ ಜೋಡಿಸಿಕೊಂಡು ಹಾಡಿಗೂ, ರಾಗಕ್ಕೂ ಚೆನ್ನಾಗಿ ಒದಗಿ ಬರುತ್ತವೆ. ಎಲ್ಲೂ ಕೃತಕತೆ ನುಸುಳುವುದೇ ಇಲ್ಲ. ಇದಕ್ಕೆ ಉದಾಹರಣೆಯಾಗಿ ಕೆಳಗಿನ ಸಾಲುಗಳನ್ನು ಗಮನಿಸಬಹುದು. ಶಿಶುಪಾಲನು ಹೇಳುವ

"ತುಡುಗ ಕೃಷ್ಣನು ನುಸುಳಿ ಬಂದರೆ । ಬಡಿದು ತಲೆ ಒಡೆಯುವೆವುಏಳ್ಳೆ
ತಡವ ಮಾಡದೆ ದಿಬ್ಬಣವ ಮುನ್ನಡೆಸು ಮುದದಿ ॥" (ಪುಟ 60)
"ಎಲ್ಲಿಂದ ಬಂದೆ ನೀನು ಹಾಳೆಸಗಿದೆ । ಯಲ್ಲ ಈ ಕಾರ್ಯವನು ॥
ಒಳ್ಳೆ ಮಾತಿನೊಳೀಗ ಹೆಣ್ಣು ತಂದೊಪ್ಪಿಸು । ಕಳ್ಳತನವ ತ್ಯಜಿಸು ॥"
(ಪುಟ 61)

ಎನ್ನುವಲ್ಲಾಗಲಿ ಅದೇ ರೀತಿ ಮಾತನಾಡುವ
"ಗಿರಿಯೊಳುರಿಗೆ ಸಿಲುಕಿ ನೀವು ಸುಟ್ಟು ಹೋದಿರೆನ್ನುತಿರ್ದೆ ।
ತಿರುಗಿ ಬಂದು ಸುಟ್ಟುಗುಣವ ಮೆರೆಸುವತಿರುವಿರೆ ॥" (ಪುಟ 62)

ಎಂಬಲ್ಲೆಲ್ಲಾ ಪದಗಳು ಸಹಜವಾಗಿ, ಆಡುಭಾಷೆಯಲ್ಲಿ ಸಾಮಾನ್ಯರು ಹೇಳುವಂತೆ ಬಂದಿದೆ. ಇಲ್ಲೆಲ್ಲಾ ವಿಸ್ತಾರ ಮಾಡಲು ಹೊಸ್ತೋಟರು ಸಾಕಷ್ಟು ಅವಕಾಶಗಳನ್ನು ಪಾತ್ರಧಾರಿಗಳಿಗೆ ಪದ್ಯದ ಮೂಲಕ ನೀಡಿದ್ದಾರೆ. ಅರ್ಥ ಪ್ರಸವ ಗುಣವುಳ್ಳ ಪದ್ಯಗಳನ್ನು ಈ ಪ್ರಸಂಗಗಳಲ್ಲಿ ಸಾಕಷ್ಟು ಕಾಣಬಹುದು. ಪದ್ಯ ಬಹು ಸಂಕ್ಷಿಪ್ತ ಎನ್ನಿಸಿದರೂ ಅಲ್ಲಿ ಬಳಸಿರುವ ಪದಗಳನ್ನು ಹಿಡಿದುಕೊಂಡು ಅರ್ಥಧಾರಿ ಮಾತುಗಾರಿಕೆಯನ್ನು ಬೆಳೆಸಬಹುದು. ದೀರ್ಘ ಸಂಭಾಷಣೆಗೆ ಹೊಸ್ತೋಟರು ಹೆಚ್ಚಾಗಿ ಅವಕಾಶವನ್ನು ನೀಡುವುದಿಲ್ಲ.

ಯಕ್ಷಗಾನ ಪ್ರದರ್ಶನಗಳಲ್ಲಿ ಶ್ರೀಕೃಷ್ಣನ ಪ್ರವೇಶಕ್ಕೆ ವಿಶೇಷ ಮೆರುಗಿದೆ. ಕೃಷ್ಣನ ಒಡ್ಡೋಲಗದ ಪದ್ಯವಂತು ಆಕರ್ಷಣೀಯವಾದದ್ದು. ಕೃಷ್ಣನ ವೇಷದ ಸೊಗಸಿನಷ್ಟೇ ಅವನ ಪ್ರವೇಶದ ಪದ್ಯಗಳು ಸೊಗಸಾಗಿರಬೇಕಾಗುತ್ತದೆ. ಈ ಭಾಗವತದ ಪ್ರಸಂಗಗಳಿರುವುದೇ ಶ್ರೀಕೃಷ್ಣನ ಮಹಿಮೆಯನ್ನು ಸಾರಲು. ಆದ್ದರಿಂದ ಕೃಷ್ಣನ ಕುರಿತಾಗಿ ಬರುವ ಪದ್ಯಗಳು, ಅವನ ರಂಗಪ್ರವೇಶದ ಪದ್ಯಗಳು ಪ್ರಸಂಗದ ನಿರ್ಣಾಯಕ ಅಂಶಗಳಾಗಿರುತ್ತವೆ. ಹೊಸ್ತೋಟ ಮಂಜುನಾಥ ಭಾಗವತರು ಇಲ್ಲಿನ ಅನೇಕ ಪದ್ಯಗಳಲ್ಲಿ ಬಹು ಸೊಗಸಾಗಿ ಕೃಷ್ಣನನ್ನು ಪರಿಚಯಿಸಿ ಅವನ ವಿಶಾಲ ವ್ಯಕ್ತಿತ್ವದ ಪರಿಚಯ ಮಾಡಿಸಿ ಕೊಡುತ್ತಾರೆ. ಒಂದೊಂದು ಪ್ರಸಂಗದಲ್ಲಿ ಕೃಷ್ಣನ ಒಂದೊಂದು ಬಗೆಯ ವ್ಯಕ್ತಿತ್ವವನ್ನು ಭಾಗವತರು ಇಲ್ಲಿ ಚಿತ್ರಿಸಿದ್ದಾರೆ. ಹಂತಹಂತವಾಗಿ ಅವನ ವ್ಯಕ್ತಿತ್ವದಲ್ಲಾಗುವ ಮಾರ್ಪಾಡುಗಳನ್ನು ಇಲ್ಲಿನ ಪ್ರಸಂಗಗಳಲ್ಲಿ ಗುರುತಿಸ

ಬಹುದು. ಗೋಕುಲದ ಗೋಪಿಕಾಸ್ತ್ರೀಯರಿಗೆ ಕಂಡು ಬರುವ ಕೃಷ್ಣ ಮುಂದೆ ಅರ್ಜುನನಿಗೆ ವಿಶ್ವರೂಪ ದರ್ಶನ ಮಾಡುವವರೆಗೆ ಅವನ ಮಾಗುವ, ಮಾಗಿದ ವ್ಯಕ್ತಿತ್ವದ ಪರಿಚಯವಾಗುತ್ತದೆ. "ಕಂಸವಧೆ" ಯಲ್ಲಿ ಆತನು

"ಸುಂದರ ಮುರಳೀಧರ । ಗೋಪಾಲಕೃಷ್ಣ । ನಂದಗೋಪನ ಕುವರ ।
ಚೆಂದದಿ ಕೊಳಲನೂದಿ ಬಂದ ಗೋವಳರ ಕೂಡಿ । ಮುಂದಿಹ ಗೋವ್ಗಳ
ಮಂದಹಾಸದಿ ನೋಡಿ ॥ (ಪುಟ 20)

ಎಂದು ಕಾಣಿಸಿಕೊಳ್ಳುತ್ತಾನೆ. ಇಲ್ಲಿ ಬಂದ ಕೋಲಾಟದ ಪದ್ಯವು ಸೊಗಸಾಗಿದೆ.

"ಬಾರೋ ರಂಗಯ್ಯ ಬಾರೋ। ಬಾರೋ ಕೃಷ್ಣಯ್ಯ ಬಾರೋ।
ಬಾರೋ ಕೋಲಾಟವ ಆಡೋಣ।" ॥ಪ॥
ಒಲವಿನ ನಗೆ ತೋರೋ । ನಲಿದು ಮುಂದಕ್ಕೆ ಬಾರೋ ।
ಗೆಲುವಿನಿಂ ಕುಣಿಯುತ್ತಾಲಾಡೋಣ ॥ 1 ॥
ಬಾಗಿ ಬಳುಕಿ ಬಾರೋ ತೂಗಿ ತೊನೆದು ಬಾರೋ ।
ಹೂವಿನ ಚಿಣಿಕೋಲ ಆಡೋಣ ॥ 2 ॥
ಕುಣಿದು ಚಪ್ಪಾಳೆ ತಟ್ಟಿ ಮಣಿದು ಭೂಮಿಯ ಮುಟ್ಟಿ
ನಲಿದು ನಾವೊಂದಾಗಿ ಆಡೋಣ ॥ 3 ॥ (ಪುಟ 20)

ರಂಗದಲ್ಲಿ ಮಿಂಚಬಲ್ಲ ಶಕ್ತಿ ಈ ಪದ್ಯಕ್ಕಿದೆ.

ಕೃಷ್ಣ ಮಧುರೆಗೆ ಹೋದಾಗ ಆತನಿಲ್ಲದೆ ಗೋಪಿಕಾಸ್ತ್ರೀಯರು ಪಡುವ ವೇದನೆ ಎಲ್ಲಾ "ಗೋಪಿಗೀತ"ದಲ್ಲಿ ಪ್ರಸ್ತುತವಾಗಿದೆ. ಗೋಪಿನಾರಿಯರಿಗೆ ಎಲ್ಲೆಲ್ಲೂ ಶ್ರೀಕೃಷ್ಣ ಕಾಣುತ್ತಾನೆ. ಹಸುವಿನ ಹಿಂಡಿನಲ್ಲಿ, ಮೊಸರು ಕಡೆಯುವಲ್ಲಿ, ಶಿಶುವಿನ ಅಳುವಿನಲ್ಲಿ, ಯಮುನಾ ನದಿಯಲ್ಲಿ, ಬೃಂದಾವನದ ಮರಮರಗಳಲ್ಲಿ, ಕೃಷ್ಣನ ರೂಪವನ್ನು ಕಾಣುತ್ತಾರೆ. ಈ "ಗೋಪಿಗೀತ" ಒಂದು ರೀತಿಯಲ್ಲಿ ಭಾವಗೀತಾತ್ಮಕವಾಗಿದೆ. "ರುಕ್ಮಿಣಿ ಹರಣ"ದಲ್ಲಿ ಕೃಷ್ಣನ ಒಡ್ಡೋಲಗದ ಪದ್ಯ ಬಹು ಸೊಗಸಾಗಿದೆ. ಹರಿಕಾಂಬೋಧಿ ರಾಗದ ಆದಿತಾಳದಲ್ಲಿ ಬರುವ

"ಚೆಲುವ ಶ್ರೀಕೃಷ್ಣ ಬಂದ । ನಂದನ ಕಂದ ।
ನಲಿದು ನಗುತ ಮುಕುಂದ ।
ಬಲು ಭಕ್ತಿಯಿಂದ ನೋಳ್ಪವರಿಗಭಯ ತೋರಿ ।
ಖಳರ ಮರ್ದಿಸಲಿಳೆಗಿಳಿದ ಲೀಲಾವತಾರಿ " (ಪುಟ 59)

ಎಂಬುವುದು ನರ್ತನಕ್ಕೆ ಸಹಕಾರಿಯಾಗಿದೆ. ಸರಸವಾದ ಪದಗಳು ಲಾಸ್ಯಪೂರ್ಣ ನಡೆಗೆ ಸಹಕಾರಿಯಾಗುತ್ತವೆ.

"ಭೌಮಾಸುರ ಕಾಳಗ"ದಲ್ಲಿ ಕೃಷ್ಣನ ಗುಣಗಾನ ಹೀಗೆ ಬಂದಿದೆ. "ನೀನೇ ಜಗದೋದ್ಧಾರ ಲೀಲಾವತಾರ ಜ್ಞಾನ ತತ್ವ ಪ್ರಸಾರ ನಿಗಮವಿಚಾರ ॥ ಪ ॥ ಈ ನಿನ್ನ ಮಹಿಮೆಯ ವರ್ಣಿಸಲಾರದೆ ಮುನಿಗಳೆಲ್ಲರು ಮೂಕರಾಗಿರುವರು ॥ "ಗಾಂಧಾರಿ ಶಾಪ" ಪ್ರಸಂಗದಲ್ಲಿ ಅರ್ಜುನನಿಗೆ ಶ್ರೀಕೃಷ್ಣನು ವಿಶ್ವರೂಪ ದರ್ಶನವನ್ನು ಮಾಡಿಸುತ್ತಾನೆ. ಅದನ್ನು ನೋಡಿದ ಪಾರ್ಥನಾಡುವ ಮಾತುಗಳು ಶ್ರೀಕೃಷ್ಣನಲ್ಲಿ ಪರಮಾತ್ಮ ಸ್ವರೂಪವನ್ನು ಪ್ರತಿಮಿಸುವ ಸಾಲುಗಳಾಗಿವೆ.

"ಕಂಡನು ಪಾರ್ಥ ಕಂಡನು ॥ ಪ ॥
ಕಂಡನು ವಿಶ್ವರೂಪದ ಮಹಾದ್ಭುತವನು ॥
ಸಕಲ ದೇವತೆಗಳ ಸೊಬಗ । ಮಹಾ ಪ್ರಕೃತಿಯ ಮಂಡಲ ಸೆರಗ । ಜೀವ
ವಿಕಸನ ಸೃಷ್ಟಿಯ ಮೆರಗ । ಸರ್ವಾತ್ಮಕನ ವಿರಾಟರೂಪದ ಭವ್ಯ ಬೆರಗ ।"
(ಪುಟ 146)

ಮೂಕ ವಿಸ್ಮಿತನಾದ ನೋಡಿ ತತ್ವ । ಸಾಕಾರದಲ್ಲಿ ಮನಗೂಡಿ ।
ಬಹುತೇಕ ಭಾವವ ಹದ ಮಾಡಿ ।
ತಿಳಿದೇಕಾತ್ಮ ನಿಷ್ಠೆಯ ಸಂಕಲ್ಪಗೂಡಿ ॥

ಈ ಸಾಲುಗಳು ಕೃಷ್ಣ ಪಾರಮ್ಯದ ಪರಾಕಾಷ್ಠೆಯಾಗಿದೆ. ಹೊಸ್ತೋಟ ಮಂಜುನಾಥ ಭಾಗವತರ ರಚನೆಗಳಲ್ಲಿ ಕಾವ್ಯ ಸೌಂದರ್ಯ ಇದೆ. ವರ್ಣನೆಗಳು, ಅಲಂಕಾರ ವೈಭವಗಳನ್ನು ಭಾಗವತರು ಅಲ್ಲಲ್ಲಿ ತರುತ್ತಾರೆ. ಪ್ರಸಂಗ ದೃಶ್ಯಕಾವ್ಯವಾದರೂ ಯಥೋಚಿತವಾದ ವರ್ಣನೆಗಳನ್ನು ಕಾಣಬಹುದು. ಭಾಗವತದ ಪ್ರಸಂಗಗಳಲ್ಲಿ ಕೂಡಾ ಇವು ಬಂದಿವೆ. "ಗುರುಕುಲವಾಸ"ದಲ್ಲಿ ಬರುವ ನರಕದ ವರ್ಣನೆ "ರುಕ್ಮಿಣಿ ಹರಣ"ದಲ್ಲಿ ಬರುವ ಪುರ ವರ್ಣನೆ, ಗೌರಿ ಪೂಜೆಯಲ್ಲಿ ಬರುವ ಪ್ರಕೃತಿ ವರ್ಣನೆ, ಹೆಚ್ಚಿನ ಪ್ರಸಂಗಗಳಲ್ಲಿ ಬರುವ ಯುದ್ಧ ವರ್ಣನೆಗಳೆಲ್ಲ ಸಹಜ ಸೌಂದರ್ಯದಿಂದ ಕಂಗೊಳಿಸುತ್ತವೆ. ಭೌಮಾಸುರನ ಒಡ್ಡೋಲಗಕ್ಕೆ ಚಾರನು ಬಂದು ಕೃಷ್ಣನ ಆಗಮನದ ಪರಿಯನ್ನು ವರ್ಣಿಸುವುದು ಬಹು ಸ್ವಾರಸ್ಯ ಪೂರ್ಣವಾಗಿದೆ.

ರಾಗ : ಮುಖಾರಿ ತಾಳ : ಏಕ

ಗರುಡನನೇರಿ ಬಂದಿಹನೊಬ್ಬ । ಬಲು ಸಾಹಸಿಯಬ್ಬ ।

ತರುಣಿ ಜೊತೆಗಿಹಳು ಅಬ್ಬಬ್ಬ । ಪರಿಕಿಸೆ ಕಪ್ಪಾಗಿರುವನು ದೇಹದಿ
ಅರರೇ ಎನ್ನುತ ತಡೆದರು ಸಭಟರು ॥ ಗರಗರ ಗರಗರ ತಿರುಗಿಸಿ ಚಕ್ರವ
ಸರಸರಸರ ಸರತರಿದನು ಎಲ್ಲರ ॥ (ಪುಟ 94)

ಇಲ್ಲಿನ ಪದಗಳ ಲಾಲಿತ್ಯ ಬಹಳ ಸೊಗಸಾಗಿದೆ. ಹಾಸ್ಯದ ವರ್ಣನೆಗೆ ಬಹು ಚೆನ್ನಾಗಿ ಒಪ್ಪುತ್ತದೆ. ಇದೇ ಬಗೆಯಲ್ಲಿ ಹಾಸ್ಯಕ್ಕೆ ಪೂರಕವಾಗಿರುವ ಇನ್ನೊಂದು ಪದ್ಯ "ಕೃಷ್ಣ ನಿರ್ಯಾಣ"ದಲ್ಲಿ ಬಂದಿದೆ. ಸಾಂಬನಿಗೆ ಸ್ತ್ರೀ ವೇಷವನ್ನು ತೊಡಿಸುವ ಮೊದಲು ಯಾದವರು ಮುನಿಗಳನ್ನು ಲೇವಡಿ ಮಾಡಿದ ಪರಿ ಈ ರೀತಿ ಇದೆ –

ರಾಗ : ಪುನ್ನಾಗ ತೋಡಿ ತಾಳ : ಏಕ

"ದೊಡ್ಡಗಡ್ಡದವರು ಕೆಲರು ಗುಡ್ಡದಂಚಿನಲ್ಲಿ ಇಹರು ।
ಗೊಡ್ಡು ಹರಟೆ ಗೈಯ್ಯುತಿರುವರು । ನಾವಲ್ಲಿ ಪೋಗಿ ।
ಒಡ್ಡಬೇಕು ಪಂಥ ವಿದಿರೊಳು । ಏಳೇಳಿ ಬೇಗ ।
ಒಡ್ಡಿನವೇಷದೊಳಡ್ಡಗಿಸುತವರ ।
ಹೆಡ್ಡಾಗಿಸುತ ಕಬಡ್ಡಿಯನಾಡುವ ॥ (ಪುಟ 152)

ಎಂಬುದರಲ್ಲಿ ಕುಚೋದ್ಯವಿದೆ. ಹೊಸ್ತೋಟರು ಹೆಚ್ಚಾಗಿ ಬಳಕೆಯಲ್ಲಿರುವ ಮಟ್ಟುಗಳನ್ನು ಬಳಸಿಕೊಂಡು ಆಡುವ ಮಾತುಗಳನ್ನೇ ಅದರಲ್ಲಿರಿಸಿ ಅದು ಸಹಜವೆಂಬಂತೆ ಬಿಂಬಿಸುವ ಕಲೆಗಾರಿಕೆಯನ್ನು ತೋರಿಸುವ ಶಕ್ತಿ ಇರುವವರು ಎಂಬುದು ಮೇಲಿನ ಪದ್ಯಗಳಿಂದ ವ್ಯಕ್ತವಾಗುತ್ತದೆ. ಚಿಕ್ಕ ವರ್ಣನೆಗಳಲ್ಲಿ ಚೊಕ್ಕದಾಗಿ ನಿರೂಪಿಸುವುದನ್ನು, ಪ್ರಕೃತಿ ವರ್ಣನೆಗಳಲ್ಲಿ, ಪಟ್ಟಣದ ಶೃಂಗಾರ ವರ್ಣನೆಗಳಲ್ಲಿ ಕಾಣಬಹುದು.

ಹೊಸ್ತೋಟ ಮಂಜುನಾಥ ಭಾಗವತರು ಬದುಕಿನಲ್ಲಿ ಅವಧೂತರಿದ್ದಂತೆ ತಮ್ಮ ಸಾಹಿತ್ಯ ರಚನೆಯಲ್ಲಿ ಆಧ್ಯಾತ್ಮಿಕ ಚಿಂತನೆಗಳನ್ನು, ತಾತ್ವಿಕ ವಿಚಾರಗಳನ್ನು, ಧರ್ಮಪರ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಬದುಕಿನ ಕುರಿತ ಅವರ ನಿಲುವು ಏನು ಎಂಬುದನ್ನು ಇಲ್ಲಿ ಹಲವು ಪ್ರಸಂಗಗಳ ಪಾತ್ರಗಳ ಮಾತಿನಲ್ಲಿ ಬಂದಿವೆ. ಸ್ವತಃ ಬ್ರಹ್ಮನೇ ಪ್ರಕೃತಿ ಪೂಜೆಯ ಅಗತ್ಯವನ್ನು, ಹಿರಿಮೆಯನ್ನು "ಗಿರಿಪೂಜೆ" ಪ್ರಸಂಗದಲ್ಲಿ ಹೇಳಿದ್ದಾನೆ.

ರಾಗ : ಬೇಗಡೆ ತಾಳ : ಅಷ್ಟ

ಸುರಪ ಕೇಳೈ ಸೃಷ್ಟಿ ತತ್ವವನು । ಘನ ಪ್ರಕೃತಿ ಪುರುಷರ ಹಿರಿಮೆಯನೆ
ನಾನಿರತ

ಧ್ಯಾನಿಪೆನು ॥ ಸರುವ ಜೀವಾಂಕುರ ವಿಕಾಸದ ಧರೆಯ ಸತ್ಯಾನ್ವಿತೆಯು ತಾನಿದ ।

ನರಿತು ಶ್ರೀಹರಿ ಮನುಕುಲಕೆ ಪರಿಸರವ ಪೂಜಿಸಿ ಪೇಳ್ದನೀಗಳು ॥

(ಪುಟ 16)

ಇದೇ ರೀತಿ "ಗೋಪಿಗೀತ" ಪ್ರಸಂಗದಲ್ಲಿ "ಕೃಷ್ಣನು ಧ್ಯಾನ ಯೋಗ"ದ ಮಹತ್ವವನ್ನು ಭಕ್ತಿಭಾವಕ್ಕೆ ಅಡಿಪಾಯವಾದ ದೇವಪ್ರೇಮದ ಸೂತ್ರವನ್ನು ನೆನೆಸಿಕೊಳ್ಳುತ್ತಾನೆ. ಈ ಗಹನವಾದ ವಿಚಾರವನ್ನು ಹೊಸ್ತೋಟರು ಬಹು ಸರಳವಾದ ನಿರೂಪಣೆಯ ಮೂಲಕ ಹೇಳುತ್ತಾರೆ. ಇದು ಅವರ ಹೆಚ್ಚುಗಾರಿಕೆಯೂ ಹೌದು, ಕೆಳಗಿನ ಭಾಮಿನಿಯಲ್ಲಿ ಬಂದಿರುವ ಈ ಸಂಗತಿಯನ್ನು ಗಮನಿಸಬಹುದು

ಪ್ರಕೃತಿ ಸಹಜ ಸ್ವಭಾವದೊಂದಿಗೆ ।
ಯುಕುತ ಸಂಗಮ ದೊರೆವುದತಿಶಯ ।
ಸುಕೃತ ಯೋಗವು ಪ್ರೇಮವೇ ಕೈವಲ್ಯ ಸಿದ್ಧಿಯಲ
ಸಕಲ ವೇದ ಪುರಾಣಶಾಸ್ತ್ರದಿ ।
ಪ್ರಕಟಗೊಂಡಿಹ ಧ್ಯಾನಯೋಗದ
ಮುಕುತಿ ಸಾರವು ಭಕುತಿ ಭಾವದ ಸೂತ್ರ ಸಾಫಲ್ಯ ।\ (ಪುಟ 32)

"ಲೋಕವು ಮಾಯಾಪ್ರಪಂಚ ಕೇಳಯ್ಯ" ಎನ್ನುವ ಉದ್ಧವನಿಗೆ ರಾಧೆ "ಪ್ರೇಮಯೋಗ"ದ ಮಹತ್ವವನ್ನು ಕೆಳ ಕಂಡಂತೆ ತಿಳಿಸುತ್ತಾಳೆ. ಇಲ್ಲೆಲ್ಲ ಮಂಜುನಾಥ ಭಾಗವತರ ಆಧ್ಯಾತ್ಮಿಕ ಚಿಂತನೆಯ ಹೊಳಹನ್ನು ಕಾಣಬಹುದು.

ರಾಗ : ಧನ್ಯಾಸಿ ತಾಳ : ಆದಿ

ಪ್ರೇಮವೆಂಬುದೆ ವೇದ ಸಾಮರಸ್ಯದ ಮೋದ ।
ಕಾಮಿತ ಕಲ್ಪತರು ಜೀವನದೆಲ್ಲಾ ।
ನೇಮಕು ಕೊನೆಯುಸಿರು । ಶುಭ ಶಾಂತಿಯ ಧಾಮದ ತಿಳಿ ಹಸಿರು ।
ಸಾಮರಸ್ಯದ ಸುರಾಮವಾಗಿಹುದು ॥ (ಪುಟ 37)

ರಾಗ : ಬಿಲಹರಿ ತಾಳ : ಮಟ್ಟೆ

ಅನುಸರಣೆಯ ಅನುಕರಣೆಯ ಫಲವು ನಂಬುಗೆ । ಅದರಿಂದ ಪ್ರೇಮ ।
ಅನುಭವದ ಸ್ವಯಂ ಪ್ರಕಾಶಕೆಲ್ಲಿ ಇಂಬಿದೆ ॥
ನೆನಹಿನೊಳಾಸಕ್ತಿ ಇರಲು ಜನುಮ ಜನುಮ ತಾಳಬೇಕು ।

ಗುಣದ ನಶ್ವರವನು ತಿಳಿಯೆ ।
ಮನದ ಭ್ರಮೆಯು ನಾಶವಹುದು ॥ (ಪುಟ 37)
ರಾಗ : ಹರಿಕಾಂಬೋಧಿ   ತಾಳ : ಅಷ್ಟ
ಬುದ್ಧ ಪೂರ್ವಕ ಭಾವ ನಿಗ್ರಹಿಪುದು । ತಿದ್ದುವಿಕೆಯ ಉದ್ದವ ।
ಶುದ್ಧ ಜ್ಞಾನವು ಶುಷ್ಕವಲ್ಲ ನಿರ್ಮಲ ಪ್ರೇಮ । ಸಿದ್ಧಿಯಿಲ್ಲದ ಮೋಕ್ಷ ಬಿಸಿಲ ಮರಿಚೀಕೆ । (ಪುಟ 37)

ಈ ಮೇಲಿನ ಸಾಲುಗಳಲ್ಲಿ ಹೊಸ್ತೋಟರ ಆಧ್ಯಾತ್ಮಿಕ ಚಿಂತನೆ ಹಾಗೂ ವೈಚಾರಿಕ ದೃಷ್ಟಿಕೋನವನ್ನು ಕಾಣಬಹುದು. "ಕೃಷ್ಣ ನಿರ್ಯಾಣ"ದ ಕೊನೆಯಲ್ಲಿ ಬರುವ ಭಾಮಿನಿಯು ಅತ್ಯಂತ ಅರ್ಥಪೂರ್ಣ ಸಂಸ್ಕೃತದಲ್ಲಿ ಉಕ್ತವಾದ ಗಹನವಿಚಾರವನ್ನು ಸರಳವಾಗಿ ಕನ್ನಡಿಸಿ ಕೊಟ್ಟಿದ್ದಾರೆ. ಅದು "ಪೂರ್ಣವಿದ ಕೂಡಿಸಿದರೂ ಸಂಪೂರ್ಣ ತಾತ್ವಿಕ ಗಣನೆಯೊಳು ಪರಿಪೂರ್ಣದಿಂದ ಪೂರ್ಣವನು ಕಳೆಯಲು ಪೂರ್ಣವೇ ಶೇಷ" ಎಂಬ ವಾಕ್ಯವಾಗಿದೆ. "ಉಷಾ ಪರಿಣಯ"ದಲ್ಲಿ "ಹರಿಹರರೊಂದು ಎಂಬುದನು । ಈ । ಧರೆಯಲಿ ಸಾಕ್ಷಾತ್ಕರಿಸಿತೋರ್ದೆ ನೀನು ॥ ಸ್ಥಿರವಾಗಲ್ಯೆ ನಿನ್ನ ಕೀರ್ತಿ । ಮನೋಹರವಾಗಿ ಮತಪಂಥ ಮೆರೆಯಲಿ ಭಕ್ತಿ"॥ (ಪುಟ 111) ಎಂಬುದಂತೂ ಈ ಕಾಲಕ್ಕೆ ತೀರಾ ಅಗತ್ಯವಾದ ಹೇಳಿ ಮಾಡಿಸಿದ ಸಾಲುಗಳಾಗಿವೆ.

ಹೊಸ್ತೋಟರವರು ಪೌರಾಣಿಕ ಪ್ರಸಂಗಗಳನ್ನು ರಚಿಸುವಾಗಲೂ ಒಮ್ಮೊಮ್ಮೆ ಸಮಕಾಲೀನ ವಿಚಾರಗಳನ್ನು, ಮೌಲ್ಯಗಳನ್ನು, ಆವರಣ ಭಂಗವಾಗದಂತೆ ತರುತ್ತಾರೆ. ಕತೆ ಭಾಗವತದ್ದಾದರೂ ಹೊಸಕಾಲಕ್ಕೆ ಅಗತ್ಯವಾದ ಜೀವನ ಪರವಿಚಾರವನ್ನು ನಿಸರ್ಗ ರಕ್ಷಣೆಯ ಅಗತ್ಯವನ್ನು ಅಲ್ಲಲ್ಲಿ ತಂದಿದ್ದಾರೆ. ಕೆಲವೊಮ್ಮೆ ಮೂಲದಲ್ಲಿ ಇಲ್ಲದಿದ್ದರೂ ಸಮಂಜಸವಾಗಿ ಹೊಸ ಬದಲಾವಣೆ ಮಾಡಿಕೊಂಡಿದ್ದಾರೆ. "ಕಾಲಯವನ ಸಂಹಾರ" ಪ್ರಸಂಗದಲ್ಲಿ ಗೋಮಾಂತಕ ಗಿರಿಯಲ್ಲಿ ಗರುಡನ ಭೆಟ್ಟಿಯನ್ನು ಮಾಡಿಸಿ, ಆತನು ಕೃಷ್ಣನ ಸೇವೆಗೆ ನಿಲ್ಲುವುದನ್ನು ತಿಳಿಸಿದ್ದಾರೆ. ಇದರಿಂದ ಗೋಮಾಂತಕ ಪರ್ವತದಿಂದ ಕೃಷ್ಣಬಲರಾಮರು ಜರಾಸಂಧನಿಂದ ತಪ್ಪಿಸಿಕೊಂಡು ನೇರವಾಗಿ ಮಧುರೆಗೆ ಬರಲು ಸಾಧ್ಯವಾಗುತ್ತದೆ. ಈ ಬದಲಾವಣೆ ಸಮಂಜಸವಾಗಿದೆ. ತಾರ್ಕಿಕವಾಗಿದೆ. ಅಲ್ಲಿ ಬರುವ ಕೃಷ್ಣ ಬಲರಾಮರ ಸಂವಾದದ ಪದ್ಯಕೂಡ ಚೆನ್ನಾಗಿದೆ. ಕೃಷ್ಣನ ಮಾತು ಯುಕ್ತಿ ಯುಕ್ತವಾಗಿದೆ. ಬೆಸ್ತುಬಿದ್ದ ಜರಾಸಂಧ "ಶ್ರೀಕೃಷ್ಣನು ತಾನಾಗಿ ಸುಡುಗಾಡ ವಶವಪ್ಪನು" ಎನ್ನುತ್ತಾ "ಸುಟ್ಟೆನಾ ಕೃಷ್ಣನನ್ನು ಅಳಿಯನಿಗೆ ಕೊಟ್ಟೆನುರಿತರ್ಪಣವನು। ಇಷ್ಟಾರ್ಥ ಸಂದುದೀಗ" ಎಂದು ಬೀಗುತ್ತಾ ತನ್ನ ಪಟ್ಟಣಕ್ಕೆ

ಮರಳುತ್ತಾನೆ. ಈ ಭಾಗ ಸಂಪೂರ್ಣ ಕಾವ್ಯಾತ್ಮಕವಾಗಿದೆ. ಇದೇರೀತಿ ಗಂಡಹೆಂಡಿರ ಜಗಳದ ಮಾದರಿಯನ್ನು ಕೃಷ್ಣಸತ್ಯಭಾಮೆಯರ ಮಾತಿನ ಮೂಲಕ ಮಂಜುನಾಥ ಭಾಗವತರು ನೀಡಿದ್ದಾರೆ. ಕೃಷ್ಣ ದೇವರಾದರೂ ಪತ್ನಿಯೊಂದಿಗೆ ಸಾಮಾನ್ಯರಂತೆ ವರ್ತಿಸುತ್ತಾನೆ. ಭೌಮಾಸುರನಲ್ಲಿಗೆ ಯುದ್ಧಕ್ಕೆ ತೆರಳುವ ಕೃಷ್ಣನಲ್ಲಿ ಸತ್ಯಭಾಮೆಯು ಬಂದು ತಾನೂ ಜೊತೆಯಲ್ಲಿ ಬರುವುದಾಗಿ ಹೇಳಿದಾಗ "ಧುರ ಕಷ್ಟಕರ, ತೊಂದರೆ ಆಗುತ್ತದೆ ನೀನು, ಬರುವುದು ಬೇಡ" ಎನ್ನುತ್ತಾನೆ. ಆಗ ಸತ್ಯಭಾಮೆ

ರಾಗ : ಶಂಕರಾಭರಣ ತಾಳ : ಮಟ್ಟೆ

ನಾನು ಬಂದರೆ ಬರುವುದೇನು ತೊಂದರೆ ॥ ಪ ॥
ಪ್ರಾಣಕಾಂತ ಎನ್ನ ಬಿಟ್ಟು ನೀನು ಪೋದರೆನಗೆ ಸಿಟ್ಟು ।
ಮಾಣದನ್ನಹಾರ ಬಿಟ್ಟು ಪ್ರಾಣ ಕಳೆದು ಕೊಳುವ ಪಟ್ಟು ॥ 1 ॥
ಅದಕ್ಕೆ ಕೃಷ್ಣ –
ಮೊಂಡುತನ ವಿದೇಕೆ ಸಾಕೆ । ಹೆಂಡತಿಯರ ಕಾಟವರಿತೆ ।
ಚಂಡಿಯಾಗಬೇಡ ಚದುರೆ । ಖಂಡಿತ ಕರೆದೊಯ್ವೆ ಬಾರೆ ॥ 2 ॥
(ಪುಟ 93)

ಈ ಮಾತುಕತೆಯೆಲ್ಲಾ ಸಾಮಾನ್ಯರಾಡುವಂತಿದೆ. "ರುಕ್ಮಿಣಿ ಹರಣದಲ್ಲಿ" ರುಕ್ಮಿಣಿಯೊಂದಿಗೆ ನಡೆದುಕೊಳ್ಳುವ ಮಾತನಾಡುವ ಬಗೆಯಲ್ಲಾ ಸಾಮಾನ್ಯರ ವ್ಯವಹಾರದಂತಿದ್ದು ಪ್ರೇಕ್ಷಕರಿಗೆ ಬಹು ಹತ್ತಿರವಾಗುತ್ತದೆ.

ಬಲಭದ್ರನು "ತಲೆಯ ಜುಟ್ಟವ ಕತ್ತರಿಸು ಬದುಕಲಿ ಪಾಪಾ" ಎಂದಾಗ

"ರುಕ್ಮಿಯ ಮುಡಿಯ ಕತ್ತರಿಸಿ ಬಿಟ್ಟನು ಕೃಷ್ಣ । ನಕ್ಕರು ಕಂಡವರು ॥

ಎಂಬ ಸಾಲುಗಳೆಲ್ಲ ಪ್ರೇಕ್ಷಕರಿಗೆ ಬಹು ಹತ್ತಿರವಾಗುತ್ತವೆ. ಖಾಂಡವ ವನ ದಹನಕ್ಕೆ ಪ್ರತಿಯಾಗಿ ಅರ್ಜುನನಿಗೆ "ಪ್ರಕೃತಿಯ ಶಾಪ ಮಾರ್ದನಿಸುವುದು ಮುಂದೆ" ಎಂದು ದೇವೇಂದ್ರ ತಿಳಿಸುತ್ತಾನೆ. "ಸುರಪನೆಂದುದು ಸರಿ ಪ್ರಕೃತಿಯ ಕೆಡಿಸಲು ಪರಿಣಾಮ ಒಳಿತಾಗದು" ಎಂದು ಕೃಷ್ಣನು ಕೂಡಾ "ಕಾಳಿಂದೀ ವಿವಾಹ" ಪ್ರಸಂಗದಲ್ಲಿ ದನಿಗೂಡಿಸುತ್ತಾನೆ.

ಭಾಗವತಕ್ಕೆ ಸಂಬಂಧಿಸಿದಂತೆ ಭಾಗವತರು ಬರೆದಿರುವ ಈ ಪ್ರಸಂಗ ಗುಚ್ಛಗಳಲ್ಲಿ ಅನೇಕ ಉತ್ತಮ ನುಡಿಕಟ್ಟುಗಳ, ಜನರ ನಂಬಿಕೆಗಳ, ಆಚಾರವಿಚಾರಗಳ ಸಾರವು ಸರಳವಾದ ಸಾಲುಗಳಲ್ಲಿ ಬಂದಿವೆ. ಪ್ರಸಂಗದ ವಾಕ್ಯದಲ್ಲಿ ಇಣುಕುವ ಈ ಸಾಲುಗಳು ಸಾಮಾನ್ಯರ ಬದುಕಿಗೆ ಅಗತ್ಯವಾಗುವಂತಹವು.

ಹಣೆಬರಹವ ಬದಲಿಸಬಾರದೈ (ಪುಟ 30)

ನಿಯತಿ ವಿಧಿಯಾಗಿ ಕಾಲವ ಬೆರೆತಿದೆಯಲ್ಲ (ಪುಟ 12)

ಭೂತ ಬಡಿಯಿತೆ ಬಾಯಿಗೆ (ಪುಟ 50)

ಯಾವ ಜನ್ಮದ ಋಣವೋ ನಾನರಿಯೆನು (ಪುಟ 107)

ಆಯಿತೇ ಯುದ್ಧವಾಯಿತೇ । ಹೋಯಿತೇ ಮಾನ ಹೋಯಿತೇ ।

(ಪುಟ 97)

ಹಣೆಬರಹವು ಅಣಕವಾಡಿತು (ಪುಟ 59)

ಬಾಳಿನಲ್ಲಿ ಪರಪೀಡೆಗೈಯ್ಯದೇ ಬಾಳು ॥ (ಪುಟ 12)

ಇದೇ ಒಂದು ಬಗೆಯಾದರೆ ಇನ್ನು ಕೆಲವು ಲಲಿತ ಶೈಲಿಯಲ್ಲಿರುವ ಸಾಲುಗಳನ್ನು ಓದಿದಾಗ ಮನದಲ್ಲಿ ಸಂತೋಷ ಕೊಡುವ, ರಿಂಗಣಿಸುವ ಗುಣಹೊಂದಿದೆ. ಅವುಗಳೆಂದರೆ –

ನೀನೇ ಜಗದೋದ್ಧಾರ ಲೀಲಾವತಾರ ಜ್ಞಾನತತ್ವಪ್ರಸಾರ ನಿಗಮ ವಿಚಾರ
(ಪುಟ 95)

ನಿನ್ನ ಹರಕೆಯ ಹೊತ್ತು ನಡೆವೆವು ಪುಣ್ಯಲೋಕವ ಕೊಟ್ಟು ತಣಿದೆವು
(ಪುಟ 95)

ರಾಮ ನೀ ಗುಣಧಾಮ ನಿಸ್ಸೀಮ ಸಂಗ್ರಾಮ ಭೀಮ ರಾಮಣೀಯಕ
ರೂಪ ಶುಭಕರ (ಪುಟ 75)

ಏನಿದು ಕೃಷ್ಣ ಏನಿದು ॥ ಏನಿದು ನಿನ್ನಂತರಂಗವೋ ರಂಗ ನಾನಾ
ರಿತಿಯಲ್ಲಿ ಬಣ್ಣಿಪೆ ಇವಳಂಗ (ಪುಟ 100)

ಪರಮಪುರುಷನೆ ನಿನ್ನ ಮಹಿಮೆಯ ಪರಿಯನರಿವುದಸಾಧ್ಯ ಭಕ್ತರ ಪೊರೆವೆ
ದಯದಲಿ (ಪುಟ 122)

ಹೀಗೆ ಹೊಸ್ತೋಟ ಮಂಜುನಾಥ ಭಾಗವತರ "ಶ್ರೀಕೃಷ್ಣ ಮಹಿಮೆ" ಎಂಬ ಭಾಗವತ ಪ್ರಸಂಗಗಳ ಗುಚ್ಛ ವೈವಿಧ್ಯಮಯ ಅಂಶಗಳಿಂದ ಕೂಡಿ ಬಂದಿದೆ. ಶತಾವಧಾನಿ ಆರ್.ಗಣೇಶರ ಮುನ್ನುಡಿ ಪುಸ್ತಕಕ್ಕೆ ಒಂದು ಉತ್ತಮ ಪ್ರವೇಶಿಕೆಯಂತಿದ್ದು ಕಳಶದೋಪಾದಿಯಲ್ಲಿದೆ. ಪ್ರೊ.ಎಂ.ಎ. ಹೆಗಡೆಯವರು ಹೇಳಿದಂತೆ ಭಾಗವತರಿಗೆ ಪ್ರಸಂಗ ರಚನೆಯು ತಪಸ್ಸಿನ ಒಂದು ಅಂಗ ಎಂಬುದು ಸತ್ಯದ ಮಾತು. ಸಂಖ್ಯೆಯಲ್ಲಿ

ಮಾತ್ರವಲ್ಲದೇ ಮೌಲ್ಯದಲ್ಲೂ ಹೆಚ್ಚಿನ ಪ್ರಸಂಗಗಳನ್ನು ಯಕ್ಷ ಸಾಹಿತ್ಯಕ್ಕೆ ಕೊಡುಗೆ ನೀಡಿರುವ ಹೊಸ್ತೋಟರು ನಮ್ಮ ಕಾಲದಲ್ಲಿ ಇದ್ದವರೆಂಬುದೇ ನಾವೆಲ್ಲರೂ ಧನ್ಯತೆ ತಾಳಬೇಕಾದ ಅಂಶವಾಗಿದೆ.

(ಹೊಸ್ತೋಟ ಮಂಜುನಾಥ ಭಾಗವತರ "ಅಭಿನಂದನಾ ರೂಪ"ದ ಸಂಸ್ಮರಣ ಗ್ರಂಥ "ಯಕ್ಷಹಂಸಕ್ಕೆ" ಬರೆದ ಲೇಖನ)

*

ಯಕ್ಷಗಾನಕ್ಕೆ ಬಲಕೊಟ್ಟ "ಅಣ್ಣ ಮಹಾಬಲ"

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದ ದಿ.ಪ್ರೊ..ಎಂ.ಎ. ಹೆಗಡೆಯವರು ತಮ್ಮ ಕರ್ತೃತ್ವ ಶಕ್ತಿಯ ಮೂಲಕ ಅಕಾಡೆಮಿಯನ್ನು ಮುಂಚೂಣಿಗೆ ತಂದವರು. ಅವರ ಕಾಲಾವಧಿಯಲ್ಲಿ ಯಕ್ಷಗಾನ ಅಕಾಡೆಮಿ ಅನೇಕ ವಿನೂತನ, ವೈಶಿಷ್ಟ್ಯಮಯ ಕಾರ್ಯಗಳನ್ನು ಹಮ್ಮಿಕೊಂಡು ಕಲಾವಿದರ, ಆಸಕ್ತರ ಸನಿಹಕ್ಕೆ ಬರುವಂತಾಯಿತು. ಪಡುವಲಪಾಯ-ಮೂಡಲಪಾಯ, ತೆಂಕುತಿಟ್ಟು-ಬಡಗುತಿಟ್ಟುಗಳೆಂಬ ಭೇದವಿಲ್ಲದೆ ಎಲ್ಲರನ್ನೂ ಸಮಾನ ದೃಷ್ಟಿಕೋನದಿಂದ ನೋಡುತ್ತಾ, ಎಲ್ಲರ ಪ್ರೀತಿ, ವಿಶ್ವಾಸ, ಗೌರವಗಳನ್ನು ಸಂಪಾದಿಸಿದ್ದರು. ಅಂತಹ ಧೀಮಂತ ವ್ಯಕ್ತಿ ಇನ್ನಿಲ್ಲವಾಗಿ ವರ್ಷಗಳೇ ಸಂದಿವೆ. ಕೊರೋನಾದ ಮಹಾಮಾರಿ ಅವರನ್ನು ನಮ್ಮಿಂದ ಕಸಿದುಕೊಂಡಿತು. ಶ್ರೀ ಸೋಂದಾ ಸ್ವರ್ಣವಲ್ಲಿ ಸಂಸ್ಥಾನದ ಆಶ್ರಯದಲ್ಲಿ ಯಕ್ಷ ಶಾಲ್ಮಲಾ (ರಿ) ಸಂಸ್ಥೆಯು 2022ರ ಜುಲೈ 9 ರಂದು ದಿ.ಎಂ.ಎ. ಹೆಗಡೆಯವರನ್ನು ಸಂಸ್ಮರಣೆ ಮಾಡುವ ಕಾರ್ಯವನ್ನು ನಡೆಸಿದರು. ಅಂದು ಇಡೀ ದಿನದ ಕಾರ್ಯಕ್ರಮದಲ್ಲಿ ವಿಚಾರ ಗೋಷ್ಠಿ, ಸಂಸ್ಮರಣೋಪನ್ಯಾಸ, ತಾಳಮದ್ದಲೆ ಹಾಗೂ ಯಕ್ಷಗಾನ ಪ್ರದರ್ಶನವೇ ಮುಂತಾದ ವೈವಿಧ್ಯಮಯ ಕಾರ್ಯಗಳಲ್ಲಿ ಆ ಹಿರಿಯ ಚೇತನವು ಯಕ್ಷಗಾನಕ್ಕೆ ಕೊಟ್ಟ ಕೊಡುಗೆಗಳನ್ನು ನೆನಪಿಸಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಸ್ಮರಣಸಂಚಿಕೆಯನ್ನು ತರಲಾಯಿತು. ಇದಲ್ಲದೆ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದ ಇನ್ನೊಂದು ಸಂಗತಿಯಾದರೆ ವಿಜಯವಾಣಿ ಸಂಪಾದಕ ಬಳಗದಲ್ಲಿರುವ ಶ್ರೀ ರಾಜಶೇಖರ ಜೋಗಿನ್ಮನೆಯವರು ಬರೆದಿರುವ "ಅಣ್ಣ ಮಹಾಬಲ" ಎಂಬ ವ್ಯಕ್ತಿಚಿತ್ರದ ಹೊತ್ತಿಗೆಯನ್ನು ಬಿಡುಗಡೆಗೊಳಿಸಲಾಯಿತು. ಇಲ್ಲಿ ಲೇಖಕರು ಎಂ.ಎ. ಹೆಗಡೆಯವರ ಬಹುಮುಖಿ ವ್ಯಕ್ತಿತ್ವವನ್ನು ಬಹಳ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಅಣ್ಣನೆಂಬ ಮಮಕಾರವಿಲ್ಲದೆ, ವ್ಯಕ್ತಿಚಿತ್ರಣದ ಮೂಲಕ ವಿಶಿಷ್ಟ ವ್ಯಕ್ತಿತ್ವವೊಂದರ ದರ್ಶನ ಈ ಕೃತಿಯಿಂದ ಲಭಿಸುತ್ತದೆ.

ಈ ಗ್ರಂಥಕ್ಕೆ ಮುನ್ನುಡಿಯ ರೂಪದಲ್ಲಿ "ಇಬ್ಬಗೆಯ ನೆನಪುಗಳು" ಎಂಬ ಲೇಖನವಿದೆ. ಕನ್ನಡದ ಖ್ಯಾತ ಚಿಂತಕ ಹೆಗ್ಗೋಡಿನ ನೀನಾಸಂನ ಶ್ರೀ ಕೆ.ವಿ.ಅಕ್ಷರ ಅವರು ಬಹು ಆತ್ಮೀಯವಾಗಿ ಹೆಗಡೆಯವರೊಂದಿಗಿನ ಸಂಬಂಧದ ನೆನಪುಗಳನ್ನು ಬಿಚ್ಚಿಟ್ಟಿದ್ದಾರೆ. ಹೆಗಡೆಯವರ ಚಿಂತನಾ ವಿಧಾನವನ್ನು, ವಾಸ್ತವವಾದಿ ನೋಟವನ್ನು, ಸರಸ ನಡವಳಿಕೆಯನ್ನು ಪ್ರಸ್ತಾಪಿಸಿದ್ದಾರೆ. ಹುಟ್ಟಿದ್ದು ಜೋಗಿನ್ಮನೆಯಲ್ಲಾದರೂ ಮಹಾಬಲೇಶ್ವರ ಹೆಗಡೆಯವರು ಬೆಳೆದದ್ದು ಸೋದರ ಮಾವನ ಮನೆಯಿರುವ ದಂಟಕ್ಕಲ್. ಆದ್ದರಿಂದ ಇವರ ಹೆಸರಿಗೆ ದಂಟಕ್ಕಲ್ ಸೇರಿಕೊಂಡು ಬಂದಿದೆ. ಅಣಪ್ಪ ಹೆಗಡೆಯವರ 8 ಮಕ್ಕಳಲ್ಲಿ ಇವರು ದೊಡ್ಡ ಮಗನಾದರೆ, ರಾಜಶೇಖರರು 8ನೇ ಮಗ. ಇಬ್ಬರ ನಡುವೆ 25 ವರ್ಷಗಳ ಅಂತರ. ಅಣ್ಣನ ಸಾಹಿತ್ಯದ ಸಾಧನೆಯನ್ನು, ಯಕ್ಷಗಾನ ರಂಗದಲ್ಲಿ, ಕ್ರಮಿಸಿದ ದೂರವನ್ನು ಸಂಸ್ಕೃತ ವಾಙ್ಮಯದಲ್ಲಿ ಗಳಿಸಿದ ಹಿರಿಮೆಯನ್ನು ಲೇಖಕರು ಮೂಕವಿಸ್ಮಿತರಾಗಿ ಗಮನಿಸಿ ಈ ಕೃತಿಯಲ್ಲಿ ಪಡಿಮೂಡಿಸಿದ್ದಾರೆ. ಕೌಟುಂಬಿಕವಾಗಿ ಅವರಿದ್ದ ಬಗೆ, ಸಂಬಂಧಿಕರಲ್ಲಿ, ಗೆಳೆಯರಲ್ಲಿ ಅವರು ನಡೆದುಕೊಳ್ಳುತ್ತಿದ್ದ ರೀತಿ, ಇವೆಲ್ಲವನ್ನು ಸಾಧಾರವಾಗಿ ಚರ್ಚಿಸಲಾಗಿದೆ. "ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ" ಎಂಬಂತೆ ನೋಡಲು ಗಡುಸಿನ ವ್ಯಕ್ತಿಯಂತೆ ಕಂಡರೂ ಅಂತರ್ಯದಲ್ಲಿ ಬಹಳ ಮೃದುವಾಗಿರುತ್ತಿದ್ದರು ಎಂದು ಆತ್ಮೀಯವಾಗಿ ಬಣ್ಣಿಸಿದ್ದಾರೆ. ಅವರ ಕಲಿಕೆಯ ವಿಚಾರವಾಗಿ, ವೃತಿಯಲ್ಲಿನ ಘಟನೆಗಳನ್ನು ಅರ್ಥಧಾರಿಗಳಾಗಿ ಪ್ರವಾಸ ಮಾಡಿದ ವಿಚಾರಗಳನ್ನು ಬೇರೆಯವರ ಮೂಲಕ ಕೇಳಿ ತಿಳಿದು, ಅವರ ಬಾಯಿಂದ ಬಂದ ಮಾತುಗಳನ್ನು ಹಾಗೆಯೇ ದಾಖಲಿಸಿದ್ದಾರೆ. ಆದ್ದರಿಂದ ಕೃತಿಗೆ ಅಥೆಂಟಿಸಿಟಿ ಲಭಿಸಿದೆ.

ಎಂ.ಎ. ಹೆಗಡೆಯವರ ಬಾಲ್ಯದ ಕಷ್ಟದ ದಿನಗಳಲ್ಲಿ ಅವರು ನಡೆದುಕೊಂಡ ರೀತಿ, ಕಲಿಕೆಗಾಗಿ ಅವರು ಪಟ್ಟಂತಹ ಕಷ್ಟ, ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆಯುವಾಗ ಪಟ್ಟಂತಹ ಬವಣೆಗಳನ್ನೆಲ್ಲ ಕಣ್ಣಿಗೆ ಕಟ್ಟುವಂತೆ ರಾಜಶೇಖರರು ಚಿತ್ರಿಸಿದ್ದಾರೆ. ಗುರುಗಳಾದ ಹಿರಿಯ ಸಾಹಿತಿ ಬಿ.ಹೆಚ್. ಶ್ರೀಧರರು ಖ್ಯಾತ ಅರ್ಥಧಾರಿ ಕೆರೆಕೈ ಕೃಷ್ಣಭಟ್ಟರು ಸಂಸ್ಕೃತದಲ್ಲಿ ಹೆಗಡೆಯವರು ಸಾಧಿಸಿದ ಪಾಂಡಿತ್ಯಕ್ಕೆ ಕಾರಣರಾದವರು. ಲೇಖಕರು ಆ ಕಾಲದ ಅವರ ಒಡನಾಡಿಗಳನ್ನು ಸಂಪರ್ಕಿಸಿ ಹೆಗಡೆಯವರ ಬದುಕಿನ ಅನೇಕ ವಿಚಾರಗಳನ್ನು ತಿಳಿಸಿಕೊಟ್ಟಿದ್ದಾರೆ. ತಾಳಮದ್ದಳೆಯ ಇನ್ನೊಬ್ಬ ಪ್ರಸಿದ್ಧ ಅರ್ಥಧಾರಿ ಎಂ.ಪ್ರಭಾಕರ ಜೋಷಿಯವರ ಗೆಳೆತನ 50 ವರ್ಷಕ್ಕೂ ಹೆಚ್ಚು ಕಾಲದ್ದು.

ಶೇಣಿ ಗೋಪಾಲಕೃಷ್ಣ ಭಟ್ಟರೊಂದಿಗೆ ತಾಳಮದ್ದಲೆಯ ಅರ್ಥಧಾರಿಯಾಗಿ ಹೆಗಡೆಯವರು ಸಾಕಷ್ಟು ಕಡೆ ಭಾಗವಹಿಸಿದ್ದರು. ಮಲ್ಪೆವಾಸುದೇವ ಸಾಮಗರ

ವಿನೂತನ ಪರಿಕಲ್ಪನೆಯಾದ "ಸಂಯಮ"ದ ಒಡನಾಟದಲ್ಲಿ ಸಾಕಷ್ಟು ತಿರುಗಾಟವನ್ನು ಮಾಡಿ ಅರ್ಥಗಾರಿಕೆಯಲ್ಲಿ "ಸೈ" ಎನಿಸಿಕೊಂಡಿದ್ದರು. "ಸಂಯಮ"ದ ಮೂಲಕವಾಗಿಯೇ ಐರೋಡಿ ರಾಜಶೇಖರ ಹೆಬ್ಬಾರ ಹಾಗೂ ಉದ್ಯಮಿ ವೈಕುಂಠ ಹೇರ್ಳೆ, ನಿಟ್ಟೂರು ಅನಂತ ಹೆಗಡೆಯವರ ಸಖ್ಯ ಲಭಿಸಿತು. ಹೀಗೆ ತಾಳಮದ್ದಲೆ ವಲಯದಲ್ಲಿ ಎಂ.ಎ.ಹೆಗಡೆಯವರು ಖ್ಯಾತರಾದರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗ ಪ್ರಭಾಕರ ಜೋಷಿಯವರೊಂದಿಗೆ ಅಂಟಿದ ಗೆಳೆತನದ ನಂಟು ಕಡೆಯವರೆಗೂ ಬಿಟ್ಟಿಲ್ಲ. ತಾಳಮದ್ದಳೆಯಲ್ಲಿ ಪರಸ್ಪರ ವಿರೋಧವಾಗಿದ್ದು ಅರ್ಥ ಹೇಳಿದ್ದರೂ ಭಾರತೀಯ ದರ್ಶನ ಶಾಸ್ತ್ರದ ವಿಚಾರದಲ್ಲಿ ಅವರಿಬ್ಬರೂ ಸಮಾನ ಮನಸ್ಕರಾಗಿದ್ದರು. ಅವರಿಬ್ಬರೂ ಸಹಲೇಖಕರಾಗಿ ಹೊರಬಂದ ಕೃತಿ "ಭಾರತೀಯ ತತ್ವ ಶಾಸ್ತ್ರಪ್ರವೇಶ"ಕ್ಕೆ ಕನ್ನಡ ಸಾರಸ್ವತಲೋಕದಲ್ಲಿ ವಿಶಿಷ್ಟ ಸ್ಥಾನವಿದೆ. ಜೋಷಿಯವರೊಂದಿಗೆ ಸೇರಿ ಗಂಭೀರ ಕೃತಿಯನ್ನು ಹೊರತಂದಿದ್ದಾರೆ. ತತ್ವಶಾಸ್ತ್ರಕ್ಕೆ ಸಂಬಂಧಿಸಿದಂತೆ ಅನೇಕ ಅನುವಾದಗಳನ್ನು ಕನ್ನಡಕ್ಕೆ ತಂದರು. ಈ ಸಂಬಂಧ ಪ್ರಶಸ್ತಿಯನ್ನು ಪಡೆದರು. ಭಗವದ್ಭಕ್ತಿ ರಸಾಯನಂ, ಸಿದ್ಧಾಂತ ಬಿಂದು, ಪರಮಾನಂದ ಸುಧಾ, ಶಬ್ದ ಮತ್ತು ಜಗತ್ತು, ಗೀತಾ ಗೂಡಾರ್ಥ ದೀಪಿಕಾ ಮುಂತಾದ ಕೃತಿಗಳ ಅನುವಾದ ಮಾಡಿದ್ದರಿಂದ ಹೊಸ ವಿಚಾರಗಳು, ಅನೇಕ ವೇದಾಂತ ವಿಷಯಗಳು ಕನ್ನಡಕ್ಕೆ ಬಂದಂತಾಯಿತು. ಅವರ ಕೃತಿಗಳಲ್ಲಿ ಗಟ್ಟಿ ಚಕ್ಕುಲಿಯು ಇವೆ. ಲಘು ಚಕ್ಕುಲಿಯು ಇವೆ ಎಂದು ಲೇಖಕರು ತಿಳಿಸುತ್ತಾರೆ. ಯಕ್ಷಗಾನಕ್ಕೆ ಸಂಬಂಧಿಸಿದಂತೆ ಹೆಗಡೆಯವರ ಸಂಪರ್ಕದಲ್ಲಿರುವವರು ಹೇಳಿದ ಅನೇಕ ವಿಚಾರಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ. ಪ್ರಸಂಗಕಾರರಾಗಿರುವ ಎಂ.ಎ.ಹೆಗಡೆಯವರಿಗೆ ಖ್ಯಾತಿ ತಂದುಕೊಟ್ಟಿದ್ದು ಅವರ "ಸೀತಾವಿಯೋಗ". ಆ ಪ್ರಸಂಗ ರಚನೆಯ ಹಿನ್ನೆಲೆಯನ್ನು, ಮುಂದೆ ಅದು ಪ್ರದರ್ಶನ ಹಾಗೂ ತಾಳಮದ್ದಳೆಯಲ್ಲಿ ಯಶಸ್ಸುಗೊಂಡ ಬಗೆಯನ್ನು ಕಂಡು ಆನಂದ ತುಂದಿಲರಾದ ಸಂಗತಿಯ ದಾಖಲೆ ಇಲ್ಲಿದೆ. ಅನ್ಯಾಯದ ವಿರುದ್ಧ ಸಿಡಿದೇಳುತ್ತಿದ್ದ ಹೆಗಡೆಯವರು "ಲವಕುಶ" ಎಂಬ ಸಿ.ಡಿ.ಯಲ್ಲಿ ತಮ್ಮ ಸೀತಾವಿಯೋಗ ಒಪ್ಪಿಗೆ ಇಲ್ಲದೆ ಬಂದದ್ದು ನೋಡಿ ಮೊದಲಿಗೆ ಪತ್ರ ಬರೆದು ಎಚ್ಚರಿಸುತ್ತಾರೆ. ಮುಂದೆ ಅವರು ಉತ್ತರಿಸದಿದ್ದಾಗ ಪೊಲೀಸ್ ಠಾಣೆಗೆ ದೂರು ನೀಡಿ ಅವರಿಂದ ಮುಚ್ಚಳಿಕೆ ಬರೆಸಿಕೊಳ್ಳುತ್ತಾರೆ. ಇದು ಯಕ್ಷಗಾನ ರಂಗದಲ್ಲಿ ಇದುವರೆಗೆ ನಡೆಯದ ಘಟನೆ. ಇದರ ನಿರೂಪಣೆಯಲ್ಲಿ ರಾಜಶೇಖರ ಜೋಗಿನ್ಮನೆಯವರು ಅಣ್ಣನ ನಿಷ್ಠುರ ವ್ಯಕ್ತಿತ್ವದ ಪರಿಚಯ ಮಾಡಿಕೊಡುತ್ತಾರೆ. ಯಕ್ಷಸಾಹಿತ್ಯಕ್ಕೆ ಸಂಬಂಧಿಸಿದಂತೆ ತಂತ್ರಜ್ಞಾನ ಬಳಕೆಯನ್ನು ನಾನಾರೂಪದಲ್ಲಿ ಮಾಡಿ. ಪ್ರಸಂಗಗಳು ಸರ್ವರಿಗೂ ಸರ್ವಕಾಲಕ್ಕೂ ಲಬಿಸುವಂತೆ ಮಾಡುವಲ್ಲಿ ಬೆಂಗಳೂರಿನ ಯಕ್ಷವಾಹಿನಿಯ ಪಾತ್ರವು ಹಿರಿದು. ದೂರದೃಷ್ಟಿಯುಳ್ಳ

ಹೆಗಡೆಯವರು ಈ ಸಂಸ್ಥೆಯ ಯಕ್ಷ ಪ್ರಸಂಗ ಕೋಶ ಯೋಜನೆಯು ಮುಂದಿನ ದಿನಮಾನಗಳಲ್ಲಿ ತೀರಾ ಅಗತ್ಯ ಎಂಬುದನ್ನು ಮನಗಂಡು, ತಮ್ಮ ಅಕಾಡೆಮಿಯ ಮೂಲಕ ಪ್ರೋತ್ಸಾಹಿಸಿದ್ದು ಯಕ್ಷಸಾಹಿತ್ಯ ದೃಷ್ಟಿಯಿಂದ ಮಹತ್ವದ್ದು. ಈ ವಿಚಾರವನ್ನು ಲೇಖಕರು ಪ್ರಸ್ತಾಪಿಸಿ ಹೆಗಡೆಯವರ ದೂರದರ್ಶಿತ್ವವನ್ನು ಓದುಗರಿಗೆ ಪರಿಚಯಿಸುತ್ತಾರೆ. ಕನ್ನಡದ ಖ್ಯಾತ ಕವಿ ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರೊಂದಿಗಿನ ಆತ್ಮೀಯ ಕ್ಷಣಗಳ ವಿವರಣೆಯು ಡಾ. ಹೆಚ್.ಎಸ್.ವಿ.ಯವರ ಮಾತಿನಲ್ಲೇ ಬಂದಿದೆ. ಕೊರೋನಾ ಕಾಲದಲ್ಲಿ ಯಕ್ಷಗಾನ ಕಲಾವಿದರು ಪ್ರದರ್ಶನವಿಲ್ಲದೆ ಮೂಕರಾದಂತಾದಾಗ ಅಕಾಡೆಮಿಯು "ಮಾತಿನ ಮಂಟಪ", "ನೆನಪಿನ ಬುತ್ತಿ" ಎಂಬೆರಡು ಸರಣಿ ಆನ್ಲೈನ್ ಕಾರ್ಯಕ್ರಮಗಳ ಮೂಲಕ ಕಲಾವಿದರಲ್ಲಿ, ಕಲಾಸಕ್ತರಲ್ಲಿ ವಿದ್ಯುತ್ ಸಂಚಾರ ಉಂಟು ಮಾಡಿದವರು ಅಕಾಡೆಮಿಯ ಅಧ್ಯಕ್ಷರಾದ ಎಂ.ಎ.ಹೆಗಡೆಯವರು. ಇದರ ಕುರಿತು ನಿರೂಪಕಿಯಾಗಿ ಕಾರ್ಯ ನಿರ್ವಹಿಸಿದ ಆರತಿ ಪಟ್ರಮೆಯವರ ಅನಿಸಿಕೆಗಳು ಮಹತ್ವಪೂರ್ಣವಾದವು. ಆ ಸಂಪೂರ್ಣ ವಿವರ ಈ ಪುಸ್ತಕದಲ್ಲಿ ಲಭಿಸುತ್ತದೆ. ಹೆಗಡೆಯವರು ಎಲ್ಲರನ್ನೂ ಒಳಗೊಳ್ಳುವ ಗುಣ ಹೊಂದಿದ್ದರು. ಅಂತೆಯೇ ಎಲ್ಲರನ್ನು ಸಮಾನ ದೃಷ್ಟಿಯಿಂದ ನೋಡುತ್ತಿದ್ದರು. ಇದಕ್ಕೆ ಸಾಕ್ಷಿಗಾಗಿ ಈ ಕೃತಿಯಲ್ಲಿ ಮೂಡಲಪಾಯದ ಕುರಿತು ಹೆಗಡೆಯವರು ಕೈಗೊಂಡ ಕಾರ್ಯಯೋಜನೆಗಳ ವಿವರ ಬಂದಿದೆ. ಮೂಡಲಪಾಯ ಕಲಾವಿದರು ಕೂಡ ಹೆಗಡೆಯವರ ಕಾರ್ಯಶೈಲಿಯನ್ನು ಮುಕ್ತ ಕಂಠದಿಂದ ಹೊಗಳುತ್ತಿದ್ದರು.

ಪ್ರೊ. ಎಂ.ಎ. ಹೆಗಡೆಯವರ ಇನ್ನೊಂದು ವಿಶೇಷ ಗುಣವೇನೆಂದರೆ ಉದಾರತೆ ಅನೇಕ ಬಾರಿ ತಾಳಮದ್ದಲೆಗಳಲ್ಲಿ ಭಾಗವಹಿಸಿದ್ದವರು. ತಾವೇ ಸಂಘಟಕರಿಗೆ ಧನ ಸಹಾಯ ಮಾಡಿದ್ದು ಉಂಟು. ಎಷ್ಟೋ ಶಾಲೆಗಳಿಗೆ, ಕಲಾವಿದರಿಗೆ ಅವರ ತುರ್ತುಗಳನ್ನು ಗಮನಿಸಿ ಯಾರಿಗೂ ತಿಳಿಸಿದೇ ಪ್ರಚಾರವಿಲ್ಲದೇ ಹಣ ಕೊಟ್ಟಿದ್ದಾರೆ. ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಸರ್ಕಾರ ಕೊಡುವ ತಿಂಗಳ ಗೌರವ ಧನವನ್ನು ಕಷ್ಟದಲ್ಲಿರುವ ಕಲಾವಿದರಿಗೆ, ಸಂಘಸಂಸ್ಥೆಗಳಿಗೆ ನೀಡುತ್ತಿದ್ದರೆ ವಿನಃ ಎಂದೂ ಸ್ವಂತಕ್ಕೆ ಗೌರವ ಧನವನ್ನು ಬಳಸಿಕೊಂಡಿರಲಿಲ್ಲ. ಈ ಬಗೆಯ ಧೋರಣೆಯಿಂದಾಗಿ ಎಂ.ಎ. ಹೆಗಡೆಯವರು ಎಲ್ಲರ ಎದುರು ದೊಡ್ಡವರಾಗಿ ಕಾಣಿಸಿಕೊಂಡವರು. ಯಾವ ತಿಟ್ಟಿನವರೂ ಕೂಡಾ ಯಾವ ಪಾಯದವರೂ ಕೂಡಾ ಅವರ ಬಗ್ಗೆ ಕೈ ತೋರುವಂತೆ ಆಗಲೇ ಇಲ್ಲ. ಇದನ್ನೇ ಹೆಗಡೆಯವರು ಒಂದು ಕಡೆ ಹೇಳಿಕೊಂಡಿದ್ದಾರೆ. "ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷರ ಹುದ್ದೆಯಲ್ಲಿರುವವರೆಗೆ ಗೌರವ ಧನ ಅಂತ ಸರ್ಕಾರ ಪ್ರತಿ ತಿಂಗಳು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಡುತ್ತದೆ. ನಾನು ಈ ಹುದ್ದೆಯನ್ನು ಏರಿದ ಮೇಲೆ

ಇಲ್ಲಿಯವರೆಗೆ ನನಗೆ ಸಿಕ್ಕ ಪ್ರತಿ ತಿಂಗಳ ಗೌರವ ಧನವನ್ನು ಸ್ವಂತಕ್ಕೆ ಬಳಸಿಕೊಳ್ಳದೇ ಯಾರಾದರೂ ಸಾತ್ವಿಕ ವ್ಯಕ್ತಿಗೆ ಅಥವಾ ಸಾತ್ವಿಕ ಸಂಸ್ಥೆಯು ನಡೆಸುವ ಕೆಲಸಕ್ಕೆ ಕೊಟ್ಟು ಬಿಡುತ್ತೇನೆ. ಅದೆಲ್ಲ ದೊಡ್ಡ ವಿಷಯವಲ್ಲ. ಕೆರೆಯ ನೀರನು ಕೆರೆಗೆ ಚೆಲ್ಲುವುದು." ಹುದ್ದೆಯನ್ನು ಏರುವಾಗ ಈ ವ್ರತವನ್ನು ಚಾಚೂತಪ್ಪದೆ ಪಾಲಿಸಿಕೊಂಡು ಬಂದಿರುವುದು ಶ್ರೀ ಎಂ.ಎ.ಹೆಗಡೆಯವರ ವಿಶೇಷತೆಯಾಗಿದೆ.

"ಅಣ್ಣ ಮಹಾಬಲ" ಕೃತಿಯ ಇನ್ನೊಂದು ವೈಶಿಷ್ಟವೆಂದರೆ ಅದರ ಸಹಜತೆ. ಎಲ್ಲೂ ಅತಿಯಾದ ಹೊಗಳಿಕೆ ಇಲ್ಲದೆ, ವಸ್ತುಸ್ಥಿತಿಯನ್ನು ಯಥಾವತ್ತಾಗಿ ಸರಳತೆಯಿಂದ ಲೇಖಕರು ಹಿಡಿದಿಡುತ್ತಾರೆ. ಅವರು ಸಂಪರ್ಕಿಸಿ ಸಂಗ್ರಹಿಸಿದ ಮಾತುಗಳಿಗೆ ಎಲ್ಲೂ ಆಡಂಬರದ ಲೇಪನ ಮಾಡದೆ ಸುಂದರ, ಸಹಜ ವ್ಯಕ್ತಿ ಚಿತ್ರಣವನ್ನು ಕಟ್ಟಿಕೊಡುತ್ತಾರೆ. ಆದ್ದರಿಂದಲೇ ಈ ಕೃತಿ ಮಹತ್ವದ್ದಾಗಿದೆ. ತಾನು ಹೇಳ ಹೊರಟದ್ದು ತನ್ನ ಕುಟುಂಬದ ಸದಸ್ಯನದ್ದು, ತನ್ನ ಹಿರಿಯಣ್ಣನದ್ದು ಎಂಬುದು ಎಲ್ಲೂ ಮುನ್ನೆಲೆಗೆ ಬರುವುದಿಲ್ಲ ದೂರದಲ್ಲಿ ನಿಂತು ತಾನು ಕಂಡ "ಮಹಾಬಲ"ನ ಬಲವನ್ನು ಮನಸ್ಸು ಗ್ರಹಿಸಿದ ರೂಪದಲ್ಲೇ ಹಾಗೇ ಅಭಿವ್ಯಕ್ತಿಸಿದ್ದಾರೆ. ಆದ್ದರಿಂದಲೇ ಇದೊಂದು ಅಪೂರ್ವ ಕೃತಿಯಾಗಿದೆ. ರಾಜಶೇಖರ ಜೋಗಿನ್ಮನೆಯವರು ಪತ್ರಕರ್ತರಾದ್ದರಿಂದ ಬರವಣಿಗೆಯಲ್ಲಿ ಒಂದು ಲವಲವಿಕೆ ಇದೆ. ಅಣ್ಣನ ಬಗ್ಗೆ ಬರೆಯುತ್ತಿರುವುದರಿಂದ ನಿರೂಪಣೆಯಲ್ಲಿ ಆತ್ಮೀಯತೆ ಇದೆ. ವ್ಯಕ್ತಿತ್ವದ ನಾನಾ ಮಗ್ಗುಲುಗಳನ್ನು ಪರಿಚಯಿಸುವುದರಿಂದ ನಿಕಷಕ್ಕೆ ಒಡ್ಡಿ ತೋರಿಸುವ ಸವಾಲಿದೆ. ಯಕ್ಷಗಾನಕ್ಕೆ ಸಂಬಂಧಿಸಿರುವುದರಿಂದ ಅಪೂರ್ವ ಮಾಹಿತಿಗಳ ದಾಖಲೆ ಇದೆ. ಸಂಸ್ಕೃತ, ತತ್ವಶಾಸ್ತ್ರ ದರ್ಶನ ಸಿದ್ಧಾಂತಗಳಿಗೆ ಸಂಬಂಧಿಸಿರುವುದರಿಂದ ಗಂಭೀರವಾಗಿದೆ. ಹೀಗೆ ಈ ಪುಸ್ತಕ ಗಾತ್ರದಲ್ಲಿ ಚಿಕ್ಕದಾದರೂ ವಿಚಾರದಲ್ಲಿ ಮಹತ್ವದ್ದಾಗಿದೆ. ಆನೆಯನ್ನು ಕನ್ನಡಿಯಲ್ಲಿ ತೋರಿಸುವ ಪ್ರಯತ್ನದಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಹೆಗಡೆಯವರು ನಮ್ಮಿಂದ ದೂರವಾಗಿ ಒಂದು ವರ್ಷವಾಗುತ್ತಿರುವ ಈ ಸಂದರ್ಭದಲ್ಲಿ "ಅಣ್ಣ ಮಹಾಬಲ" ಪುಸ್ತಕ ಓದಿದಾಗ ಘನ ವ್ಯಕ್ತಿತ್ವವೊಂದು ನಮ್ಮಿಂದ ದೂರವಾಯಿತಲ್ಲ ಎಂಬ ವಿಷಾದ ಮಡುಗಟ್ಟುತ್ತದೆ. ಇಂತಹ ಕೃತಿಯನ್ನು ಕೊಟ್ಟ ರಾಜಶೇಖರ ಜೋಗಿನ್ಮನೆಯವರು ಅಭಿನಂದನಾರ್ಹರು.

("ಅಣ್ಣ ಮಹಾಬಲ" ಕೃತಿ ಕುರಿತು "ಯಕ್ಷರಂಗ" ಪತ್ರಿಕೆಗೆ ಬರೆದ ಲೇಖನ)

*

ವೀರ ತಪಸ್ವಿ ಪರಶುರಾಮ

ಪುರಾಣಲೋಕದ ದಟ್ಟ ಚಿತ್ರಣ ನೀಡುವ ಶ್ರೀಧರ ಡಿ.ಎಸ್. ಅವರ "ವೀರ ತಪಸ್ವಿ ಪರಶುರಾಮ" ಕಾದಂಬರಿಯು ಕತೆ, ಉಪಕತೆಗಳ ಮೂಲಕ ನಮ್ಮನ್ನು ಪುರಾಣಲೋಕಕ್ಕೆ ಸೆಳೆದೊಯ್ಯುತ್ತದೆ. ವಿಷ್ಣುವಿನ ಆರನೇ ಅವತಾರವಾಗಿ "ಪರಶುರಾಮ"ನೆಂದು ಕರೆಸಿಕೊಳ್ಳುವ ಕಥಾನಾಯಕ ಮುಂದೆ ಬರುವ ಏಳು ಹಾಗೂ ಎಂಟನೇ ಅವತಾರಿಗಳಾದ ಶ್ರೀರಾಮ, ಶ್ರೀಕೃಷ್ಣರಷ್ಟು ಜನಮಾನಸದಲ್ಲಿ ಬೇರೂರಿಲ್ಲ. ಆದರೂ ಕೂಡ ಕೃತಯುಗ, ತ್ರೇತಾಯುಗ ಹಾಗೂ ದ್ವಾಪರದ ಮೂರು ಯುಗಗಳಲ್ಲಿ ತನ್ನ ಸಾಹಸಗಾಥೆಯ ಹಾಸನ್ನು ಹಾಸಿ ವಿಕ್ರಮವನ್ನು ಮೆರೆದವನು. ಈ ಅವತಾರಪುರುಷ ತನ್ನ ವಿಶಿಷ್ಟ ಆಯುಧವಾದ, ಶಿವನಿಂದ ಕೊಡಲ್ಪಟ್ಟ "ಪರಶು"ವಿನಿಂದಾಗಿ ಖ್ಯಾತಿಗೊಂಡು "ಪರಶುರಾಮ"ನಾದವನು. ಕೃತಯುಗದ ಕ್ಷತ್ರಿಯರಿಗೆ ಸಿಂಹಸ್ವಪ್ನವಾದವನು. ಶ್ರೀಧರರು ಇವನ ಜನ್ಮದ ಹಿನ್ನೆಲೆಯನ್ನು ಮತ್ತು ತಂದೆ ಜಮದಗ್ನಿ ಋಷಿಯ ಬದುಕಿನ ಏಳುಬೀಳುಗಳನ್ನು ಕಣ್ಣಿಗೆ ಕಟ್ಟುವಂತೆ ಮೂರು ಭಾಗಗಳಲ್ಲಿ ವರ್ಣಿಸಿದ್ದಾರೆ. ಋಷಿಕುಲದಲ್ಲಿ ಜನಿಸಿದರೂ ಹಿಂದೆ ನಡೆದ ಪ್ರಮಾದ ಒಂದರಿಂದಾಗಿ ಕ್ಷಾತ್ರತೇಜಸ್ಸನ್ನು ಹೊಂದುತ್ತಾನೆ. ಭೃಗು ಮುನಿಗಳ ಆದೇಶದಂತೆ ಆತನ ತಪಸ್ಸಾಧನೆ ಅನನ್ಯವಾದದ್ದು. ಅಸಂಖ್ಯ ಅಸ್ತ್ರಗ್ರಾಮಗಳನ್ನು ಪಡೆದವನು. ರಾಕ್ಷಸರನ್ನು ಸಂಹರಿಸಿ ದೇವತೆಗಳ ಅನುಗ್ರಹವನ್ನು ಪಡೆದವನು. ತಂದೆಯ ಮಾತನ್ನು ಹಿಂದೆಮುಂದೆ ನೋಡದೆ ನಡೆಸಿದವನು, ಸಜೀವವಾಗಿ ವಿವರಗಳು ಬಂದಿವೆ. ಇದು ಲೇಖಕರಿಗೆ ಬರವಣಿಗೆಯ ಮೇಲಿರುವ ಹಿಡಿತವನ್ನು, ಶಕ್ತಿಯನ್ನು ಬಿಂಬಿಸುತ್ತದೆ. ಹೃದಯದಲ್ಲಿ ಪ್ರೀತಿವಾತ್ಸಲ್ಯ ಇಟ್ಟುಕೊಂಡವನು, ಮುನಿದಾಗ ಯಾವ ಅಳುಕಿಲ್ಲದೆ ಪರಾಕ್ರಮ ಮೆರೆದವನು. ವಿವೇಕಯುತ ಬಾಳ್ವೆ ನಡೆಸಿದವನು. ಹೀಗೆ ಈ ಎಲ್ಲಾ ಅಂಶಗಳನ್ನು ಶ್ರೀಧರರು ತಮ್ಮ ಕಾದಂಬರಿಯಲ್ಲಿ ದಾಖಲಿಸಿದ್ದಾರೆ. ಪ್ರತಿನಾಯಕನ ವಿಚಾರವನ್ನು ವರ್ಣಿಸುವಲ್ಲಿ ಕಾದಂಬರಿ ಬಹಳಷ್ಟು

ರಸಮಯವಾಗುತ್ತದೆ. ಕಾರ್ತವೀರ್ಯಾರ್ಜುನನ ಜನ್ಮದ ಹಿನ್ನಲೆಯ ಕರೆ, ಆತನ ಬಾಲ್ಯ, ಯೌವ್ವನ, ಸಾಹಸಗಳು, ಮೃಗಯಾವಿಹಾರಗಳೆಲ್ಲವನ್ನು ಆಕರ್ಷಕವಾಗಿ ವರ್ಣಿಸಿದ್ದಾರೆ. ಸರ್ವಪ್ರಾಣಿಗಳಲ್ಲಿ ಪ್ರೀತಿಪ್ರೇಮ, ಅನುಕಂಪವನ್ನು ಇಟ್ಟುಕೊಂಡಿರುತ್ತಾನೆ. ಮುನಿದಾಗ ಅಳುಕು ಅಂಜಿಕೆ ಇಲ್ಲದೆ ಪರಾಕ್ರಮ ಮೆರೆಯುತ್ತಾನೆ. ವಿವೇಕದ ಗಣಿಯಾಗಿ, ತೇಜಸ್ಸಿನ ಸೆಲೆಯಾಗಿ, ಯುಗದ ಶಕ್ತಿಯಾಗಿ, ರೂಪುಗೊಂಡ ಬಗೆಯನ್ನು ಬಹು ಸೊಗಸಾಗಿ ಶ್ರೀಧರರು ಚಿತ್ರಿಸಿದ್ದಾರೆ. ಕೊನೆಯ ಎರಡು ಮೂರು ಭಾಗಗಳು ಬಹುವಾಗಿ ಓದುಗರನ್ನು ಸೆಳೆಯುತ್ತದೆ. ಕಾದಂಬರಿಯ ಕೊನೆಯಲ್ಲಿ ಬರುವ "ಪರುಶುರಾಮ ಸೃಷ್ಟಿ"ಯಲ್ಲಿ ಕಲ್ಪನೆ ಹಾಗೂ ವಾಸ್ತವ ಪ್ರಜ್ಞೆ ಹದವಾಗಿ ಮಿಳಿತವಾಗಿದೆ. ಪಶ್ಚಿಮ ಕರಾವಳಿಯ ಎಲ್ಲಾ ಪ್ರಾಕೃತಿಕ ಸೊಗಸನ್ನು, ಬದುಕಿನ ಎಳೆಯನ್ನು ಲೇಖಕರು ಅನುಭವಿಸಿ ಚಿತ್ರಿಸಿದ್ದಾರೆ. ಎಲ್ಲೂ ವರ್ತಮಾನದ ವಿಮರ್ಶಾ ಪ್ರಜ್ಞೆಗೆ ಒಪ್ಪಿಕೊಳ್ಳದೆ ಬ್ರಹ್ಮಾಂಡ ಪುರಾಣ ಹಾಗೂ ಇತರೆ ಪೌರಾಣಿಕ ಕಾವ್ಯಗಳ ಹಿನ್ನೆಲೆಯಿಂದ ಸೃಷ್ಟಿಗೊಂಡಿರುವ ಈ ಕಾದಂಬರಿ "ಪೌರಾಣಿಕ ಲೋಕ"ವೊಂದನ್ನು ಕನ್ನಡ ಕಾದಂಬರಿ ಜಗತ್ತಿಗೆ ಕೊಡುಗೆ ನೀಡುವಲ್ಲಿ ಯಶಸ್ವಿಯಾಗಿದೆ. ಕಾದಂಬರಿ ಓದುತ್ತಿದ್ದಾಗ ಓದುಗಲೋಕ –– ಆಶ್ರಮಗಳಲ್ಲಿ ಸಂಚರಿಸಿದ ಭಾವದಲ್ಲಿ ಇರುವಂತೆ ಶ್ರೀಧರರು ನೋಡಿಕೊಂಡಿದ್ದಾರೆ.

ಶ್ರೀಧರ್‌ರವರು ಈ ಕಾದಂಬರಿಯನ್ನು ರಚಿಸುವಾಗ ಹೆಚ್ಚಾಗಿ ಬ್ರಹ್ಮಾಂಡ ಪುರಾಣವನ್ನೇ ಆಶ್ರಯಿಸಿದ್ದಾರೆ. ಆದರೆ ಕೆಲವೆಡೆ ಬೇರೆ ಪುರಾಣಗಳಲ್ಲಿ, ರಾಮಾಯಣ, ಮಹಾಭಾರತ ಮುಂತಾದ ಕೃತಿಗಳಲ್ಲಿ ತಾವು ಓದಿದ ಸಮಯೋಚಿತ ಅಂಶಗಳನ್ನು ಸಂಯುಕ್ತವಾಗಿ ಎರಕ ಹೊಯ್ದಿದ್ದಾರೆ. ಇದರಿಂದಾಗಿ ಈ ಕೃತಿಗೆ ನಮ್ಮ ಕಾವ್ಯ ಪರಂಪರೆಯೊಂದಿಗೆ ಬೆಸುಗೆ ಲಭಿಸಿದೆ. ಭಾರತೀಯ ಮನಸ್ಸುಗಳಲ್ಲಿ, ಪುರಾಣ, ಶಾಸ್ತ್ರಗಳಲ್ಲಿ ಚಿತ್ರಿತನಾದ ಪರಶುರಾಮನ ಸಮಗ್ರ ಚಿತ್ರಣ ಒಂದು ಒದಗಿ ಬಂದಿದೆ. ಕಾದಂಬರಿಯ ಕೊನೆಯ ಅಧ್ಯಾಯಗಳಲ್ಲಿ ಕಲ್ಪಿತ ಅಂಶಗಳು ಬಂದಿದ್ದರೂ ಅವು ಎಲ್ಲೂ ಪುರಾಣಭಂಜನೆಯನ್ನು ಮಾಡಿಲ್ಲ. ಸ್ಥಳೀಯ ಕತೆಗಳನ್ನು, ಜನಪದೀಯ ನಂಬಿಕೆಗಳನ್ನು ಆಧರಿಸಿ ಬಂದಿರುವ ವಿಚಾರಗಳು ಕೂಡಾ ಪುರಾಣ ಸೃಜನೆಯ ಕಾರ್ಯಗಳನ್ನು ಮಾಡಿವೆ. ಇವೆಲ್ಲಾ ಕೊಡುಗೆಗಳೇ ಸರಿ.

"ವೀರ ತಪಸ್ವಿ ಪರಶುರಾಮ" ಯಕ್ಷಗಾನ ವಲಯಕ್ಕೆ ಬಹು ಹತ್ತಿರವಾದ ಕೃತಿ. ಯಕ್ಷಗಾನದಲ್ಲಿ ಪ್ರಚಲಿತವಿದ್ದ ವಿಚಾರಗಳನ್ನು ಕಾದಂಬರಿಕಾರರು ಸಕಾರಣವಾಗಿ ಬದಲಿಸಿಕೊಂಡಿದ್ದಾರೆ. ಇದಕ್ಕೆ ಉತ್ತಮ ನಿದರ್ಶನವೆಂದರೆ ಕಾರ್ತವೀರ್ಯನಿಗೆ ಸಾವಿರ ಕೈಗಳಿವೆ ಎಂಬುದು ನಮ್ಮಲ್ಲಿ ಸಿದ್ಧಗೊಂಡ ವಿಚಾರ. ಆದರೆ ಕಾದಂಬರಿಕಾರರು ಇದಕ್ಕೆ ಭಿನ್ನವಾಗಿ "ಮಹಾಭಾರತ"ದಲ್ಲಿನ ಮಾಹಿತಿಯಂತೆ ಆತನಿಗೆ ಸಾವಿರ ಕೈಗಳು

ಇಲ್ಲ. ಯುದ್ಧ ಸಂದರ್ಭದಲ್ಲಿ ಎದುರಾಳಿಗಳಿಗೆ ಸಾವಿರ ಕೈಗಳು ಭಾಸವಾಗುತ್ತವೆ. ಕಾರ್ತವೀರ್ಯನು ವಿಷ್ಣುವಿನ ಶಾಪದಿಂದಾಗಿ ಮನುಷ್ಯನಾಗಿ ಹುಟ್ಟುತ್ತಾನೆ. ಮೂಲತಃ ಆತ ವಿಷ್ಣುವಿನ ಆಯುಧವಾದ ಸುದರ್ಶನವೇ ಆಗಿರುತ್ತಾನೆ. ತನ್ನ "ಅಹಂ"ಭಾವದಿಂದಾಗಿ ಶಾಪಗ್ರಸ್ತನಾಗಿ ಭುವಿಗೆ ಇಳಿಯುತ್ತಾನೆ. ಸುದರ್ಶನ ಚಕ್ರದಲ್ಲಿರುವ ಸಾವಿರ ಕೋನಗಳೇ ಸಂಕೇತವಾಗಿ ಕೈಗಳಾಗಿ ಕಾಣಿಸುತ್ತವೆ. ಆತನ ಗುರುಗಳು ಕೂಡ ವಿಷ್ಣುಸ್ವರೂಪಿಯಾದ ದತ್ತಾತ್ರೇಯ ಮುನಿಗಳು. ಅವರೇ ಅವನ ರಕ್ಷಣೆಗೆ "ವೈಷ್ಣವ ಕವಚ"ಕೊಟ್ಟು ಹರಸಿರುತ್ತಾರೆ. ಹೀಗೆ ಪ್ರತಿನಾಯಕನ ಪಾತ್ರ ಸೃಷ್ಟಿಯಲ್ಲಿ ಕಾದಂಬರಿಕಾರರು ಅನೇಕ ಹೊಸ ಹೊಳಹುಗಳನ್ನು ಕೊಟ್ಟಿರುತ್ತಾರೆ.

ಡಿ.ಎಸ್. ಶ್ರೀಧರ್ ಅವರ "ಸನ್ನಿವೇಶ ಸೃಷ್ಟಿ" ಅಮೋಘವಾದದ್ದು. ಒಂದರ ಹಿಂದೆ ಒಂದು ಸನ್ನಿವೇಶಗಳ ಸರಣಿಯನ್ನು ಸೃಷ್ಟಿಸುತ್ತಾ ಅವುಗಳನ್ನು ಸುಸಂಗತವಾಗಿ ಜೋಡಿಸುವ ಮೂಲಕ ಇಡೀ ಕಾದಂಬರಿಯು ಓದುಗರನ್ನು ಸಂಪೂರ್ಣ ಸೆಳೆದು ಬಿಡುತ್ತದೆ. ಕೃತಿಯ ಜೀವಂತಿಕೆಗೆ ಇದು ಪೂರಕ ಅಂಶವಾಗಿದೆ. ಇಲ್ಲಿನ ಮೃಗಯಾವಿಹಾರ ಹಾಗೂ ಮೃಗ ಮಾನವ ಅಧ್ಯಾಯಗಳಲ್ಲಿ ಬರುವ ಘಟನೆಗಳು, ಅವುಗಳ ವಿವರಣೆ, ಅಲ್ಲಿನ ವರ್ಣನೆಗಳೆಲ್ಲ ಕೃತಿಕಾರರ ಬರವಣಿಗೆಯ ಶಕ್ತಿಯ ದ್ಯೋತಕವಾಗಿದೆ. ಬೇಟೆಗೆಂದು ಬಂದ ಕಾರ್ತವೀರ್ಯ ಹಾಗೂ ಅವನ ಪಡೆ ಬಳಲಿ, ಬೆಂಡಾಗಿ ಹತ್ತಿರದಲ್ಲಿದ್ದ ಜಮದಗ್ನಿಯ ಆಶ್ರಮಕ್ಕೆ ಬರುತ್ತದೆ. ಅಲ್ಲಿರುವ ದೇವಧೇನು ನೀಡಿದ ಆತಿಥ್ಯಕ್ಕೆ ಬೆಕ್ಕಸ ಬೆರಗಾಗಿ ಮಂತ್ರಿಯ ಪ್ರಲೋಭನೆಗೂ ಒಳಗಾಗಿ ಆ ದೇವಧೇನುವನ್ನು ಬಯಸುತ್ತಾನೆ. ಜಮದಗ್ನಿಯ ತಪಃಶಕ್ತಿಗೆ ಮಾರುಹೋಗಿ ದೇವತೆಗಳು ನೀಡಿದ ದೇವಧೇನುವನ್ನು ಹೇಗಾದರೂ ಮಾಡಿ ಪಡೆಯಲೇಬೇಕೆಂದು ಸಾಮ, ದಾನ, ಭೇದಗಳಿಂದ ಆಗದೇ ಹೋದಾಗ ಮಂತ್ರಿ ಹಾಗೂ ಯೋಧರ ಮೂಲಕ ದಂಡ ಪ್ರಯೋಗಕ್ಕೆ ಮುನ್ನುಗ್ಗುತ್ತಾನೆ. ಇದನ್ನು ತಡೆಯಲು ಬಂದ ಜಮದಗ್ನಿಗಳು ಸೈನಿಕರ ದಾಂಧಲೆಗೆ ಪ್ರಾಣ ಕಳೆದುಕೊಳ್ಳುತ್ತಾರೆ. ರೇಣುಕಾದೇವಿಯ ಆಕ್ರಂದನ ಮುಗಿಲು ಮುಟ್ಟುತ್ತದೆ. ಆಗ ಅಲ್ಲಿಗೆ ಬಂದ ಪರಶುರಾಮ ಕ್ಷಾತ್ರದ ಕ್ರೌರ್ಯವನ್ನು ಕಂಡು, ದೇವ, ಋಷಿಯ ಸಂಪತ್ತು ಉಳಿಯಬೇಕೆಂದು ಸಿಟ್ಟಿನ ಸಿಡಿಲಾಗಿ ಕಾರ್ತವೀರ್ಯನನ್ನು ಸಂಹರಿಸುತ್ತೇನೆ ಎಂದು ಗರ್ಜಿಸುತ್ತಾನೆ. ತಾಯಿ ಇಪ್ಪತ್ತೊಂದು ಬಾರಿ ಎದೆ ಹೊಡೆದುಕೊಂಡು ಆಕ್ರಂದನ ಮಾಡಿದ್ದನ್ನು ನೋಡಿ ಇಪ್ಪತ್ತೊಂದು ಬಾರಿ ಭೂಮಿ ಪ್ರದಕ್ಷಿಣೆಯನ್ನು ಮಾಡಿ ಮದದಿಂದ ಕೊಬ್ಬಿದ ಕ್ಷತ್ರಿಯರನ್ನು ಸವರಿ ಹಾಕುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಇಡೀ ಕಾದಂಬರಿಯಲ್ಲಿ ಈ ಎರಡು ಅಧ್ಯಾಯ ಸಶಕ್ತವಾಗಿ ಬಂದಿದೆ. ಇಲ್ಲಿನ ಕೆಲವು ವಾಕ್ಯಗಳಂತೂ ಬಹು ಆಕರ್ಷಕವಾಗಿವೆ. ಜಮದಗ್ನಿ ಕಾರ್ತವೀರ್ಯನಿಗೆ ಹೇಳುವ "ಚಕ್ರವರ್ತಿ, ಕಾಣದ ಶಕ್ತಿಯೊಂದು ಜಗವನ್ನು ನಡೆಸುತ್ತಿರುತ್ತದೆ. ನಾವು ಮಾಡಿದೆವು ಎಂದು ಭ್ರಮಿಸುತ್ತಾ

ಅಹಂಕಾರಿಗಳಾಗುತ್ತೇವೆ. ಅವನಿಚ್ಛೆ ಇಲ್ಲದೆ ಹುಲ್ಲುಕಡ್ಡಿಯೂ ಅಲುಗಾಡದು" ಎಂಬುದಾಗಲಿ "ಶಿಕ್ಷಣವೆಂದರೆ ಬರೀ ವೇದಾಧ್ಯಯನವಲ್ಲ, ಅದು ಜೀವನ ಅಧ್ಯಯನ" ಎಂಬುದಾಗಲೀ "ಅಭಿಪ್ರಾಯಗಳು ಮೂರನೆಯ ವ್ಯಕ್ತಿಯಿಂದ ಬರುವಾಗ ಸತ್ಯಕ್ಕೆ ಬಣ್ಣನೆಯೋ ದೋಷವೋ ಸೇರುವ ಅಪಾಯವಿರುತ್ತದೆ" ಎಂಬುದಾಗಲೀ "ಯಾವುದನ್ನು ಪೂರ್ಣ ಹಿಡಿಯುವುದು, ಪೂರ್ಣ ಬಿಡುವುದು ಅನರ್ಥಕ್ಕೆ ಕಾರಣವಾಗುತ್ತದೆ" ಎಂಬುದೇ ಮುಂತಾದ ಅನೇಕ ಉತ್ತಮ ವಾಕ್ಯಗಳು ಈ ಕಾದಂಬರಿಯಲ್ಲಿ ಅಡಕಿರಿದಿವೆ.

"ಪರಶುರಾಮ" ಪಾತ್ರದ ಸೃಷ್ಟಿಯಲ್ಲಿ ಶ್ರೀಧರ್ ಅವರಿಗೆ ಸ್ಪಷ್ಟತೆ ಇದೆ. ಆತ ಕೇವಲ ಕ್ಷತ್ರಿಯಾಂತಕನಲ್ಲ ಅವನ ದಿಗ್ವಿಜಯಗಳ ಹಿಂದೆ ಸಕಾರಣವಾದ ನಿಲುವಿದೆ. ಅದನ್ನು ಅವರು ಆತನ ಮಾತಿನ ಮೂಲಕ ವಿವರಿಸುತ್ತಾರೆ. "ನನ್ನದು ಕುಲದ ವಿರುದ್ಧದ ಹೋರಾಟವಲ್ಲ. ದೌಷ್ಟದ ವಿರುದ್ಧದ ಹೋರಾಟ, ಜಗವೆಲ್ಲ ಪೂಜಿಸುವ ಕಾಮಧೇನುವನ್ನೇ ಅಪಹರಿಸ ಹೊರಟಿದ್ದು, ಮಹಾಜ್ಞಾನಿಗಳಾದ ಜಮದಗ್ನಿಗಳ ಶಿರವನ್ನು ಕತ್ತರಿಸಿದ್ದು, ಸರ್ವಾರ್ಥ ಸಂಪತ್ತನ್ನೂ, ಸಕಲ ಜ್ಞಾನವನ್ನೂ ನಿರ್ನಾಮ ಮಾಡುತ್ತಿರುವುದಕ್ಕೆ ಸಂಕೇತವಾಗಿದೆ. ಇದಕ್ಕೆ ಕಾರಣ ಭೌತಿಕವಾದ ಅರ್ಥಮದ ಮತ್ತು ಅಧಿಕಾರ ಮದ. ಆಳುವ ಅರಸರು ತಪ್ಪುಗಾರರಾದರೆ ಸಮಸ್ತ ಪ್ರಜಾವರ್ಗವೂ ಅದನ್ನೇ ಅನುಸರಿಸುತ್ತದೆ. ಆದ್ದರಿಂದಲೇ ದುಷ್ಟಕ್ಷತ್ರಿಯರ ವಿನಾಶಕ್ಕೆ ಸಂಕಲ್ಪ ಮಾಡಿದ್ದೇನೆ. ಇದು ಬ್ರಾಹ್ಮ-ಕ್ಷಾತ್ರ ಸಂಘರ್ಷವಲ್ಲ. ಜ್ಞಾನ-ಅಜ್ಞಾನಗಳ ನಡುವಿನ ಘರ್ಷಣೆ, ಧರ್ಮಾತ್ಮರಾದ ಕ್ಷತ್ರಿಯರ ವಿರುದ್ಧ ನನ್ನ ಹೋರಾಟವಲ್ಲ, ದುಷ್ಟರಿಗೆ ಶಿಷ್ಟರು ಸಹಾಯಕರಾಗಿ ಬಂದರೆ ದೌಷ್ಟ್ಯಕ್ಕೂ ನೈತಿಕ ಬಲ ಬಂದು ಬಿಡುತ್ತದೆ. ಅಂತವರನ್ನು ಮೊದಲು ನಿಗ್ರಹಿಸುತ್ತೇನೆ" ಈ ಮಾತುಗಳ ಮೂಲಕ ಪರಶುರಾಮನ ವ್ಯಕ್ತಿತ್ವವನ್ನು ಕಡೆದಿರಿಸಿದ್ದಾರೆ. ತಪಸ್ಸಿನ ಶಕ್ತಿಯಿಂದ ಆತಗಳಿಸಿದ ಅಸ್ತ್ರಾಸ್ತ್ರಗಳು, ಪರಶುವೆಲ್ಲವೂ ದುಷ್ಟ ಸಂಹಾರಕ್ಕೆ ಮೀಸಲಾಗುತ್ತದೆ. ಕಾದಂಬರಿಯ ಉದ್ದಕ್ಕೂ ಆತನ ಶ್ರದ್ಧೆ, ನಿಷ್ಠೆ, ಅಸಾಮಾನ್ಯ ನಡೆ, ಘೋರ ಸಂಕಲ್ಪ ಶಕ್ತಿ, ಕಾರ್ಯ ಪ್ರವೃತ್ತವಾಗುವಾಗಿನ ದೃಢ ಮನಸ್ಕತೆ, ಮನಸ್ಸು ತಿಳಿಯಾದಾಗ ಯೋಚಿಸುವ ಪರಿ ಎಲ್ಲವೂ ಬಹು ದೀರ್ಘವಾಗಿ ಮನದುಂಬುವಂತೆ ಚಿತ್ರಿಸಿದ್ದಾರೆ. ಮುಂದಿನ ಯುಗದಲ್ಲಿ ಶ್ರೀರಾಮನೊಂದಿಗಿನ ಅವನ ನಡೆಯು ಸ್ವಾರಸ್ಯಕರ.

"ವೀರ ತಪಸ್ವಿ ಪರಶುರಾಮ"ನು ಮದುವೆಯಾಗಿ ಬಂದ ಶ್ರೀರಾಮನನ್ನು ಮಾರ್ಗಮಧ್ಯೆ ಸಂಧಿಸುತ್ತಾನೆ. ದಶರಥ ಹೆದರಿ ವಿನಂತಿಸಿದಾಗ ರಾಮನನ್ನೇ ಪರಶುರಾಮ ಮಾತನಾಡಿಸುತ್ತಾನೆ. ಆತ ಶಿವಧನುಸ್ಸನ್ನು ಭಂಗಿಸಿದ್ದನ್ನು ಪ್ರಶ್ನಿಸಿ ಸಮರ್ಪಕ ಉತ್ತರ ಪಡೆಯುತ್ತಾನೆ. ರಾಮನು ತನ್ನಂತೆ ವಿಷ್ಣುವಿನ ಅಂಶದವನೆಂದು

ಅರಿತು ವೈಷ್ಣವ ಧನುಸ್ಸನ್ನು ಹಾಗೂ ತನ್ನ ತಪಃಶಕ್ತಿಯನ್ನು ಆತನಿಗೆ ನೀಡಿ ಎಲ್ಲರನ್ನೂ ಹರಸಿ ಶ್ರೀರಾಮನಿಂದ ಮುಂದಾಗುವ ಭಗವದ್ ಕಲ್ಯಾಣಕ್ಕೆ ಬೀಜಾಂಕುರ ಗೊಳಿಸುತ್ತಾನೆ. ಹೀಗೆ ಕಾದಂಬರಿಯು ಮುಕ್ತಾಯವಾಗುತ್ತದೆ.

ಕೊನೆಯಲ್ಲಿ ಬರುವ "ಶರಧಿ ಸರಿಯಿತು" ಮತ್ತು "ಆಶ್ರಯದಾತ" ಅಧ್ಯಾಯಗಳಲ್ಲಿ "ಪರಶುರಾಮ ಸೃಷ್ಟಿ"ಯ ಜನಜನಿತ ಕತೆಯನ್ನು ಕಾದಂಬರಿಕಾರರು ಆಶ್ರಯಿಸಿದ್ದಾರೆ. ಭಾರ್ಗವರಾಮನು ಅಶ್ವಮೇಧಯಾಗ ನಡೆಸಿ ಗಳಿಸಿದ ಸಕಲ ಭೂಮಿಯನ್ನು ಕಶ್ಯಪ ಮುನಿಗೆ ನೀಡುತ್ತಾನೆ. ಮುಂದೆ ಮಹೇಂದ್ರ ಪರ್ವತದಲ್ಲಿ ಆಶ್ರಯಿಸಿ ತಪೋಮಗ್ನನಾಗುತ್ತಾನೆ. ಮುಂದೆ ಉತ್ತರಪಥದಲ್ಲಿ ಬ್ರಾಹ್ಮಣರಿಗೆ, ಅಸಹಾಯಕರಿಗೆ ರಾಜರುಗಳಿಂದ ಹಿಂಸೆ ಪ್ರಾರಂಭವಾಗುತ್ತದೆ. ಆಗ ಅವರೆಲ್ಲಾ ಒಟ್ಟಾಗಿ ಸೇರಿ, ಮಹೇಂದ್ರ ಪರ್ವತಕ್ಕೆ ಬಂದು ಪರಶುರಾಮನ ಸಹಾಯ ಬೇಡುತ್ತಾರೆ. ಇದುವರೆಗೆ ದುಷ್ಟಸಂಹಾರಕನಾಗಿದ್ದ ಪರಶುರಾಮ ಇವರಿಗಾಗಿ ಒಂದು ಹೊಸ ನೆಲೆಯನ್ನು ಸೃಷ್ಟಿಸಲು ಯೋಚಿಸುತ್ತಾನೆ. ಅದರ ಫಲವೇ ಸಹ್ಯಾದ್ರಿಯ ಗಗನಚುಂಬಿ ಪರ್ವತದ ಮೇಲೆ ನಿಂತ ಪರಶುರಾಮ ವರುಣದೇವನನ್ನು ಪ್ರಾರ್ಥಿಸುತ್ತಾನೆ. ಅವನ ಅನುಗ್ರಹದಿಂದ ಆತನ ಪರಶು ಎಲ್ಲಿಯವರೆಗೆ ಹೋಗಿ ಬೀಳುತ್ತದೋ ಅಲ್ಲಿಯವರೆಗೆ ಸಮುದ್ರ ಹಿಂದೆ ಸರಿಯುತ್ತದೆ. ಅದರ ಫಲವೇ ಇಂದಿನ ಪರಶುರಾಮ ಸೃಷ್ಟಿ ನಿರ್ಮಾಣಗೊಂಡು, ಅದು ಅಸಹಾಯಕರ, ಬ್ರಾಹ್ಮಣರ ನೆಲೆವೀಡಾಗಿ ಪರಿಣಮಿಸುತ್ತದೆ. ಈ ಭಾಗದಲ್ಲಿ ಪ್ರಕೃತಿಯ ವರ್ಣನೆ, ಜನವಸತಿ ನೆಲೆಗೊಂಡ ಬಗೆಯ ಚಿತ್ರಣ ಬಹು ಸೊಗಸಾಗಿ ಬಂದಿದೆ.

ಡಿ.ಎಸ್. ಶ್ರೀಧರ್ ಅವರು ಈ ಕಾದಂಬರಿಯ ಮೂಲಕ ಪುರಾಣ ಪ್ರಪಂಚವನ್ನು ಕನ್ನಡ ಲೋಕಕ್ಕೆ ನೀಡಿದ್ದಾರೆ. ಯಕ್ಷಗಾನ ಪ್ರಸಂಗ ರಚನೆಗೆ ಯೋಗ್ಯವಾಗುವ ಅನೇಕ ಕಥಾಹಂದರಗಳನ್ನು ಇಲ್ಲಿ ನೀಡಿದ್ದಾರೆ. ಅವರಾಗಲೀ, ಬೇರೆ ಯಕ್ಷಕವಿಗಳಾಗಲೀ ಈ ಕೃತಿನ್ನು ಆಧರಿಸಿ ಪ್ರಸಂಗ ರಚಿಸಿದಲ್ಲಿ ಅದು ಬಹುದೊಡ್ಡ ಕೊಡುಗೆಯಾಗುತ್ತದೆ.

("ಹರ್ಷವಾಣಿ" ಪತ್ರಿಕೆಗೆ ಬರೆದ ಲೇಖನದ ವಿಸ್ತೃತ ರೂಪ)

*

ವೈಚಾರಿಕ ಸ್ಪರ್ಶದ ವೀರಗಸೆ

ಕರ್ನಾಟಕ ಯಕ್ಷಗಾನ ಅಕಾಡೆಮಿಯು ತನ್ನ ಮೊದಲ ಸಮಗ್ರ ಯಕ್ಷಗಾನ ಸಮ್ಮೇಳನಕ್ಕೆ ಖ್ಯಾತ ಅರ್ಥಧಾರಿ, ಕಲಾವಿದರಿಗೆ ಮಾರ್ಗದರ್ಶಕ, ಸಂಶೋಧಕ, ಸಂಸ್ಕೃತಿ ಚಿಂತಕ, ಪ್ರಬಲವಾಗ್ಮಿ ಹಾಗೂ ದರ್ಶನಶಾಸ್ತ್ರ ಪಾರಂಗತರಾದ ಡಾ.ಎಂ.ಪ್ರಭಾಕರ ಜೋಶಿಯವರನ್ನು ಸರ್ವಾಧ್ಯಕ್ಷರನ್ನಾಗಿ ಮಾಡಿ ಎಲ್ಲರ ಮೆಚ್ಚುಗೆ ಗಳಿಸಿತ್ತು. ಈ ಸಂದರ್ಭದಲ್ಲಿ ಅಕಾಡೆಮಿ ಹೊರತಂದ "ವೀರಗಸೆ" ಎಂಬ ವಿಮರ್ಶಾ ಸಂಕಲನದಲ್ಲಿ ಡಾ.ಜೋಶಿಯವರ ಪ್ರಖರ ಚಿಂತನೆಗಳ ಎಳೆಯನ್ನು, ಸೂಕ್ಷ್ಮ ಮನಸ್ಸಿನ ವಿಮರ್ಶಾಪ್ರಜ್ಞೆಯನ್ನು, ಆಳವಾದ ಪಾಂಡಿತ್ಯದ ಪ್ರಭೆಯನ್ನು ಕಾಣಬಹುದು. ಇಲ್ಲಿರುವ ಹದಿನಾಲ್ಕು ಲೇಖನಗಳಲ್ಲಿ ಜೋಶಿಯವರು ಐವತ್ತು ವರ್ಷಗಳ ಕಾಲ ಈ ಕಲೆಯೊಂದಿಗೆ ನಡೆಸಿದ ಅನುಸಂಧಾನದ ಬಗೆಯನ್ನು, ಪಡೆದ ಅನುಭವಗಳ ಗಣಿಯನ್ನು ಗುರುತಿಸಲು ಸಾಧ್ಯ. ಅವರ ಬಹುಮುಖಿ ಚಿಂತನೆಗಳ ಪಡಿನೆಳಲು ಇಲ್ಲಿದೆ.

ಜೋಶಿಯವರ ವಿಮರ್ಶಾ ವಿಧಾನವೆಂದರೆ ಮೊದಲಿಗೆ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಮೂಲ ಆಯಾಮಗಳನ್ನು ತಮ್ಮೊಳಗೆ ಆಹ್ವಾನಿಸಿಕೊಳ್ಳುವುದು. ವೇದಗಳಿಂದ ಗಾದೆಗಳವರೆಗೆ, ಪೌರಾಣಿಕ ಸೂಕ್ತಿಉಕ್ತಿಗಳಿಂದ ಆಧುನಿಕ ವಿಚಾರಧಾರೆಗಳವರೆಗೆ, ಸಿದ್ಧಿಪುರುಷರ ಸಿದ್ಧಾಂತಗಳಿಂದ ಜಾನಪದೀಯ ತಿಳುವಳಿಕೆಯವರೆಗೆ, ಗ್ಲೋಬಲ್ಲಿಂದ ಲೋಕಲ್ ವರೆಗೆ ಇರುವ ಎಲ್ಲಾ ವಿವರಗಳನ್ನು ತಮ್ಮ ಪ್ರಸ್ತುತಿಗೆ ಆಧಾರವಾಗಿಟ್ಟುಕೊಳ್ಳುತ್ತಾರೆ. ಇವೆಲ್ಲವುಗಳಿಂದ ಚೋದಿತವಾದ ನಿಲುವುಗಳು ಸರ್ವಸಮ್ಮತವಾಗವಂತೆ ನೋಡಿಕೊಳ್ಳುತ್ತಾರೆ. ಇದಕ್ಕೆ ಸಾಕ್ಷಿ ಇಲ್ಲಿ ಇರುವ "ಯಕ್ಷಗಾನವೆಂಬ ಭಕ್ತಿ ವಿಶ್ವ" ಎಂಬ ಲೇಖನ. ಭಕ್ತಿಯ ಇತಿಹಾಸವನ್ನು ತಿಳಿಸುವಾಗ ಭಾರತೀಯ ದರ್ಶನ ಹಾಗೂ ವಾಙ್ಮಯಗಳಿಂದ, ವೇದಗಳ ಪ್ರಾಚೀನತಮ ಸಂಹಿತಾ ಭಾಗದ ಭಕ್ತಿಪರ ಸೂಕ್ತಿಗಳಿಂದ, ವಿವಿಧ ಪಂಥಗಳ

ಆಚರಣಾ ವಿಧಾನಗಳಿಂದ, ಆಯ್ದ ವಿಚಾರಗಳನ್ನು ಪರಾಂಬರಿಸಿ ಭಕ್ತಿ ಸ್ವರೂಪದ ದರ್ಶನ ಮಾಡಿಸುತ್ತಾರೆ. ಯಕ್ಷಗಾನದ ಸಭಾಲಕ್ಷಣದಲ್ಲಿ, ಪ್ರಸಂಗಗಳಲ್ಲಿ, ಪ್ರದರ್ಶನಗಳಲ್ಲಿ ಇರುವ ಭಕ್ತಿಯ ವಿಶೇಷತೆಗಳನ್ನು ಲೇಖಕರು ಸಮರ್ಪಕವಾಗಿ ಗುರುತಿಸಿದ್ದಾರೆ. "ಯಕ್ಷಗಾನದಲ್ಲಿನ ಭಕ್ತಿಯು ಭಾವುಕ ಭಜನೆಯ, ಶರಣಾಗತಿಗಳ ಕಥೆಯ ಪ್ರದರ್ಶನವಲ್ಲ. ಇಲ್ಲಿ ಸಂಘರ್ಷ, ಸಮನ್ವಯ ಹಾಗೂ ವೈವಿಧ್ಯಮಯ ಆಯಾಮಗಳಲ್ಲಿ ಭಕ್ತಿಯ ವಿರಾಟ್ ದರ್ಶನವಿದೆ" ಎಂಬುದು ಡಾ.ಜೋಶಿಯವರ ನಿಲುವಾಗಿದೆ.

ಯಕ್ಷಗಾನವು ಆರಾಧನೆಯ ಒಂದು ಅಂಗವಾಗಿ ರೂಪುತಳೆದು ಬೆಳೆದು ಬಂದಿರಬೇಕೆಂಬ ಕುಕ್ಕಿಲರ ವಾದವನ್ನು ಪುಷ್ಟೀಕರಿಸುವ ಲೇಖಕರು "ದೇವಾಲಯದ ಭಜನೆ, ರಂಗಪೂಜೆಗಳಂತೆ ಇದೂ ಗಾನ ನಾಟ್ಯ ಸೇವೆಯಾಗಿ ಮುಂದೆ ಮೇಳಕಲೆಯಾಗಿ ತಿರುಗಾಟದ ಕಲೆಯಾಯಿತು" ಎನ್ನುತ್ತಾರೆ. ಯಕ್ಷಗಾನದ ಒಡ್ಡೋಲಗದಿಂದ ಪ್ರಾರಂಭಿಸಿ, ಕೊನೆಯ ಮಂಗಳದವರೆಗೆ ಒಂದಲ್ಲೊಂದು ರೀತಿಯಲ್ಲಿ ಭಕ್ತಿಯ ಮಹಿಮೆಯ ಕುರಿತು ಉಕ್ತಿಗಳು ಸಾಲುಸಾಲಾಗಿ ಬರುತ್ತವೆ ಎಂಬುದನ್ನು ಡಾ.ಪ್ರಭಾಕರ ಜೋಶಿಯವರು ತೋರಿಸಿಕೊಟ್ಟಿದ್ದಾರೆ. "ಕರ್ನಾಟಕದ ಭಕ್ತಿಯ ಒಟ್ಟು ಇತಿಹಾಸದಲ್ಲಿ ಯಕ್ಷಗಾನ ಸಾಹಿತ್ಯ, ರಂಗಸಂಪ್ರದಾಯ, ಪ್ರದರ್ಶನ ರೂಢಿಗಳು ಏನು ಪಾತ್ರ ಹೊಂದಿವೆ? ಏನು ನೀಡಿವೆ? ಸಾಹಿತ್ಯಿಕ ಭಾಷೆಗಳಿಗೆ ಅದು ನೀಡಿದ ಬನಿ ಸೊಬಗುಗಳೇನು? ಒಟ್ಟು ಜನಜೀವನದ ಭಕ್ತಿಭಾವಕೋಶಕ್ಕೆ ಅದರ ಕೊಡುಗೆಯೇನು? ಎಂಬುದು ವಿಸ್ತಾರವಾದ ಅಧ್ಯಯನಕ್ಕೆ ವಸ್ತುವಾಗಬಲ್ಲದು" ಎನ್ನುವುದು ಪ್ರೌಢ ಅಧ್ಯಯನ ನಡೆಸುವವರಿಗೆ ಮಾರ್ಗದರ್ಶಕ ಸೂತ್ರವಾಗಿದೆ.

"ಯಕ್ಷಗಾನ ಪ್ರದರ್ಶನ-ಅರ್ಥವಿಸ್ತಾರ" ಎಂಬ ಇನ್ನೊಂದುಸುದೀರ್ಘ ಲೇಖನದಲ್ಲಿ ಸ್ಥಿರಪಠ್ಯವೊಂದು ಚರಪಠ್ಯವಾಗುವ ಪ್ರಕ್ರಿಯೆಯು ಸಂಸ್ಕೃತಿಯ ವಿವಿಧ ನೆಲೆಗಳಲ್ಲಿ ಹೇಗೆ ಅರ್ಥೈಸುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಪ್ರಸಂಗ ಸಾಹಿತ್ಯವು ಓದಲಿಕ್ಕೆ, ಕೇಳಲಿಕ್ಕೆ, ಹಾಡಲಿಕ್ಕೆ, ಹಿಮ್ಮೇಳದ ಹಿನ್ನೆಲೆಯೊಂದಿಗೆ ನೃತ್ಯಕ್ಕೆ, ಅಭಿನಯಕ್ಕೆ, ವೇಷಗಾರಿಕೆಗೆ, ಮಾತುಗಾರಿಕೆಗೆ ಹೇಗೆ ಒದಗುತ್ತದೆ ಎಂಬುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಪ್ರತಿಯೊಂದು ಸ್ತರದಲ್ಲೂ, ಸಂಸ್ಕೃತಿಯ ಶೋಧ ನಡೆಯುವ ಬಗೆಯನ್ನು ಚರ್ಚಿಸಿದ್ದಾರೆ. "ಪ್ರಸಂಗ ಕಾವ್ಯವೇ ಪ್ರದರ್ಶನದ ತಿರುಳಲ್ಲ. ಅದು ಸ್ಥೂಲವಾಗಿ ಆಧಾರ ಮಾತ್ರ" ಎಂದು ಜೋಶಿಯವರು ನಂಬಿರುವವರು. ಕೃತಿಯಲ್ಲೇ ಅದರ "ಸ್ವಲಕ್ಷಣ" ಇರುವುದು. ಅರ್ಥಗಾರಿಕೆಯಲ್ಲಿ ಆಗಿರುವ ಬೆಳವಣಿಗೆಯು ಕನ್ನಡಿಗರು ಹೆಮ್ಮೆ ಪಟ್ಟುಕೊಳ್ಳುವ ವಾಙ್ಮಯ ಸಿದ್ಧಿಗಳಲ್ಲಿ ಒಂದಾಗಿದೆ" ಎನ್ನುತ್ತಾರೆ. ಪ್ರಸಂಗ ವಸ್ತುವಿನ ಸತತ ಪುನರ್ ಸೃಷ್ಟಿ ರಂಗದಲ್ಲಿ ನಡೆಯುತ್ತಿದ್ದು ಆ ಮೂಲಕ ಪುರಾಣವನ್ನು ಮುರಿದು ಕಟ್ಟುವ ಕ್ರಿಯೆ

ಮಾತುಗಾರಿಕೆಯಲ್ಲಿ ನಡೆಯುತ್ತಿರುತ್ತದೆ. ಸಂಸ್ಕೃತಿಯೊಂದನ್ನು ರೂಪಿಸುವಲ್ಲಿ ಇದು ಮಹತ್ವವಾದದ್ದು ಎಂಬ ನಿಲುವಿಗೆ ಇಲ್ಲಿ ಬರುತ್ತಾರೆ.

"ಯಕ್ಷಗಾನ ಮೌಖಿಕತೆ" ಎಂಬ ಲೇಖನದಲ್ಲಿ ಮೌಖಿಕತೆಯ ಮಹತ್ವ ತಿಳಿಸುತ್ತಾ ಲಿಪಿರೂಪದ ಸಾಹಿತ್ಯಕ್ಕಿಂತ ಭಿನ್ನವಾದ ವಾಕ್ರೂಪದ ಸಾಹಿತ್ಯವು ಪ್ರಾಚೀನತಮವಾದದ್ದು ಹಾಗೂ ಭಾರತೀಯ ಪರಂಪರೆಯಲ್ಲಿ ಹಾಸು ಹೊಕ್ಕಂತಿದೆ. ಆಟಕೂಟಗಳಲ್ಲಿ ಮೌಖಿಕತೆ ಭಿನ್ನವಾಗಿದೆ ಎನ್ನುವ ಡಾ.ಪ್ರಭಾಕರ ಜೋಶಿಯವರು ತಾಳಮದ್ದಲೆ ಅರ್ಥಗಾರಿಕೆಯ ಅನೇಕ ಮಗ್ಗುಲುಗಳನ್ನು ಪರಿಚಯಿಸುತ್ತಾರೆ. ಯಕ್ಷಗಾನ ಪ್ರಸಂಗ ಓದಿದಾಗ ಅದರ ಪ್ರದರ್ಶನದ ದರ್ಶನ ಓದುಗನಿಗೆ ಆಗುವುದಿಲ್ಲ. ಆ ಸಾಹಿತ್ಯ ರಾಗ, ಮಟ್ಟುಗಳ ಮೂಲಕ ಆಕಾರ ಪಡೆದು, ಶೈಲಿಭಾವ ತಾಂತ್ರಿಕ ಅಂಶಗಳ ಮೂಲಕ ಮೈ ಪಡೆದು, ಅರ್ಥಗಾರಿಕೆಯಾಗಿ ವಿಸ್ತರಿಸಿದಾಗ ಮಾತ್ರ ಅದರ ವಿಶ್ವರೂಪದರ್ಶನವಾಗುತ್ತದೆ. ಆಗ ಮಾತ್ರ ಅದು ಸಾಫಲ್ಯ ಹೊಂದುತ್ತದೆ ಎಂಬುದು ಸರಿಯಾಗಿಯೇ ಇದೆ. ಯಕ್ಷಗಾನದಲ್ಲಿ ವಾಚಿಕವೂ ಒಂದು ಅಂಗ. ಆದರೆ ತಾಳಮದ್ದಲೆಯಲ್ಲಿ ಅರ್ಥಗಾರಿಕೆಯ ಸ್ಥಾನ ಬಹು ಹಿರಿದು ಹಾಗೂ ಮಹತ್ವದ್ದು.

ಹಲವು ಸಂಶೋಧನಾತ್ಮಕ ಕೃತಿಗಳ ಮೂಲಕ ಖ್ಯಾತರಾಗಿರುವ ಡಾ.ಪ್ರಭಾಕರ ಜೋಶಿಯವರು "ಯಕ್ಷಗಾನ ಸಂಶೋಧನೆಯ ನೆಲೆಗಳು" ಎಂಬ ಲೇಖನದಲ್ಲಿ ಕಳೆದ ನೂರು ವರ್ಷಗಳಲ್ಲಿ ಯಕ್ಷಗಾನದ ಕುರಿತು ನಡೆದಿರುವ ಚಿಂತನ ಮಂಥನಗಳನ್ನು ಸಾದ್ಯಂತವಾಗಿ ತಿಳಿಸಿಕೊಟ್ಟಿದ್ದಾರೆ. ಡಾ.ವಿ.ರಾಘವನ್, ಸೇಡಿಯಾಪು ಕೃಷ್ಣಭಟ್, ಐರೋಡಿ ಶಿವರಾಮಯ್ಯ ಮುಳಿಯ ತಿಮ್ಮಪ್ಪಯ್ಯ, ಮಂಜೇಶ್ವರ ಗೋವಿಂದ ಪೈ, ಜಿ.ಆರ್.ಪಾಂಡೇಶ್ವರ್, ರಾ.ಭ.ಹಾಸಣಗಿ, ಕೋಟ ಶಿವರಾಮ ಕಾರಂತ, ಕುಬಣೂರು ಬಾಲಕೃಷ್ಣರಾವ್, ಎಂ.ಆರ್.ಶಾಸ್ತ್ರಿ, ತಾಳ್ತಜೆ ಕೃಷ್ಣಭಟ್ ಮುಂತಾದ ಪೂರ್ವಸೂರಿಗಳ ಪರಿಶ್ರಮದಿಂದ ಯಕ್ಷಗಾನ ಕುರಿತಾದ ಸಂಶೋಧನೆಗೆ ಭದ್ರ ತಳಪಾಯ ಲಭಿಸಿದ್ದನ್ನು ಗುರುತಿಸಿದ್ದಾರೆ. ಮುಂದೆ ಅಕಾಡೆಮಿಯ ದೃಷ್ಟಿಕೋನದಿಂದ ರಚಿತಗೊಂಡ ಪ್ರೌಢ ಪ್ರಬಂಧಗಳ ಬಗ್ಗೂ ಹಾಗೂ ಅದರಾಚೆಗೆ ನಡೆದ ಅಧ್ಯಯನಗಳ ಬಗ್ಗೂ, ಸಂಸ್ಮರಣ ಗ್ರಂಥಗಳಲ್ಲಿ ಬಂದಿರುವ ಲೇಖನಗಳ ಬಗ್ಗೂ ಸುಧೀರ್ಘ ವಿವರಣೆ ನೀಡಿದ್ದಾರೆ. ಅಲ್ಲದೆ ಡಾ.ಜೋಶಿಯವರು ಮುಂದೆ ಮಾಡಬಹುದಾದ ಸಂಶೋಧನೆಗಳ ಬಗ್ಗೆ ಕ್ಷಕಿರಣ ಚೆಲ್ಲಿದ್ದಾರೆ.

"ಭೂ ಸುಧಾರಣೆ ಮತ್ತು ಯಕ್ಷಗಾನ ಸಾಮಾಜಿಕತೆ–ಒಂದು ಭಿನ್ನಮತ" ಎಂಬ ಲೇಖನದಲ್ಲಿ ಡಾ.ಪುರುಷೋತ್ತಮ ಬಿಳಿಮಲೆಯವರು ಹಿಂದೆ "ತುಳುವ" ಪತ್ರಿಕೆಯಲ್ಲಿ (ಜೂನ್ 2017 ರ ಸಂಚಿಕೆ) ಬರೆದಿರುವ "ಭೂ ಸುಧಾರಣೆ ಮತ್ತು

ಬದಲಾವಣೆ: ಕರಾವಳಿ ಕರ್ನಾಟಕದ ಉದಾಹರಣೆ" ಎಂಬ ಲೇಖನದಲ್ಲಿ ಪ್ರತಿಪಾದಿಸಿದ ಕೆಲವು ವಿಷಯಗಳ ಬಗ್ಗೆ ತಮ್ಮ ಭಿನ್ನಮತವನ್ನು ಸಾಧಾರವಾಗಿ ಚರ್ಚಿಸಿದ್ದಾರೆ. ಮೊದಲಿಗೆ ಪ್ರೊ.ಬಿಳಿಮಲೆಯವರ ಲೇಖನದಲ್ಲಿ ತಾವು ಕಂಡುಕೊಂಡ ಹನ್ನೊಂದು ಅಂಶಗಳನ್ನು ಎತ್ತಿಕೊಂಡು, ಯಕ್ಷಗಾನ ವ್ಯವಸ್ಥೆಯಲ್ಲಿರುವ ಪದ್ಧತಿಯನ್ನು, ಸಾಂಪ್ರದಾಯಿಕತೆಯನ್ನು ವಿವರಿಸಿ ಅದರಲ್ಲಿ ಉತ್ತರ ನೀಡಿದ್ದಾರೆ. ಭೂ ಸುಧಾರಣೆ ಕಾಲಘಟ್ಟದ ಸಾಮಾಜಿಕ ಹಿನ್ನೆಲೆಯನ್ನು, ಆಚಾರವಿಚಾರಗಳನ್ನು ತಿಳಿಸಿ ಪ್ರೊ.ಬಿಳಿಮಲೆಯವರ ವಾದದ ಬಗ್ಗೆ ತಮ್ಮ ಭಿನ್ನಮತವನ್ನು ವ್ಯಕ್ತಪಡಿಸಿದ್ದಾರೆ. ಈ ಲೇಖನದಲ್ಲಿ ಯಕ್ಷಗಾನ ಸಂಘಟನೆಯ ಒಟ್ಟು ವ್ಯವಸ್ಥೆಯ ಸಮಗ್ರ ಚಿತ್ರಣ ಲಭಿಸುತ್ತದೆ. ಇಪ್ಪತ್ತನೇ ಶತಮಾನದ ಸಾಮಾಜಿಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ.

ಇನ್ನೊಂದು ಲೇಖನದಲ್ಲಿ ನೂರೈವತ್ತು ವರ್ಷಗಳ ಇತಿಹಾಸವುಳ್ಳ ಬಂಟ್ವಾಳ ತಾಳಮದ್ದಲೆಯ ಪರಂಪರೆ ಬಗ್ಗೆ, ಅದರ ಹಿರಿಮೆಯ ಬಗ್ಗೆ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಹಿಂದಿನ ತಲೆಮಾರಿನ ಮಹಾನ್ ಕಲಾವಿದರಾದ ಅಸಂಖ್ಯರ ಹೆಸರುಗಳನ್ನು ತಿಳಿಸಿ, ಅವರುಗಳು ಮುಂದಿನ ಕಲಾವಿದರನ್ನು ಬೆಳೆಸಿದ ಬಗೆಯನ್ನು ವಿವರಿಸಿ, ಈ ಲೇಖನದಲ್ಲಿ ತಾವು 1970ರ ಹಿಂದುಮುಂದೆ ಭಾಗವಹಿಸಿದ ಘಟನೆಯನ್ನು ತಿಳಿಸಿಕೊಟ್ಟಿದ್ದಾರೆ. "ಕುಮಾರವ್ಯಾಸ ಭಾರತ ಮತ್ತು ಯಕ್ಷಗಾನ" ಎಂಬ ಲೇಖನದಲ್ಲಿ ತೌಲನಿಕ ಅಧ್ಯಯನವೊಂದನ್ನು ನಡೆಸಿಕೊಟ್ಟಿದ್ದಾರೆ. ಕುಮಾರವ್ಯಾಸನು ಪ್ರಸಂಗಗಳಿಗೆ ಆಧಾರ ಒದಗಿಸುವುದರೊಂದಿಗೆ ಯಕ್ಷಗಾನ ಕವಿಗಳಿಗೆ ಮಾದರಿಯಾಗಿ ಪ್ರಭಾವ ಬೀರಿ ಮುನ್ನಡೆಸಿದ್ದಾನೆ. ಎಷ್ಟೋ ಅವನ ಷಟ್ಪದಿಗಳನ್ನು ಅನುಕರಿಸಿ, ಅನುಸರಿಸಿ ನಮ್ಮ ಕವಿಗಳು ಪ್ರತಿಸೃಷ್ಟಿ ಮಾಡಿದ್ದಾರೆ. ಇಲ್ಲಿ ಡಾ.ಜೋಶಿಯವರು ಕುಮಾರವ್ಯಾಸನ ದಟ್ಟಪ್ರಭಾವ ಇರುವ ಪ್ರಸಂಗಗಳನ್ನು ತಿಳಿಸಿದ್ದಲ್ಲದೆ, ಯಾವ ಭಾಗದಲ್ಲಿ ಆತನ ಷಟ್ಪದಿಗಳು ಮಾದರಿಯಾಗಿ ಬಳಕೆಯಾಗಿವೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ದೇವಿದಾಸ, ಗೆರೆಸೊಪ್ಪೆ ಶಾಂತಪ್ಪಯ್ಯ, ಅಜಪುರದ ವಿಷ್ಣು, ವೆಂಕಟ, ರಾಮಪುತ್ರ ವಿಷ್ಣು ಮುಂತಾದವರು ಕುಮಾರವ್ಯಾಸನಿಗೆ ಎಲ್ಲೆಲ್ಲಿ ಋಣಿಗಳಾಗಿದ್ದಾರೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಯಕ್ಷಗಾನದ ಅರ್ಥಗಾರಿಕೆಯಲ್ಲೂ, ಅಭಿವ್ಯಕ್ತಿಯ ಸೊಗಸಿಗಾಗಿ, ಸಂವಾದಗಳಲ್ಲಿ ಅರ್ಥಧಾರಿಗಳು ಕುಮಾರವ್ಯಾಸನ ಷಟ್ಪದಿಗಳನ್ನು, ಭಾವವಿಲಾಸವನ್ನು ಬಳಸಿದ ವಿಪುಲ ದೃಷ್ಟಾಂತಗಳಿವೆ ಎಂಬ ಡಾ.ಜೋಶಿಯವರ ಮಾತು ಸತ್ಯವೇ ಆಗಿದೆ. "ವಿಶಾಲವಾದ ಪರಂಪರೆಯ ಒಂದು ದೊಡ್ಡ ಸಾಹಿತ್ಯ ಸ್ವರ್ಣರೇಖೆಯಾದ ಯಕ್ಷಗಾನಗಳಲ್ಲಿ ಕುಮಾರವ್ಯಾಸ ಭಾರತವನ್ನು ಆಕರವಾಗಿಸಿದ ರಚನೆಗಳೆಲ್ಲವೂ ಯೋಗ್ಯತೆಯಿಂದಲೂ, ಪ್ರಯೋಗ ಪ್ರಾಚುರ್ಯದಿಂದಲೂ ಉತ್ಕೃಷ್ಟ ಮಟ್ಟದಲ್ಲಿವೆ" ಎಂಬ ಲೇಖಕರ ಅಭಿಪ್ರಾಯ ಎಲ್ಲರೂ ಒಪ್ಪುವಂಥದ್ದಾಗಿದೆ.

"ಎಸೆವ ಕನ್ನಡ ಜಸ" ಮತ್ತು "ಯಕ್ಷಗಾನ ಸಾಂಸ್ಕೃತಿಕ ಶ್ರೀಮಂತಿಕೆ" ಎಂಬ ಎರಡು ಲೇಖನಗಳಲ್ಲಿ ಈ ಕಲೆಯ ಸಾಂಸ್ಕೃತಿಕ ಮಹತ್ವನ್ನು ಮತ್ತು ಅದು ಕನ್ನಡ ನಾಡು ನುಡಿಗೆ ಕೊಟ್ಟ ಕೊಡುಗೆಯನ್ನು ಸವಿವರವಾಗಿ ಡಾ.ಜೋಶಿಯವರು ಚರ್ಚಿಸಿದ್ದಾರೆ. "ಸಂಸ್ಕೃತಿ ಎಂದರೆ ಪ್ರಕೃತಿಯನ್ನು ಆಧರಿಸಿ ಮಾನವನು ನಿರ್ಮಿಸಿದ ಜೀವನ ವಿನ್ಯಾಸ ವಿಧಾನ" ಎನ್ನುವ ಇವರು ಯಕ್ಷಗಾನವು ಪ್ರಕೃತಿಯನ್ನು ಆಧರಿಸಿ ಬೆಳೆದು ಬಂದ ಬಗೆಯ ವಿಶ್ಲೇಷಣೆ ಮಾಡಿದ್ದಾರೆ. ಯಕ್ಷಗಾನದ ಬೇರೆಬೇರೆ ಅಂಗಗಳು ಹೇಗೆ ಸಿರಿವಂತಿಕೆಯಿಂದ ಕೂಡಿವೆ ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಕನ್ನಡ ಬೆಳೆಸುವಲ್ಲಿ, ಬೆಳಗಿಸುವಲ್ಲಿ ಯಕ್ಷಗಾನದ ಪಾತ್ರ ಹಿರಿದು. ಈ ಕಾರಣ ಯಕ್ಷಗಾನ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಸ್ಥಾನವಿದೆ. ಅದನ್ನು ನಾವು ಕೇಳಿ ಪಡೆಯಬೇಕಾಗಿಲ್ಲ. ಕನ್ನಡ ವಿದ್ವಾಂಸರು ಪರಿಗಣಿಸದೇ ಹೋದರೆ ಅವರಿಗೆ ಅದು ಅರಕೆ ಎನ್ನುತ್ತಾರೆ. "ಯಕ್ಷಗಾನದಲ್ಲಿ ಭಾರತೀಯತೆ", "ಪರಂಪರೆಯ ಸುತ್ತ", "ತುಳು ಯಕ್ಷಗಾನ – ಕೆಲವು ನೋಟಗಳು" ಮುಂತಾದ ಲೇಖನಗಳು ಸಾಂದರ್ಭಿಕವಾಗಿ ಬಂದಿದ್ದು, ಆಯಾಯ ಸಂದರ್ಭದಲ್ಲಿ ಮಾಡಿದ ಉಪನ್ಯಾಸವನ್ನು ಆಧರಿಸಿ ಬರಹರೂಪ ಪಡೆದುಕೊಂಡಿವೆ. ಭಾರತೀಯ ಸಂವೇದನೆ ಬಗ್ಗೆ ತಮ್ಮ ಒಳನೋಟವನ್ನು ತಿಳಿಸಿರುವ ಡಾ.ಜೋಶಿಯವರು ಯಕ್ಷಗಾನದಲ್ಲಿ ಇದು ಹೇಗೆ ಅಂತರ್ಗತವಾಗಿದೆ? ಎಂಬುದನ್ನು ತಿಳಿಸಿ ಕೊಡುತ್ತಾರೆ. ಯಕ್ಷಗಾನ ಪಠ್ಯದಲ್ಲಿ, ಅರ್ಥಗಾರಿಕೆಯಲ್ಲಿ, ಪ್ರದರ್ಶನ ವ್ಯವಸ್ಥೆಗಳಲ್ಲಿ ಭಾರತೀಯ ಪ್ರಜ್ಞೆ ಒಂದಿಲ್ಲೊಂದು ರೀತಿಯಿಂದ ಕಾಣಿಸಿಕೊಳ್ಳುತ್ತದೆ ಎಂಬುದು ಡಾ.ಪ್ರಭಾಕರ ಜೋಶಿಯವರ ಅಭಿಮತವಾಗಿದೆ.

ಹೀಗೆ ಇಲ್ಲಿನ ಎಲ್ಲಾ ಲೇಖನಗಳಲ್ಲಿ ಡಾ.ಜೋಶಿಯವರ ವೈಚಾರಿಕ ಸ್ಪರ್ಶವಿದೆ. ಆಕರ್ಷಕ ಮಂಡನಾ ವಿಧಾನವಿದೆ. ಸಂಶೋಧನಾತ್ಮಕ ನಿಲುವುಗಳಿವೆ. ತಾಳಮದ್ದಲೆಯ ಅರ್ಥಧಾರಿಗಳಾಗಿ ಅಗ್ರಮಾನ್ಯರಾಗಿರುವ ಪ್ರಭಾಕರ ಜೋಶಿಯವರು "ವೀರಗಸೆ"ಯ ಮೂಲಕ ತಾವೊಬ್ಬ ಮುಂಚೂಣಿಯ ಸಂಶೋಧಕರೆಂಬುದನ್ನು ರುಜುವಾತು ಗೊಳಿಸಿದ್ದಾರೆ.

("ವಿಜಯ ಕರ್ನಾಟಕ" ಪತ್ರಿಕೆಯ ಪುರವಣಿ ವಿಭಾಗದಲ್ಲಿ ಪ್ರಕಟವಾದ
ವಿಮರ್ಶಾ ಲೇಖನದ ವಿಸ್ತೃತ ರೂಪ)

*

ಶೋಧನಾತ್ಮಕ ವಿಚಾರಗಳ ತವನಿಧಿ

ಕರ್ನಾಟಕ ಯಕ್ಷಗಾನ ಅಕಾಡೆಮಿಯು ರಾಜ್ಯಮಟ್ಟದ ಸಮಗ್ರ ಯಕ್ಷಗಾನ ಸಮ್ಮೇಳನವನ್ನು ಮೊದಲ ಬಾರಿಗೆ ಉಡುಪಿಯಲ್ಲಿ ನಡೆಸುವ ಮೂಲಕ ಹೊಸ ಕಾರ್ಯಸೂಚಿಗೆ ನಾಂದಿ ಹಾಡಿತು. ಈ ಸಂದರ್ಭದಲ್ಲಿ ಅಕಾಡೆಮಿಯು ಪ್ರಸಿದ್ಧ ಚಿಂತಕರಿಂದ, ವಿದ್ವಾಂಸರಿಂದ ಲೇಖಕರಿಂದ ಯಕ್ಷಗಾನಕ್ಕೆ ಸಂಬಂಧಿಸಿದಂತೆ ಹದಿನೆಂಟು ಪುಸ್ತಕಗಳನ್ನು ಏಕಕಾಲಕ್ಕೆ ಪ್ರಕಟಿಸುವ ಮೂಲಕ ಸ್ತುತ್ಯಾರ್ಹ ಕೆಲಸ ಮಾಡಿತು. ಇವುಗಳಲ್ಲಿ ಡಾ. ರಾಘವ ನಂಬಿಯಾರ್‌ರವರ "ಯಕ್ಷಗಾನ ಬೇರು ಹೀರು" ಮಹತ್ವದ ಕೃತಿಯಾಗಿದೆ. ಈ ಪುಸ್ತಕದಲ್ಲಿರುವ ಹದಿನೈದು ಲೇಖನಗಳಲ್ಲಿ ಐದು ಲೇಖನಗಳು ದೀರ್ಘವೂ, ಸಂಶೋಧನಾತ್ಮಕವೂ, ಆಳವಾದ ಒಳನೋಟ ಉಳ್ಳವು ಆಗಿವೆ. ಈಗಾಗಲೇ ಡಾ.ನಂಬಿಯಾರ್ ಅವರು ತಮ್ಮ "ಹಿಮ್ಮೇಳ" ಕೃತಿಯ ಮೂಲಕ ತಮ್ಮ ಖಚಿತವಾದ ಮಂಡನಾ ವಿಧಾನವನ್ನು ತೋರಿಸುವ ಮೂಲಕ ಬಹು ಮನ್ನಣೆಗೆ ಒಳಗಾದವರು. ಅದೇ ಬಗೆಯ ವಿಶೇಷತೆಗಳನ್ನು ಈ ಕೃತಿಯಲ್ಲೂ ನಾವು ಕಾಣಬಹುದಾಗಿದೆ. ಈ ಕಾರಣದಿಂದಲೇ ನಂಬಿಯಾರ್‌ರ "ಯಕ್ಷಗಾನ ಬೇರು ಹೀರು" ಮಹತ್ವದ ಕೃತಿಯಾಗಿದೆ.

ಈ ಪುಸ್ತಕದ ಮೊದಲ ಲೇಖನವಾದ "ಪುರುಷರ ಕಟ್ಟುಗೆ ಮತ್ತು ಯಕ್ಷಗಾನ"ವು ಡಾ. ನಂಬಿಯಾರ್‌ರು ಕ್ಷೇತ್ರಕಾರ್ಯ ಮಾಡುವ ಪರಿಯನ್ನು ಬಿತ್ತರಿಸುತ್ತದೆ. ಯಾವುದೇ ಸಂಶೋಧನೆಗೆ ಭದ್ರವಾದ ಬುನಾದಿಯೆಂದರೆ ಕ್ಷೇತ್ರಕಾರ್ಯ. ಅದರಲ್ಲಿ ಸಂಪೂರ್ಣ ತೊಡಗಿಕೊಂಡಾಗ ಮಾತ್ರ ಖಚಿತವಾದ ನಿಲುವಿಗೆ ಬರಲು ಸಾಧ್ಯ. ಲೇಖಕರು ಪ್ರತ್ಯಕ್ಷ ಅನುಭವಕ್ಕಾಗಿ ಧರ್ಮಸ್ಥಳದ ಸಮೀಪದ ಮುಡಾರಿಗೆ ತೆರಳಿ, ಸಂಪೂರ್ಣವಾಗಿ ಪುರುಷರ ಕಟ್ಟುಗೆ ನೋಡಿ, ಅನೇಕ ಹೊಸ ವಿಚಾರಗಳನ್ನು ತಿಳಿಸುತ್ತಾರೆ. ಈ ಲೇಖನದಲ್ಲಿ ಅದರ ಸಮಗ್ರ ವಿವರಣೆ ನೀಡಿರುವುದಲ್ಲದೆ, ಅದು ಹಿಂದೆ ನಡೆಯುತ್ತಿದ್ದ ಬಗೆ, ಆಗಿರುವ ಬದಲಾವಣೆ, ಆ ಬಗೆಯಾಗಲು ಕಾರಣ ಮುಂತಾದುವನ್ನು ದಾಖಲಿಸುತ್ತಾರೆ.

ಸುಗ್ಗಿ ಹುಣ್ಣಿಮೆಯ ಸಂದರ್ಭದಲ್ಲಿ ನಡೆಯುವ ಈ ಆಚರಣೆ ಕೃಷಿ ಮೂಲದ್ದು ಎನ್ನುತ್ತಾರೆ. "ಪುರುಷರ ಕಟ್ಟುಗೆ" ತಂಡವು ಪೂರ್ವ ನಿರ್ಧರಿತ ಮನೆಗಳಿಗೆ ದೇವರ ಸಹಿತ ತೆರಳಿ ಸಾಮುದಾಯಿಕ ಆಚರಣೆಯ ಅಂಗವಾಗಿ ಪಾತ್ರಾಭಿನಯವನ್ನು ಮಾಡುತ್ತಾರೆ. ಪ್ರದರ್ಶನವನ್ನು ಯಕ್ಷಗಾನದೊಂದಿಗೆ ಹೋಲಿಸುವ ಡಾ. ನಂಬಿಯಾರ್‌ರವರು ಅನೇಕ ಸಾಮ್ಯಗಳನ್ನು ವಿಶ್ಲೇಷಣೆ ಮಾಡುತ್ತಾರೆ. ಎಲ್ಲಾ ಜಾತಿಯವರ ಪಾಲ್ಗೊಳ್ಳುವಿಕೆ, ಕೃಷಿ ಪ್ರಧಾನ ವ್ಯವಸ್ಥೆಯಿಂದ ಬಂದ ರೀತಿ, ಆಶು ಸಂಭಾಷಣಾ ಕ್ರಮ, ಕಾಯಕ ಶಕ್ತಿಯ ಪ್ರದರ್ಶನ, ಮಾತಿನಲ್ಲಿ ಗಂಟಲ ಶಕ್ತಿಗಿರುವ ಮೇಲ್ಮೆ, ಕಾಣಿಕೆ ಸ್ವೀಕಾರದ ನಂತರ ಸ್ವಯಂ ಘೋಷಣಾ ಪದ್ಧತಿ ಮುಂತಾದ ಅಂಶಗಳು ಎರಡೂ ಕಲೆಗಳಲ್ಲಿ ಸಮಾನ ನೆಲೆಯಲ್ಲಿವೆ ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಬಯಲಾಟದ "ಕಟ್ಟು ಹಾಸ್ಯ"ವು "ಪುರುಷರ ಕಟ್ಟುಗೆ"ಯ ಪಳೆಯುಳಿಕೆಯಂತಿದ್ದು ಸಮಾನ ಮನೋಭೂಮಿಕೆಯನ್ನು ಕಾಣಬಹುದು. ಇಲ್ಲಿ. ಡಾ. ರಾಘವ ನಂಬಿಯಾರ್ ರವರು ಹೇಳುವ "ಬಹುಶಃ ಎಲ್ಲೆಲ್ಲಿ ಪುರುಷರ ತಂಡಗಳು ಇಡೀಯಾಗಿ ಯಕ್ಷಗಾನ ಮೇಳಗಳಾಗಿ ಬದಲಿಸಿಕೊಂಡಿತೋ ಅಲ್ಲೆಲ್ಲ ಪುರುಷರ ಕಟ್ಟುಗೆ ತಂಡಗಳು ಅಳಿದವು. ಅಲ್ಲೆಲ್ಲ ಪ್ರಬಲ ಯಕ್ಷಗಾನ ಕೇಂದ್ರಗಳು ದೇವಸ್ಥಾನ ಮೂಲವಾಗಿ ಬೆಳೆದವು." ಎಂಬುದು ಚರ್ಚಾರ್ಹ ವಿಷಯವಾಗಿದೆ. ಕರಾವಳಿಯ ತಾಲೂಕುಗಳಲ್ಲಿ ಯಕ್ಷಗಾನವು ದಟ್ಟವಾಗಿ "ಪುರುಷರ ಕಟ್ಟುಗೆ" ಅಳಿಯಿತು ಎಂಬುದು ಒಪ್ಪಬೇಕಾದದ್ದೇ. ನಾಥಪಂಥಕ್ಕೂ "ಪುರುಷರ ಕಟ್ಟುಗೆ" ಸಂಪ್ರದಾಯಕ್ಕೂ ಇರುವ ಸಂಬಂಧವನ್ನು ಎಳೆಎಳೆಯಾಗಿ ಬಿಡಿಸಿಟ್ಟು ಮುಂದೆ ಆಟದ ಮೇಳದ ಚೌಕಿಯು ನಾಥಪಂಥ ದೇಗುಲಗಳ "ಝುಂಡಿ"ಯ ರೂಪದಲ್ಲಿ ಕಾಣಿಸುತ್ತದೆ ಎನ್ನುತ್ತಾರೆ. ನಾಥಪಂಥದ ಜೋಗಿಗಳ ಪ್ರಭಾವವು ಯಕ್ಷಗಾನದ ಮೇಲೆ ಇರುವುದನ್ನು ಗಮನಿಸಿದ ನಂಬಿಯಾರರು ಯಕ್ಷಗಾನಕ್ಕೆ ಉಚ್ಚವರ್ಗದವರು ಪ್ರವೇಶಿಸುವ ಮುನ್ನ ಕೃಷಿಕರೇ ಮುಂತಾದ ಇತರೇ ವರ್ಗದ ಕಲಾವಿದರು ಈ ಕಲೆಯನ್ನು ಬೆಳೆಸಿದರು ಎಂಬ ನಿಲುವಿಗೆ ಬರುತ್ತಾರೆ. ಇವೆರಡೂ ಕಲೆಗಳು ಕೃಷಿ ಸಂಸ್ಕೃತಿಯಿಂದ ಹಾಗೂ ನಾಥಪಂಥದ ಸಂಪ್ರದಾಯದಿಂದ ಜನ್ಯವಾದದ್ದು ಎಂಬುದು ಇವರ ಒಟ್ಟಾರೆ ಗ್ರಹಿಕೆಯಾಗಿದೆ. ಹೀಗೆ ಈ ಲೇಖನದಲ್ಲಿ ಹೊಸ ಸಂಗತಿವೊಂದನ್ನು ಪ್ರಸ್ತುತ ಪಡಿಸುತ್ತಾ, ಯಕ್ಷಗಾನದ ಉಗಮ ವಿಕಾಸದ ಬಗ್ಗೆ ಚಿಂತಿಸಬೇಕಾದ ವಿಚಾರಗಳ ಕಡೆಗೆ ಓದುಗರ ಗಮನ ಸೆಳೆಯುತ್ತಾರೆ. ಯಕ್ಷಗಾನವು ಅನೇಕ ಸ್ಥಳೀಯ ಪ್ರಾಕ್ತನ ಕಲೆಗಳಿಂದ ಪ್ರಭಾವಿತವಾಗಿ ತನ್ನದೇ ಆದ ಪರಂಪರೆಯನ್ನು ರೂಢಿಸಿಕೊಂಡಿತು ಎಂಬುದಕ್ಕೆ "ಪುರುಷರ ಕಟ್ಟುಗೆ ಮತ್ತು ಯಕ್ಷಗಾನ" ಎಂಬ ಈ ಲೇಖನವೇ ಸಾಕ್ಷಿ.

ಈ ಸಂಕಲನದಲ್ಲಿರುವ "ರಂಗ ಸಂಗೀತದ ನಡಿಗೆ"ಯೆಂಬುದು ಯಕ್ಷಗಾನದ ಬಗ್ಗೆ ಮಾತನಾಡುತ್ತಾ ಹಿರಿಯರಾದ ಹಿರಿಯ ಬಲಿಪ ನಾರಾಯಣ ಭಾಗವತರ

ಹಾಗೂ ಕುಂಜಾಲು ಶೇಷಗಿರಿಕಿಣಿ ಭಾಗವತರ ಹಾಡುಗಾರಿಕೆಯ ಸಂಪ್ರದಾಯಗಳು ಯಕ್ಷಗಾನದಲ್ಲಿ ಮರುಕಳಿಸಿದ ರೀತಿಯನ್ನು ವಿವರಿಸಿದ್ದಾರೆ. ಅದೇ ರೀತಿ ಅಗರಿಶೈಲಿ ಹಾಗೂ ಜಾನುವಾರು ಕಟ್ಟೆಯವರ ಶೈಲಿ ಮತ್ತು ಮರವಂತೆಯವರ ಶೈಲಿಗಳೆಲ್ಲಾ ಮುಂದಿನವರಲ್ಲಿ ವಿಸ್ತರಣೆಗೊಂಡ ರೀತಿಯನ್ನು ತಿಳಿಸಿಕೊಟ್ಟಿದ್ದಾರೆ. ದಕ್ಷಿಣಾದಿ ಸಂಗೀತಾಭ್ಯಾಸ ಮಾಡಿದ ಭಾಗವತರುಗಳ ಪ್ರವೇಶವು ರಂಗದ ಮೇಲೆ ಉಂಟು ಮಾಡಿದ ಪ್ರಭಾವವನ್ನು ಇಲ್ಲಿ ನಂಬಿಯಾರರು ಪರಿಶೀಲಿಸಿದ್ದಾರೆ. ಯಕ್ಷಗಾನದಲ್ಲಿ ಗುರುಶಿಷ್ಯ ಪರಂಪರೆ ಹರಿದು ಬಂದ ಬಗೆಗಿನ ಅವರ ವಿಚಾರಧಾರೆಗಳು ಅಧಿಕೃತವೂ, ಮಾನ್ಯವೂ ಆಗಿದೆ.

ಈ ಲೇಖನದ ಉತ್ತರಾರ್ಧವು ಭಿನ್ನವಾಗಿದ್ದು ಅಲ್ಲಿ ಅವರು ಯಕ್ಷಗಾನ ಸಂಗೀತದ ಮೂಲ ವಿಚಾರಗಳ ಕಡೆ ನಮ್ಮ ಗಮನ ಸೆಳೆಯುತ್ತಾರೆ. ಕೆಲವೊಮ್ಮೆ ಯಕ್ಷಗಾನ ಭಾಗವತಿಕೆಯು ಸಂಗೀತ ಕಛೇರಿಯಾಗಿ ಮಾರ್ಪಡುವುದನ್ನು ನಂಬಿಯಾರರು ವಿರೋಧಿಸುತ್ತಾರೆ. "ಯಕ್ಷಗಾನದಲ್ಲಿ ಆಗಬೇಕಾದುದು ಕನಿಷ್ಠ ಪಕ್ಷ ಎಂಟು ವಿಭಿನ್ನ ಸ್ಥಾಯಿಭಾವಗಳ ಮತ್ತು ಅನುಷಂಗಿಕ ಸಂಚಾರಿಭಾವಗಳ ಅಭಿವ್ಯಕ್ತಿ. ರಸಗಳ ಅಭಿವ್ಯಕ್ತಿಗಿರುವ ಲೋಕಧರ್ಮ ಮಿಳಿತವಾದ ಸ್ವರಪ್ರಬಂಧದಿಂದ ಸಾಹಿತ್ಯ ಪ್ರಬಂಧವನ್ನು ಪ್ರತಿಪಾದಿಸಬೇಕಾದ ಯಕ್ಷಗಾನ ಸಂಗೀತದ ಸ್ಥಾನದಲ್ಲಿ ಕಛೇರಿ ಗಾಯನದ ಸ್ವರ ಸಂಚಾರಗಳನ್ನು ತರುವುದು ನಿಜಕ್ಕೂ ಹೆಡ್ಡುತನ" ಎಂಬ ಮಾತುಗಳೇ ಇದಕ್ಕೆ ಸಾಕ್ಷಿ. "ಛಂದಸ್ಸು ಮತ್ತು ತಾಳದ ಅಳವಡಿಕೆ" ಎಂಬ ವಿಚಾರದಲ್ಲಿ ಡಾ.ನಂಬಿಯಾರರು ಅನೇಕ ಗಹನ ವಿಚಾರಗಳನ್ನು ಓದುಗರಿಗೆ ಮನದಟ್ಟು ಮಾಡಿಸುತ್ತಾರೆ. ಯಕ್ಷಗಾನದ ನಾಟ್ಯಕ್ಕೆ ಹಾಡುಗಾರಿಕೆಯ ಗಮಕವೇ ಆಧಾರವೆನ್ನುವ ಮಾತು ತಾಳದ ಪದಗಳಲ್ಲಿ ಗಮಕಗಳು ಅಕ್ಷರ ಕಾಲ ನಿಷ್ಠವೂ, ಛಂದೋನಿಷ್ಠವು ಆಗಿರುತ್ತವೆ ಎಂಬುದನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ಯಕ್ಷಗಾನದ ನಾಟ್ಯವು ಭಾಗವತನ ಹಾಡುಗಾರಿಕೆಯನ್ನು ಅವಲಂಬಿಸಿದೆಯೇ ಹೊರತು ಚಂಡೆ, ಮದ್ದಳೆಗಳ ನುಡಿತವನ್ನು ಅವಲಂಬಿಸಿಲ್ಲ ಎಂಬುವುದು ಇವರ ಬಲವಾದ ನಂಬಿಕೆ. ಇಂದಿನ ಭಾಗವತರು ಯಕ್ಷಗಾನದ ಹಾಡುಗಾರಿಕೆಯು "ರಂಗ ಸಂಗೀತ" ಎಂಬುದನ್ನು ಮರೆಯಬಾರದು ಎನ್ನುತ್ತಾರೆ. ನಂಬಿಯಾರರು "ನಾಟ್ಯಶಾಸ್ತ್ರದ ನಿಗದವನ್ನು ಗರಿಷ್ಠವಾಗಿ ತನ್ನ ಲಕ್ಷಣದಲ್ಲಿ ಉಳಿಸಿಕೊಂಡಿರುವ ಯಕ್ಷಗಾನ ಬಹುಶಃ ಇಡಿಯ ಭಾರತದಲ್ಲಿ ತನ್ನತನ ಉಳಿಸಿಕೊಂಡಿರುವ ಪಾರಂಪರೀಯ ರಂಗ ಸಂಗೀತ" ಎಂಬ "ಭರತ ವಾಕ್ಯ"ವನ್ನು ಇಲ್ಲಿ ಬರೆದಿದ್ದಾರೆ.

"ಯಕ್ಷಗಾನದ ಬೇರು ಹೀರು" ಸಂಕಲನದಲ್ಲಿನ ಇನ್ನೊಂದು ಕಾಳಜಿಯಿಂದ ಕೂಡಿದ ಲೇಖನವೆಂದರೆ "ತೆಂಕುತಿಟ್ಟಿನ ವೇಷ ಪ್ರಸಾಧನ." ಇಲ್ಲಿ ಲೇಖಕರು

ಪಾತ್ರಗಳಿಗೆ ಹಾಗೂ ರಸಾಭಿವ್ಯಕ್ತಿಗೆ ಪೂರಕವಾದ ಬಣ್ಣಗಳು ಯಾವುವು? ಅವು ಹೇಗಿರಬೇಕು? ಎಂಬ ಜಿಜ್ಞಾಸೆಗೆ ಭರತನ ನಾಟ್ಯಶಾಸ್ತ್ರ ಹಾಗೂ ಪ್ರಾಚೀನ ಕಾವ್ಯಗಳಿಂದ ಹೆಕ್ಕಿದ ಉಲ್ಲೇಖಗಳನ್ನು ಉದಾಹರಿಸುತ್ತಾರೆ. ಬಣ್ಣಗಾರಿಕೆಗೆ ಯಾವುದು ನೆಲೆಗಟ್ಟಾಗಬೇಕು ಎಂಬುದನ್ನು ಸುದೀರ್ಘವಾಗಿ ಚರ್ಚಿಸಿ, ಚಿತ್ರ ಸಹಿತ ಬೇರೆಬೇರೆ ಪಾತ್ರಗಳ ವೇಷಗಾರಿಕೆಯನ್ನು ವಿವರಿಸಿದ್ದಾರೆ. ಮುಖ ಪ್ರಸಾಧನದ ಹಿಂದಿರುವ ಸಂಗತಿಗಳನ್ನು ಚರ್ಚಿಸಿದ್ದಾರೆ. ಕೆಲ ಪಾತ್ರಗಳ ಬಣ್ಣಗಾರಿಕೆಯಲ್ಲಿ ಕಾಲ್ಪನಿಕತೆ ಹೇಗೆ ಒಡಮೂಡಿರಬೇಕೆಂಬ ಬಗೆಗಿನ ಇವರ ಕುತೂಹಲ ಹಾಗೂ ಊಹೆಗಳು ಓದುಗರನ್ನು ಚಿಂತನೆಗೆ ಹಚ್ಚುತ್ತವೆ. ವೇಷಗಾರಿಕೆಯ ಪುನಾರಚನೆಯ ಬಗ್ಗೆ ಚಿಂತಿಸುವವರೆಲ್ಲ ವ್ಯಾಪಾರೀ ದೃಷ್ಟಿ ಬಿಟ್ಟು ಪಾತ್ರದ ಘನತೆ, ಗೌರವ ಮುಕ್ಕಾಗದಂತೆ ನೋಡಿಕೊಳ್ಳಬೇಕು ಎನ್ನುತ್ತಾರೆ. ಪುಂಡುವೇಷ, ಸ್ತ್ರೀ ವೇಷ, ಬಣ್ಣದವೇಷಗಳ ಬಗೆಗಿನ ವೇಷಗಾರಿಕೆಯ ಕುರಿತು ಇವರು ನೀಡಿರುವ ಸಲಹೆಗಳ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯದ ಪರಿಶ್ರಮ ಮತ್ತು ಗಾಢಚಿಂತನೆಗಳು ಅಡಗಿವೆ. ಇಲ್ಲಿ ಒದಗಿಸಿದ ದಾಖಲೆಗಳು ಕೂಡ ಮಹತ್ವದ್ದು. ಯಕ್ಷಗಾನದ ವೇಷಗಾರಿಕೆಯು ಬೇರೆ ಪ್ರಕಾರದ ವೇಷಗಾರಿಕೆಗಿಂತ ಹೇಗೆ ಭಿನ್ನ? ಏಕೆ ಭಿನ್ನ? ಎಂಬುದನ್ನು ಸಕಾರಣವಾಗಿ ಚರ್ಚಿಸಿದ್ದಾರೆ. "ದಾರಿ ತಪ್ಪಿಸಿಕೊಂಡ ವೇಷಗಳ ಪುನಾರಚನೆಯು ಇಂದಿನ ತುರ್ತು" ಎನ್ನುವ ನಂಬಿಯಾರರು ಅವು ಹೇಗಿರಬೇಕೆಂಬ ಬಗ್ಗೆ ದಾರಿದೀಪ ತೋರಿದ್ದಾರೆ. ಒಟ್ಟಂದದಲ್ಲಿ ಈ ಲೇಖನ ತೆಂಕುತಿಟ್ಟಿನ ವೇಷಗಾರಿಕೆಯ ಪ್ರಸಾದನದ ಬಗ್ಗೆ ಡಾ.ನಂಬಿಯಾರರಿಗೆ ಇರುವ ಸ್ಪಷ್ಟ, ಖಚಿತ ಚಿಂತನೆಗಳಿಗೆ ಸಾಕ್ಷಿಯಾಗಿದೆ.

"ಬಿಂಬರೂಪದ ಬೇರುಗಳು" ಎಂಬ ಲೇಖನದಲ್ಲಿ ಡಾ.ನಂಬಿಯಾರರು ಯಕ್ಷಗಾನದ ವೇಷಭೂಷಣಗಳ ಹಾಗೂ ಹಚ್ಚಿಕೊಳ್ಳುವ ನಾಮಮುದ್ರೆಗಳ ಹಿನ್ನೆಲೆಯಲ್ಲಿ ತಿರುಪತಿ ತಿಮ್ಮಪ್ಪನ ಹಾಗೂ ಪಂಡರಾಪುರದ ವಿಠಲನ ಅಲಂಕರಣದ ಛಾಯೆ ಇದೆ ಎಂಬ ವಿಚಾರವನ್ನು ಮುಂದಿಡುತ್ತಾರೆ. ಇದರ ಸಮರ್ಥನೆಗೆ ಸಚಿತ್ರವಾದ ವಿವರಣೆಯನ್ನು, ದೇವರುಗಳ ಕಿರೀಟ, ಅಲಂಕರಣದ ಆಭರಣಗಳೆಲ್ಲ ಒಂದಿಲ್ಲ ಒಂದು ಬಗೆಯಿಂದ ಯಕ್ಷಗಾನದ ವೇಷಭೂಷಣಗಳಲ್ಲಿ ಮರುಹುಟ್ಟು ಹೊಂದಿದೆ ಎಂಬ ವಿವರಣೆಯನ್ನು ಇಲ್ಲಿ ಕೊಟ್ಟಿದ್ದಾರೆ. ಪ್ರಾಚೀನ ಕಾಲದಿಂದಲೂ ಭರತಖಂಡವು ವ್ಯಾಪಾರ ವಹಿವಾಟುಗಳಿಗೆ ವಿಶ್ವದಲ್ಲೇ ಖ್ಯಾತಿಗೊಂಡಿದೆ. ಹಡಗಿನ ಮೂಲಕ ಪೌರಾತ್ಯ ರಾಷ್ಟ್ರಗಳಿಗೆ ತೆರಳಿ ಅಲ್ಲಿ ಭಾರತೀಯ ಧರ್ಮ, ಸಂಸ್ಕೃತಿಯನ್ನು ಪ್ರತಿಷ್ಠಾಪಿಸಲು ಈ ವ್ಯಾಪಾರ ವಹಿವಾಟುಗಳು ಕಾರಣವಾಗಿವೆ. ಭರತ ಖಂಡದ ಒಳಗೂ ವಣಿಕ ಶ್ರೇಷ್ಠರ ಗುಂಪುಗಳು ಹೇರನ್ನು ಹೇರಿಕೊಂಡು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗುತ್ತಿದ್ದ, ವ್ಯವಹರಿಸುತ್ತಿದ್ದ ವಿವರಗಳು ಹಲವು ಕಾವ್ಯಗಳಲ್ಲಿ ಬಂದಿವೆ. ಲೇಖಕರು ಈ ವಿವರವನ್ನು ಆಧಾರವಾಗಿಟ್ಟುಕೊಂಡು ಭಾರತೀಯ

ಕಲೆಗಳಲ್ಲಿ ಆದಾನಪ್ರದಾನ ಏರ್ಪಡುವಲ್ಲಿ ಈ ಸಂಚಾರಿ ವ್ಯಾಪಾರಿ ವಿಧಾನ ಕಾರಣವೆಂಬ ವಿಚಾರವನ್ನು ಮಂಡಿಸುತ್ತಾರೆ. ತಮ್ಮ ಚಿಂತನೆಯ ಸಮರ್ಥನೆಗಾಗಿ ಮೋತಿಚಂದ್ರರ "ಸಾರ್ಥವಾಹ" (ಅನುವಾದ: ಎಚ್.ಎಸ್.ಪಾಟೀಲ) ಕೃತಿಯಲ್ಲಿನ ವಿಚಾರಗಳನ್ನು ಬಳಸುತ್ತಾರೆ. ಸಾರ್ಥಪರಿವಹನದಿಂದಾಗಿ ಭಾರತೀಯ ರಂಗ ಕಲೆಗಳು ಕೊಳುಕೊಡೆಯ ಮೂಲಕ ಬೆಳೆಯಲು, ಹೊಸ ಅಂಶಗಳನ್ನು ರೂಢಿಸಿಕೊಳ್ಳಲು ಸಹಾಯವಾಯಿತು ಎಂಬುದನ್ನು ಅನೇಕ ಆಧಾರಗಳೊಂದಿಗೆ ಸ್ಥಾಪಿಸುತ್ತಾರೆ. ಯಕ್ಷಗಾನ ಕಲೆಯೂ ಕೂಡ ಇದರಿಂದ ಹೊರತಾಗಿಲ್ಲ ಎಂದು ಹೇಳುತ್ತಾ, ಯಕ್ಷಗಾನದ ಯಾವ ಯಾವ ಅಂಗಗಳ ಮೇಲೆ ಹೇಗೆಹೇಗೆ ಈ ಪ್ರಕ್ರಿಯೆ ನಡೆದಿದೆ ಎಂಬುದನ್ನು ಇಲ್ಲಿ ತಿಳಿಸುತ್ತಾರೆ. ಎರಡೂ ತಿಟ್ಟುಗಳ ಕಿರೀಟ, ಕೊರಳಹಾರ, ಕರ್ಣಭೂಷಣ, ಉಡುಗೆತೊಡುಗೆ, ವೀರಕಸೆ, ನಾಮವಿನ್ಯಾಸ ಮುಂತಾದ ಅಂಗಗಳ ಮೇಲೆ ದೈವ, ದೇವರುಗಳ ಆಭರಣ ವಿನ್ಯಾಸ, ಉಡುಗೆತೊಡುಗೆಗಳು ಮಾಡಿರಬಹುದಾದ ಪ್ರಭಾವವನ್ನು ಸವಿವರವಾಗಿ, ಸಚಿತ್ರವಾಗಿ ಪಟ್ಟಿ ಮಾಡಿರುವ ಮೂಲಕ ಈ ಲೇಖನ ವಿಶಿಷ್ಟವಾಗುವಂತೆ ಮಾಡಿದ್ದಾರೆ. ಯಕ್ಷಗಾನ ಕಲೆ ತನ್ನ ಸಂಪ್ರದಾಯದ ಚೌಕಟ್ಟನ್ನು ಮೀರಬಾರದೆಂಬ ಕಾಳಜಿಯನ್ನು ಸದಾ ತೋರ್ಪಡಿಸುತ್ತಾ ಬಂದಿರುವ ಡಾ.ರಾಘವ ನಂಬಿಯಾರರು "ಯಕ್ಷಗಾನದ ಅನನ್ಯತೆ" ಎಂಬ ಲೇಖನದಲ್ಲಿ ಈ ಕಲೆಯ ಅಸ್ಮಿತೆಯನ್ನು ನಾನಾ ಮಗ್ಗುಲುಗಳಿಂದ ಪರಿಶೀಲಿಸಿದ್ದಾರೆ. ಇಲ್ಲಿನ ನಾಟ್ಯದ ಚಲನೆ, ಪಾತ್ರಗಳ ಗಾತ್ರ, ಅಭಿನಯದ ಬಗೆ, ಲಯಾನುಸಾರಿ ಮಾತುಗಾರಿಕೆ, ಪಾತ್ರೌಚಿತ್ಯ ಮುಂತಾದ ವಿಷಯಗಳು ಯಕ್ಷಗಾನವನ್ನು ಹೇಗೆ ಶ್ರೀಮಂತಗೊಳಿಸಿದೆ ಎಂಬುದನ್ನು ವಿವರಿಸಿದ್ದಾರೆ. ಈ ಸಂಕಲನದಲ್ಲಿನ "ಶಾಸ್ತ್ರೀಯತೆ ಎಂದರೇನು?" "ಭಾಗವತರೆಂದರೆ ಯಾರು?" "ಆಟದ ಅರ್ಥೈಸುವಿಕೆ" ಮುಂತಾದ ಲೇಖನಗಳಲ್ಲೂ ನಂಬಿಯಾರರು ಯಕ್ಷಗಾನ ಪ್ರದರ್ಶನಗಳ ಉದ್ದೇಶ, ಅದರ ಈಡೇರಿಕೆಗೆ ಕಲಾವಿದನಿಗಿರಬೇಕಾದ ಬದ್ಧತೆಯ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಉಳಿದಂತೆ ಬಂದಿರುವ ಕೆಲವು ಕಿರುಲೇಖನಗಳು ಸಾಂದರ್ಭಿಕವಾಗಿದ್ದು ಇಲ್ಲಿ ಸೇರ್ಪಡೆಯಾಗಿವೆ. ಸಂಕಲನದ ಕೊನೆಯ ಲೇಖನ ಪ್ರಸಂಗ ಕೃತಿಯೊಂದರ ಕುರಿತಾಗಿದ್ದು ಇಲ್ಲಿ ಮಟ್ಟಿ ವಾಸುದೇವ ಪ್ರಭು (ಕ್ರಿ.ಶ.1785–ಕ್ರಿ.ಶ.1858)ರವರ "ಕಂಸವಧೆ"ಯಲ್ಲಿ ಭಕ್ತಿರಸ ನಿರೂಪಿತಗೊಂಡ ಬಗೆಗಿನ ವಿವರವಿದೆ. ಯಕ್ಷಗಾನ ಪ್ರಸಂಗ ಕೃತಿಯೊಂದರ ಪ್ರಾಯೋಗಿಕ ವಿಮರ್ಶೆಗೆ ಇದೊಂದು ಮಾದರಿಯಾಗಿದೆ. ಹೀಗೆ "ಯಕ್ಷಗಾನ ಬೇರುಹೀರು" ಯಕ್ಷಗಾನ ಕುರಿತಾದ ಶೋಧನಾತ್ಮಕ ವಿಚಾರಗಳ ತವನಿಧಿಯಂತಿದೆ. ಡಾ.ನಂಬಿಯಾರರ "ಹಿಮ್ಮೇಳ"ದ ನಂತರ ಅವರ ಚಿಂತನೆಯು ಸಾಗಿದ ದಾರಿಯನ್ನು ಇಲ್ಲಿ ಗುರುತಿಸಬಹುದು. ನಂಬಿಯಾರರು ತಮ್ಮ ಆಳವಾದ ಅಧ್ಯಯನಶೀಲತೆಯನ್ನು, ಶೋಧನಾತ್ಮಕ ಚಿಂತನೆಯನ್ನು, ತುಲನಾತ್ಮಕ ವಿಶ್ಲೇಷಣೆಯನ್ನು

ಮುಪ್ಪುರಿಗೊಳಿಸಿ ವಿಚಾರಗಳನ್ನು ಇಲ್ಲಿ ಮುಂದಿಟ್ಟಿದ್ದಾರೆ. ಮೌಲಿಕ ಕೃತಿಯೊಂದನ್ನು "ಯಕ್ಷಗಾನ ಸಮ್ಮೇಳನ ಸಲಹಾ ಸಮಿತಿ"ಯವರು ಆಯ್ದು, ಕರ್ನಾಟಕ ಯಕ್ಷಗಾನ ಅಕಾಡೆಮಿಯವರ ಮೂಲಕ ಪ್ರಕಟಿಸಿರುವುದು ನಿಜವಾಗಿಯೂ ಮೆಚ್ಚುಗೆಯ ಕೆಲಸವಾಗಿದೆ.

("ವಿಜಯಕರ್ನಾಟಕ" ಪತ್ರಿಕೆಯ ಪುರವಣಿ ವಿಭಾಗದಲ್ಲಿ ಪ್ರಕಟಗೊಂಡ ಲೇಖನದ ವಿಸ್ತೃತ ರೂಪ)

*

ಯಕ್ಷಗಾನ ಮತ್ತು ಮಹಿಳೆ

ಕಲೆಗಳು ಇರುವುದು ಆನಂದವನ್ನು ಕೊಡಲು ಹಾಗೂ ಚಿತ್ತಕ್ಷೋಭೆಯನ್ನು ತಣಿಸಲು. ಮಾನವ ತಾನು ಕಂಡ ಉಂಡ ಅನುಭವಗಳನ್ನು, ಬದುಕಿನ ಸೊಗಸನ್ನು, ನಿಸರ್ಗದ ಅನುಭೂತಿಯನ್ನು, ತನಗೆ ಇಷ್ಟವಾದ ಕಲಾಮಾಧ್ಯಮದಲ್ಲಿ ಪ್ರಸ್ತುತ ಪಡಿಸುತ್ತಾನೆ. ಹೀಗಿರುವಾಗ ಯಾವುದೇ ಕಲಾ ಪ್ರಕಾರವನ್ನು ಲಿಂಗಾನುಸಾರಿಯಾಗಿ ವಿಂಗಡಿಸಲು ಬರುವುದಿಲ್ಲ. ಆದರೆ ಯಕ್ಷಗಾನದಂತಹ ಪಾರಂಪರಿಕ ಕಲಾ ಮಾಧ್ಯಮವು ಕಳೆದ ಶತಮಾನದ ಮಧ್ಯ ಭಾಗದವರೆಗೆ ಪುರುಷ ಪ್ರಧಾನವಾಗಿಯೇ ಇತ್ತು. ಗಂಡು ಕಲೆ ಎಂದು ಕರೆಸಿಕೊಳ್ಳುತ್ತಿತ್ತು. ಇದಕ್ಕೆ ಕಾರಣವಾದದ್ದು ಆಗಿನ ಸಾಮಾಜಿಕ ಪರಿಸರ ಹಾಗೂ ಸಾಮಾಜಿಕ ವ್ಯವಸ್ಥೆ. ಯಕ್ಷಶಿಕ್ಷಣ ಪ್ರಾರಂಭವಾಗುವುದೇ ಮೇಳದ ಸಹಚರ್ಯದಲ್ಲಿ. ಬಾಲಕನಾಗಿ ಮೇಳವನ್ನು ಸೇರಿಕೊಂಡವನು ಕೋಡಂಗಿಯಾಗಿ, ಬಾಲಗೋಪಾಲರಾಗಿ, ಪೀಠಿಕೆ ಸ್ತ್ರೀ ವೇಷಧಾರಿಯಾಗಿ, ಪುಂಡುವೇಷಧಾರಿಯಾಗಿ ಹಂತಹಂತವಾಗಿ ಯಕ್ಷಗಾನವನ್ನು ಕಲಿತು ರಂಗದಲ್ಲಿ ಓರ್ವ ಕಲಾವಿದನಾಗುತ್ತಾನೆ. ಹಿಮ್ಮೇಳದಲ್ಲೂ ಕುಳಿತು ವಾದಕರನ್ನು ಅನುಸರಿಸುತ್ತಾ ಸಂಗೀತಗಾರನಾಗಿ, ಭಾಗವತಿಕೆ ಕಲಿಯುತ್ತಾನೆ. ವರ್ಷದಲ್ಲಿ ಆರು ತಿಂಗಳು ಮೇಳದೊಂದಿಗೆ ಸಂಚರಿಸುತ್ತಾ ಕಲಾಭ್ಯಾಸ ಮಾಡಬೇಕಿತ್ತು. ಈ ವ್ಯವಸ್ಥೆ ಹುಡುಗರಿಗೆ ಸರಿಹೊಂದುತ್ತದೆಯೇ ಹೊರತು ಹುಡುಗಿಯರಿಗೆ ಸರಿಹೊಂದಲಾರದು. ಇವಲ್ಲದೆ ಕಠಿಣವಾದ ಸಂಚಾರ ವ್ಯವಸ್ಥೆ, ರಾತ್ರಿಯಿಡೀ ನಡೆಯುವ ಪ್ರದರ್ಶನ ವ್ಯವಸ್ಥೆ ಮುಂತಾದವೆಲ್ಲ ಮಹಿಳೆಯರು ಯಕ್ಷಗಾನದಿಂದ ದೂರವುಳಿಯಲು ಕಾರಣವಾಯಿತು. ಆದರೆ ಕಳೆದ ಶತಮಾನದ ಮಧ್ಯ ಭಾಗದಿಂದ ಪರಿಸ್ಥಿತಿಯಲ್ಲಿ ಸುಧಾರಣೆ ಅಡಿಯಿಟ್ಟಿತು. ಇದರ ಫಲವಾಗಿ ಮಹಿಳೆಯರು ಯಕ್ಷಗಾನ ರಂಗಕ್ಕೆ ಬರಲು ಸಾಧ್ಯವಾಯಿತು. ಪ್ರತ್ಯೇಕವಾದ ತರಬೇತಿ ಶಿಕ್ಷಣ ಕ್ರಮ, ಕಾಲಮಿತಿ ಪ್ರದರ್ಶನಗಳು, ಮೇಳದ ಹೊರಗೂ ಯಕ್ಷಶಿಕ್ಷಣ ನೀಡಬಲ್ಲ ಸಮರ್ಥ ಗುರುಗಳ ಲಭ್ಯತೆ, ನಗರೀಕರಣಗೊಂಡ ಜೀವನ ವ್ಯವಸ್ಥೆ ಇವೆಲ್ಲವೂ ಮಹಿಳೆಯರಿಗೆ ಅನುಕೂಲವಾದವು. ಈಚೆಗೆ ಮಹಿಳೆಯರ

ಭಾಗವಹಿಸುವಿಕೆಯ ತೀವ್ರತೆ ಗಮನಿಸಿದರೆ ಸದ್ಯದಲ್ಲೇ ಅವರು ಈ ರಂಗದ ಪ್ರಧಾನ ಧಾರೆಗಳಲ್ಲಿ ಒಂದಾಗುವುದರಲ್ಲಿ ಸಂದೇಹವಿಲ್ಲ.

ಯಕ್ಷಗಾನ ಪ್ರದರ್ಶನದ ಬೇರು ಇರುವುದು ಪ್ರಸಂಗ ರಚನೆಯಲ್ಲಿ. ಯಕ್ಷಕವಿಗಳ ಪ್ರಸಂಗಗಳೇ ಪ್ರದರ್ಶನಕ್ಕೆ ಅಗೋಚರವಾದ ತಳಹದಿ. ಈ ಭದ್ರ ಬುನಾದಿಯ ಮೇಲೆ ನಿಲ್ಲುವ ಸೌಧದಲ್ಲಿ ಭಾಗವತ ಹಾಗೂ ಹಿಮ್ಮೇಳದವರು ಗೋಡೆಯಂತೆ ಗಟ್ಟಿಮುಟ್ಟಾದ ಚೌಕಟ್ಟನ್ನು, ಆಧಾರವನ್ನು ಒದಗಿಸುತ್ತಾರೆ. ಮುಮ್ಮೇಳದ ಕಲಾವಿದರು ಈ ಸೌಧಕ್ಕೆ ಅಂದವಾದ ಮುಚ್ಚಿಗೆಯನ್ನು ನಿರ್ಮಿಸುತ್ತಾರೆ. ಮೇಳದ ಸಂಘಟಕ ಪ್ರದರ್ಶನ ಯಶಸ್ವಿಯಾಗುವ ಸೂತ್ರವನ್ನು ಹೆಣೆಯುತ್ತಾನೆ. ಈ ನಾಲ್ವರ ಸಮಷ್ಟಿ ಶ್ರಮದಿಂದ ಕಲೆಯೊಂದು ರಂಗದಲ್ಲಿ ಸಾಕ್ಷಾತ್ಕಾರಗೊಳ್ಳುತ್ತದೆ. ಈಗ ಮಹಿಳೆಯರು ಯಕ್ಷಗಾನದ ಈ ನಾಲ್ಕು ವಿಭಾಗಗಳಲ್ಲಿ ಸಕ್ರಿಯರಾಗುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಬಹಳ ಹಿಂದಿನಿಂದಲೂ ಮಹಿಳೆಯರು ಪ್ರಸಂಗ ರಚನೆಯಲ್ಲಿ ತೊಡಗಿಕೊಂಡಿರುವುದರ ಉಲ್ಲೇಖ ದೊರೆಯುತ್ತದೆ. ದಾಸ ಸಾಹಿತ್ಯದ ಪ್ರಾದುರ್ಯ ಕಾಲದಲ್ಲಿ ದಾಸರು ಕೂಡ ಪ್ರಸಂಗಗಳನ್ನು ಬರೆದಿರುವ ವಿಚಾರ ತಿಳಿದು ಬರುತ್ತದೆ. ಹೆಳವನಕಟ್ಟೆ ಗಿರಿಯಮ್ಮನಂತವರು ಪ್ರಸಂಗದ ಮಾದರಿಯ ರಚನೆಗಳನ್ನು ಮಾಡಿದ್ದಾರೆ. ಹರಪನಹಳ್ಳಿ ಭೀಮವ್ವ (1822–1902), ಮೈಸೂರಿನ ಅಮ್ಮಣಿಯಮ್ಮ (1850), ಮೈಸೂರಿನ ವೆಂಕಟಲಕ್ಷ್ಮಮ್ಮ (1890), ಕಿಬ್ಬಚ್ಚಲ ಮಂಜಮ್ಮ (1830–1900), ಮಹಾಲಕ್ಷ್ಮೀ ಹೆಬ್ಬಾರ್ ಚಾವಡಿ (1820) ಮುಂತಾದವರು ಪ್ರಾರಂಭಿಕ ಕಾಲದ ಯಕ್ಷಕವಿಗಳಾಗಿ ಪ್ರಸಂಗ ರಚನೆ ಮಾಡಿದವರು. ಇವರೆಲ್ಲ ಹೆಚ್ಚಾಗಿ ಆಧ್ಯಾತ್ಮಿಕ ಸೆಳತದಿಂದ ಕೃತಿ ರಚನೆ ಮಾಡಿದವರು. ಪ್ರದರ್ಶನಕ್ಕಿಂತ ಮಿಗಿಲಾಗಿ ಕಾವ್ಯಭಿವ್ಯಕ್ತಿಗಾಗಿ ಇವರು ಯಕ್ಷಗಾನವನ್ನು ಬಳಸಿಕೊಂಡಂತಿದೆ.

ಮುಂದಿನ ದಿನಗಳಲ್ಲಿ ಅನೇಕ ಮಹಿಳೆಯರು ಪ್ರಸಂಗ ರಚನೆಗೆ ಮುಂದಡಿಯಿಟ್ಟರು. ಇವರಲ್ಲಿ ಪ್ರಮುಖರೆಂದರೆ ಗಣಪಕ್ಕ ಸಣ್ಣಭಡ್ತಿ, ಕೊಲ್ಲೂರು ಮಹಾಲಕ್ಷ್ಮಿ ನಾಗಪ್ಪ ಜೋಯಿಸ್, ಗೀತಾ ಮುಳಿಯಾಲ, ಮೂಕಾಂಬಿಕ ವಾರಂಬಳ್ಳಿ, ದಯಾಮಣಿ ಎಸ್.ಶೆಟ್ಟಿ, ದಿವ್ಯಾ ಜಯರಾಮ್, ನಿರ್ಮಲಾ ಹೆಗಡೆ ಗೋಳಿಕೊಪ್ಪ, ಶಾಂತಾ ವಾಸುದೇವ ಅನಗಳ್ಳಿ ಮುಂತಾದವರು. ಇವರ ರಚನೆಗಳು ಪ್ರದರ್ಶನಕ್ಕೆ ಯೋಗ್ಯವಾಗುವಂತಿವೆ. ಕೃಷ್ಣಲೀಲೆ, ಶ್ರೀದೇವಿ ಮಹಾತ್ಮೆ, ಶ್ರೀ ಮೂಕಾಂಬಿಕೆ ಕ್ಷೇತ್ರ ಮಹಾತ್ಮೆ, ಸಾವಿತ್ರಿ ಚರಿತ್ರೆ, ಏಡ್ಸ್ ಅಸುರ, ದ್ರುವ ಚರಿತ್ರೆ, ದುಷ್ಯಂತ ಶಕುಂತಳ, ಶಂಕರವಿಜಯ, ಮೇಘಮಂಜರಿ, ವಿಧಿವಂಚಿತೆ, ಮಧುರ ಚಿಂತನ ಮುಂತಾದ ಪ್ರಸಂಗಗಳು ಈ ಯಕ್ಷ ಕವಯಿತ್ರಿಯರಿಂದ ಬಂದಿವೆ. ಹೆಚ್ಚಿನವು ಕಿರು ಪ್ರಸಂಗಗಳಾಗಿದ್ದು

ಅಲ್ಲಲ್ಲಿ ಪ್ರದರ್ಶನಗೊಂಡಿವೆ. ಕಾವ್ಯಪ್ರತಿಭೆ ಇರುವ ಮಹಿಳೆಯರು ಈ ಸಾಹಿತ್ಯ ಪ್ರಕಾರಕ್ಕೆ ಬರಲು ವಿಪುಲ ಅವಕಾಶವಿದೆ. ರಾಗ, ತಾಳ ಛಂದಸ್ಸುಗಳ ಅರಿವು, ರಂಗ ನಡೆಯ ಅನುಭವ, ಕಥಾ ಸಂವಿಧಾನದ ಬಗ್ಗೆ ಎಚ್ಚರಿಕೆ, ಪರಂಪರೆಯ ಕುರಿತು ತಿಳುವಳಿಕೆ ಇದ್ದಲ್ಲಿ ಸೊಗಸಾದ ಪ್ರಸಂಗಗಳನ್ನು ರಚಿಸಬಹುದು. ಐದುಸಾವಿರಕ್ಕೂ ಹೆಚ್ಚಿರುವ ಪ್ರಸಂಗ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ ಇನ್ನಷ್ಟು ಬರಬೇಕಾಗಿದೆ. ಈ ದಿಸೆಯಲ್ಲಿ ಅವರ ಪ್ರಯತ್ನ ಹೆಚ್ಚಲೆಂದು ಹಾರೈಸೋಣ. ಯಕ್ಷವಾಹಿನಿಯವರ ಪ್ರತಿಸಂಗ್ರಹ ಕೋಶಕ್ಕೆ ಬರೆದಿರುವ ಕೃತಿಗಳನ್ನು ಅಪ್ಲೋಡ್ ಮಾಡಿದಲ್ಲಿ ಅದು ಶಾಶ್ವತವಾಗಿ ಉಳಿಯುತ್ತದೆ.

ಯಕ್ಷಗಾನದ ಹಿಮ್ಮೇಳದ ವಿಚಾರಕ್ಕೆ ಬಂದರೆ ಕಳೆದ ಶತಮಾನದ ಆದಿಭಾಗದಲ್ಲಿ ಮಹಿಳೆಯರು ಹೆಚ್ಚಾಗಿ ಭಾಗವಹಿಸಿದ್ದು ಕಂಡು ಬರುತ್ತಿಲ್ಲ. 1958ರ ಸುಮಾರಿಗೆ ಮುಳ್ಳೇರಿಯಾದ ಪ್ರದರ್ಶನ ಒಂದರಲ್ಲಿ ಮೊದಲ ಬಾರಿಗೆ ಭಾಗವತಿಕೆ ಮಾಡಿದರೆಂಬ ಖ್ಯಾತಿಗೆ ಕಾರಣದಾದವರು ಶ್ರೀಮತಿ ನರ್ಮದಾ ಶಿಬಿರಾಯರು. ಇವರು ಮುನ್ನೂರಕ್ಕೂ ಹೆಚ್ಚು ತಾಳಮದ್ದಳೆಗಳಲ್ಲಿ ಭಾಗವತಿಕೆ ಮಾಡಿದರೆಂಬ ಹೇಳಿಕೆ ಇದೆ. ಯಕ್ಷಗಾನ ಆಟಗಳಲ್ಲಿ ಮೇಳದ ಭಾಗವತಿಕೆ ಮಾಡಿ ಹೆಸರು ಮಾಡಿದವರು ಶ್ರೀಮತಿ ಲೀಲಾವತಿ ಬೈಪಡಿತ್ತಾಯರು, 1979 ರಿಂದ ಯಕ್ಷಗಾನ ಭಾಗವತರಾಗಿ 26 ವರ್ಷಗಳ ಕಾಲ ಮೇಳಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸುಬ್ರಹ್ಮಣ್ಯ ಮೇಳ, ಪುತ್ತೂರು ಮೇಳ, ಅಳದಂಗಡಿ ಮೇಳ, ಕುಂಬಳೆ ಮೇಳ, ಬಪ್ಪನಾಡು ಮೇಳಗಳಲ್ಲಿ ಇವರು ಭಾಗವತರಾಗಿ ಮೇಳವನ್ನು ಮುನ್ನಡೆಸಿದ್ದಾರೆ. ಇವರ ಆತ್ಮಕಥನವನ್ನು ಖ್ಯಾತ ಪತ್ರಕರ್ತೆ ಶ್ರೀಮತಿ ವಿದ್ಯಾರಶ್ಮಿ ಪೆಲತ್ತಡ್ಕ ಅವರು ನಿರೂಪಿಸಿ "ಯಕ್ಷಗಾನ ಲೀಲಾವಳಿ" ಎಂಬ ಕೃತಿ ಪ್ರಕಟಿಸಿದ್ದಾರೆ. ಮೂರು ದಶಕಗಳ ಅವರ ವೃತ್ತಿ ಅನುಭವದ ಜೊತೆಯಲ್ಲಿ ಮುಂಬರುವ ಭಾಗವತರಿಗೆ ಮಾರ್ಗದರ್ಶಕ ಸೂತ್ರಗಳು ಇಲ್ಲಿವೆ. ಕಾಸರಗೋಡಿನ ಪಡ್ರೆ ಗ್ರಾಮದ ಶಿರಂತಡಕ್ ನಾರಾಯಣ ಭಟ್ರ ಮಗಳು ರತ್ನಾವತಿಯವರು ಎಂಟುಹತ್ತು ವರ್ಷಗಳ ಕಾಲ ಮೇಳಗಳಲ್ಲಿ ಭಾಗವತಿಕೆ ಮಾಡಿದ್ದಾರೆ. ಇದೇ ರೀತಿ ಬಾಯರು ಗ್ರಾಮದ ದುರ್ಗಾ ಪರಮೇಶ್ವರಿ, ಸಾಸ್ತಾನದ ಲಲಿತಾ ತುಂಗ, ಚೇರ್ಕಾಡಿಯ ಶಶಿಕಲಾ ಪ್ರಭು, ರಂಜನಿ, ಕುಂಭಾಶಿಯ ವಂದನ, ಅಶ್ವಿನಿರಾವ್ ಮುಂತಾದವರು ಭಾಗವತಿಕೆ ಮಾಡಿರುವುದಕ್ಕೆ ದಾಖಲೆಗಳು ದೊರೆಯುತ್ತವೆ. ಇದೇ ರೀತಿ ಕುಂಜಾಲು ಯಮುನೆ, ಚಿ. ಸೌಮ್ಯಾ ಮುಂತಾದವರು ಮದ್ದಳೆವಾದಕರಾಗಿ ದಿವ್ಯಶ್ರೀ ಮುಂತಾದವರು ಚಂಡೆವಾದಕರಾಗಿ ಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ ಈಚೆಗಂತೂ ಸಾಕಷ್ಟು ಮಹಿಳಾ ಭಾಗವತರು ಪ್ರದರ್ಶನಗಳಲ್ಲಿ ಭಾಗಿಯಾಗುತ್ತಿದ್ದಾರೆ. ಇವರಲ್ಲಿ ಮುಖ್ಯರೆಂದರೆ ಕಾವ್ಯಶ್ರೀ ಅಜೇರು, ಅಮೃತಾ ಅಡಿಗ, ಚಿಂತನ ಹೆಗಡೆ, ಚಿತ್ಕಲಾ ತುಂಗ, ಶ್ರೀರಕ್ಷಾಹೆಗಡೆ ಮುಂತಾದವರು ಯಕ್ಷಗಾನದ

ಮುಮ್ಮೇಳದ ಕಲಾವಿದೆಯರಾಗಿ ಮಹಿಳೆಯರು ಸಾಕಷ್ಟು ಹೆಸರು ಮಾಡಿದ್ದಾರೆ. ಮಯೂರಿ ಉಪಾಧ್ಯ, ಅಶ್ವಿನಿ ಕೊಂಡದಕುಳಿ, ನಾಗಶ್ರೀ, ಅರ್ಪಿತ ಹೆಗಡೆ, ಪ್ರಜ್ಞಾ ಮತ್ತಿಘಟ್ಟ, ನಿರ್ಮಲಾ ಹೆಗಡೆ, ಶ್ರೀಲತಾ, ಲತಾ ರಮೇಶರಾವ್, ಗೌರಿ ಸಾಸ್ತಾನ, ಜ್ಯೋತಿ ಪ್ರಭು, ಪೂರ್ಣಿಮಾ ರೈ, ವಂದನ, ಲತಾ ಕೃಷ್ಣಮೂರ್ತಿ, ವೀಣಾ ರಾಮಚಂದ್ರ, ಸುಷ್ಮಾ ಮೈರ್ಪಾಡಿ ಮುಂತಾದವರು ಪ್ರದರ್ಶನಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಇವರುಗಳಲ್ಲಿ ಕೆಲವರು ತಾಳಮದ್ದಳೆ ಅರ್ಥಧಾರಿಗಳಾಗಿ ಕೂಡಾ ಹೆಸರು ಮಾಡಿದ್ದಾರೆ. ಇಂದು ಅನೇಕ ಮಹಿಳಾ ತಾಳಮದ್ದಳೆ ತಂಡಗಳಿವೆ. ಮಹಿಳಾ ವೇಷಧಾರಿಗಳು ಕುಣಿತ, ಭಾವಾಭಿವ್ಯಕ್ತಿ ಹಾಗೂ ಮಾತುಗಾರಿಕೆಯಲ್ಲಿ ಪುರುಷರಿಗೆ ಸರಿಸಮಾನರಾಗಿದ್ದಾರೆ. ಹವ್ಯಾಸಿ ಮಹಿಳಾ ಕಲಾವಿದರು ಇಂದು ನಗರ ಪ್ರದೇಶದಲ್ಲಿ ಹೆಚ್ಚು ಖ್ಯಾತರಾಗಿದ್ದಾರೆ. ತಮ್ಮ ಪಾತ್ರದ ಬಗ್ಗೆ ಶಿಸ್ತುಬದ್ಧ ಅಧ್ಯಯನ ನಡೆಸಿ ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ಕಾಲಮಿತಿ ಪ್ರದರ್ಶನ ಇವರಿಗೆ ವರವಾಗಿ ಪರಿಣಮಿಸಿದೆ.

ಯಕ್ಷಗಾನದ ಇನ್ನೊಂದು ಅಗತ್ಯವಾದ ಸಂಘಟನೆಯಲ್ಲಿ ಕೂಡ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಮೊದಲಿಗೆ ಇತಿಹಾಸ ನಿರ್ಮಿಸಿದವರು ಕೋಟದ ಅಕ್ಕಾಣಿಯಮ್ಮನವರು. ಬಹಳ ಬೇಗ ಪತಿಯನ್ನು ಕಳೆದುಕೊಂಡ ಇವರು ಬೆಂಗಳೂರಿಗೆ ವಲಸೆ ಬಂದರು. ಯಕ್ಷಗಾನದಲ್ಲಿ ವಿಪರೀತ ಅಭಿಮಾನ ಹೊಂದಿದ್ದ ಇವರು ಹೆಣ್ಣುಮಕ್ಕಳು ರಂಗಸ್ಥಳಕ್ಕೆ ಬರಬೇಕು ಎಂದು ಆಶಿಸಿದರು. ತಾವೇ ಕುಣಿತ ಕಲಿತು ಮಹಿಳಾ ಆಸಕ್ತರನ್ನು ಕಲೆ ಹಾಕಿದರು. ಇವರು ಬೆಂಗಳೂರಿನಲ್ಲಿ ಮಹಿಳಾ ಯಕ್ಷಗಾನ ಮಂಡಳಿ ಎಂಬುದನ್ನು 1980ರಲ್ಲಿ ಸಂಘಟಿಸಿ, ಗುರು ಸದಾನಂದ ಐತಾಳರಿಂದ ಹೆಜ್ಜೆಗಾರಿಕೆ ಕಲಿಸಿ, ಪರ ಊರುಗಳಿಗೆ ಸಂಚರಿಸಿ ಖ್ಯಾತರಾದರು. ಮುಂಬಯಿ, ಮದ್ರಾಸ್, ಬೆಂಗಳೂರು, ಮಂಗಳೂರುಗಳಲ್ಲಿ ಇವರ ತಂಡ ಪ್ರದರ್ಶನ ನೀಡಿದೆ. ಶ್ರೀಮತಿ ನೃಪಾಂಗಿ, ಶ್ರೀಮತಿ ಸುಜಾತ ಧಾರೇಶ್ವರ ಈ ತಂಡದಿಂದಾಗಿ ಖ್ಯಾತಿಗೊಂಡರು. ಮಣಿಪಾಲ ಸಿಂಡಿಕೇಟ್ ಬ್ಯಾಂಕ್‌ನ ಮಹಿಳೆಯರು 1976ರಲ್ಲಿ ತಂಡ ಕಟ್ಟಿ ಪ್ರದರ್ಶನ ನೀಡಿದರು. ಮೂಕಾಂಬಿಕ ವಾರಂಬಳ್ಳಿ ಹಾಗೂ ಇತರರು ಈ ತಂಡದ ಮೂಲಕ ಬೆಂಗಳೂರು, ಕೇರಳ, ಗೋವಾಗಳಲ್ಲಿ ಸುಧನ್ವ ಕಾಳಗ, ತಾಮ್ರಧ್ವಜ ಕಾಳಗ, ಕರ್ಣ ಅರ್ಜುನ, ಮುಂತಾದ ಪ್ರದರ್ಶನ ನೀಡಿದರು. ಪುತ್ತೂರಿನ ಕೊಳ್ತಿಗೆ ಗ್ರಾಮದ ರತ್ನಾಭಟ್ ಅವರು ಯಕ್ಷಗಾನ ಸಂಘ ಸ್ಥಾಪಿಸಿದರು. ಚೇರ್ಕಾಡಿಯಲ್ಲಿ 1992ರಲ್ಲಿ ಕಲಾಶ್ರೀ ಬಾಲಕಿಯರ ಮೇಳವು ಪ್ರಾರಂಭವಾಯಿತು. ಬಹಳಷ್ಟು ಪ್ರದರ್ಶನ ನೀಡಿದ ಹಿರಿಮೆ ಇವರದ್ದು. ಸ್ವಯಂ ಕಲಾವಿದರಾದ ಶ್ರೀಮತಿ ಸುಮಂಗಲ ರತ್ನಾಕರ ಸಂಘಟಕರಾಗಿ ಕೂಡಾ ಹೆಸರು ಮಾಡಿದ್ದಾರೆ. ಕಳೆದ 25 ವರ್ಷಗಳಿಂದ ಶ್ರೀಮತಿ ಗೌರಿ ಸಾಸ್ತಾನ ಬೆಂಗಳೂರಿನಲ್ಲಿ ಕರ್ನಾಟಕ ಮಹಿಳಾ ಯಕ್ಷಗಾನ ತಂಡದ ಮೂಲಕ ಅನೇಕರನ್ನು ಬೆಳಕಿಗೆ ತಂದಿದ್ದಾರೆ. 1994ರಲ್ಲಿ

ಯಕ್ಷಮಂಜೂಷ ತಂಡ ಕಟ್ಟಿದ ಶ್ರೀಮತಿ ವಿದ್ಯಾಕೊಳ್ಯೂರು ದೇಶವಿದೇಶಗಳಲ್ಲಿ ಯಕ್ಷಗಾನವನ್ನು ಪ್ರದರ್ಶಿಸಿ ಹಿರಿಮೆ ಗಳಿಸಿದ್ದಾರೆ. ಹಿಂದಿ, ಇಂಗ್ಲೀಷ್ ಭಾಷೆಗಳಲ್ಲಿ ಕೂಡಾ ಪ್ರದರ್ಶನ ನೀಡಿರುವುದು ಇವರ ಹೆಚ್ಚುಗಾರಿಕೆ. ಸೌಮ್ಯ, ಕೃತಿ, ಪುರಪ್ಪುಮನೆ ಜಯಶ್ರೀ, ವಂದನ ದಿವ್ಯಶ್ರೀ, ಅಪೂರ್ವ ಮುಂತಾದವರೆಲ್ಲ ಒಂದಿಲ್ಲೊಂದು ರೀತಿಯಲ್ಲಿ ಯಕ್ಷಗಾನದಲ್ಲಿ ತೊಡಗಿಕೊಂಡವರು. ಅದೇ ರೀತಿ ಸ್ತ್ರೀ ಶಕ್ತಿ ಮಹಿಳಾ ತಂಡ (2000), ಜ್ಞಾನಜ್ಯೋತಿ ಯಕ್ಷಗಾನ ಮಹಿಳಾ ಸಂಘ (1998), ಹನುಮಾನ್ ಮಹಿಳಾ ಯಕ್ಷಗಾನ ತಂಡ (1999), ಶ್ರೀನಿಧಿ ಮಹಿಳಾ ಯಕ್ಷ ಕಲಾ ರಂಗ, ಸಿರಿಕಲಾ ಮೇಳ, ಸಹ್ಯಾದ್ರಿ ಮಹಿಳಾ ಯಕ್ಷಗಾನ ಸಮೂಹ, ಧರ್ಮಸ್ಥಳದ ಕನ್ಯಾಕುಮಾರಿ ಮಹಿಳಾ ಯಕ್ಷಗಾನ ತಂಡ, ಪಾಂಡೇಶ್ವರ ಮಹಿಳಾ ಯಕ್ಷಗಾನ ಮಂಡಳಿ, ಯಕ್ಷದೇಗುಲದ ಮಹಿಳಾ ತಂಡ, ಮಂಚಿಯ ಶ್ರೀ ಕಲಶ ಮಹಿಳಾ ಯಕ್ಷಗಾನ ತಂಡಗಳಲ್ಲದೆ ಮತಿಘಟ್ಟ ಗಡಿಗೆಹೊಳೆ, ತೆಲಂಗಾರ, ವಜ್ರಗಳ್ಳಿ, ಬಚ್ಚಗಾರು ಮುಂತಾದ ಕಡೆಗಳಲ್ಲಿ ಮಹಿಳಾ ತಂಡಗಳು ಇದ್ದು ಯಶಸ್ವಿ ಪ್ರದರ್ಶನ ನೀಡುತ್ತಿವೆ. ಮುಂಬಯಿ, ದೆಹಲಿ ಮುಂತಾದ ಕಡೆಗಳಲ್ಲಿ ಮಹಿಳಾ ತಂಡಗಳಿವೆ. ಹೀಗೆ ಈಗ ಬಹಳಷ್ಟು ಮಹಿಳೆಯರು ಯಕ್ಷಗಾನದಲ್ಲಿ ಸಕ್ರಿಯರಾಗಿದ್ದಾರೆ.

ಯಕ್ಷಗಾನದ ಕುರಿತಾದ ಅಧ್ಯಯನದಲ್ಲೂ ಮಹಿಳೆಯರ ಪಾತ್ರ ಹಿರಿದು. ಮೊತ್ತಮೊದಲಿಗೆ ಇಂಗ್ಲೀಷ್ನಲ್ಲಿ ಯಕ್ಷಗಾನದ ಕುರಿತು ಪ್ರೌಢಪ್ರಬಂಧ ಬರೆದು ಪಿಹೆಚ್.ಡಿ. ಪದವಿ ಪಡೆದವರು ಮಾರ್ತಾ ಆಷ್ಟೆನ್. ಯಕ್ಷಗಾನವನ್ನು ಕಡಲಾಚೆಗೆ ತೆಗೆದುಕೊಂಡು ಹೋದರು. ಹಿರಿಯಡಕ ಗೋಪಾಲರಾಯರು ಇವರಿಗೆ ಗುರುಗಳಾಗಿದ್ದರು. ಅದೇ ರೀತಿ ಕ್ಯಾಥರಿನ್ ಬಿಂದರ್ ಜರ್ಮನಿಯಿಂದ ಬಂದು ಯಕ್ಷಗಾನ ಕಲಿತು, ಯಕ್ಷಗಾನದ ಕುರಿತು ಪ್ರಬಂಧ ಬರೆದಿದ್ದಾರೆ. ಡಾ. ಹೆಚ್.ಬಿ. ಯಶೋಧರ, ಡಾ. ವಿಜಯನಳಿನಿ ರಮೇಶ್, ಡಾ. ರಾಜಶ್ರೀ, ಡಾ. ವಸುಧಾ ಸಿ. ಹೆಗಡೆ, ಡಾ. ನಾಗವೇಣಿ ಎನ್, ದಿವ್ಯಶ್ರೀ ಡಂಬಳ, ಶ್ರೀದೇವಿ ಕಲ್ಲಡಕ ಮುಂತಾದವರು ಯಕ್ಷಗಾನದ ಕುರಿತು ಪ್ರೌಢಪ್ರಬಂಧ ರಚಿಸಿ ಡಾಕ್ಟರೇಟ್ ಪದವಿ ಗಳಿಸಿದ್ದಾರೆ. ಆರತಿ ಪಟ್ರಮೆ, ಮಮತಾ ಜಿ. ಹಾಗೂ ಅನೇಕರು ಈ ರಂಗದ ಕುರಿತು ಪ್ರೌಢ ಅಧ್ಯಯನ ನಡೆಸುತ್ತಿರುವ ಮಹಿಳೆಯರಾಗಿದ್ದಾರೆ. ಮಹಿಳೆಯರಿಗೆ ಯಕ್ಷಗಾನ ಕಲಿಸುವವರಲ್ಲಿ ಶ್ರಮಿಸಿದ ಕೆಲವು ಹಿರಿಯರನ್ನು ಈ ಸಂದರ್ಭದಲ್ಲಿ ನೆನೆಯುವುದು ಯೋಗ್ಯ. ಅಂತವರಲ್ಲಿ ಪ್ರಮುಖರೆಂದರೆ ಹೊಸ್ತೋಟ ಮಂಜುನಾಥ ಭಾಗವತ, ತೋನ್ಸೆ ಜಯಂತಕುಮಾರ, ದುಗ್ಗಪ್ಪಮಲ್ಪೆ, ಗುಂಡಮಿ ಸದಾನಂದ ಐತಾಳ್, ಐನ್ ಬೈಲ್ ಪರಮೇಶ್ವರ ಹೆಗಡೆ, ಶ್ರೀನಿವಾಸ ಸಾಸ್ತಾನ, ಕೃಷ್ಣಮೂರ್ತಿ ತುಂಗ, ಡಾ.ರಾಧಾಕೃಷ್ಣ ಉರಾಳ, ಶಿವಕುಮಾರ್ ಬೇಗಾರ್, ಹೊಸ್ತೋಟ ಗಜಾನನ

ಭಾಗವತ, ಹಿರಿಯಡ್ಕ ಗೋಪಾಲರಾವ್, ಚೇರ್ಕಾಡಿ ಮಂಜುನಾಥ ಪ್ರಭು ಮುಂತಾದವರು.

ಹೀಗೆ ಇಂದು ಯಕ್ಷಗಾನ ರಂಗದಲ್ಲಿ ಮಹಿಳೆಯರು ಪುರುಷರಷ್ಟೇ ಸಮರ್ಥರೂ ಎಂಬುದನ್ನು ಸಾಬೀತುಪಡಿಸಿದ್ದಾರೆ. ಮಹಿಳೆಯರ ಭಾಗವಹಿಸುವಿಕೆಯಿಂದ ಯಕ್ಷಗಾನದ ಆಯಾಮ ವಿಸ್ತಾರಗೊಂಡಿದೆ. ಅವರಿಂದಾಗಿ ಇಡೀ ಕುಟುಂಬವೇ ಯಕ್ಷಗಾನದ ಪ್ರೇಕ್ಷಕರಾಗುತ್ತಿದ್ದಾರೆ. ಇದು ಆಶಾದಾಯಕ ಬೆಳವಣಿಗೆ. ಮಹಿಳೆಯರಿಗೂ ಕೂಡ ಅವರ ಆತ್ಮಗೌರವವನ್ನು, ಸಾಂಸ್ಕೃತಿಕ ಮೌಲ್ಯಗಳನ್ನು ಹೆಚ್ಚಿಸುವಲ್ಲಿ ಯಕ್ಷಗಾನ ಸಹಕಾರಿಯಾಗಿದೆ. ಯಕ್ಷಗಾನ ಮತ್ತು ಮಹಿಳೆಯರ ನಡುವಿನ ಕೊಳುಕೊಡೆ ನಿರಂತರವಾಗಿರಲಿ ಎಂದು ಹಾರೈಸೋಣ.

('ಕರ್ನಾಟಕ ಮಹಿಳಾ ಯಕ್ಷಗಾನ ತಂಡ'ದವರು ತಮ್ಮ ಬೆಳ್ಳಿಹಬ್ಬದ ಅಂಗವಾಗಿ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಮಾಧ್ಯಮ ವಿಭಾಗದ ಅಲುಮಿನಿ ಸಂಘದವರೊಂದಿಗೆ ಏರ್ಪಡಿಸಿದ್ದ ವಿಚಾರ ಸಂಕಿರಣದ "ಯಕ್ಷಗಾನ ಮತ್ತು ಮಹಿಳೆ" ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ)

*

ಯಕ್ಷಗಾನದ ಕಣ್ವ ನಾರಾಣಪ್ಪ ಉಪ್ಪೂರ

ಕಳೆದ ಶತಮಾನದಲ್ಲಿ ಬೆಂಗಳೂರಿಗೆ ಬಂದ ಅಸಂಖ್ಯ ಕರಾವಳಿಯವರ ಪಾಲಿಗೆ ಯಕ್ಷಗಾನ ಸಮಾರಾಧನೆ ಲಭಿಸುತ್ತಿದ್ದುದು ಮಳೆಗಾಲದಲ್ಲಿ ಮಾತ್ರ ಬೇಸಿಗೆಯ ಆಟದ ಕಾಲ ಮುಗಿದು ಯಕ್ಷಗಾನ ಕಲಾವಿದರು ಪ್ರವಾಸೀ ಮೇಳದ ಹೆಸರಿನಲ್ಲಿ ಬೆಂಗಳೂರಿಗೆ ಬಂದಾಗ ಅವರ ಪ್ರದರ್ಶನಗಳು ನಡೆಯುತ್ತಿದ್ದದ್ದು ಪುರಭವನ ಅಥವಾ ರವೀಂದ್ರ ಕಲಾಕ್ಷೇತ್ರದಲ್ಲಿ. ಆಗ ಹೆಚ್ಚಾಗಿ ಬಡಗುತಿಟ್ಟಿನ ಪ್ರದರ್ಶನಗಳೇ ಬೆಂಗಳೂರಿನಲ್ಲಿ ನಡೆಯುತ್ತಿದ್ದದ್ದು. ಖ್ಯಾತ ಸ್ತ್ರೀ ವೇಷಧಾರಿಗಳಾದ ಕೋಟ ವೈಕುಂಠರು ಅಮೃತೇಶ್ವರೀ ಮೇಳದ ಕಲಾವಿದರನ್ನು ಒಟ್ಟುಗೂಡಿಸಿಕೊಂಡು ಯಕ್ಷಗಾನ ಪ್ರದರ್ಶನ ನಡೆಸುತ್ತಿದ್ದರು. ಅರಾಟೆ ಮಂಜುನಾಥ ಅವರು ಶ್ರೀ ಗಣೇಶ ಪ್ರವಾಸೀ ಯಕ್ಷಗಾನ ಮಂಡಳಿಯ ಹೆಸರಿನಲ್ಲಿ ಹಿರಿಯ ಕಲಾವಿದರುಗಳಿಂದ ಪ್ರದರ್ಶನ ಏರ್ಪಡಿಸುತ್ತಿದ್ದರು. ಜಾತಕಪಕ್ಷಿಯಂತೆ ಕಾಯುತ್ತಿದ್ದ ಯಕ್ಷಗಾನದ ಅಭಿಮಾನಿಗಳಿಗೆ ಯಕ್ಷಗಾನದ ಸಿಂಚನವಾಗುತ್ತಿದ್ದುದು ಈ ಬಗೆಯ ಪ್ರಸಿದ್ಧ ಕಲಾವಿದರ ಕಲಾಭಿವ್ಯಕ್ತಿಯಿಂದ. ಆಗ ಹೆಚ್ಚು ಹೆಚ್ಚು ಚರ್ಚೆಗೆ, ಮಾತಿಗೆ ಒಳಪಡುತ್ತಿದ್ದವರು ಅಂದಿನ ಖ್ಯಾತ ಭಾಗವತರಾಗಿದ್ದ ಎಂ. ನಾರಣಪ್ಪ ಉಪ್ಪೂರರು. ಅಂದಿನ ಹೊಟೇಲ್ ಮಾಲೀಕರುಗಳಿಗೆ, ನೌಕರರಿಗೆ, ಬ್ಯಾಂಕ್ ಉದ್ಯೋಗಿಗಳಿಗೆ ಇವರು ಪ್ರೀತಿ ಪಾತ್ರರಾಗಿದ್ದರು. ಉಪ್ಪೂರರ ಸುಸಂಸ್ಕೃತ ನಡವಳಿಕೆಯನ್ನು ರಂಗದಲ್ಲಿನ ಗತ್ತು-ಗಾಂಭೀರ್ಯವನ್ನು ಭಾವಪೂರ್ಣ ಹಾಡುಗಾರಿಕೆಯನ್ನು, ಔಚಿತ್ಯಪೂರ್ಣ ರಾಗಜ್ಞಾನವನ್ನು, ವೇಷಗಳನ್ನು ರಂಗದಲ್ಲಿ ಕುಣಿಸುವ ಪರಿಯನ್ನು ಬೆಂಗಳೂರಿನ ಹಿಂದಿನ ತಲೆಮಾರಿನವರು ಇಂದಿಗೂ ನೆನೆಯುತ್ತಾರೆ.

ಶ್ರೀ ನಾರಾಣಪ್ಪ ಉಪ್ಪೂರರು ಸಂಪ್ರದಾಯವಾದಿಗಳಂತೆ ಹಳೆಯದರಲ್ಲೇ ಉಳಿಯದವರು. ಹಾಗೆ ಪ್ರಗತಿಪರರಂತೆ ಹಳೆಯರಾಗ ಸಂಪತ್ತಿಗೆ ಕಿವುಡಾಗದವರು. ಎಲ್ಲಾ ಅರ್ಥಪೂರ್ಣ ಬದಲಾವಣೆಗಳನ್ನು ತಮ್ಮ ಕಲಾ ಜೀವನದಲ್ಲಿ ಒಗ್ಗಿಸಿಕೊಂಡು

ಭಾಗವತಿಕೆ ಮಾಡುತ್ತಲೇ ತಾವು ಬೆಳೆದವರು. ತಮ್ಮ ಬದುಕಿನ ಹೆಚ್ಚು ಕಾಲವನ್ನು ರಂಗ ನಿರ್ದೇಶನಕ್ಕೆ ಮುಡಿಪಾಗಿಟ್ಟ ಶ್ರೀಯುತರ ಭಾಗವತಿಕೆಯನ್ನು ಬೆಂಗಳೂರಿನಲ್ಲಿ ತೆಂಕು, ಬಡಗುತಿಟ್ಟೆಂಬ ಭೇದವಿಲ್ಲದೇ ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ನಡೆದ ಪ್ರದರ್ಶನಗಳಲ್ಲಿ ನಾರಾಣಪ್ಪ ಉಪ್ಪೂರರಿಗೆ ಮದ್ದಳೆ ವಾದಕರಾಗಿ ಸಹಕರಿಸುತ್ತಿದ್ದವರು ದುರ್ಗಪ್ಪ ಗುಡಿಗಾರರು. ಮುಂದೆ ಯಕ್ಷಗಾನದಲ್ಲಿ ತಾರಾಮೌಲ್ಯವನ್ನು ಗಳಿಸಿಕೊಂಡ ಕಾಳಿಂಗನಾವಡರು ಇವರಿಗೆ ಸಹಭಾಗವತರಾಗಿ ಸಹಕರಿಸುತ್ತಿದ್ದು ಇವರ ಗರಡಿಯಲ್ಲೇ ಪಳಗಿದವರು. ಕಳೆದ ಶತಮಾನದ ಅರವತ್ತರ ದಶಕದಲ್ಲಿ ಯಕ್ಷಗಾನಕ್ಕೆ ಕೇಂದ್ರ ಸಂಗೀತನಾಟಕ ಅಕಾಡೆಮಿಯ ಪ್ರಶಸ್ತಿ ಗಳಿಸಿಕೊಟ್ಟ ಹಾರಾಡಿ ರಾಮಗಾಣಿಗರನ್ನು, ಕೃಷ್ಣಗಾಣಿಗರನ್ನು, ಗುರುವೀರಭದ್ರ ನಾಯಕರನ್ನು, ಕುಮಟಾ ಗೋವಿಂದ ನಾಯಕರನ್ನು ಪಂಡಾರು ಬಸವರನ್ನು ಕುಣಿಸಿ ರಂಗದಲ್ಲಿ ಮೆರೆಸಿದರು. ಮುಂದೆ ಮೊಳಹಳ್ಳಿ ಹೆರಿಯ ಉಡುಪಿ ಬಸವ, ಪೆರಡೂರುರಾಮ, ಶಿರಯಾರ ಮಂಜುನಾಯಕ, ಕೋಟ ವೈಕುಂಠ, ಅರಾಟೆ ಮಂಜುನಾಥ, ಕೆರೆಮನೆಯವರಾದ ಮಹಾಬಲ ಹೆಗಡೆ, ಗಜಾನನ ಹೆಗಡೆ, ಶಂಭು ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಗೋಡೆನಾರಾಯಣ ಹೆಗಡೆ, ರಾಮನಾಯರಿ, ಜಲವಳ್ಳಿ ವೆಂಕಟೇಶರಾವ್, ಗಜಾನನ ಭಂಡಾರಿ, ಕುಂಜಾಲು ರಾಮಕೃಷ್ಣ ಮುಖ್ಯಪ್ರಾಣ ಕಿನ್ನಿಗೋಳಿ ಮುಂತಾದವರನ್ನೆಲ್ಲ ಪುರಭವನದ ವೇದಿಕೆಯಲ್ಲಿ ಕುಣಿಸಿ ಅವರ ಕಲಾಶಕ್ತಿ ಸೊಗಸಾಗಿ ಹೊರಹೊಮ್ಮುವಂತೆ ನೋಡಿಕೊಂಡರು.

ಆಗ ಬೆಂಗಳೂರಿನಲ್ಲಿ ಇವರ ಅಳಿಯಂದಿರಾದ ಪಿ.ಶ್ರೀಧರ ಹಂದೆಯವರು ಹೋಟೆಲ್ ಉದ್ಯಮಿಯಾಗಿದ್ದರು. ಆಗ ಕಾಳಿಂಗ ಕಾರಂತ, ಕೊಡೇರಿಯವರಾದ ಮಹದೇವ ಕಾರಂತ, ಶಿವರಾಮ ಕಾರಂತ, ಶ್ರೀ ಕೆ. ಎಲ್. ಐತಾಳರು, ಪಿ.ಕೆ.ಮಧ್ಯಸ್ಥರು, ನರಸಿಂಹ ಹೊಳ್ಳರು, ನೀಲಕಂಠ ಐತಾಳ್, ಡಾ.ಚಂದ್ರಶೇಖರ ಹಂದೆ, ವೈಕುಂಠ ಐತಾಳ್ ಮುಂತಾದವರೆಲ್ಲ ಗೆಳೆಯರಾದ ಉಪ್ಪೂರರನ್ನು ಸದಾ ಪ್ರೋತ್ಸಾಹಿಸುತ್ತಿದ್ದರು. ಇವರಿಗಾಗಿಯೇ "ಶ್ರೀ ಕೃಷ್ಣ ವಿವಾಹ"ವೆಂಬ ಪ್ರಸಂಗದ ಎರಡು ಪ್ರದರ್ಶನಗಳನ್ನು ನಡೆಸಿ ಹಣ ಸಂಗ್ರಹಿಸಿ ಗೌರವ ಸಲ್ಲಿಸಿದ್ದರು. ಆಗೆಲ್ಲ ಉಪ್ಪೂರರೂ ಬೆಂಗಳೂರಿಗೆ ಬಂದರೆ ಬಸವನಗುಡಿ ರಸ್ತೆಯಲ್ಲಿರುವ ಶ್ರೀಗುರುನರಸಿಂಹ ಕಲ್ಯಾಣ ಮಂಟಪದಲ್ಲಿ ಉಳಿದುಕೊಳ್ಳುತ್ತಿದ್ದರು. ಮಳೆಗಾಲವಾದ್ದರಿಂದ ಸ್ವಲ್ಪಕಾಲ ಕಲಾವಿದರುಗಳು ಕೂಡ ಅಲ್ಲಿ ವಾಸ್ತವ್ಯ ಮಾಡುತ್ತಿದ್ದರು. ಉಪ್ಪೂರರ ಸುಪುತ್ರರಾದ ಶ್ರೀಕೃಷ್ಣಮೂರ್ತಿ ಉಪ್ಪೂರರು ಪ್ಲಾಸ್ಟರ್ ಆಫ್ ಪ್ಯಾರಿಸ್ನಲ್ಲಿ ಯಕ್ಷಗಾನ ಮುಖವರ್ಣಿಕೆಗಳನ್ನು ಸಿದ್ಧಪಡಿಸುವುದರಲ್ಲಿ ಖ್ಯಾತಿ ಹೊಂದಿದ್ದರು. ಶ್ರೀ ಕೃಷ್ಣಮೂರ್ತಿ ಉಪ್ಪೂರರ ಮನೆಯೂ ಅಲ್ಲೇ ಇದ್ದಿತ್ತು. ಎಂಬತ್ತರ ದಶಕಗಳಲ್ಲಿ ಪ್ರಸಂಗ ಸಾಹಿತ್ಯದ ಬಗ್ಗೆ ವಿಚಾರ ತಿಳಿದುಕೊಳ್ಳಲು ಅವರನ್ನು ಇಲ್ಲೇ ಹಲವು ಬಾರಿ ಭೇಟಿ ಮಾಡಿ ಚರ್ಚಿಸಿದ್ದೂ ಇನ್ನೂ ಹಸಿರಾಗಿದೆ. ಎಳೆಯರ

ಬಗ್ಗೆ ಅವರಿಗೆ ಇರುವ ಪ್ರೀತಿ, ಪ್ರಸಂಗಗಳ ಪದ್ಯದ ಬಗ್ಗೆ ಅವರಿಗಿರುವ ಒಲವು, ಸರಳವಾಗಿ, ಮನಮುಟ್ಟುವಂತೆ ಮಾತನಾಡುವ ಪರಿ, ಹೇಳುವುದನ್ನು ನಿರ್ಭೀತಿಯಿಂದ ಹೇಳುವ ರೀತಿ ಇವೆಲ್ಲ ಉಪ್ಪೂರರದ್ದೇ ವೈಶಿಷ್ಟವಾಗಿದೆ. ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ಅವರಾಡಿದ ಮಾತುಗಳಲ್ಲಿ ಯಕ್ಷಗಾನ ರಂಗದ ಕುರಿತಾದ ಅವರ ಖಚಿತ ನಿಲುವುಗಳನ್ನು ಕಾಣಬಹುದಾಗಿತ್ತು.

ಹಾಡಿನ ಪದಪದಗಳನ್ನು ಹಿಂಜಿ ಅದರ ಭಾವವನ್ನು ಹೊರಹಾಕುವ ಶೈಲಿಯಲ್ಲಿ ಪಾರಂಗತರಾಗಿರುವ ಇವರು ಹಿಮ್ಮೇಳನದ ಎಲಾ ಅಂಗಗಳಲ್ಲಿ ಪರಿಣತರು. ನಾರಾಣಪ್ಪ ಉಪ್ಪೂರರು ಭಾಗವತರಾಗಿ ಮಾತ್ರ ಖ್ಯಾತರಾದವರಲ್ಲ. ಉತ್ತಮ ಯಕ್ಷಗಾನ ಬೋಧಕರೂ ಆಗಿದ್ದವರು. ಇವರು ಹಂಗಾರಕಟ್ಟೆ ಯಕ್ಷಗಾನ ಕಲಾ ಕೇಂದ್ರದ ಪ್ರಾಚಾರ್ಯರಾಗಿ ಹದಿಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇವರ ಗರಡಿಯಲ್ಲಿ ಅರವತ್ತಕ್ಕೂ ಹೆಚ್ಚು ಕಲಾವಿದರು ತರಬೇತಿ ಪಡೆದಿದ್ದಾರೆ. ಯಕ್ಷಗಾನದ ಅಭ್ಯಾಸಕ್ಕೆ ಅನುಕೂಲವಾಗುವಂತಹ "ಯಕ್ಷಗಾನ ಶಿಕ್ಷಕ" ಹಾಗೂ "ಯಕ್ಷಗಾನ ಅಧ್ಯಯನ" ಎಂಬೆರಡು ಗ್ರಂಥಗಳನ್ನು ಬರೆದಿದ್ದಾರೆ. ಇದರಿಂದಾಗಿಯೇ ಯಕ್ಷಗಾನ ಲೋಕ ಅವರನ್ನು "ಪ್ರಾಚಾರ್ಯ ಎಂ.ನಾರಾಣಪ್ಪ ಉಪ್ಪೂರ" ಎಂದು ಕರೆದು ಗೌರವಿಸಿದೆ.

ಈ ದೃಷ್ಟಿಯಿಂದ ಇವರು ಮಾಡಿರುವ ಸೇವೆ ಕನ್ನಡ ಸಾಹಿತ್ಯದಲ್ಲಿ ಬಿ.ಎಂ.ಶ್ರೀ.ಯವರು ಮಾಡಿದಂತಿದೆ. ಕಳೆದ ಶತಮಾನದ ಪ್ರಾರಂಭದಲ್ಲಿ ಹೊಸಗನ್ನಡದ ಆರಂಭಿಕ ದಿನಗಳಲ್ಲಿ ಕನ್ನಡ ಸಾಹಿತ್ಯ ಹಾಗೂ ಕನ್ನಡದ ಅಧ್ಯಯನ ಹೇಗೆ ಸಾಗ ಬೇಕೆಂಬ ಕಲ್ಪನೆಯನ್ನು ಹಾಕಿಕೊಟ್ಟವರು. "ಶ್ರೀ"ಯವರು "ಕನ್ನಡದ ಕಣ್ವ"ರೆಂದೇ ಖ್ಯಾತಿ ಹೊಂದಿದ್ದರು. ಅದೇ ರೀತಿ ಉಪ್ಪೂರರೂ ಕೂಡ "ಯಕ್ಷಗಾನದ ಕಣ್ವ"ರೇ ಸರಿ.

ಮೇಳದಲ್ಲಿ ಭಾಗವತರ ಸ್ಥಾನಮಾನದ ಬಗ್ಗೆ ಶ್ರೀ ಉಪ್ಪೂರರಿಗೆ ಖಚಿತ ಅಭಿಪ್ರಾಯವಿದೆ. "ಆತನಿಗೆ ಸ್ವರಸಂಪತ್ತು ಒಂದೇ ಇದ್ದರೆ ಸಾಲದು ಆತನಲ್ಲಿ ವಿದ್ವತ್ತು, ಸಹೃದಯತೆ ಮತ್ತು ಉಳಿದೆಲ್ಲಾ ಕಲಾವಿದರಿಗೆ ಮಾದರಿಯಾಗಿ ನಿಲ್ಲಬಲ್ಲ ವ್ಯಕ್ತಿತ್ವ ಇರಬೇಕು" ಎಂದು ನಂಬಿಕೊಂಡಿದ್ದರು. ಅದರಂತೆ ಬಾಳಿದವರು. ಉತ್ತಮ ವರ್ಚಸ್ಸು ಉಳ್ಳ ಭಾಗವತನು ಎಂದಿಗೂ ಮೇಳದಲ್ಲಿ ಮೊದಲ ವೇಷಧಾರಿಯೇ ಸರಿ. ಆತನೇ ಪ್ರದರ್ಶನದ ನಿರೂಪಕ ಹಾಗೂ ನಿರ್ದೇಶಕ ಎಂಬುದು ಅವರ ನಿಲುವು. ಇವರು ಇತಿಹಾಸವನ್ನು ನಿರ್ಮಿಸಿದ್ದರು. ಈ ಕಾರಣಕ್ಕಾಗಿಯೇ "ರಂಗತಂತ್ರ ಕುಶಲಿ" ಎಂಬ ಬಿರುದಿಗೆ ಪಾತ್ರರಾಗಿದ್ದರು. ತಮ್ಮ ಕೈಕೆಳಗೆ ಸಹಭಾಗವತರಾಗಿದ್ದವರನ್ನು ರಂಗನಡೆಯಲ್ಲಿ ತಿದ್ದಿತೀಡುತ್ತಿದ್ದರು. ಕೆಪ್ಪೆಕೆರೆ ಶ್ರೀ ಸುಬ್ರಾಯ ಹೆಗಡೆಯವರು

ಇವರೊಂದಿಗೆ ಶ್ರೀ ಅಮೃತೇಶ್ವರಿ ಮೇಳದಲ್ಲಿ ಸಹಭಾಗವತರಾಗಿದ್ದಾಗ ಕಾರಣಾಂತರದಿಂದ ಹೆಗಡೆಯವರ ಕಂಠಶ್ರೀ ಕೆಡಲು ಪ್ರಾರಂಭಿಸಿತು. ಉತ್ತಮ ಕಂಠವಿಲ್ಲದೆ ಹಾಡುವುದು ಯಾತನೇ ಅನಿಸಿ ರಂಗ ತೊರೆಯುವ ಮಾತನ್ನು ಉಪ್ಪೂರರಲ್ಲಿ ಹೇಳಿದಾಗ ಅವರಿಗೆ ಧೈರ್ಯ ತುಂಬಿ "ಆ ನಿರ್ಧಾರದಿಂದ ಹಿಂದೆ ಸರಿಯುವಂತೆ ಹೇಳಿ ನೀವು ರಂಗದಲ್ಲಿ ಇದ್ದರೆ ನಾನು ಚೌಕಿಯಲ್ಲಿ ಯೋಚನೆಯಿಲ್ಲದೇ ನಿದ್ರಿಸಬಹುದು. ನಿಮ್ಮ ಸಾಮರ್ಥ್ಯ ನನಗೆ ಗೊತ್ತು. ನೀವು ಮಾತು ಕೊಡಿ ಯಕ್ಷಗಾನ ಬಿಡುವುದಿಲ್ಲ" ಎಂದು ಮಾತು ತೆಗೆದುಕೊಳ್ಳುತ್ತಾರೆ. ಈ ಘಟನೆಯಲ್ಲಿ ನಾವು ಉಪ್ಪೂರರ ವ್ಯಕ್ತಿತ್ವವನ್ನು ಕಾಣಬಹುದು. ಸಹಕಲಾವಿದರಲ್ಲಿ ಆತ್ಮವಿಶ್ವಾಸ ತುಂಬಿ ಅವರನ್ನು ನಡೆಸಿಕೊಳ್ಳುವ ಕಲೆ ಉಪ್ಪೂರರಲ್ಲಿ ಇತ್ತು. "ಸಮರ್ಥ ಭಾಗವತರಿಗೆ ರಂಗವನ್ನು ಒಪ್ಪಿಸಿದಾಗ ಮಾತ್ರ ತಾನು ಚೌಕಿಯಲ್ಲಿ ನಿದ್ದೆ ಮಾಡಬಲ್ಲೆ" ಎಂಬುದರಲ್ಲಿ ಅವರ ರಂಗ ಕಾಳಜಿಯನ್ನು ಕಾಣಬಹುದು. ಹೀಗೆ ರಂಗ ನಿಷ್ಠೆಯನ್ನು ನಾರಣಪ್ಪ ಉಪ್ಪೂರರು ಇಟ್ಟುಕೊಂಡಿದ್ದರು.

ಡಾ. ಶಿವರಾಮ ಕಾರಂತರು ಭಾಗವತ ನಾರಣಪ್ಪ ಉಪ್ಪೂರರನ್ನು ಮೆಚ್ಚಿಕೊಂಡವರು. "ಭಾವಕ್ಕೆ ಸಾಹಿತ್ಯಕ್ಕೂ ಪ್ರಸಂಗದ ಹಾಡುಗಳಲ್ಲಿ ಇರುವ ನಿಕಟ ಸಂಬಂಧವನ್ನು ರಂಗಸ್ಥಳದಲ್ಲಿ ಪ್ರದರ್ಶಿಸಿ ಮಾರ್ಗದರ್ಶಕರಾಗಬಲ್ಲ ಸಾಮರ್ಥ್ಯ ಉಳ್ಳವರು ಉಪ್ಪೂರರು" ಎಂದು ಹೇಳಿದ್ದಾರೆ. ಅವರ "ಯಕ್ಷಗಾನ ಅಧ್ಯಯನ" ಎಂಬ ಕೃತಿಗೆ ಮುನ್ನುಡಿಯನ್ನು ಬರೆದಿರುವ ಡಾ.ಕಾರಂತರು "ನಾರಣಪ್ಪ ಉಪ್ಪೂರರು ತಮ್ಮ ಆಯುಷ್ಯದ ಬಹು ಮುಖ್ಯಭಾಗವನ್ನು ರಂಗಸ್ಥಳದ ನಿರ್ದೇಶನದಲ್ಲಿ ಕಳೆದವರಾದುದರಿಂದ ನಮ್ಮೆಲ್ಲ ಹಿಂದೆ ಯಾವ ರೀತಿಯ ಪೂರ್ವರಂಗದ ಸಂಪ್ರದಾಯಗಳಿದ್ದವು, ಅಲ್ಲಿನ ಕುಣಿತಗಳ ಗತ್ತು, ರೀತಿಗಳು ಹೇಗೆ? ಮುಂದೆ ಕಥಾನಕವನ್ನು ಬೆಳೆಸುವ ಹೊತ್ತಿಗೆ ಯಾವ ಪರಿಪಾಠ ರೂಢಿಯಲ್ಲಿರಬೇಕು? ಎಂಬುದನ್ನು ತಿಳಿದಿದ್ದರು" ಎಂದು ಉಪ್ಪೂರರ ಹಿರಿಮೆಯನ್ನು ತೋರಿಸಿಕೊಟ್ಟಿದ್ದಾರೆ. ಉಪ್ಪೂರರಿಗೂ ಕೂಡ ಡಾ. ಕಾರಂತರ ಬಗ್ಗೆ ಅಪಾರ ವಿಶ್ವಾಸ. ಡಾ.ಕಾರಂತರ ಪರಿಶ್ರಮದಿಂದ ಯಕ್ಷಗಾನಕ್ಕೊಂದು ಹೊಸ ಆಯಾಮ ದೊರೆತಿದೆ ಎನ್ನುವ ಉಪ್ಪೂರರು ಕಾರಂತರ ಪ್ರಯೋಗಗಳಿಂದ ತಾವು ಪಡೆದ ಅನುಭವ ವಿಸ್ತಾರವನ್ನು ಆತ್ಮೀಯವಾಗಿ ಹಂಚಿಕೊಳ್ಳುತ್ತಿದ್ದರು. ಅವರ ಎರಡು ಕೃತಿಗಳಲ್ಲಿ ಯಕ್ಷಗಾನದ ರಾಗ, ತಾಳ, ಕುಣಿತಗಳ ಕುರಿತು ದೀರ್ಘ ವಿವರಗಳು ಕಲಿಯುವವರಿಗೆ ಮಾರ್ಗದರ್ಶನವಾಗಬಲ್ಲ ಸೂತ್ರಗಳು ಇವೆ. ಯ್ಷಗಾನ ಕಲೆಯಲ್ಲಿ ಇಂದು ನಶಿಸುತ್ತಿರುವ ಅನೇಕ ಸಾಂಪ್ರಾಯಿಕ ಸ್ತ್ರೀ ವೇಷ ಹಾಗೂ ಬಾಲ ಗೋಪಾಲರ ಪ್ರವೇಶಗಳ ವಿವರವನ್ನು ಇಲ್ಲಿ ಕಾಣಬಹುದು. ಇವಲ್ಲದೆ "ಸತ್ಯಂ ವದ ಧರ್ಮಂ ಚರ" ಎಂಬ ಪ್ರಸಂಗವನ್ನು ಕೂಡ ಉಪ್ಪೂರರು ರಚಿಸಿದ್ದಾರೆ.

ಪ್ರಾಚಾರ್ಯ ನಾರಣಪ್ಪ ಉಪ್ಪೂರರು ಸಂತೃಪ್ತ ಭಾವದ ಭಾಗವತರು ಹೊಸದಕ್ಕೆ ತೆರೆದ ಹೃದಯವುಳ್ಳವರಾಗಿದ್ದರು. ಹರೆಯ ಕಳೆಯುತ್ತಿದ್ದರೂ ಲೆಕ್ಕಿಸದೆ ಉಪ್ಪೂರರು ಉತ್ಸಾಹದಿಂದ ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದರು. ವೃದ್ಧಾಪ್ಯ ಎಂದು ಉಪ್ಪೂರರಿಗೆ ಸವಾಲಾಗಿರಲಿಲ್ಲ. ಬಯಲಾಟವಿರಲಿ, ಜೋಡಾಟವಿರಲಿ, ಹವ್ಯಾಸಿಗಳ ಚಿಕ್ಕಪ್ರದರ್ಶನವಿರಲಿ ಅಥವಾ ರಾತ್ರಿ ಇಡೀ ಒಬ್ಬರೇ ಬೆಳಗು ಮಾಡಬೇಕಾದ ಪರಿಸ್ಥಿತಿಯೇ ಬಂದಿರಲಿ ಎದೆಗುಂದದೇ ತಮ್ಮ ಕಾರ್ಯವನ್ನು ಚೊಕ್ಕವಾಗಿ ಮುಗಿಸುತ್ತಿದ್ದರು. ಅರವತ್ತಾರರ ವಯಸ್ಸಿನಲ್ಲಿ ಉಪ್ಪೂರರ ಕಂಠಶ್ರೀ ಅಸಾಧಾರಣವಾಗಿದ್ದು ಅತ್ಯಂತ ಇನಿದನಿಯಿಂದ ಕೂಡಿಕೊಂಡಿತ್ತು. ಶುಭ್ರ ಬಿಳಿಯ ಜುಬ್ಬ, ಬಿಳಿಯ ಕಚ್ಚೆ ಹಾಕಿದ ಪಂಚೆ, ತಲೆಗೆ ಕೆಂಪು ರುಮಾಲು, ಹಣೆಗೊಂದು ಕುಂಕುಮದ ಬೊಟ್ಟು ತೊಟ್ಟು ಕುಳಿತು ಹಾಡ ತೊಡಗಿದರೆ ಎಂತಹವರಲ್ಲಿಯೂ ಅವರ ಬಗ್ಗೆ ಗೌರವ ಹೊಮ್ಮುತ್ತಿತ್ತು.

ದಿನಾಂಕ 07 ಫೆಬ್ರವರಿ 1918ರಲ್ಲಿ ಜನ್ಮ ತಳೆದ ನಾರಣಪ್ಪ ಉಪ್ಪೂರರ ಜನ್ಮ ಶತಾಬ್ದಿ ವರ್ಷ ವಿಜೃಂಭಣೆಯಿಂದ ನಡೆಯಿತು. ವಂಶಪಾರಂಪರ್ಯವಾಗಿ ಭಾಗವತಿಕೆ ಉಪ್ಪೂರರಿಗೆ ಮೈಗೂಡಿದೆ. ತಂದೆ ದಿ.ಶ್ರೀನಿವಾಸ ಉಪ್ಪೂರರೇ ಇವರ ಗುರುಗಳು. ಅವರ ಕೈ ಕೆಳಗೆ ಸಂಗೀತಗಾರರಾಗಿ ಅನುಭವ ಪಡೆದವರು. ಅಮೃತೇಶ್ವರಿ, ಮಾರಣ ಕಟ್ಟೆ, ಕೊಲ್ಲೂರು, ಇಡಗುಂಜಿ, ಪೆರ್ಡೂರು, ಸೌಕೂರು, ಸಾಲಿಗ್ರಾಮ ಹೀಗೆ ಹತ್ತು ಹಲವು ಮೇಳಗಳ ಹೊಕ್ಕು ಬಳಕೆಯಿದ್ದು ಎಲ್ಲೆಡೆಯೂ ಸೈ ಎನಿಸಿಕೊಂಡಿದ್ದರು. ನಲವತ್ತಾರು ವರ್ಷದ ಸುದೀರ್ಘ ಭಾಗವತಿಕೆಯಲ್ಲಿ ಕಡೆಯ ಹನ್ನೆರಡು ವರ್ಷ ಅಮೃತೇಶ್ವರಿ ಮೇಳಕ್ಕೆ ಆಧಾರ ಸ್ತಂಭದಂತಿದ್ದರು. 1984ರ ಏಪ್ರಿಲ್ 11ರಂದು ಮೇಳದ ಭಾಗವತಿಕೆಗೆಂದು ಹೊರಟವರು ಹೃದಯಾಘಾತಕ್ಕೆ ಗುರಿಯಾಗಿ ಅಪಾರ ಅಭಿಮಾನಿಗಳನ್ನು ಅಗಲಿದರು. ಅವರಿಲ್ಲವಾದರೂ ಉಪ್ಪೂರರ ಶೈಲಿ ಹಾಗೂ ರಂಗ ತಂತ್ರದ ನಡೆ ಅವರ ಶಿಷ್ಯವೃಂದದ ಮೂಲಕ ಇಂದಿಗೂ ಜೀವಂತವಾಗಿದೆ.

("ಹರ್ಷವಾಣಿ" ಪತ್ರಿಕೆಯ ಮಾರ್ಚ್ 2018ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನ)

*

ಮದ್ದಳೆಯ ಮಾಂತ್ರಿಕ ಹಿರಿಯಡ್ಕ ಗೋಪಾಲರಾವ್

ಯಕ್ಷಗಾನ ರಂಗಭೂಮಿಯಲ್ಲಿ ಹಿಮ್ಮೇಳಕ್ಕೆ ಹಿರಿದಾದ ಸ್ಥಾನವಿದೆ. ರಂಗದಲ್ಲಿ ಕುಣಿಯುವ ವೇಷಧಾರಿಯ ಕಲಾ ಪ್ರತಿಭೆಯನ್ನು ಹೊರ ಹೊಮ್ಮಿಸುವಲ್ಲಿ ಹಿಮ್ಮೇಳ ಕಲಾವಿದರ ಪಾತ್ರ ಹಿರಿದು. ತೆಂಕು ಹಾಗೂ ಬಡಗುತಿಟ್ಟುಗಳಲ್ಲಿ ಅನೇಕ ಪ್ರತಿಭಾವಂತ ಹಿಮ್ಮೇಳ ವಾದಕರಿದ್ದಾರೆ. ಅವರುಗಳಲ್ಲಿ ಇದೀಗ ತಾನೇ ನೂರು ವಸಂತಗಳನ್ನು ಕಂಡಿರುವ ಮದ್ದಲೆಯ ಮಾಂತ್ರಿಕ ಹಿರಿಯಡ್ಕ ಗೋಪಾಲರಾವ್ ಪ್ರಮುಖರು. ಅವರು ರಂಗದಲ್ಲಿ ಶ್ರೇಷ್ಠ ಕಲಾವಿದರನ್ನು ಕುಣಿಸಿರುವುದು ಮಾತ್ರವಲ್ಲದೇ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಕೋಟ ಶಿವರಾಮ ಕಾರಂತರಂತಹ ಮೇಧಾವಿಗಳಿಗೆ ಹಾಗೂ ವಿದೇಶಿಗರಾಗಿದ್ದು ಉಡುಪಿಗೆ ಬಂದು ಯಕ್ಷಗಾನ ಕಲಿತು, ಅದರಲ್ಲಿ ಸಂಶೋಧಕರಾದ ಡಾ. ಮಾರ್ತಾ ಆಸ್ಟಿನ್ ರಂತಹವರಿಗೆ ಯಕ್ಷಗಾನದ ಹೆಜ್ಜೆಗಾರಿಕೆಯ ಗತ್ತನ್ನು ತೋರಿಸಿಕೊಟ್ಟವರು. ಏರುಶೃತಿಯ ಮದ್ದಲೆಯನ್ನು ಯಕ್ಷಗಾನಲೋಕಕ್ಕೆ ಪರಿಚಯಿಸಿದ ಕೀರ್ತಿ ಹಿರಿಯಡ್ಕ ಗೋಪಾಲರಾವ್ ಅವರದು.

ಹಿಮ್ಮೇಳನ ವಾದನದಲ್ಲಿ ಅನೇಕ ಹೊಸ ಹಾದಿಯನ್ನು ಕಂಡುಹಿಡಿದ ಗೋಪಾಲರಾಯರು ಓದಿದ್ದು ಕೇವಲ ಏಳನೆಯ ತರಗತಿಯವರೆಗೆ ಮಾತ್ರ. ಶೇಷಗಿರಿರಾವ್ ಮತ್ತು ಲಕ್ಷ್ಮೀಬಾಯಿಯವರಿಗೆ ಮಗನಾಗಿ ಜನಿಸಿದ ಇವರಿಗೆ ಬಾಲ್ಯದಿಂದಲೂ ಮದ್ದಲೆಯ ನಂಟು. ಅಜ್ಜ ಲಕ್ಷ್ಮಣಯ್ಯ ತಾಳಮದ್ದಲೆಗಳಲ್ಲಿ ಮೃದಂಗವಾದಕರಾಗಿದ್ದು, ಎಳವೆಯಲ್ಲೇ ಇವರಿಗೆ ಯಕ್ಷಗಾನದ ಗೀಳನ್ನು ಅಂಟಿಸಿದರು. 1935ರಲ್ಲಿ ಹಿರಿಯಡ್ಕ ಮೇಳದ ತಿರುಗಾಟದಲ್ಲಿ ಇವರು ಮೊದಲಿಗೆ ವೇಷಧಾರಿಯಾಗಿ ಸೇರಿಕೊಂಡರು. ಎರಡನೇ ವರ್ಷದ ಪ್ರದರ್ಶನವೊಂದರಲ್ಲಿ ಮುಂಡಾಸು ಉರುಳಿ ಹೋದದ್ದಕ್ಕೆ ಕಾರಣವಾಗಿ ಒತ್ತು ಮದ್ದಲೆಗಾರರಾಗಿ ಮೇಳದಲ್ಲಿ ಸೇವೆ ಸಲ್ಲಿಸಲು ಪ್ರಾರಂಭಿಸಿದರು. ಮೂರು ವರ್ಷಗಳಲ್ಲಿ ಸಮರ್ಥ ಮೃದಂಗ ವಾದಕರಾಗಿ ಪರಿಣತಿ ಪಡೆದರು. ಮುಂದೆ ಪೆರ್ಡೂರು ಮೇಳ, ಅಮೃತೇಶ್ವರಿ

ಮೇಳಗಳ ಹಾಗೂ ಇಪ್ಪತ್ತು ವರ್ಷಗಳ ಕಾಲ ಮಂದಾರ್ತಿ ಮೇಳಗಳಲ್ಲಿ ದುಡಿದು, ಯಕ್ಷಗಾನದ ಅತಿರಥಮಹಾರಥರನ್ನು ಕುಣಿಸಿ ಎಲ್ಲರಿಂದಲೂ "ಸೈ" ಎನಿಸಿಕೊಂಡರು. ಬಡಗುತಿಟ್ಟಿನಲ್ಲಿ ದಂತಕತೆಗಳನ್ನು ಸೃಷ್ಟಿಸಿರುವ ಮೇರು ಕಲಾವಿದರುಗಳಾದ ಗಣಪತಿ ಪ್ರಭು, ಬಡಾಕೆರೆ ರಾಮಪ್ಪ ಅಡಿಗ, ಹಾರಾಡಿ ರಾಮಗಾಣಿಗ, ಹಾರಾಡಿ ಕೃಷ್ಣಗಾಣಿಗ, ಕೊಕ್ಕರಣೆ ನರಸಿಂಹ ನಾಯಕ್, ಮಾರ್ವಿ ರಾಮಕೃಷ್ಣ ಹೆಬ್ಬಾರ್, ದಶಾವತಾರಿ ವೀರಭದ್ರ ನಾಯಕ ಮುಂತಾದವರು ಇವರ ಮದ್ದಲೆಯ ದನಿಗೆ ಹೆಜ್ಜೆಯನ್ನು ಹಾಕಿ ಕೀರ್ತಿ ಪಡೆದವರು. ಈ ಕಲಾವಿದರುಗಳಲ್ಲಿ ಗೋಪಾಲರಾಯರು ಹಲವು ಅಂಶಗಳನ್ನು ಮೆಚ್ಚಿದ್ದಾರೆ. ಗಣಪತಿ ಪ್ರಭುಗಳ ಶೃಂಗಾರ ಹಾಗೂ ಭಕ್ತಿ ರಸಭರಿತ ಮಾತುಗಳು, ಹಾರಾಡಿ ಕೃಷ್ಣಗಾಣಿಗರ ವೈವಿಧ್ಯಮಯ ಕುಣಿತದ ಬಗೆ ಇವರ ಗಮನ ಸೆಳೆದಿವೆ. ಅಂದು ಬಡಗುತಿಟ್ಟಿನಲ್ಲಿ ಪ್ರಚಲಿತವಿದ್ದ ಮಟಪಾಡಿ ಹಾಗೂ ಹಾರಾಡಿ ಶೈಲಿಯ ಕುಣಿತಗಳನ್ನು ಇವರು ಇಂದಿಗೂ ನೆನೆಯುತ್ತಾರೆ. ಇವರ ಮದ್ದಲೆಗಾರನ ಕಲಾಬದುಕಿನ ಸಮಯದಲ್ಲೇ ಅನೇಕ ಹೊಸತನಗಳು ಒಂದೊಂದಾಗಿ ಬಂದವು. ಹಿಂದಿನ ಯಕ್ಷಗಾನ ಕಲಾವಿದರನ್ನು ಗೋಪಾಲರಾಯರು ಮೆಚ್ಚಿಕೊಳ್ಳುತ್ತಾರೆ. ಅವರಲ್ಲಿ ಅಭ್ಯಾಸಕ್ಕೆ ಹೆಚ್ಚಿನ ಮಹತ್ವವಿತ್ತು ಎನ್ನುತ್ತಾರೆ. ಒಳಜಗಳ, ಗುಂಪುಗಾರಿಕೆ ಇರಲಿಲ್ಲ ಎನ್ನುತ್ತಾರೆ. ಮೇಳಗಳು ಆ ಕಾಲದಲ್ಲಿ ಕಡಿಮೆ ಇದ್ದವು, ಪ್ರದರ್ಶನಗಳು ಕಡಿಮೆ ಇದ್ದವು. ಆದರೆ ಕಲಾವಿದ ನಿಷ್ಠೆಯಿಂದ ದುಡಿಯುತ್ತಿದ್ದ ಎನ್ನುತ್ತಾರೆ. ಅದೇ ರೀತಿ ಶ್ರೇಷ್ಠ ಭಾಗವತರುಗಳಾದ ಶೇಷಗಿರಿ ಭಾಗವತ, ಶ್ರೀನಿವಾಸ ಉಪ್ಪೂರ, ರಾಮಚಂದ್ರ ನಾವಡ, ನಾರಯಣ ಉಪ್ಪೂರ, ಕೋಟ ಶ್ರೀನಿವಾಸ ನಾಯಕರುಗಳ ಭಾಗವತಿಕೆಗೆ ಇವರು ಜೊತೆಯಾಗಿ ಮದ್ದಲೆ ನುಡಿಸಿದವರು. ಇವರು ಮೇಳಗಳಲ್ಲಿ ಇದ್ದ ಕಾಲವನ್ನು "ಬಡಗುತಿಟ್ಟಿನ ಸುವರ್ಣಯುಗ" ಎಂದೇ ಹೇಳಬಹುದು. ಈ ಸಂದರ್ಭದಲ್ಲಿ ಖ್ಯಾತ ಸಾಹಿತಿ, ಪ್ರಯೋಗಪ್ರಿಯ ಶಿವರಾಮಕಾರಂತರು ಯಕ್ಷಗಾನ ರಂಗದ ಕಡೆಗೆ ದೃಷ್ಟಿ ಹೊರಳಿಸಿದರು.

ಉತ್ತಮ ಮೃದಂಗವಾದನಿಗೆ ಇರಬೇಕಾದ ಶಿಸ್ತನ್ನು, ಯೋಗ್ಯತೆಯನ್ನು ಗೋಪಾಲರಾಯರು ತಮ್ಮ ಸಂದರ್ಶನದಲ್ಲಿ ತಿಳಿಸಿದ್ದಾರೆ. ಅವುಗಳೆಂದರೆ 1. ಆತನಿಗೆ ತಾಳ್ಮೆ ಇರಬೇಕು. 2. ಆಟದ ಬಗ್ಗೆ ಜವಾಬ್ದಾರಿ ಇರಬೇಕು. 3. ಭಾಗವತರ ಸ್ವರವನ್ನು ಉಳಿಸುವುದರ ಕಡೆ ಗಮನವಿರಬೇಕು. 4. ಭಾಗವತರ ಜೊತೆಜೊತೆಯಲ್ಲೇ ಇದ್ದು ಹಾಡಿನ, ಮಟ್ಟಿನ ಅನುಸರಣೆ ಮಾಡಬೇಕು. 5. ಹೊರಡುವ ನಾದ ಕೆಡದಂತೆ ನೋಡಿಕೊಳ್ಳಬೇಕು. 6. ತನ್ನ ಕಲಾಶಕ್ತಿಯ ಪ್ರದರ್ಶನಕ್ಕಿಂತ ಆಟದ ಒಟ್ಟು ಪರಿಣಾಮ ಮುಖ್ಯವಾಗಬೇಕು. 7. ವೇಷಧಾರಿಯ ಸಾಮರ್ಥ್ಯವನ್ನು ಅರಿತು ಅದಕ್ಕೆ ತಕ್ಕಂತೆ ಕುಣಿಸುವ ಜಾಣ್ಮೆ ಇರಬೇಕು. ಇವೆಲ್ಲವೂ ಇಂದಿನ ಹಿಮ್ಮೇಳವಾದಕರಿಗೆ ಮಾರ್ಗದರ್ಶಕ ಸೂತ್ರವಾಗಿದೆ.

ಮೊದಲಿಗೆ 1968ರಲ್ಲಿ ಶಿವರಾಮಕಾರಂತರಿಂದಾಗಿ "ಬ್ರಹ್ಮಾವರ ಯಕ್ಷಗಾನ ಕೇಂದ್ರ" ಪ್ರಾರಂಭವಾದಾಗ ಅಲ್ಲಿಗೆ ಸೇರಿಕೊಂಡರು. ಮುಂದೆ ಕಾರಂತರಿಂದ ಯಕ್ಷಗಾನ ಕಲಾಕೇಂದ್ರ ಉಡುಪಿಗೆ ವರ್ಗಾವಣೆಗೊಂಡಾಗ 1969 ರಿಂದ 1976 ರವರೆಗೆ ಅಲ್ಲಿ ಮದ್ದಲೆ ಗುರುವಾಗಿ ಸಾಕಷ್ಟು ಶಿಷ್ಯರಿಗೆ ತರಬೇತಿ ನೀಡಿದರು. ಮುಂದೆ ಮಾರ್ತಾರವರ ಜೊತೆಯಲ್ಲಿ 1976 ಹಾಗೂ 1978 ರಲ್ಲಿ ಅಮೆರಿಕಾ ಪ್ರವಾಸ ಕೈಗೊಂಡು ಅನೇಕ ಪ್ರಾತ್ಯಕ್ಷಿಕೆಗಳಲ್ಲಿ ಭಾಗವಹಿಸಿದರು. ಡಾ.ಮಾರ್ತಾ ಆಸ್ಟೀನ್ ಅವರಿಗೆ ಯಕ್ಷಗಾನ ಶಿಕ್ಷಣವನ್ನು ನೀಡಿದ ಇವರು ಬರ್ಕ್ಲಿ ವಿಶ್ವವಿದ್ಯಾಲಯದಲ್ಲಿ ನೀಡಿದ ಪ್ರದರ್ಶನ ಜನಮೆಚ್ಚುಗೆ ಗಳಿಸಿತು. ಮುಂದೆ ಕೂಡಾ ಸಾಕಷ್ಟು ಬಾರಿ ವಿದೇಶ ಪ್ರವಾಸ ಮಾಡಿರುವ ಇವರು ಅಲ್ಲಿ ರಂಗದ ಮೇಲೆ ಮಾರ್ತಾ ಅವರನ್ನು ಯಕ್ಷಗಾನ ವೇಷದಲ್ಲಿ ಕುಣಿಸಿ ಅಮೇರಿಕಾದ ವಿದ್ವಾಂಸರುಗಳ ಮುಂದೆ ಯಕ್ಷಗಾನ ಕಲೆಯ ಹಿರಿಮೆಯನ್ನು ಪರಿಚಯಿಸಿಕೊಟ್ಟರು. ನ್ಯೂಯಾರ್ಕ್, ಇಂಡಿಯಾನ, ಮಿಚಿಗನ್, ಕ್ಯಾಲಿಫೋರ್ನಿಯಾ, ಓಕಲ್ಯಾಂಡ್ಗಳಲ್ಲಿ ಇವರ ಮದ್ದಲೆಯ ಕೈ ಚಳಕ ಜನ ಮೆಚ್ಚುಗೆ ಗಳಿಸಿದೆ. ಹೀಗೆ ಅಮೇರಿಕಾದವರಿಗೆ ಯಕ್ಷಗಾನವನ್ನು ಪರಿಚಯಿಸಿದ ಕೀರ್ತಿ ಹಿರಿಯಡ್ಕ ಗೋಪಾಲ್ ರಾವ್ ಅವರದು.

ಡಾ. ಕಾರಂತರ ಸಹಚರ್ಯವನ್ನು ಹೆಚ್ಚುಕಾಲ ಹೊಂದಿರುವ ಹಿರಿಯಡ್ಕ ಗೋಪಾಲರಾಯರು ಕಾರಂತರನ್ನು "ಯಕ್ಷಗಾನದ ಕ್ರಾಂತಿ ಪುರುಷರೇ" ಎಂದು ನಂಬಿದ್ದಾರೆ. ಕಾರಂತರಿಂದಾಗಿ ಯಕ್ಷಗಾನದಲ್ಲಿ ಕಲಾದೃಷ್ಟಿಯು ಹೆಚ್ಚು ಮುನ್ನೆಲೆಗೆ ಬಂದಿತು ಎನ್ನುತ್ತಾರೆ. ಅದೇ ರೀತಿ ಡಾ.ಮಾರ್ತಾ ಆಸ್ಟಿನ್‌ರ ಅಧ್ಯಯನ ಆಸಕ್ತಿಯ ಬಗ್ಗೆ, ಅವರು ಯಕ್ಷಗಾನ ಕಲಿತುಕೊಂಡ ವೇಗದ ಬಗ್ಗೆ ಇವರಿಗೆ ಅಪಾರ ಮೆಚ್ಚುಗೆ ಇದೆ. ಹಿಂದಿನ ಈ ಕಲಾವಿದರ ಬಗ್ಗೆ ಕೂಡಾ ಇವರಿಗೆ ಗೌರವವಿದೆ. "ಕಲಾ ನಿಷ್ಠೆ ಕಲಾವಿದನಲ್ಲಿ ಇಲ್ಲದೇ ಹೋದರೆ ಇಡೀ ಕಲೆಯೇ ಅವಸಾನದ ಅಂಚಿಗೆ ಹೋಗಬಹುದು" ಎನ್ನುವ ಇವರು ತಮ್ಮ ಕಲಾ ವಾದನದಲ್ಲಿ ಎಂದೂ ರಾಜಿ ಮಾಡಿಕೊಂಡವರಲ್ಲ. "ಮದ್ದಳೆ ವಾದಕರು ದುಡುಕು, ವಿಳಂಬಗಳನ್ನು ಅರಿತು ಬಾರಿಸಬೇಕು" ಎಂಬುದು ಇವರ ಕಲಾಧೋರಣೆಯಾಗಿದೆ. ಇವರ ಅನುಭವಗಳ ಗರಿಯನ್ನು ಖ್ಯಾತ ಪತ್ರಕರ್ತ ಶ್ರೀರಾಘವ ನಂಬಿಯಾರ್ ಅವರು "ಮದ್ದಳೆಯ ಮಾಯಾಲೋಕ" ಎಂಬ ಕೃತಿಯ ಮೂಲಕ ಕನ್ನಡಿಗರಿಗೆ ಪರಿಚಯಿಸಿದ್ದಾರೆ.

ಹಿರಿಯಡ್ಕ ಗೋಪಾಲರಾವ್ ಜಪಾನಿನಲ್ಲಿ 1981 ರಲ್ಲಿ ನಡೆದ ಏಷಿಯನ್ ಕಲ್ಚರಲ್ ಸೆಮಿನಾರ್‌ನಲ್ಲಿ ಯಕ್ಷಗಾನ ಮದ್ದಳೆಯ ನುಡಿತದ ವಿನ್ಯಾಸ ತೋರಿಸಿಕೊಟ್ಟದ್ದು ಸರ್ವಮಾನ್ಯವಾಗಿದೆ. ಇವರಿಗೆ ಜಾನಪದಶ್ರೀ ಪ್ರಶಸ್ತಿ, ನಾಟಕ ಅಕಾಡೆಮಿ ಪ್ರಶಸ್ತಿ, ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ ಮುಂತಾದವೆಲ್ಲಾ ಬಂದಿವೆ. ಇದೀಗ ನೂರನೇ

ವರ್ಷ ತುಂಬಿದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿಯ ಗರಿ ಲಭಿಸಿದೆ.

(ಹಿರಿಯಡ್ಕ ಗೋಪಾಲ್ ರಾವ್ ಅವರಿಗೆ ನೂರು ತುಂಬಿದ ಸಂದರ್ಭದಲ್ಲಿ "ಹರ್ಷವಾಣಿ" ಪತ್ರಿಕೆಯಲ್ಲಿ ಬಂದ ಲೇಖನ)

*

ತಂತ್ರಜ್ಞಾನದಿಂದ ಮರುಹುಟ್ಟು ಪಡೆದ "ಕಾಳಿಂಗ ನಾವಡ"

ತಂತ್ರಜ್ಞಾನದ ಭರಾಟೆಯಿಂದಾಗಿ ಆಧುನಿಕ ಜಗತ್ತು ಕಿರಿದಾಗುತ್ತಿದೆ. ಪರದೇಶಗಳೆಲ್ಲವೂ ನೆರೆಮನೆಯಂತಾಗಿದೆ. ಕ್ಷಣ ಮಾತ್ರದಲ್ಲಿ ಜನರು ಒಬ್ಬರನ್ನೊಬ್ಬರು ತತ್ ಕ್ಷಣವೇ ಸಂಪರ್ಕಿಸಲು ಸಾಧ್ಯವಾಗುತ್ತಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ನಡೆಯುತ್ತಿರುವ ಘಟನೆಯನ್ನು ಎಲ್ಲಿ ಬೇಕಾದರೂ ಕೂತು ನೋಡಬಹುದಾಗಿದೆ. ಭೂತಕಾಲ, ವರ್ತಮಾನ ಕಾಲಕ್ಕೆ ವ್ಯತ್ಯಾಸವಿಲ್ಲ ಎಂಬುವಂತಾಗಿದೆ. ಇವೆಲ್ಲಾ ಆಗುತ್ತಿರುವುದು ನೂತನ ತಂತ್ರಜ್ಞಾನದಿಂದಾಗಿ ಇದು ನಮ್ಮ ಪಾರಂಪರಾಗತ ಯಕ್ಷಗಾನ ಕಲೆಯನ್ನು ಬಿಟ್ಟಿಲ್ಲ. ಹಿಂದಿನ ಪ್ರದರ್ಶನಗಳನ್ನು, ಹಾಡುಗಾರಿಕೆಯನ್ನು ವಾಗ್ವೈಖರಿಯನ್ನು ಇವತ್ತು ನೋಡಿ, ಕೇಳಿ ಸಂತೋಷ ಪಡುಬಹುದಾಗಿದೆ. ಪ್ರಸಿದ್ಧ ಕಲಾವಿದರೆಲ್ಲಾ ನಮ್ಮ ಮನೋಭೂಮಿಕೆಯಲ್ಲಿ ಮರುಹುಟ್ಟು ಪಡೆಯುತ್ತಿದ್ದಾರೆ. ಇದರಲ್ಲಿ ಮುಂಚೂಣಿಯಲ್ಲಿರುವವರು ನಮ್ಮ ಎಲ್ಲರ ಅಚ್ಚು ಮೆಚ್ಚಿನ ಭಾಗವತರಾದ ಕಾಳಿಂಗನಾವಡರು ಅವರು ಗತಿಸಿದಾಗ ಅಂದಿನ ಪತ್ರಿಕೆಗಳು "ಯಕ್ಷಗಾನ ಯುಗ ಪ್ರವರ್ತಕ ಇನ್ನಿಲ್ಲ" ಎಂದು ಸಾರಿದವು. ಆದರೆ ಕಾಳಿಂಗ ನಾವಡರು ಕ್ಯಾಸೆಟ್, ಸಿ.ಡಿ., ವಾಟ್ಸಪ್, ಯೂಟ್ಯೂಬ್ಗಳ ಮೂಲಕ ಈಗ ಮರುಜನ್ಮ ಪಡೆದಿದ್ದಾರೆ. ಇಂದೂ ಕೂಡ ನಮ್ಮೊಂದಿಗೆ ಇದ್ದಾರೆ.

ಯಕ್ಷಗಾನ ಸಂಬಂಧಿ ವಾಟ್ಸಾಪ್ ಗ್ರೂಪ್ಗಳು ಅಸಂಖ್ಯವಿವೆ. ಹೆಚ್ಚಿನ ಗ್ರೂಪ್ ಸದಸ್ಯರು ದಿನವೂ ಬೆಳಿಗ್ಗೆ ಎದ್ದೊಡನೆ ತಮ್ಮ ಕಣ್ಮಣಿ ಕಾಳಿಂಗ ನಾವಡರ ಹಾಡುಗಾರಿಕೆಯ ತುಣುಕನ್ನು ಗ್ರೂಪ್ನಲ್ಲಿ ಹಾಕಿ ಸಂಭ್ರಮಿಸುತ್ತಾರೆ. ಹೆಚ್ಚಿನವರು ಹೀಗೆ ಹಾಕುವ ಅದೇ ರೀತಿ ಕೇಳುವ ಕಾರ್ಯವನ್ನು ಒಂದು ಕೈಂಕರ್ಯದಂತೆ, ವ್ರತದಂತೆ ನಡೆಸಿಕೊಂಡು ಬರುತ್ತಿದ್ದಾರೆ. ಯಾರೋಯಾರೋ ಸಂಗ್ರಹಿಸಿದ್ದ, ಎಲ್ಲೆಲ್ಲೋ ಅಡಗಿದ್ದ ಅವರ ಹಾಡುಗಾರಿಕೆಯನ್ನು ಸಂಪಾದಿಸಿ, ಆವಿಷ್ಕರಿಸಿ, ವಾಟ್ಸಪ್ ಮೂಲಕ ಹಾಕಿ ಸದಸ್ಯರೆಲ್ಲರೂ ಕೇಳುತ್ತಾ ಆನಂದ ಪಡುವಂತೆ ಮಾಡುತ್ತಿದ್ದಾರೆ. ಗುರುಶಿಷ್ಯರು,

ದೊಂದಿಬೆಳಕು, ನಮ್ಮ ಬಳಗ, ಗಾನ ಕೋಗಿಲೆ, ಅಭಿಮಾನಿ ಬಳಗ, ಯಕ್ಷ ಸಿಂಚನ, ಸ್ನೇಹ ಬಳಗ, ಯಕ್ಷಗಾನ ಕಲಾಕೇಂದ್ರ ಮುಂತಾದ ಗುಂಪುಗಳು ಈ ಕ್ರಿಯೆಯಲ್ಲಿ ಸಕ್ರಿಯವಾಗಿವೆ. ಈಚೆಗೆ ಭಾಗವತ ಸುರೇಂದ್ರ ಫಣಿಯೂರು ಅವರು ಧಾರವಾಹಿ ರೂಪದಲ್ಲಿ ನಾವಡರ ಒಡನಾಟವನ್ನು ಅವರ ಭಾಗವತಿಕೆಯ ಶಕ್ತಿಯನ್ನು, ನಾವಡರ ಶೈಲಿಯ ವಿಶಿಷ್ಟತೆಯನ್ನು, ಉಳಿದ ಕಲಾವಿದರೊಂದಿಗಿನ ಅವರ ಆತ್ಮೀಯ ಸಂಬಂಧವನ್ನು ಎಳೆಎಳೆಯಾಗಿ ಬಿಡಿಸಿ ನಾವಡರ ವ್ಯಕ್ತಿತ್ವದ ವಿಶಿಷ್ಟತೆಯನ್ನು ಸಾಕಾರ ಶಿಲ್ಪದಂತೆ ಕಡೆದಿರಿಸಿದ್ದಾರೆ. ನಲವತ್ತಕ್ಕೂ ಹೆಚ್ಚು ಭಾಗಗಳಲ್ಲಿ ಹರಡಿಕೊಂಡಿರುವ ಈ ತುಣುಕುಗಳ ಮೂಲಕ ನಾವಡರು ಮತ್ತೊಮ್ಮೆ ಆಪ್ತರಾಗುತ್ತಾರೆ. ಸಾಗರದ ಸುಪ್ರಸಿದ್ಧ ವೈದ್ಯರಾದ ಡಾ. ಎಚ್.ಎಸ್. ಮೋಹನ್ ಅವರು ಕಾಳಿಂಗನಾವಡರ ಕೊನೆಯ ದಿನದ ಮುನ್ನಾದಿನ ಆಕಸ್ಮಿಕವಾಗಿ ತಮ್ಮ ಮನೆಗೆ ಬಾರದೇ ಉಳಿದ ಘಟನೆಯನ್ನು ವಾಟ್ಸಪ್ ಮೂಲಕ ತೋಡಿಕೊಂಡು ವ್ಯಥಿತರಾಗುತ್ತಾರೆ.

ಇದಕ್ಕೆ ಪ್ರತಿಕ್ರಿಯೆಯೇ ಎಂಬಂತೆ ಇನ್ನೊಬ್ಬರು ಒಡನಾಡಿಗಳು ಕೊನೆಯ ದಿನ ತಾವು ಅವರೊಂದಿಗೆ ಕಳೆದ ಘಳಿಗೆಗಳನ್ನು ನೆನಪಿಸಿಕೊಳ್ಳುತ್ತಾರೆ. ತಮಗಾದ ನೋವನ್ನು ವ್ಯಕ್ತಪಡಿಸುತ್ತಾರೆ. ಇಲ್ಲೆಲ್ಲ ಕಂಡುಬರುವುದು ಕಾಳಿಂಗ ನಾವಡರ ಹೃದಯ ವೈಶಾಲ್ಯವನ್ನು ಹಾಗೂ ಪ್ರೀತಿಪೂರ್ಣ ನಡೆನುಡಿಯನ್ನು ಭಾಗವತ ನಾರ್ಣಪ್ಪ ಉಪ್ಪೂರರ ಸುಪುತ್ರ ದಿನೇಶ ಉಪ್ಪೂರರು, ಕೋಟ ಮಂಜುನಾಥ ಮಯ್ಯರ ಸಂಗ್ರಹದಿಂದ ಆಯ್ದು ಅನೇಕ ಹಾಡುಗಳನ್ನು ಸಂಗ್ರಹಿಸಿ "ಗುರು ಶಿಷ್ಯರು" ಗುಂಪಿಗೆ ಹಾಕುತ್ತಲೇ ಇರುತ್ತಾರೆ. ಕುಮುಟಾದ ತಮ್ಮ ತಂದೆಯವರ ಹೋಟೇಲ್‌ಗೆ ಬಂದಾಗ ನಾವಡರು ಹೇಗೆ ನಡೆದುಕೊಳ್ಳುತ್ತಿದ್ದರು. ಉಳಿದ ಕಲಾವಿದರೊಂದಿಗಿನ ಹಾಗೂ ಅಭಿಮಾನಿಗಳೊಂದಿಗಿನ ಅವರ ಆಪ್ತತೆಯನ್ನು ಬಾಲ್ಯದ ಕಣ್ಣಿನಿಂದ ನೋಡಿದ್ದನ್ನು ಸಿ.ವಿ. ರವಿಕಾಮತ್ ಅವರು ವಾಟ್ಸಪ್‌ನಲ್ಲಿ ಕಣ್ಣಿಗೆ ಕಟ್ಟುವಂತೆ ಮರು ರೂಪಿಸುತ್ತಾರೆ. ಇದೆಲ್ಲದರಿಂದಾಗಿ ಕಾಳಿಂಗನಾವಡರು ಈಗ ಕೂಡ ನಮ್ಮೊಂದಿಗೆ ಇದ್ದಾರೆ.

ಯೂ ಟ್ಯೂಬ್ ಪ್ರಪಂಚಕ್ಕೆ ಬಂದರಂತೂ ಮತ್ತೊಮ್ಮೆ ಕಾಳಿಂಗನಾವಡರ ಭಾಗವತಿಕೆಯ ಸಾಕ್ಷಾತ್ಕಾರವಾಗುತ್ತದೆ. ಅವರು ಭಾಗವತಿಕೆ ಮಾಡಿದ ಪ್ರಸಿದ್ಧ ಪ್ರಸಂಗಗಳನ್ನು ಅಸಂಖ್ಯ ಜನರು ವೀಕ್ಷಿಸಿ ಆನಂದಿಸಿದ ದಾಖಲೆಗಳು ಅಲ್ಲಿ ದೊರೆಯುತ್ತವೆ. ನಾವಡರ ಅಭಿಮಾನಿಗಳು ತಾವು ಕ್ಲಿಕ್ಕಿಸಿದ ವಿಡಿಯೋಗಳನ್ನು ಯೂ ಟ್ಯೂಬ್ಗೆ ಹಾಕಿ ನಾವಡರು ಜೀವಂತವಾಗಿರುವಂತೆ ನೋಡಿಕೊಂಡಿದ್ದಾರೆ. ಇದಕ್ಕೊಂದು ಉದಾಹರಣೆಯೆಂದರೆ ಇಪ್ಪತ್ತು ವರ್ಷಗಳ ಕೆಳಗೆ 04-11-1988ರ ಸಂಜೆ ಬಹರೇನ್ ಕನ್ನಡ ಸಂಘದವರು ಹಿಲ್ಟನ್ ಹೊಟೇಲ್ನಲ್ಲಿ ಜರುಗಿದ ಭೀಷ್ಮ ವಿಜಯ ಪ್ರಸಂಗವನ್ನು ಸೀತಾರಾಮ ಶೆಟ್ಟಿಯವರು ವಿಡಿಯೋ ಮಾಡಿಕೊಂಡಿದ್ದು

ಅದೀಗ ಗಾನಗಂಧರ್ವ ಆವೃತ್ತಿಯೆಂದು ನಾಮಾಂಕಿತಗೊಂಡು ಯೂ ಟ್ಯೂಬ್ ಮೂಲಕ ಪ್ರಸಾರಗೊಂಡು ಪ್ರಸಿದ್ಧವಾಗಿದೆ. ಇಂತಹ ಅಸಂಖ್ಯ ಯಕ್ಷಗಾನ ಯೂ ಟ್ಯೂಬ್ ಆವೃತ್ತಿಗಳು ದೊರೆಯುತ್ತವೆ. ಈ ಮೂಲಕ ಭೂತ ಕಾಲಕ್ಕೂ ವರ್ತಮಾನ ಕಾಲಕ್ಕೂ ವ್ಯತ್ಯಾಸವಿಲ್ಲದಂತಾಗಿದೆ. ಇಲ್ಲೂ ಕೂಡ ಕಾಳಿಂಗ ನಾವಡರು ಹೆಚ್ಚು ಜನಾನುರಾಗಿಗಳಾಗಿದ್ದು ಬಹಳ ಪ್ರಸ್ತುತರಾಗಿದ್ದಾರೆ.

ಕಾಳಿಂಗನಾವಡರನ್ನು ಅನೇಕ ಸಂಘ ಸಂಸ್ಥೆಗಳು ಇಂದಿಗೂ ನೆನಪಿಸಿ ಕೊಳ್ಳುತ್ತವೆ. ಬೆಂಗಳೂರಿನ ಕಲಾಕದಂಬ ಆರ್ಟ್ಸ್ ಸೆಂಟರ್ ಸಂಸ್ಥೆ ಕಾಳಿಂಗ ನಾವಡರ ಹೆಸರಿನಲ್ಲಿ ಪ್ರಶಸ್ತಿಯನ್ನು ಕಳೆದ ಒಂಭತ್ತು ವರ್ಷಗಳಿಂದ ಯಕ್ಷಗಾನದ ಹಿರಿಯ ಕಲಾವಿದರಿಗೆ ನೀಡಿ ಸಮಾರಂಭ ನಡೆಸಿಕೊಂಡು ಬರುತ್ತಿದೆ. ಇದೇ 12-08-2018ರಂದು ಉದಯಭಾನು ಕಲಾ ಸಭಾ ಭವನದಲ್ಲಿ ಈ ಭಾರಿ ಶ್ರೀ ರಾಮಕೃಷ್ಣ ಮಂದಾರ್ತಿಯವರಿಗೆ "ಕಾಳಿಂಗನಾವಡ" ಪ್ರಶಸ್ತಿ ನೀಡಿ ಗೌರವಿಸಲಿದೆ.

ಇದೇರೀತಿ ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರವು "ಭಾಗವತ ಶ್ರೇಷ್ಠ ಕಾಳಿಂಗ ನಾವಡ" ಪ್ರಶಸ್ತಿಯನ್ನು 09-07-2017ರಂದು ಗುಂಡುಮಿಯ ಸದಾನಂದ ರಂಗಮಂದಿರದಲ್ಲಿ ಭಾಗವತ ಮಟ್ಪಾಡಿ ನರಸಿಂಹ ಶೆಟ್ಟಿಯವರಿಗೆ ನೀಡಿ ಗೌರವಿಸಿದೆ. ಕರಾವಳಿ ಹಾಗೂ ಮಲೆನಾಡಿನಲ್ಲಿರುವ ಅನೇಕ ಸಂಘಸಂಸ್ಥೆಗಳು ತಮ್ಮ ಸಭೆ, ಸಮಾರಂಭಗಳಲ್ಲಿ ಮರೆಯದೇ ಕಾಳಿಂಗ ನಾವಡರ ಭಾಗವತಿಕೆಯ ಗುಣಗಾನವನ್ನು ಮಾಡುತ್ತಿವೆ. ಹೀಗೆ ಕೂಡ ಕಾಳಿಂಗನಾವಡರು ನಮ್ಮೊಂದಿಗೆ ಇದ್ದಾರೆ.

ಇಂತಹ ಕಾಳಿಂಗ ನಾವಡರು ಜನಿಸಿದ್ದು 06-06-1957 ರಂದು ಆ ಕಾಲದ ಖ್ಯಾತ ಭಾಗವತ ಗುಂಡ್ಮಿ ಶ್ರೀ ರಾಮಚಂದ್ರ ನಾವಡರ ಮಗನಾಗಿ. ತಮ್ಮ ಹದಿನೈದನೇ ವಯಸ್ಸಿನಲ್ಲೇ ಅಮೃತೇಶ್ವರಿ ಮೇಳದ ಸಂಗೀತಗಾರರಾಗಿ ಯಕ್ಷಗಾನ ರಂಗಸ್ಥಳಕ್ಕೆ ಪಾದಾರ್ಪಣೆ ಮಾಡಿದವರು. 1972ರಲ್ಲಿ ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರ ಪ್ರಾರಂಭವಾಯಿತು. ಮೇಳ ಬೇಡವೆಂದು ಬೆಂಗಳೂರಿಗೆ ಹೋಟೆಲ್ ಕೆಲಸಕ್ಕೆಂದು ತೆರಳಿದ್ದ ಕಾಳಿಂಗ ನಾವಡರನ್ನು ಒತ್ತಾಯ ಪೂರ್ವಕವಾಗಿ ಆಗ ಕಲಾ ಕೇಂದ್ರಕ್ಕೆ ಕರೆಸಿಕೊಂಡವರು ಶ್ರೀಯುತ ಸದಾನಂದ ಹೆಬ್ಬಾರರು. ಅಮೃತೇಶ್ವರಿ ಮೇಳದಲ್ಲಿ ಹಿರಿಯ ಭಾಗವತ ಶ್ರೀ ನಾರ್ಣಪ್ಪ ಉಪ್ಪೂರರಿಂದ ಭಾಗವತಿಕೆಯಲ್ಲಿ ಶುದ್ಧ ಶಾಸ್ತ್ರೀಯ ಅಭ್ಯಾಸ, ಇನ್ನೊಂದೆಡೆ ತಂದೆ ರಾಮಚಂದ್ರ ನಾವಡರಿಂದ ಪಾರಂಪರಗತ ಕುಂಜಾಲು ಶೈಲಿಯ ತಿಳಿವು. ಖ್ಯಾತ ಮದ್ದಳೆ ವಾದಕರುಗಳಾದ ಹಿರಿಯಡ್ಕ ಗೋಪಾಲರಾವ್, ದಿ॥ ತಿಮ್ಮಪ್ಪನಾಯಕ ಮಹಾಬಲ ಕಾರಂತರಿಂದ ಮುಂತಾದವರಿಂದ ಸಲಹೆ ಸಹಕಾರಗಳ ಮಹಾಪೂರ, ಮತ್ತೊಂದೆಡೆ ಇದೆಲ್ಲಕ್ಕೂ ಮಿಗಿಲಾಗಿ ಯಕ್ಷಗಾನಕ್ಕೆ ಆದರ್ಶ ಪ್ರಾಯರಾದ ಡಾ.ಶಿವರಾಮಕಾರಂತರಿಂದ

ಹಾಡುಗಾರಿಕೆಯ ಕುರಿತಾದ ಹೊಸ ಹೊಳವುಗಳ ಅರಿವು ದೊರೆತದ್ದು. ಇವೆಲ್ಲದರ ಫಲವಾಗಿ ನಾಲ್ಕೈದು ವರ್ಷಗಳಲ್ಲೇ ಯಕ್ಷಗಾನ ಪ್ರಪಂಚಕ್ಕೆ ಒಬ್ಬ ಉತ್ತಮ ಭರವಸೆಯ ಭಾಗವತರು ದೊರೆತರು. 1972 ರಿಂದ 1977 ರವರೆಗೆ ಅಮೃತೇಶ್ವರಿ ಮೇಳ ನಂತರ ಒಂದು ವರ್ಷ ಪೆರ್ಡೂರ್ ಮೇಳ ಮುಂದೆಲ್ಲಾ ಸಾಲಿಗ್ರಾಮ ಮೇಳದ ಭಾಗವತರಾಗಿದ್ದರು ಕಾಳಿಂಗನಾವಡರು.

ನಾವಡರ ಭಾಗವತಿಕೆ ಎಂದೊಡನೆ ಟಿಕೆಟ್‌ಗಾಗಿ ಪರದಾಟ, ನೂಕುನುಗ್ಗಲು ಸರ್ವೆ ಸಾಮಾನ್ಯವಾಗಿತ್ತು. ಇವರಿರುವ ಪ್ರದರ್ಶನಗಳ ಟಿಕೇಟುಗಳು ಆ ಕಾಲದಲ್ಲಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿದ್ದವು. ಯಕ್ಷಗಾನ ಕಲಾವಿದರಿಗೆ "ಸ್ಟಾರ್ ವ್ಯಾಲ್ಯೂ", ತಾರಾ ಮೌಲ್ಯ ತಂದುಕೊಟ್ಟವರಲ್ಲಿ ಕಾಳಿಂಗನಾವಡರೇ ಮೊದಲಿಗರು. ಅಭಿಮಾನಿ ಪಡೆ ಅವರ ಬೆನ್ನಿಗೆ ಯಾವಾಗಲೂ ಇರುತ್ತಿತ್ತು. ಅವರ ಸರಳ ಸಜ್ಜನಿಕೆಯ ಸ್ವಭಾವ ಕೂಡ ಇದಕ್ಕೆ ಪೂರಕವಾಗಿತ್ತು. ಮುಂಬಯಿ, ಬೆಂಗಳೂರು, ಚೆನ್ನೈ ಮುಂತಾದ ಕಡೆಯಲ್ಲೆಲ್ಲ ಪ್ರದರ್ಶನಗಳಲ್ಲಿ ಭಾಗವಹಿಸುತ್ತಾ "ವಿಮಾನದಲ್ಲೇ" ಆ ಕಾಲದಲ್ಲಿ ಸಂಚರಿಸುತ್ತಾ "ಹಾರಾಡುವ ಭಾಗವತ" ರೆಂದು ಖ್ಯಾತರಾಗಿದ್ದರು. ಯಕ್ಷಗಾನಕ್ಕೆ ಅನೇಕ ಹೊಸ ರಾಗಗಳನ್ನು ಪರಿಚಯಿಸಿದ್ದರು. ನಾವಡರು ಭಾಗವತಿಕೆಯಲ್ಲಿ ಭಾವ ತೀವ್ರತೆಯನ್ನು ತಂದರು. ರಂಗದಲ್ಲಿ ಪಾತ್ರಗಳಿಂದ ಹೇಗೆ ಕಲಾಭಿವ್ಯಕ್ತಿಯನ್ನು ಹೊರತರಬೇಕೆಂಬ ಕಾರ್ಯವನ್ನು ಸಿದ್ಧಿಸಿಕೊಂಡರು. ಭಾಗವತಿಕೆಯಲ್ಲಿ "ನಾವಡರ ಶೈಲಿ"ಯ ಹೊಸ ಶಕೆ ಇವರಿಂದಾಗಿ ಆರಂಭವಾಯಿತು. ಸಾಲಿಗ್ರಾಮ ಮೇಳ ಕಾಳಿಂಗ ನಾವಡರ ನಿಧನ (27-05-1990)ದ ನಂತರ ತನ್ನ ಮೊದಲಿನ ಜನಪ್ರಿಯತೆಯನ್ನು ಉಳಿಸಿಕೊಳ್ಳಲಾಗಲಿಲ್ಲ. ಬಡಗು ತಿಟ್ಟಿನಲ್ಲಿ ಸ್ವಲ್ಪ ಕಾಲ ಶೂನ್ಯವೇ ಆವರಿಸಿದಂತಿತ್ತು. ಅವರ ಭಾಗವತಿಕೆಯಲ್ಲಿ ವಿಜೃಂಭಿಸುತ್ತಿದ್ದ ರಂಗ ವೈಭವವು ಮತ್ತೆ ಮರುಕಳಿಸಲಿಲ್ಲ.

ಸ್ವತಃ ಯಕ್ಷಗಾನ ಪ್ರಸಂಗ ಕರ್ತರಾಗಿಯೂ ಕಾಳಿಂಗನಾವಡರು ಖ್ಯಾತರಾಗಿದ್ದಾರೆ. ಯಕ್ಷಗಾನ ರಂಗದಲ್ಲಿ ಸುಪರಿಚಿತವಾದ ಅವರು ಬರೆದ "ರೂಪಶ್ರೀ", "ನಾಗಶ್ರೀ", "ಭಾಗ್ಯಶ್ರೀ", "ಕಾಂಚನಶ್ರೀ" ಇವುಗಳೆಲ್ಲಾ ಆಕಾಲಕ್ಕೆ ಮನೆ ಮಾತಾಗಿದ್ದವು. ನಾಗಶ್ರೀಯಂತೂ ಅಸಂಖ್ಯ ಪ್ರದರ್ಶನಗಳನ್ನು ಕಂಡಿದ್ದು ಇಂದಿಗೂ ಕೂಡಾ ಅಲ್ಲಲ್ಲಿ ಪ್ರದರ್ಶನಗೊಳ್ಳುತ್ತಿದೆ. ತಾನು ಪ್ರಸಂಗಕಾರನಾಗಿದ್ದರೂ ಬೇರೆ ಪ್ರಸಂಗದ ಕವಿಗಳ ಬಗ್ಗೆ ಅಪಾರವಾದ ಪ್ರೀತಿ ಹಾಗೂ ಗೌರವವನ್ನು ಇಟ್ಟುಕೊಂಡಿದ್ದರು. ಕಂದಾವರ ರಘುರಾಮಶೆಟ್ಟಿಯವರ ಸತಿಸೀಮಂತಿನಿ ಪ್ರಸಂಗ ಅರವತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿತ್ತು. ಇವರ "ಚೆಲುವೆ ಚಿತ್ರಾವತಿಯ "ಎಲ್ಲೆಲ್ಲೂ ಸೊಬಗಿದೆ, ಎಲ್ಲೆಲ್ಲೂ ಸೊಗಸಿದೆ" ಎಂಬ ವನವಿಹಾರದ ಪದ್ಯ ಕಾಳಿಂಗನಾವಡರಿಂದಾಗಿ

ಚಿರಂತನವಾಯಿತು. ವೈಯಕ್ತಿಕ ಸ್ನೇಹಕ್ಕೆ ನಾವಡರು ಕೊಡುತ್ತಿದ್ದ ಬೆಲೆ ಅಸಾಧಾರಣವಾದ್ದು. ತಾನೊಬ್ಬ "ಮೇರು ಪ್ರತಿಭೆಯ ಭಾಗವತ" ಎಂಬ ಹಮ್ಮು ಅವರಲ್ಲಿ ಇರಲೇ ಇಲ್ಲ. ಹೋಟೆಲ್ ಉದ್ಯೋಗಿಗಳ ಕಣ್ಮಣಿಯಾಗಿದ್ದರು. ಬೆಂಗಳೂರಿನಲ್ಲಿ ಅವರಿದ್ದರೆಂದರೆ ಆ ಅಭಿಮಾನಿ ಬಳಗ ಅವರನ್ನು ಸುತ್ತುವರಿದುಕೊಂಡು ಇರುತ್ತಿತ್ತು. ಇಂತಹ ಕಾಳಿಂಗನಾವಡರು ಈ ಎಲೆಕ್ಟ್ರಾನಿಕ್ ಯುಗದಲ್ಲಿ ಮತ್ತೆ ಮರುಹುಟ್ಟು ಪಡೆದು ಅಭಿಮಾನಿ ಬಳಗದಲ್ಲಿ ಜೀವಂತವಾಗಿದ್ದಾರೆ.

("ಹರ್ಷವಾಣಿ" ಪತ್ರಿಕೆಯ 9ನೇ ಆಗಸ್ಟ್ 2018ರಲ್ಲಿ ಪ್ರಕಟವಾದ ಲೇಖನ)

*

ದೂರದರ್ಶಿ ಸಂಘಟಕ ಎಸ್.ಎನ್. ಪಂಜಾಜೆ

ಬೆಂಗಳೂರು ಮಹಾನಗರ ಯಕ್ಷಗಾನದ ಪಾಲಿಗೆ ಎರಡನೇ ತವರಿನಂತೆ. ಅರವತ್ತು ವರ್ಷಗಳ ಹಿಂದೆ ಬೆಂಗಳೂರಿನ ಹೊಟೇಲ್ ಮಾಲಿಕರು ಸೇರಿ ಊರಿನಿಂದ ಮೇಳದ ಕಲಾವಿದರನ್ನು ಕರೆಸಿ, ಮಳೆಗಾಲದಲ್ಲಿ ಯಕ್ಷಗಾನ ಪ್ರದರ್ಶನ ಮಾಡಿಸುತ್ತಿದ್ದುದು ಈಗ ಐತಿಹಾಸಿಕ ದಾಖಲೆಯಾಗಿದೆ. ಅದನ್ನು ಬಿಟ್ಟರೆ ಉಳಿದ ಸಂದರ್ಭಗಳಲ್ಲಿ ಯಕ್ಷಗಾನದ ಸದ್ದೇ ಇರುತ್ತಿರಲಿಲ್ಲ. ಆದರೆ ಈಚಿನ ವರ್ಷಗಳಲ್ಲಿ ಪ್ರತಿ ಶನಿವಾರ, ಭಾನುವಾರಗಳಲ್ಲಿ ಒಂದಿಲ್ಲ ಒಂದು ಕಡೆ ಯಕ್ಷಗಾನದ ಸದ್ದು ಮೊಳಗುತ್ತಿರುತ್ತದೆ. ಇದಕ್ಕೆಲ್ಲಾ ಕಾರಣರಾದವರು ಬೆಂಗಳೂರಿನ ಹವ್ಯಾಸಿ ಯಕ್ಷಗಾನ ಕಲಾವಿದರು. ಬೆಂಗಳೂರಿನಲ್ಲಿ ಐವತ್ತಕ್ಕೂ ಮಿಕ್ಕಿ ಹವ್ಯಾಸಿ ಯಕ್ಷಗಾನ ಸಂಘಸಂಸ್ಥೆಗಳಿವೆ. ತೆಂಕು, ಬಡಗು, ಬಡಾಬಡಗು ಎಂಬ ಭೇದವಿಲ್ಲದೇ ಎಲ್ಲಾ ಹವ್ಯಾಸಿಗಳು ಈ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಯಕ್ಷಗಾನದಲ್ಲಿ ಆಸಕ್ತಿ ಇರುವವರು ಒಂದೆಡೆ ಕಲೆತು, ಯಕ್ಷಗಾನ ಕಲಾವಿದರಿಂದ ಕಲೆಯನ್ನು ಕಲಿತು, ಸಹಹವ್ಯಾಸಿಗಳನ್ನು ಒಂದಾಗಿಸಿ ಸಂಘಟನೆಯನ್ನು ಮಾಡಿ, ಪ್ರದರ್ಶನಕ್ಕೆ ಅಣಿಯಾಗುತ್ತಿರುವುದನ್ನು ಕಾಣಬಹುದು. ಯಕ್ಷಗಾನ ಹವ್ಯಾಸಿ ತಂಡಗಳೇ ಬೆಂಗಳೂರಿಗೆ ಅತಿಥಿ ಕಲಾವಿದರನ್ನು ಕರೆಸುತ್ತಾ, ಹಿರಿಯ ಕಲಾವಿದರನ್ನು ಸನ್ಮಾನಿಸುತ್ತಾ, ತಾವು ಕಲಿತ ಆಖ್ಯಾನವನ್ನು ಪ್ರದರ್ಶಿಸುತ್ತಾ ಈ ಮಹಾನಗರದಲ್ಲಿ ಯಕ್ಷಗಾನವನ್ನು ಉಳಿಸಿ ಬೆಳೆಸುವ ಕೈಂಕರ್ಯಕ್ಕೆ ಬದ್ಧವಾಗಿವೆ.

ಇಂತಹ ಸಂಘಟನೆಗಳಲ್ಲಿ ಬೆಂಗಳೂರಿನ ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನವು ಮುಂಚೂಣಿಯಲ್ಲಿದೆ. ಕಳೆದ ಮೂರು ದಶಕಗಳಿಂದ ಬೆಂಗಳೂರಿನ ಯಕ್ಷಗಾನ ವಲಯದಲ್ಲಿ ಚಿರಪರಿಚಿತರಾಗಿರುವ ಸೂರ್ಯನಾರಾಯಣ ಪಂಜಾಜೆಯವರೇ ಸಂಸ್ಥೆಯ ಅಧ್ಯಕ್ಷರಾಗಿದ್ದು ಪ್ರತಿಷ್ಠಾನವನ್ನು ನಾನಾ ಆಯಾಮಗಳಲ್ಲಿ ವಿಸ್ತರಿಸಿ ಕೀರ್ತಿಗೆ ಭಾಜನರಾಗಿರುತ್ತಾರೆ. ಹದಿನಾಲ್ಕು ಅಖಿಲ ಭಾರತ ಯಕ್ಷಗಾನ

ಬಯಲಾಟ ಸಾಹಿತ್ಯ ಸಮ್ಮೇಳನ ನಡೆಸುವ ಮೂಲಕ ಇವರು ಯಕ್ಷಗಾನ ಆಸಕ್ತರ ಗಮನ ಸೆಳೆದಿದ್ದಾರೆ. ಈಚೆಗೆ ಹಠಾತ್ತಾಗಿ ಅವರು ನಮ್ಮನ್ನೆಲ್ಲ ಅಗಲಿರುವುದು ಯಕ್ಷಗಾನ ವಲಯಕ್ಕೆ ಅದರಲ್ಲೂ ಬೆಂಗಳೂರಿನ ಯಕ್ಷಗಾನ ಅಭಿಮಾನಿಗಳಿಗೆ ಬಂದೆರಗಿದ ಆಘಾತವೇ ಸರಿ.

ಸೂರ್ಯನಾರಾಯಣ ಪಂಜಾಜೆಯವರದು ಮೂಲತಃ ಕರ್ನಾಟಕ, ಕೇರಳ ಗಡಿ ಭಾಗದ ಪಂಜಾಜೆ ಗ್ರಾಮದವರು. ಇವರ ತಂದೆ ಶಂಕರಭಟ್ಟರು ಕನ್ನಡವನ್ನು ಆ ಭಾಗದಲ್ಲಿ ಉಳಿಸಲು ಶ್ರಮಿಸಿದವರು. ಎಸ್.ಎನ್. ಪಂಜಾಜೆಯವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಹುಟ್ಟಿದ ಊರಿನಲ್ಲೂ, ಕಾಲೇಜು ಶಿಕ್ಷಣವನ್ನು ಪುತ್ತೂರಿನಲ್ಲೂ ಮಾಡಿದರು. ಉದ್ಯೋಗಕ್ಕಾಗಿ ನಾನಾ ಊರುಗಳಲ್ಲಿ ಅಲೆದರು. ಕೊನೆಗೆ ಬೆಂಗಳೂರನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡರು.

ಬೆಂಗಳೂರಿಗೆ ಬರುವ ಮುನ್ನ ಕಾಂಟ್ರಾಕ್ಟರ್ ಆಗಿ, ನಾಟಕ ಕಂಪನಿಯ ವ್ಯವಸ್ಥಾಪಕರಾಗಿ, ಹರಿದಾಸರಾಗಿ, ನಾನಾ ವೃತ್ತಿಗಳಲ್ಲಿ ದುಡಿದು ಅಪಾರ ಜೀವನ ಅನುಭವ ಗಳಿಸಿದರು. ಮೊದಲಿಗೆ ಬೆಂಗಳೂರಿನಲ್ಲಿ ಹೊಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದ ಅವರು ತಮ್ಮ ಹವ್ಯಾಸವಾಗಿದ್ದ ಯಕ್ಷಗಾನವನ್ನು ಮರೆಯಲಿಲ್ಲ. ಹವ್ಯಾಸಿ ತಂಡದ ಪ್ರದರ್ಶನಗಳಲ್ಲಿ ವೇಷಧಾರಿಯಾಗಿ, ತಾಳಮದ್ದಲೆಗಳಲ್ಲಿ ಅರ್ಥಧಾರಿಯಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪಂಜಾಜೆಯವರು ಖ್ಯಾತರಾಗಿದ್ದರು. ಮುಂದೆ ಮೂರು ದಶಕಗಳ ಕಾಲ ಯಕ್ಷಗಾನಕ್ಕಾಗಿ ಅವರು ಮಾಡಿದ ಸೇವೆ ಅನನ್ಯ. ಏರು ಸ್ವರದಲ್ಲಿನ ಅವರ ಪಾತ್ರ ನಿರ್ವಹಿಸುವ ವಿಧಾನ ಆಕರ್ಷಕ. ರಾವಣ, ದುರ್ಯೋಧನ, ರಾಕ್ಷಸ ಪಾತ್ರಗಳು ಅವರಿಗೆ ಹೆಚ್ಚಿನ ಹೆಸರನ್ನು ತಂದು ಕೊಟ್ಟಿವೆ. ಮುಂದೆ ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನವನ್ನು ಹುಟ್ಟು ಹಾಕಿ ಅದರ ಅಧ್ಯಕ್ಷರಾಗಿ ಆ ತಂಡವನ್ನು ಯಶಸ್ವಿಯಾಗಿ ಎರಡು ದಶಕಗಳಿಂದ ನಡೆಸಿಕೊಂಡು ಬಂದರು. ಹಾಗಿದ್ದೂ ಎಲ್ಲಾ ಹವ್ಯಾಸಿ ಕಲಾವಿದರಿಗೆ ಅಣ್ಣನಂತೆ ಪ್ರೋತ್ಸಾಹಿಸಿದರು. ಎಳೆಯ ಮಕ್ಕಳಿಗೆ ತಾವೇ ವೇಷ ಕಟ್ಟುತ್ತಿದ್ದರು. ರಂಗದ ಎಲ್ಲಾ ಅಂಗಾಂಗಗಳ ಮೇಲೆ ಹಿಡಿತವಿದ್ದ ಅವರು ಪ್ರದರ್ಶನ ಎಲ್ಲೂ ಸೋಲದಂತೆ ನೋಡಿಕೊಳ್ಳುತ್ತಿದ್ದರು. ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನವು ಬೆಂಗಳೂರಿನಲ್ಲಿ ಮಾತ್ರವಲ್ಲದೇ ನಾಡಿನ ಬೇರಬೇರೆ ಕಡೆ ಪ್ರದರ್ಶನ ನೀಡುವ ಮೂಲಕ ಹೆಸರು ಗಳಿಸಿದೆ. ಪಂಜಾಜೆಯವರು ತಮ್ಮ ತಂಡದೊಂದಿಗೆ ವಿದೇಶಕ್ಕೆ ಅದರಲ್ಲೂ ಅಮೇರಿಕಕ್ಕೆ ಪ್ರಯಾಣ ಬೆಳೆಸುವ ಮೂಲಕ ಅಲ್ಲೂ ತೆಂಕುತಿಟ್ಟಿನ ಯಕ್ಷಗಾನದ ವೈಭವವನ್ನು ಮೆರೆಸಿದ್ದಾರೆ. ಎಸ್.ಎನ್.ಪಂಜಾಜೆಯವರದು ಸ್ನೇಹಮಯ ವ್ಯಕ್ತಿತ್ವ. ಮಾತಿನಲ್ಲಿ ಸದಾ ದೊಡ್ಡ ನಗು. ಅದರೊಂದಿಗೆ ದೃಢವಿಶ್ವಾಸ, ಎಲ್ಲರನ್ನೂ ಪ್ರೀತಿಯಿಂದ

ನಂಬುವ ಮನೋಭಾವ. ಯಾವ ಕಾರ್ಯಕ್ಕಾದರೂ ಸರಿ ಎಂಬ ನಿಲುವು. ಕೆಲಸ ಕೈಗೆತ್ತಿಕೊಂಡಾಗ ಬಿಡದ ಛಲ. ಇವೆಲ್ಲದರಿಂದಾಗಿ ಎಲ್ಲ ತಿಟ್ಟಿನವರ ಪ್ರೀತಿ ಆಧಾರಕ್ಕೆ ಭಾಜನರು. ಅವರ ಸಂಸ್ಥೆಯಲ್ಲಿ ತೆಂಕುತಿಟ್ಟಿನ ವೇಷಭೂಷಣಗಳಿದ್ದು ಅನೇಕ ಸಂಘಗಳಿಗೆ ನೀಡುತ್ತಿದ್ದರಲ್ಲದೇ ಪ್ರಸಾಧನಕ್ಕೆ ಅವರೇ ಸಹಾಯ ಮಾಡುತ್ತಿದ್ದರು. ಕಿರಿಯರೆಲ್ಲಾ "ಪಂಜಾಜೆ ಮಾವಾ" ಎಂದೇ ಕರೆಯುತ್ತಿದ್ದರು. ಎತ್ತರದ ಆಳು, ಗಟ್ಟಿಯಾದ ದನಿ, ದೃಢಕಾಯ, ದೃಢಚಿತ್ತವಿದ್ದರೂ ಹೃದಯ ಮಾತ್ರಾ ಮಗುವಿನ ಸ್ವಭಾವದ್ದು. ಹಿಂದೊಂದೂ ಮುಂದೊಂದೂ ಇಲ್ಲ. ಎಲ್ಲವೂ ನೇರ. ಎಲ್ಲವೂ ಸೀದಾಸಾದ. ಬೆಂಗಳೂರಿನಲ್ಲಿ ತಾಳಮದ್ದಲೆಯನ್ನು ಪ್ರಚುರ ಪಡಿಸುವಲ್ಲಿ ಇವರ ಪಾತ್ರ ಹಿರಿಯದು. ಹಿರಿಯ ಅರ್ಥಧಾರಿಗಳನ್ನು ಆಹ್ವಾನಿಸಿ ಆ ಮೂಲಕ ಕಳೆಕಟ್ಟುವಂತೆ ನೋಡಿಕೊಳ್ಳುತ್ತಿದ್ದರು. ದೂರದರ್ಶನ ಚಂದನ ವಾಹಿನಿಯ ಮೂಲಕ ಯಕ್ಷಗಾನ ಕಾರ್ಯಕ್ರಮಗಳು, ಕಲಾವಿದರ ಸಂದರ್ಶನಗಳು ಮೂಡಿ ಬರುವಲ್ಲಿ ಇವರ ಪಾತ್ರ ದೊಡ್ಡದು. ಎಲ್ಲಕ್ಕಿಂತ ಮುಖ್ಯವಾಗಿ ಸೂರ್ಯನಾರಾಯಣ ಪಂಜಾಜೆಯವರು ಹದಿನಾಲ್ಕು ಯಕ್ಷಗಾನ ಸಾಹಿತ್ಯ ಸಮ್ಮೇಳನದ ರೂವಾರಿಯಾಗಿ ಖ್ಯಾತಿಗೊಂಡವರು.

2004 ಫೆಬ್ರವರಿಯ 7, 8 ಹಾಗೂ 9 ರಂದು ಚೊಚ್ಚಲ ಪ್ರಯತ್ನವಾಗಿ ಅಖಿಲ ಕರ್ನಾಟಕ ಸಮಗ್ರ ಯಕ್ಷಗಾನ ಸಮ್ಮೇಳನ, ಕರ್ನಾಟಕ ಸಾಂಸ್ಕೃತಿಕ ವೇದಿಕೆಯ ಮೂಲಕ ಬೆಂಗಳೂರಿನಲ್ಲಿ ನಡೆಯಿತು. ಇವರು ಯಕ್ಷಗಾನ ಕೇವಲ ಕರಾವಳಿಯ ಕಲೆಯೆಂದು ಕರೆಯುವವರಲ್ಲ. ಯಕ್ಷಗಾನ ಇಡೀ ಕರ್ನಾಟಕದ ಕಲೆ. ಇದರ ಇತರ ಪ್ರಕಾರಗಳಾದ ಮೂಡಲಪಾಯ, ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣ ಪಾರಿಜಾತ, ಘಟ್ಟದಕೋರೆ ಮುಂತಾದ ಕೆಲವು ಪ್ರಕಾರಗಳ ಕಲಾವಿದರನ್ನು ಸೇರಿಸಿಕೊಂಡಾಗ ಮಾತ್ರ ಸಮಗ್ರ ಯಕ್ಷಗಾನ ಸಮ್ಮೇಳನವಾಗುತ್ತದೆ ಎಂದು ದೃಢವಾಗಿ ನಂಬಿದವರು. ಅದೇ ರೀತಿ ಸಂಘಟಿತ ಸಮ್ಮೇಳನ ನಡೆಸುವ ಮೂಲಕ ಎಲ್ಲರ ಕಣ್ಮಣಿಯಾದರು. ಹೀಗೆ 2004ರಲ್ಲಿ ಪ್ರಾರಂಭಗೊಂಡ ಅಖಿಲ ಭಾರತ ಯಕ್ಷಗಾನ ಬಯಲಾಟ ಸಮ್ಮೇಳನ ನಿರಂತರ ಹದಿನಾಲ್ಕು ಬಾರಿ ನಡೆಯಿತು. ಶೇಣಿ ಗೋಪಾಲಕೃಷ್ಣ ಭಟ್ಟ, ಡಾ.ಪ್ರಭಾಕರ ಜೋಶಿ, ಪೊಲೀಸ್ ಪಾಟೀಲ, ಮಲ್ಪೆ ರಾಮದಾಸ ಸಾಮಗ, ಪೆರ್ಲ ಕೃಷ್ಣಭಟ್ಟ, ಕೆ. ಗೋವಿಂದ ಭಟ್ಟ, ಪ್ರೊ. ಎಂ.ಎ. ಹೆಗಡೆ, ಅಂಬಾತನಯ ಮುದ್ರಾಡಿ, ಜಿ.ಎಸ್. ಭಟ್, ಡಾ. ಕೆ.ಆರ್. ದುರ್ಗಾದಾಸ್, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಶ್ರೀಧರ್ ಡಿ.ಎಸ್. ಕಂದಾವರ ರಘುರಾಮ ಶೆಟ್ಟಿ ಮುಂತಾದವರು ಸರ್ವಾಧ್ಯಕ್ಷರಾಗಿ ಸಮ್ಮೇಳನ ನಡೆಸಿಕೊಟ್ಟವರು. ವೈವಿಧ್ಯಮಯ ಗೋಷ್ಠಿಗಳು, ವೈಚಾರಿಕ ಪ್ರಬಂಧಗಳು, ಪ್ರಾತ್ಯಕ್ಷಿಕೆಗಳು, ವಿವಿಧ ಪ್ರಕಾರಗಳ ಪ್ರದರ್ಶನಗಳು ಇಲ್ಲಿ ನಡೆದವು. ಬೆಂಗಳೂರು, ಗದಗ, ಉಡುಪಿ, ಮಂಗಳೂರು, ಮೈಸೂರು, ಬಳ್ಳಾರಿ, ಶಿರಸಿ, ಪುತ್ತೂರು, ಶಿವಮೊಗ್ಗ, ಸಾಣೆಹಳ್ಳಿ, ಕುಂದಾಪುರ ಮುಂತಾದ ನಗರಗಳಲ್ಲಿ ಸಮ್ಮೇಳನ ಯಶಸ್ವಿಯಾಗಿ

ನಡೆಯಿತು. ಕರಾವಳಿಯ ಯಕ್ಷಗಾನ ಕಲಾವಿದರು, ಸಾಹಿತಿಗಳು, ಚಿಂತಕರು ಪಾಲ್ಗೊಂಡಿದ್ದಲ್ಲದೇ ಬಯಲಾಟದ ಬಯಲು ಸೀಮೆಯ ಕಲಾವಿದರು ಭಾಗವಹಿಸಿದ್ದು ಸಮ್ಮೇಳನಗಳ ವಿಶೇಷತೆಯಾಗಿತ್ತು. ಎಲ್ಲರನ್ನೂ ಒಳಗೊಳ್ಳುವಿಕೆಯೇ ಪಂಜಾಜೆಯವರ ಶಕ್ತಿಯಾಗಿತ್ತು. ಸಮ್ಮೇಳನಗಳ ಸ್ಮರಣ ಸಂಚಿಕೆಗಳಾಗಿರುವ ಮಣಿಹಾರ, ಕೀರಿಟಗಳಲ್ಲಿ ವಿದ್ವತ್ ಪೂರ್ಣ ಪ್ರಬಂಧಗಳು ಅಡಕಗೊಂಡಿವೆ. ಹದಿನೈದನೆಯ ಸಮ್ಮೇಳನ ಧರ್ಮಸ್ಥಳದಲ್ಲಿ ನಡೆಸಬೇಕೆಂಬ ಆಸೆ ಅವರಿಗಿತ್ತು. ಪಂಜಾಜೆಯವರ ಇನ್ನೊಂದು ಆಸಕ್ತಿ ಕ್ಷೇತ್ರ ಚಲನಚಿತ್ರ. ನಟರಾಗಿಯೂ, ನಿರ್ದೇಶಕರಾಗಿಯೂ ಆ ರಂಗವನ್ನು ಪ್ರವೇಶಿಸಿದ್ದರು.

ಇದೇ ವರ್ಷ ಕರ್ನಾಟಕ ಯಕ್ಷಗಾನ ಅಕಾಡೆಮಿಯು ನಡೆಸಿದ ಪ್ರಥಮ ಸಮ್ಮೇಳನದಲ್ಲಿ ಪಂಜಾಜೆಯವರು ಗೌರವಿಸಲ್ಪಟ್ಟರು. ಅದೇ ರೀತಿ ಅಕಾಡೆಮಿಯವರ "ನೆನಪಿನ ಬುತ್ತಿ" ಕಾರ್ಯಕ್ರಮದಲ್ಲಿ ಜೀವನದ ಅನುಭವಗಳನ್ನು ಹಂಚಿಕೊಂಡಿದ್ದು ಬಹು ರೋಚಕವಾಗಿತ್ತು. ಅನೇಕ ಸಂಘಸಂಸ್ಥೆಗಳು ಅವರನ್ನು ಗೌರವಿಸಿ, ಸನ್ಮಾನಿಸಿವೆ. ಎಪ್ಪತ್ತರ ಹರೆಯದಲ್ಲೂ ಚುರುಕಿನಿಂದ ಓಡಾಡಿಕೊಂಡಿದ್ದ ಪಂಜಾಜೆಯವರು ಹಠಾತ್ತನೆ ಇಲ್ಲವಾದದ್ದು ಬೆಂಗಳೂರಿನ ಯಕ್ಷಗಾನ ರಂಗಕ್ಕೆ ತುಂಬಲಾರದ ನಷ್ಟ.

("ಯಕ್ಷರಂಗ" ಪತ್ರಿಕೆಯ ಜೂನ್ 2023ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನ)

*

ಪ್ರಸಂಗ ಸಾಹಿತ್ಯ ಮತ್ತು ಪ್ರಯೋಗ

ಕನ್ನಡ ಸಾಹಿತ್ಯದ ಒಂದು ಕವಲಾದ ಯಕ್ಷಗಾನ ಪ್ರಸಂಗಗಳು ಕಿರುಕಾವ್ಯ ಪ್ರಕಾರಕ್ಕೆ ಸೇರಿವೆ. ಯಕ್ಷಗಾನ ಕವಿಗಳು ಅನೇಕ ರಾಗಮಟ್ಟುಗಳಲ್ಲಿ, ವಿಭಿನ್ನ ಬಗೆಯ ಛಂದಸ್ಸಿನಲ್ಲಿ ಈ ಕಾವ್ಯರಚನೆ ಮಾಡಿದ್ದಾರೆ. ಇಂತಹ ಕೃತಿಗಳು ಭಾಗವತನು ಹಾಡಿದಾಗ ಇವು ಹಾಡುಗಬ್ಬಗಳಾಗಿ, ಕೇಳುವವನಿಗೆ ಕೇಳುಗಬ್ಬವಾಗಿ, ನೋಡುವವನಿಗೆ ನೋಡುಗಬ್ಬವಾಗಿ ಸಂಪೂರ್ಣ ಸಾಕ್ಷಾತ್ಕಾರಗೊಳ್ಳುತ್ತವೆ. ಈ ಕಾರಣ ಪ್ರಸಂಗಗಳು ಪ್ರಯೋಗಗಳಾದರೇ ಅದಕ್ಕೆ ಮುಹತ್ವ ಮತ್ತು ಮುಕ್ತಿ. ದಿ.ಗೌರೀಶ ಕಾಯ್ಕಿಣಿ ಯವರಂತೂ ಕನ್ನಡ ನಾಡಿನಲ್ಲಿ ರಂಗಪ್ರಯೋಗವು ಕವಿರಾಜಮಾರ್ಗಕಾರನ ಕಾಲದಿಂದಲೂ ಇತ್ತು ಎನ್ನುತ್ತಾ "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಎಂದು ಕವಿರಾಜಮಾರ್ಗಕಾರ ಹೇಳಿರುವುದು ಇಂತಹ ಕಾವ್ಯಗಳ ಬಗ್ಗೆ ಎನ್ನುತ್ತಾರೆ. ಪ್ರಯೋಗದಲ್ಲಿ ಒಂದು ಪ್ರಸಂಗ ಹೇಗೆ ಅಭಿವ್ಯಕ್ತಿಗೊಳ್ಳುತ್ತದೆ ಎಂಬುದನ್ನು ಪರಿವೀಕ್ಷಿಸಲು ಇಂತಹ ಪ್ರದರ್ಶನಗಳನ್ನು ನೋಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಪ್ರದರ್ಶನಗೊಂಡ ಕೆಲವು ಪೌರಾಣಿಕ ಪ್ರಸಂಗಗಳ ಪ್ರದರ್ಶನವನ್ನು ವಿಮರ್ಶಿಸಿ ಬರೆದ ಕಿರುಲೇಖನಗಳನ್ನು ಇಲ್ಲಿ ಸಂಕಲಿಸಲಾಗಿದೆ. ಆ ಮೂಲಕ ಪ್ರಸಂಗಗಳು ಪ್ರೇಕ್ಷಕರಿಗೆ ನೀಡಿದ ರಸದೌತಣದ ಸವಿಯನ್ನು ವಿಶ್ಲೇಷಿಸಲಾಗಿದೆ. ಇಲ್ಲಿನ ಏಳು ಪ್ರದರ್ಶನಗಳು ಹೆಚ್ಚಿನವು ಹವ್ಯಾಸಿ ತಂಡಗಳಿಂದ ನಡೆದಿದ್ದು ಅವರ ಕಲಾಬದ್ಧತೆಯ ಪರಿಚಯವಾಗುತ್ತದೆ. ಪೌರಾಣಿಕ ಪ್ರಸಂಗಗಳಿಗೆ ಅಂಟಿಕೊಂಡಿರುವ, ಸಂಪ್ರದಾಯಕ್ಕೆ ಮಹತ್ವವನ್ನು ಕೊಡುವ ಕೆರೆಮನೆ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯ ಒಂದು ಪ್ರದರ್ಶನದ ವಿಮರ್ಶೆಯೂ ಇಲ್ಲಿದೆ. ಈ ಮೂಲಕ ಪ್ರಸಂಗ ಸಾಹಿತ್ಯದ ಪ್ರಯೋಗಗಳು ಸಾಕಾರಗೊಳ್ಳುವ ಬಗೆಯ ಪರಿಚಯ ಓದುಗರಿಗೆ ಲಭಿಸುತ್ತದೆ. ಕವಿಯ ಆಶಯ ರಂಗದಲ್ಲಿ ಮರು ಹುಟ್ಟು ಪಡೆಯುವುದನ್ನು ಇಲ್ಲಿನ ಕಿರು ಲೇಖನಗಳಲ್ಲಿ ಗಮನಿಸಬಹುದಾಗಿದೆ. ಇಲ್ಲಿನ ಏಳು ಕಿರು ವಿಮರ್ಶೆಗಳು

ಪ್ರದರ್ಶನ ಹೇಗಿದ್ದವು? ಎಂದು ತಿಳಿಸುವುದರೊಂದಿಗೆ ಹೇಗಿದ್ದರೆ ಚೆಂದ? ಹೇಗಿರಬೇಕು? ಎಂಬುದನ್ನು ಕೂಡ ತಿಳಿಸಲು ಬರದದ್ದಾಗಿದೆ. ಬೇರೆಬೇರೆ ಪತ್ರಿಕೆಗಳಲ್ಲಿ ಇವು ಪ್ರಕಟಗೊಂಡಿವೆ. ಪ್ರಜಾವಾಣಿ, ಉಯವಾಣಿ, ಹರ್ಷವಾಣಿ, ಯಕ್ಷರಂಗ ಪತ್ರಿಕೆಗಳಿಗೆ ಕೃತಜ್ಞತೆಯ ನೆನೆಕೆಗಳು.

ಮಾಯಾಪುರಿ ಹಾಗೂ ವೀರಮಣಿ ಕಾಳಗ:

ಮಹಿಳೆಯರು ಯಕ್ಷಗಾನದಲ್ಲಿ ತೊಡಗಿಕೊಳ್ಳುತ್ತಿರುವುದು ಈಚಿನ ಗಮನಾರ್ಹ ವಿದ್ಯಮಾನ. ಹಿಮ್ಮೇಳಮುಮ್ಮೇಳಗಳೆರಡರಲ್ಲೂ ಮಹಿಳೆಯರು ತಮ್ಮ ಕಲಾನೈಪುಣ್ಯತೆಯನ್ನು ಮೆರೆಯುತ್ತಿದ್ದಾರೆ. ಯಕ್ಷಗಾನ ಕಲೆಯ ಬಗ್ಗೆ ಪ್ರೀತಿ, ಕಲಿಕೆಯಲ್ಲಿ ಶ್ರದ್ಧೆ, ಪ್ರದರ್ಶನಗಳಲ್ಲಿ ಬದ್ಧತೆಗಳೇ ಇವರ ಶಕ್ತಿಯಾಗಿದೆ. ಆದ್ದರಿಂದಲೇ ಅನೇಕ ಹವ್ಯಾಸಿ ಸಂಸ್ಥೆಗಳು ಮಹಿಳೆಯರ ತಂಡಗಳನ್ನು ಕಟ್ಟಿ, ತರಬೇತಿ ನೀಡಿ ಪ್ರದರ್ಶನಕ್ಕೆ ಅನುವು ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಬೆಂಗಳೂರಿನ "ಕರ್ನಾಟಕ ಮಹಿಳಾ ಯಕ್ಷಗಾನ"ವು ಮುಂಚೂಣಿಯಲ್ಲಿದೆ. ಕೊರೋನಾ ಭೀತಿಯ ಹಿನ್ನೆಲೆಯಲ್ಲಿ ಆನ್ಲೈನ್ ಮೂಲಕ ಕಡಿಮೆ ಅವಧಿಯಲ್ಲಿ ತರಬೇತಿ ಪಡೆದು ಸಿದ್ಧಗೊಂಡ ಅವರ ಯಕ್ಷಗಾನ ರಂಗ ಪ್ರಯೋಗ "ಮಾಯಾಪುರಿ ಹಾಗೂ ವೀರಮಣಿ ಕಾಳಗ"ವು ಈಚೆಗೆ ಉದಯಭಾನು ಕಲಾಸಂಘದ ಸಭಾಭವನದಲ್ಲಿ ಅಚ್ಚುಕಟ್ಟಾಗಿ ಪ್ರದರ್ಶನಗೊಂಡಿತು. ನಾಲ್ಕುತಾಸುಗಳ ಕಾಲ ಚುರುಕಾಗಿ ನಡೆದ ಪ್ರಯೋಗವು ಎಲ್ಲಾ ಪ್ರೇಕ್ಷಕರನ್ನು ಸೆಳೆದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿತ್ತು. ಇಲ್ಲಿನ ಹವ್ಯಾಸಿ ಮಹಿಳಾ ಕಲಾವಿದರು ವೃತ್ತಿನಿರತ ಕಲಾವಿದರಿಗೆ ಹೆಗಲೆಣೆಯಾಗುವಂತೆ ಕಲಾಭಿವ್ಯಕ್ತಿ ಮಾಡಿದ್ದು ವಿಶೇಷವಾಗಿತ್ತು. ಮಹಿಳಾ ಕಲಾವಿದರ ಭಾವಪೂರ್ಣ ಅಭಿನಯ ಚಿರಕಾಲ ಮನಸ್ಸಿನಲ್ಲಿ ಉಳಿಯುವಂತೆ ಮಾಡಿತು. ಕೇಂದ್ರದ ಸಂಸ್ಕೃತಿ ಸಚಿವಾಲಯದ ಸಹಕಾರದಿಂದ ಈ ಕಾರ್ಯಕ್ರಮ ರೂಪುಗೊಂಡಿತ್ತು.

ಖ್ಯಾತ ಯಕ್ಷಕವಿ ಹಲಸಿನಹಳ್ಳಿ ನರಸಿಂಹಶಾಸ್ತ್ರಿಯವರು ಬರೆದ "ವೀರಮಣಿಕಾಳಗ"ವು ಹಲವು ದೃಷ್ಟಿಯಿಂದ ವಿಶೇಷವಾದದ್ದು. ವೀರ ಹಾಗೂ ಭಕ್ತಿ ರಸಭರಿತ ಈ ಪ್ರಸಂಗವು ಕಳೆದ ಶತಮಾನದಲ್ಲಿ ಬಯಲಾಟ ಮೇಳಗಳ ಮೂಲಕ ಅಸಂಖ್ಯ ಪ್ರದರ್ಶನಗಳನ್ನು ಕಂಡಿದೆ. ಶ್ರೀರಾಮಭಕ್ತಿಯ ಹಿರಿಮೆ ಹಾಗೂ ಹರಿಹರರಲ್ಲಿ ಭೇದವಿಲ್ಲ ಎಂದು ಸಾರುವುದೇ ಇಲ್ಲಿನ ಕಥಾಭಿತ್ತಿಯಾಗಿದೆ. ಪ್ರಾರಂಭದಲ್ಲಿ ಸಾಂಪ್ರದಾಯಿಕವಾದ ಬಾಲಗೋಪಾಲರ ಪ್ರವೇಶದೊಂದಿಗೆ ಆಖ್ಯಾನ ಪ್ರಾರಂಭವಾಯಿತು. ಮುಂದೆ ನಡೆದ ಶತ್ರುಘ್ನನ ಒಡ್ಡೋಲಗವಂತೂ ಬಹು ಆಕರ್ಷಕ. ಇಲ್ಲಿ ಏಳು ಜನ ಕಲಾವಿದರು ಪಾಲ್ಗೊಂಡಿದ್ದು ಎಲ್ಲರೂ ತೆರೆ ನರ್ತನದಲ್ಲಿ

ಪಳಗಿದವರೆಂಬುದನ್ನು ತೋರಿಸಿಕೊಟ್ಟರು. ಶತ್ರುಘ್ನ ಪಾತ್ರಧಾರಿಯಾದ ಶ್ರೀಮತಿ ವಿಜಯಲತಾ ರಮೇಶ್ ಪ್ರಸಂಗದುದ್ದಕ್ಕೂ ಗಾಂಭೀರ್ಯದಿಂದ ಮಾತನಾಡುತ್ತಾ, ನುರಿತ ಕಲಾವಿದರ ರೀತಿ ನರ್ತಿಸುತ್ತಾ ಪಾತ್ರಕ್ಕೊಂದು ಘನತೆ ತಂದು ಕೊಟ್ಟರು. ರಾಮನ ಅಶ್ವಮೇಧದ ಕುದುರೆ ಯಮುನೆಯಲ್ಲಿ ಮಾಯವಾಗಿ ದಾರಿ ಕಾಣದಾದಾಗ ನಾರದ (ಶಶಿಕಲಾ)ನ ಪ್ರವೇಶ ನಡೆದು ಮಾರೀಚನ ಮಗಳಾದ ಕುಮುದಿನಿಯು ಮಾಯಾಪುರಿಯಲ್ಲಿರುವುದು ತಿಳಿಯುತ್ತದೆ. ಶ್ರೀರಾಮದರ್ಶನಾಕಾಂಕ್ಷಿಗಳಾದ ಪ್ರಹಸ್ಥನ ಮಕ್ಕಳಾದ ಮದನಾಕ್ಷಿ ಮತ್ತು ತಾರಾವಳಿಯರು ಕುದುರೆಯನ್ನು ಕಟ್ಟಿರುತ್ತಾರೆ. ಮದನಾಕ್ಷಿಯಾಗಿ ಸೌಜನ್ಯ ನಾವಡ, ಅವರ ಹಾವಭಾವಗಳು, ಕುಣಿತ ಎಲ್ಲದರಲ್ಲೂ ಪ್ರಬುದ್ಧತೆ ಇತ್ತು. ಲೀಲಾಜಾಲವಾಗಿ ಅವರು ಪಾತ್ರವನ್ನು ನಿರ್ವಹಿಸಿದ್ದು ವಿಶೇಷವಾಗಿತ್ತು. ತಾರಾವಳಿಯಾಗಿ ರಕ್ಷಾ ಚುರುಕು ಕುಣಿತದಿಂದ ಪ್ರೇಕ್ಷಕರನ್ನು ಸೆಳೆದರು. ಯುದ್ಧದಲ್ಲಿ ಸೋತ ಯುವತಿಯರು ಕುಮುದಿನಿ(ಅಮಿತಾ)ಯಲ್ಲಿಗೆ ಬಂದು ತಮ್ಮ ತಪ್ಪು ತೋಡಿಕೊಳ್ಳುತ್ತಾರೆ. ಶ್ರೀರಾಮ ಭಕ್ತಿಗಾಗಿ ತಾವು ಹಿಡಿದ ದಾರಿ ತಪ್ಪಾಯಿತೆಂದು ತಿಳಿದು ಶತ್ರುಘ್ನನಲ್ಲಿ ನಿವೇದಿಸಿಕೊಳ್ಳುತ್ತಾರೆ. ಕಪ್ಪಕಾಣಿಕೆ ಪಡೆದ ಶತ್ರುಘ್ನ ಮುದ್ರೆ ಉಂಗುರ ನೀಡಿ ಅವರೆಲ್ಲರನ್ನೂ ಸಾಕೇತಕ್ಕೆ ಕಳಿಸಿಕೊಡುತ್ತಾನೆ. ಹೀಗೆ ರಾಮಭಕ್ತಿಯ ಪರಾಕಾಷ್ಠೆಯನ್ನು ಇಲ್ಲಿ ಕಾಣಬಹುದು. ಸುಮಾರು ಎರಡುವರೆ ತಾಸು ನಡೆದ ಈ ಭಾಗ ಅತ್ಯಂತ ಆಕರ್ಷಕವಾಗಿ ನಿರೂಪಿತಗೊಂಡಿತು. ಶರ್ವಾಣಿಹೆಗಡೆ, ಮೇಘನಾ, ದೀಕ್ಷಾಭಟ್, ಲತಾ ಕೃಷ್ಣಮೂರ್ತಿ, ಅನಿತಾರಾವ್, ಮಾನ್ಯ ಇವರೆಲ್ಲರೂ ಪೋಷಕ ಪಾತ್ರಗಳಲ್ಲಿದ್ದು ವೀರರಸವು ಪ್ರಸಂಗದುದ್ದಕ್ಕೂ ಪಸರಿಸುವಲ್ಲಿ ಕಾರಣರಾದರು. ಹಾಸ್ಯ ಪಾತ್ರವಾದ ದೂತಿ ಪಾತ್ರದಲ್ಲಿದ್ದ ಲತಾ ಹೊಳ್ಳ ಅವರ ನಡೆನುಡಿಗಳು, ಅವರ ವೇಷ ಹಾಗೂ ಅವರ ಕುಣಿತದ ಭಂಗಿ ನಗೆ ಉಕ್ಕಿಸುತ್ತಿತ್ತು. ಎರಡನೇ ಭಾಗದಲ್ಲಿ ಜ್ಯೋತಿ ಮೇಧಪುರದ ದೊರೆ ವೀರಮಣಿಯ ಮಕ್ಕಳಾದ ಶುಭಾಂಗ (ಪವಿತ್ರ ಕೃಷ್ಣಮೂರ್ತಿ), ರುಕ್ಮಾಂಗದ (ಚೈತ್ರಾಭಟ್)ರು ವನವಿಹಾರಕ್ಕೆ ಹೋದವರು ಶ್ರೀರಾಮನ ಅಶ್ವಮೇಧದ ಕುದುರೆ ಕಟ್ಟಿ ಹಾಕುತ್ತಾರೆ. ಈ ಸಂದರ್ಭದಲ್ಲಿನ ಕುಣಿತ, ಅಭಿನಯಗಳೆಲ್ಲ ಮನಮೋಹಕವಾಗಿತ್ತು. ಸ್ವತಃ ಈ ರಂಗಪ್ರಯೋಗದ ನಿರ್ದೇಶಕರಾದ ಗೌರಿಸಾಸ್ತಾನರು ವೀರಮಣಿ ಪಾತ್ರವನ್ನು ನಿರ್ವಹಿಸಿದ್ದರು. ದೊಡ್ಡ ಅಟ್ಟೆಯ ಕೇದಗೆ ಮಂದಲೆಯ ಪಾತ್ರದಲ್ಲಿದ್ದ ಇವರ ಹಾವಭಾವ, ಕುಣಿತ, ಮಾತುಗಾರಿಕೆಯಲ್ಲಿ ಯಾವ ವೃತ್ತಿ ಕಲಾವಿದರಿಗೆ ಕಡಿಮೆ ಇಲ್ಲದಂತೆ ಪಾತ್ರ ನಿರ್ವಹಿಸಿದರು. ಶಿವನನ್ನೇ ಮನೆ ಅಳಿಯನಾಗಿಟ್ಟುಕೊಂಡು ಹರಭಕ್ತಿಯಿಂದ ಮೆರೆಯುತ್ತಿರುವ ವೀರಮಣಿ ಹಾಗೂ ಅವನ ಮಕ್ಕಳು ಯುದ್ಧಕ್ಕೆ ಸಿದ್ಧರಾಗುತ್ತಾರೆ. ಶತ್ರುಘ್ನನ ಆಣತಿಯಂತೆ ಹನುಮಂತ ಸಂಧಾನಕ್ಕೆ ಬರುತ್ತಾನೆ. ಹನುಮಂತ ಪಾತ್ರಧಾರಿಯಾದ ಆಶಾ ರಾಘವೇಂದ್ರ ಅವರ ಮಾತುಗಾರಿಕೆ, ಅಭಿನಯ

ಅಚ್ಚುಕಟ್ಟಾಗಿತ್ತು. ವೀರಮಣಿಯ ಆಸ್ಥಾನದಲ್ಲಿ ನಡೆದ ಹಾಸ್ಯಮಯ ಘಟನೆ, ಸಂಧಾನದ ವಿಫಲತೆ, ಯುದ್ಧದ ಸನ್ನಿವೇಶಗಳೆಲ್ಲ ಬಹು ಚುರುಕಾಗಿ ನಡೆಯಿತು. ಗೌರಿ ಸಾಸ್ತಾನರು ಪ್ರಸಂಗದ "ವೀರಮಣಿ ಹೂಂಕರಿಸುತಲಾಕ್ಷಣ ಸಾರೆಲೋ ಮರ್ಕಟವೇ ಅರೆಲೋ ನಿನ್ನಯ ರಾಮನ ಬೆದರಿಕೆ ದೋರುವೆ ಕಲಿಯನೆ" ಪದ್ಯಕ್ಕೆ ಸೊಗಸಾಗಿ ಕುಣಿದು ಪ್ರಸಂಗ ಕಳೆಕಟ್ಟುವಂತೆ ಮಾಡಿದರು. ಸೋತ ವೀರಮಣಿಯ ಸಹಾಯಕ್ಕೆ ಈಶ್ವರನೇ ಯುದ್ಧಕ್ಕೆ ಬರುತ್ತಾನೆ. ಈಶ್ವರ ಮತ್ತು ಹನುಮಂತರ ನಡುವೆ ನಡೆದ ಭಯಂಕರ ಯುದ್ಧ ತಾರ್ಕಿಕ ಅಂತ್ಯ ಕಾಣದೆ ಹೋದಾಗ ರಾಜಿ ಏರ್ಪಡುತ್ತದೆ. ಹನುಮಂತ ಸಂಜೀವಿನಿಯನ್ನು ತಂದು ಸತ್ತವರೆಲ್ಲರನ್ನೂ ಬದುಕಿಸುತ್ತಾನೆ. ಹರಿ ಹಾಗೂ ಹರರಲ್ಲಿ ಭೇದವಿಲ್ಲ ಎಂಬುದು ಕೊನೆಯಲ್ಲಿ ನಿರ್ಣಯವಾಗಿ ಸುಖಾಂತ್ಯವಾಗುತ್ತದೆ. ಭಾಗವತರಾಗಿ ಶ್ರೀ ಸುಬ್ರಹ್ಮಣ್ಯ ನಾವಡ ಹಾಗೂ ಶ್ರೀ ವಿನಯ ಶೆಟ್ಟಿಯವರಿದ್ದರು. ಮದ್ದಳೆಯಲ್ಲಿ ರಾಘವೇಂದ್ರ ಬಿಡುವಾಳ ಹಾಗೂ ಅನಂತಪದ್ಮನಾಭ ಪಾಠಕ್‌ರು ಹಾಗೂ ಚಂಡೆಯಲ್ಲಿ ನರಸಿಂಹ ಆಚಾರ್ ಅವರು ಸಹಕರಿಸಿದರು. ನಾವಡ ಹಾಗೂ ಶೆಟ್ಟಿಯವರ ಭಾಗವತಿಕೆ ಭಾವಪೂರ್ಣವಾಗಿತ್ತು. ಗೌರಿಸಾಸ್ತಾನ ಅವರ ನಿರ್ದೇಶನ ಸಮರ್ಪಕವಾಗಿದ್ದು ಪ್ರಸಂಗ ಎಲ್ಲೂ ಸೋಲಲಿಲ್ಲ. ಕಲಾವಿದರನ್ನು ಸಮರ್ಥವಾಗಿ ದುಡಿಸಿದ್ದಾರೆ.

ಸೌಗಂಧಿಕಾ ಪುಷ್ಪಹರಣ:

ಮಹಾಭಾರತದ ಅರಣ್ಯ ಪರ್ವದಲ್ಲಿ ಬರುವ ಕೆಲವು ಘಟನೆಗಳು ಮುಂದೆ ನಡೆಯಬಹುದಾದ ಭೀಕರ ಸಂಗ್ರಾಮಕ್ಕೆ ಪಾಂಡವರ ಪೂರ್ವ ತಯಾರಿಯಂತಿದೆ. ಅಂತಹ ಅಪೂರ್ವ ಘಟನೆಗಳಲ್ಲಿ "ಸೌಗಂಧಿಕಾ ವಸ್ತ್ರಾಪಹರಣ"ದ ಕತೆಯು ಒಂದು. ವಾಯುಪುತ್ರ ಹನುಮನ ಕೃಪೆಯಿಂದ ಭೀಮನು ವಜ್ರದೇಹಿಯಾಗುವನೆಂಬುದನ್ನು ತೋರಿಸಲು ಪ್ರಸಂಗಸಾಹಿತ್ಯದಲ್ಲಿ ಈ ಕತೆ ಬಂದಿದೆ. ಕುಮಾರವ್ಯಾಸನು ಐವತ್ತೆಂಟು ಷಟ್ಪದಿಗಳಲ್ಲಿ ಈ ಕತೆಯನ್ನು ಕಣ್ದುಂಬುವಂತೆ ಚಿತ್ರಿಸಿದ್ದಾನೆ. ಆದರೆ ನಮ್ಮ ಯಕ್ಷಗಾನ ಕವಿ ಧ್ವಜಪುರ ನಾಗಪ್ಪಯ್ಯ ತನ್ನ ಪ್ರಸಂಗದಲ್ಲಿ ಸಾಂಸಾರಿಕ ಪ್ರೇಮಕ್ಕೆ ಹೆಚ್ಚು ಒತ್ತನ್ನು ನೀಡಿ ಸಾಮಾನ್ಯರಿಗೆ ಆಪ್ತವಾಗುವಂತೆ ಮಾಡಿದ್ದಾನೆ. ಅರ್ಜುನನು ಸ್ವಯಂವರದಲ್ಲಿ ದ್ರೌಪದಿಯನ್ನು ಗೆದ್ದರೂ ಕೂಡ ಆಕೆಗೆ ಭೀಮನ ಮೇಲೆ ಹೆಚ್ಚು ನಂಬಿಕೆ, ಪ್ರೀತಿ ಹಾಗೂ ಅಭಿಮಾನ. ದ್ರೌಪದಿ ಭೀಮರ ನಡುವಿನ ನಂಟು ಅಸೀಮವಾದದ್ದು. ಪರಸ್ಪರ ವಿಶ್ವಾಸದಿಂದ ಕೂಡಿರುವುದು. ಕಪಟ ದ್ಯೂತ, ಕೀಚಕ ಸಂಹಾರ, ಕೃಷ್ಣ ಸಂಧಾನ, ದುಶ್ಯಾಸನ ವಧೆಗಳಲ್ಲಿ ಈ ಪ್ರೀತಿಯ ಒರಟು ರೂಪ ಪ್ರಕಟವಾದರೆ ಸೌಗಂಧಿಕಾ ಪ್ರಕರಣದಲ್ಲಿ ಪ್ರೇಮದ ಸುಕೋಮಲತೆ ಪರಿಚಯವಾಗುತ್ತದೆ. ಪ್ರಸಂಗಕಾರನ ಈ ಆಶಯವನ್ನು ಯಕ್ಷದೇಗುಲದ ಕಲಾವಿದರು ಸರಿಯಾಗಿ ಗ್ರಹಿಸಿ

ರಂಗದಲ್ಲಿ ಅಭಿವ್ಯಕ್ತಿಸಿ ಪ್ರದರ್ಶನ ಯಶಸ್ವಿಯಾಗುವಂತೆ ಮಾಡಿದರು. ಈಚೆಗೆ ಬೆಂಗಳೂರಿನ ಡಾ.ಸಿ.ಅಶ್ವತ್ಥ ಕಲಾ ಭವನದಲ್ಲಿ ಜರಗಿದ "ಯಕ್ಷದೇಗುಲ ಸನ್ಮಾನ 2020"ರ ಅಂಗವಾಗಿ ನಡೆದ ಈ "ಸೌಗಂಧಿಕಾ ಪುಷ್ಪಹರಣ"ವು ಅತ್ಯಂತ ಅಚ್ಚುಕಟ್ಟು, ಅಷ್ಟೇ ರಸಮಯ ಹಾಗೂ ಪರಿಣಾಮಕಾರಿಯಾಗಿ ಪ್ರೇಕ್ಷಕರ ಮನ ಸೆಳೆಯಿತು.

ಅಂದಿನ ಪ್ರದರ್ಶನದಲ್ಲಿ ಭೀಮನಾಗಿ ಸುಜಯೀಂದ್ರ ಹಂದೆಯವರು, ದ್ರೌಪದಿಯಾಗಿ ಮನೋಜ್ ಭಟ್ಟ ಪಾತ್ರವಹಿಸಿದ್ದು ಪ್ರಾರಂಭದಲ್ಲೇ ಪ್ರದರ್ಶನಕ್ಕೆ ಭದ್ರ ಬುನಾದಿಯೊಂದನ್ನು ಹಾಕಿಕೊಟ್ಟರು. ಭೀಮನಾಡುವ ಪೀಠಿಕೆಯ ಮಾತುಗಳಲ್ಲಿ ಪಾಂಡವರ ಅದರಲ್ಲೂ ತನ್ನ ಕಷ್ಟಕೋಟಲೆಗಳನ್ನು ಹೇಳುತ್ತಾ ಹಿಂದಿನ ವಿಚಾರಗಳನ್ನು ಸೂಕ್ಷ್ಮವಾಗಿ ತಿಳಿಸಿದರು. ಹಂದೆಯವರು ನುರಿತ ಹಾಗೂ ಹದವರಿತ ಮಾತುಗಾರಿಕೆ ಮತ್ತು ಪ್ರೌಢವಾದ ಅಭಿನಯ ಪ್ರೇಕ್ಷಕರನ್ನು ಸೆಳೆದವು. ದ್ರೌಪದಿಯ ಪ್ರವೇಶದೊಂದಿಗೆ ಪ್ರದರ್ಶನ ಇನ್ನಷ್ಟು ಕಳೆಕಟ್ಟಿತು. "ಜನನವೇ ಪಾಂಚಾಲರಾಜನ ಮನೆಯಾಗಿದ್ದು, ಅಗ್ನಿಯ ಮಗಳಾಗಿ ತಾನು ಪಟ್ಟ ಪಾಡನ್ನು ಹೇಳುತ್ತಾ ಹೆಣ್ಣು ಜನ್ಮವೇ ಸಾಕು" ಎಂದು ಹೇಳಿ ಪುಷ್ಪವೊಂದರ ಸುಗಂಧವನ್ನು ಗ್ರಹಿಸಿ ಭೀಮನೊಂದಿಗೆ ತನಗಾಗಿ ಆ ಹೂವನ್ನು ತರವಂತೆ ಕೋರಿಕೊಳ್ಳುತ್ತಾಳೆ. ಇಲ್ಲಿ ಭೀಮ ಹಾಗೂ ದ್ರೌಪದಿಯರ ಸಂಭಾಷಣೆಗಳಲ್ಲಿ ಗಂಡಹೆಂಡತಿಯ ಸಂಬಂಧದ ಸೂಕ್ಷ್ಮಗಳು ಪ್ರಸ್ತಾಪಿತವಾಗುತ್ತವೆ. ಸುಜಯೀಂದ್ರ ಹಂದೆಯವರ ಮಾತುಗಾರಿಕೆಯಲ್ಲಿ, ಕುಣಿತ ಮಣಿತಗಳಲ್ಲಿ, ಗತ್ತುಗಾರಿಕೆಯಲ್ಲಿ, ಅಭಿನಯದಲ್ಲಿ ಪ್ರೌಢವಾದ, ಪರಂಪರೆಗೆ ಬದ್ಧವಾದ ಕಲಾವಿದನೊಬ್ಬನನ್ನು ಕಾಣಬಹುದಾಗಿತ್ತು. ಕೊನೆಗೆ ಆ ವಿಶೇಷವಾದ ಪುಷ್ಪವನ್ನು ತರಲು ಭೀಮನು ಪ್ರಯಾಣ ಬೆಳೆಸುತ್ತಾನೆ.

ಹನುಮಂತನಾಗಿ ಪಾತ್ರ ಮಾಡಿದ್ದ ಪ್ರಣವಭಟ್‌ರವರ ಪ್ರವೇಶ ಆಕರ್ಷಕವಾಗಿತ್ತು. ಬಲಶಾಲಿಯೊಬ್ಬ ಬರುವುದನ್ನು ತಿಳಿದು ಆತನ ದಾರಿಗೆ ತನ್ನ ಬಾಲವನ್ನು ಅಡ್ಡಲಾಗಿ ಇಡುತ್ತಾನೆ. ಮೊದಲಿಗೆ ವಿಜೃಂಭಿಸಿದ ಭೀಮ ಬಾಲವನ್ನು ಸರಿಸಲಾಗದೆ ವ್ಯಥಿಸುತ್ತಾನೆ. ಇಲ್ಲಿ ಹಂದೆಯವರ ಕುಣಿತ, ಮಾತಗಾರಿಕೆಗೆ ಸರಿಸಮವಾಗಿ ಪ್ರಣವ ಅವರ ಮಾತು ಹಾಗೂ ನಡೆಗಳು ಗಮನ ಸೆಳೆದವು. ಈ ಭಾಗ ಮನೋಜ್ಞವಾಗಿತ್ತು. ಹನುಮನು ಭೀಮನನ್ನು ಸಂತೈಸಿ ವಜ್ರದೇಹಿಯಾಗುವಂತೆ ಮಾಡಿ ಅಲಕಾವತಿಗೆ ಕಳಿಸುತ್ತಾನೆ. ಈ ಅಂಶವೂ ಕೂಡ ಕುಮಾರವ್ಯಾಸನಲ್ಲಿ ಇಲ್ಲ. ಚಾರಕನಾಗಿ ಪಾತ್ರವಹಿಸಿದ್ದ ನರಸಿಂಹ ತುಂಗರು ಸಮರ್ಥವಾಗಿ ಹಾಸ್ಯಪಾತ್ರವನ್ನು ನಿರ್ವಹಿಸಿದರು. ಕುಬೇರನ ಮಗನಾದ ನಳಕೂಬರನಾಗಿ ರಂಗಸ್ಥಳ ಪ್ರವೇಶಿಸಿದ ನವೀನಕೋಟ ಅವರು ಕೇದಗೆ ಮಂದಲೆಯ ವೇಷದಲ್ಲಿ ಸೊಗಸಾಗಿ ಕಾಣುತ್ತಿದ್ದರು.

ಯುವಕನ ಪಾತ್ರಕ್ಕೆ ಸಹಜವೆಂಬಂತೆ ಬಿರುಸಿನ ಕುಣಿತ ಹಾಗೂ ಮಾತುಗಳು ಹೃದ್ಯವಾಗಿತ್ತು. ಚಾರಕ (ಹಾಸ್ಯಗಾರ) ನೊಂದಿಗಿನ ಸಂಭಾಷಣೆ ಕೂಡ ರಂಜಿಸಿದವು. ಯುದ್ಧದ ಸನ್ನಿವೇಶ ಚುರುಕಾಗಿತ್ತು. ತಮ್ಮಣ್ಣಗಾಂವಕರ್ ಅವರು ದೊಡ್ಡ ತಟ್ಟೆ ಮುಂಡಾಸಿನಲ್ಲಿ ಕಾಣಿಸಿಕೊಂಡರು. ಭೀಮ ಹಾಗೂ ಕುಬೇರನ ಮಾತುಕತೆ, ಕುಣಿತಗಳಲ್ಲೆಲ್ಲಾ ಯಥೋಚಿತವಾಗಿತ್ತು. ಭೀಮನ ಗೆಲುವಿನೊಂದಿಗೆ ಸೌಗಂಧಿಕ ಪುಷ್ಪವನ್ನು ಹೆಂಡತಿಗಾಗಿ ಕೊಂಡೊಯ್ಯುವುದರೊಂದಿಗೆ ಪ್ರದರ್ಶನ ಅಂತ್ಯವಾಯಿತು.

ಎರಡು ತಾಸುಗಳುದ್ದಕ್ಕೂ ಪ್ರೇಕ್ಷಕರ ಮನ ತಣಿಯುವಂತೆ ಹಿಮ್ಮೇಳ ಹಾಗೂ ಮುಮ್ಮೇಳದವರು ಶ್ರಮವಹಿಸಿ ಕಲಾಭಿವ್ಯಕ್ತಿಯನ್ನು ನಡೆಸಿಕೊಟ್ಟರು. ಅಂದು ಮೊದಲಿಗೆ ದೇವರಾಜ್‌ದಾಸ್ ಅವರು ಭಾಗವತಿಕೆ ಮಾಡಿದರೆ ಮುಂದೆ ಬಂದ ಲಂಬೋದರ ಹೆಗಡೆಯವರ ಭಾಗವತಿಕೆಯಲ್ಲಿನ ಎರಡು ಭಾಮಿನಿಯ ಹಾಡಿಗೆ ಪ್ರೇಕ್ಷಕರು ಕರತಾಡನದ ಮೂಲಕ ಮೆಚ್ಚುಗೆ ಸೂಚಿಸಿದರು. ಮದ್ದಲೆಯಲ್ಲಿ ಗಣಪತಿಭಟ್ರು ಚಂಡೆಯಲ್ಲಿ ಮಣೂರು ಮಾಧವ ಹಾಗೂ ಮಂಜುನಾಥ ನಾವಡರು ಸಹಕರಿಸಿದರು. ಉದಯಭೋವಿ ಹಾಗೂ ರಾಜು ಪೂಜಾರಿಯವರು ಪ್ರಸಾಧನದ ವ್ಯವಸ್ಥೆಯನ್ನು ನೋಡಿಕೊಂಡರು. ಯಕ್ಷದೇಗುಲದ ಕಾರ್ಯದರ್ಶಿಯವರಾದ ಕೆ.ಮೋಹನ್ ಅವರ ನಿರ್ದೇಶನ ಹಾಗೂ ಸುದರ್ಶನ ಉರಾಳರ ಸಂಯೋಜನೆಯಲ್ಲಿ ಪ್ರದರ್ಶನ ಮೂಡಿ ಬಂತು.

ಬೆಂಗಳೂರು ಮಹಾನಗರದಲ್ಲಿ ಕಳೆದ ನಲವತ್ತು ವರ್ಷಗಳಿಂದ ಯಕ್ಷದೇಗುಲವು ಪ್ರದರ್ಶನ, ಪ್ರಾತ್ಯಕ್ಷಿಕೆ, ಸನ್ಮಾನ, ವಿಚಾರ ಸಂಕಿರಣ, ತರಬೇತಿ, ಕಾರ್ಯಾಗಾರ, ದಾಖಲೀಕರಣ, ಕಮ್ಮಟವೇ ಮುಂತಾದ ಹತ್ತು ಹಲವು ಚಟುವಟಿಕೆಗಳಿಂದ ಸಕ್ರಿಯವಾಗಿದೆ. 2020ರ ಸಾಲಿಗೆ ಖ್ಯಾತ ಮೃದಂಗ ವಾದಕರು, ನುರಿತ ಪ್ರಸಾಧನ ಕಲಾವಿದರು. ಬ್ರಹ್ಮಾವರದ "ಅಜಪುರದ ಯಕ್ಷಗಾನ ಸಂಘ"ದ ಅಧ್ಯಕ್ಷರು ಆಗಿರುವ ಬಿರ್ತಿ ಬಾಲಕೃಷ್ಣ ಅವರಿಗೆ "ಯಕ್ಷ ದೇಗುಲ ಪ್ರಶಸ್ತಿ"ಯನ್ನಿತ್ತು ಗೌರವಿಸಲಾಯಿತು.

ಶ್ರೀರಾಮ ಪಟ್ಟಾಭಿಷೇಕ:

ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಕಾಳಗ ಇಲ್ಲವೇ ಕಲ್ಯಾಣದ ಕಥೆಗಳಿರುವ ಪ್ರಸಂಗಗಳನ್ನೇ ಹೆಚ್ಚಾಗಿ ಜನರು ಬಯಸುವುದು. ರಂಗಸ್ಥಳದಲ್ಲಿ ಯಶಸ್ವಿಯಾಗುವುದು ಕೂಡಾ ಈ ಬಗೆಯ ಪ್ರಸಂಗಗಳೇ ಆಗಿರುತ್ತವೆ. ಇದಕ್ಕೆ ಅಪವಾದದಂತಿದ್ದು, ಜನ ಮಾನಸದಲ್ಲಿ ಬೇರೂರಿರುವ ಕೆಲವೇ ಕೆಲವು ಪ್ರಸಂಗಗಳಲ್ಲಿ ಪಾರ್ತಿಸುಬ್ಬ (ಕ್ರಿ.ಶ.1600) ಕವಿವಿರಚಿತ "ಪಂಚವಟಿ ಪಟ್ಟಾಭಿಷೇಕ"ವು ಪ್ರಮುಖವಾದುದು.

ಭಾವಾಭಿವ್ಯಕ್ತಿಗೆ ಪೂರಕವಾಗುವ ಪದ್ಯ ರಚನೆ, ಹೃದಯಕ್ಕೆ ತಟ್ಟುವ ಸನ್ನಿವೇಶಗಳ ನಿರ್ಮಾಣ, ಮನಕ್ಕೆ ಮುಟ್ಟುವ ಸಂಘರ್ಷಗಳ ಚಿತ್ರಣ ಇದರ ಯಶಸ್ಸಿನ ಗುಟ್ಟಾಗಿದೆ. ಇದನ್ನು ರಂಗದಲ್ಲಿ ಪ್ರದರ್ಶಿಸುವುದು ಸವಾಲಿನ ಕೆಲಸ. ಅಂತಹ ಸವಾಲನ್ನು ಸ್ವೀಕರಿಸಿದವರು ಸ್ವತಃ ಯಕ್ಷಗಾನದ ಹವ್ಯಾಸಿ ಕಲಾವಿದರಾಗಿದ್ದು "ಯಕ್ಷಗಾನ ಹಾಗೂ ದಕ್ಷಿಣ ಭಾರತದ ಶಾಸ್ತ್ರೀಯ ನೃತ್ಯ ಪ್ರಕಾರಗಳಲ್ಲಿ ಅಭಿನಯ" ಕುರಿತಾಗಿ ಸಂಶೋಧನೆ ಮಾಡಿ ಡಾಕ್ಟರೇಟ್ ಪಡೆದ ಬೆಂಗಳೂರಿನ ಕಲಾಕದಂಬ ಆರ್ಟ್ ಸೆಂಟರ್ ಸಂಸ್ಥೆಯ ನಿರ್ದೇಶಕರೂ ಆಗಿರುವ ರಾಧಾಕೃಷ್ಣ ಉರಾಳರು. ಕಳೆದ ಭಾನುವಾರ ನಗರದ ಉದಯಭಾನು ಕಲಾಸಂಘದ ಸಭಾಭವನದಲ್ಲಿ, ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ ಖ್ಯಾತ ಪತ್ರಕರ್ತ ಅಂಬರೀಷ್ ಭಟ್ ನಿರ್ದೇಶನದಲ್ಲಿ ಇವರು ಸಂಯೋಜಿಸಿದ್ದ ಪ್ರಸಂಗ ಪ್ರದರ್ಶನವು ಹಳೆಯ ಉತ್ತಮ ಪ್ರಸಂಗಗಳಿಗೆ ಮುಪ್ಪಿಲ್ಲ, ಅವು ಚಿರಾಯು ಎನ್ನುವುದನ್ನು ದೃಢಪಡಿಸಿತು. ಸುಮಾರು ಐದು ತಾಸುಗಳಷ್ಟು ದೀರ್ಘವಾಗಿದ್ದ ಪ್ರದರ್ಶನ ಸಂಪೂರ್ಣವಾಗಿ ಪ್ರೇಕ್ಷಕರನ್ನು ಸೆಳೆದು ಇರಿಸಿಕೊಳ್ಳುವಲ್ಲಿ ಯಶಸ್ವಿಯಗಿತ್ತು.

ದಶರಥನ ಪಾತ್ರಧಾರಿಯಾಗಿ ಸ್ವತಃ ಅಂಬರೀಷ್ ಭಟ್‌ರವರೇ ವಹಿಸಿದ್ದು, ಒಡ್ಡೋಲಗದಲ್ಲಿ ಸುದೀರ್ಘ ಪೀಠಿಕೆಯ ಮೂಲಕ ಪಟ್ಟಾಭಿಷೇಕದ ಅಗತ್ಯವನ್ನು ಮನಗಾಣಿಸಿದರು. ಅವರ ಪಾತ್ರ ನಿರ್ವಹಣೆಯಲ್ಲಿ ಅಚ್ಚುಕಟ್ಟಾದ ಕುಣಿತ, ಸಮರ್ಪಕವಾದ ಭಾವಾಭಿವ್ಯಕ್ತಿ, ಗಂಭೀರವಾದ ಮಾತುಗಳು ಆಕರ್ಷಕ ಅಂಶವಾಗಿದ್ದವು.ಈ ಭದ್ರ ಬುನಾದಿಯ ಮೇಲೆಯೇ ಮುಂದಿನ ಪ್ರದರ್ಶನ ಒಪ್ಪಾಗಿ ಮೂಡಿಬಂತು. ಮಂತ್ರಾಲೋಚನೆಯಲ್ಲಿ ಪಾಲ್ಗೊಂಡ ವಸಿಷ್ಠ ((ದೇವರಾಜ ಕರಬ) ಹಾಗೂ ಸುಮಿತ್ರ (ನಾಗೇಶ್ ಅಪ್ಪಿ)ರು ಇಡೀ ದೃಶ್ಯ ಸಜೀವವಾಗಿರುವಂತೆ ನೋಡಿಕೊಂಡರು.

ಖ್ಯಾತ ಹವ್ಯಾಸಿ ಕಲಾವಿದ ಡಾ.ಪ್ರದೀಪ ಸಾಮಗರು ಮೊದಲ ಬಾರಿಗೆ ಮಂಥರೆಯ ಪಾತ್ರ ನಿರ್ವಹಿಸಿ ಬೆರಗು ಮೂಡಿಸಿದ್ದಲ್ಲದೆ ತಾವೊಬ್ಬ ಸಮರ್ಥ ಕಲಾವಿದರೆಂಬುದನ್ನು ಸಾಬೀತು ಪಡಿಸಿದರು. ಮನೋಜ್ಞವಾದ ಅಭಿನಯ ಜನರನ್ನು ನಗಿಸಬಲ್ಲ ರೀತಿಯ ಕುಣಿತ, ಪ್ರಬುದ್ಧತೆಯುಳ್ಳ ಮಾತುಗಾರಿಕೆ, ವಾದ ಮಂಡನೆಯ ಪರಿ ಎಲ್ಲದರಲ್ಲೂ ವಿಶೇಷತೆ ಇತ್ತು. ಅಂದು ಕೈಕೇಯಿಯಾಗಿ ಡಾ. ರಾಧಾಕೃಷ್ಣ ಉರಾಳರು ತಮ್ಮ ಪರಿಶುದ್ಧ ನರ್ತನ, ಆಕರ್ಷಕವಾದ ಹಾವಭಾವ, ಸ್ತ್ರೀ ಸಹಜತೆಯುಳ್ಳ ಅಭಿನಯದ ಮೂಲಕ ಪಾತ್ರಕ್ಕೆ ಹಾಗೂ ಪ್ರದರ್ಶನಕ್ಕೆ ಜೀವ ತುಂಬಿದರು. ಈ ಸಂದರ್ಭದಲ್ಲಿ ಭಾಗವತರಾದ ಸುಬ್ರಾಯ ಹೆಬ್ಬಾರರು ಭಾವಪೂರ್ಣವಾಗಿ ಹಾಡಿ ರಂಜಿಸಿದರಲ್ಲದೆ ಪ್ರೇಕ್ಷಕರ ವಿಶೇಷವಾದ ಕರತಾಡನವನ್ನೂ ಗಿಟ್ಟಿಸಿಕೊಂಡರು.

ಪಾರ್ತಿಸುಬ್ಬನ ಕವಿತ್ವದ ಶಕ್ತಿ ಕಲಾರಸಿಕರಿಗೆ ಅರಿವಾಗುವಂತೆ ಅವರು ಹಾಡಿದ್ದು ವಿಶೇಷವಾಗಿತ್ತು.

ಡಾ. ಸಾಮಗ ಹಾಗೂ ಡಾ.ಉರಾಳರ ನಡುವಿನ ಸಂಭಾಷಣೆಯಲ್ಲಿ ಅನೇಕ ವೈಚಾರಿಕ ಅಂಶಗಳು ನುಸುಳಿದವು. ಮಾರ್ಮಿಕವಾಗಿ ಸಮಕಾಲೀನತೆ ಕೂಡ ಸ್ಪಂದಿಸುತ್ತಿತ್ತು. ಮಾಯೆಗೆ ಒಳಗಾಗಿ ಬದಲಾದ ಕೈಕೇಯಿ ವರ್ತನೆ, ಮುಖಾಭಿನಯ ಎಲ್ಲವೂ ಮನೋಜ್ಞವಾಗಿತ್ತು. ಪಟ್ಟಾಭಿಷೇಕಕ್ಕೆಂದು ಎಲ್ಲರೂ ನೆರೆದಾಗ ರಾಮನಾಗಿ ಪ್ರಶಾಂತ ಹೆಗಡೆಯವರ ಪ್ರವೇಶ, ಕುಣಿತ, ಮಾತುಗಾರಿಕೆಯಲ್ಲಿ ಅಚ್ಚುಕಟ್ಟುತನ ಗಾಂಭೀರ್ಯ ಹೊರಹೊಮ್ಮುತ್ತಿತ್ತು. ತಾಯಿ ಕೈಕೇಯಿ ಇಲ್ಲದೆ ಪಟ್ಟಾಭಿಷೇಕ ಅಸಾಧ್ಯ ಎನ್ನುವ ರಾಮನ ಮಾತಿಗೆ ಅವನು ನೀಡುವ ಸಮರ್ಥನೆ ಪಾತ್ರದ ಧೀರೋದಾತ್ತ ವ್ಯಕ್ತಿತ್ವವನ್ನು ಬಿಂಬಿಸಿತು. ವೇಷಗಾರಿಕೆಯೂ ಕೂಡಾ ಚೆನ್ನಾಗಿತ್ತು. ಆ ಸಂದರ್ಭದಲ್ಲಿ ಇಡೀ ರಂಗಸ್ಥಳವೇ ತುಂಬಿ ಬಂದಂತಿತ್ತು.

ಶೋಕಾಗೃಹದಲ್ಲಿದ್ದ ಕೈಕೇಯಿಯನ್ನು ಕರೆತರುವಲ್ಲಿ ಲಕ್ಷಣನ (ಭರತ ಪರ್ಕಳ) ಪ್ರಯತ್ನ, ಅವನ ನಡೆ ಕುಣಿತ ಎಲ್ಲವೂ ಪುಂಡುವೇಷಧಾರಿಯಾಗಿದ್ದು ಒರೆಗೆ ಹಚ್ಚುವಂತಿತ್ತು. ಭಾಗವತರ ಹಾಡಿಗೆ ತಕ್ಕ ಚುರುಕು ನಡೆಯಲ್ಲಿ ಅವರು ರಂಜಿಸಿದರು. ಸಭೆಯಲ್ಲಿದ್ದ ದಶರಥನಿಗೆ ಲಕ್ಷ್ಮಣನ ಮಾತಿನಿಂದಾಗುವ ಆಘಾತ ಅದಕ್ಕೆ ಬಡವಾದ ಮುಖಭಾವ ಹತಾಶ ಭಾವನೆಯನ್ನು ಬಿಂಬಿಸಿದ ರೀತಿ ಅಂಬರೀಷ್ ಭಟ್‌ರ ಕಲಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿತ್ತು. ದಶರಥ ಕೈಕೇಯಿಯಲ್ಲಿಗೆ ನಡೆದುಕೊಂಡು ಬಂದ ರೀತಿ, ಆಕೆಯಲ್ಲಿ ಆಡಿದ ಮಾತುಗಳಲ್ಲಿನ ವೇದನೆಯಲ್ಲೆಲ್ಲ ಸ್ವತಃ ದಶರಥನೇ ಆಗಿದ್ದರು. ಪ್ರಸಂಗದ ಕೊನೆಯ ಭಾಗದಲ್ಲಿ ದುಃಖ ಮಡುಗಟ್ಟಿದಂತೆ ಅಭಿನಯಿಸಿದರು. ರಾಮನ ಪ್ರವೇಶ, ಸಂತೋಷಭಾವ, ಸ್ಪಂದನೆ, ಕೈಕೇಯಿಯ ದೃಢ ಕಠೋರ ನಿಲುವು ಪ್ರದರ್ಶನಕ್ಕೆ ಕಳೆ ತಂದವು. ಸೀತೆ (ಕಾರ್ತಿಕ್)ಯೊಂದಿಗೆ ರಾಮಲಕ್ಷ್ಮಣರು ವನವಾಸಕ್ಕೆ ತೆರಳುವ ದೃಶ್ಯ ಹೃದಯ ಭಾರವಾಗಿಸಿತು.

ಸುಮಂತನಿಂದ ರಾಮ ಕಾಡುಪಾಲಾಗಿದ್ದು ತಿಳಿದು ಶೋಕಿಸುವ ದಶರಥ ಆಘಾತಕ್ಕೆ ಒಳಗಾಗುವ ಪರಿಯೆಲ್ಲವನ್ನೂ ವೀಕ್ಷಿಸುತ್ತಿದ್ದ ಪ್ರೇಕ್ಷಕರ ಕಣ್ಣಾಲಿಗಳು ನೆನೆದವು. ಐದು ತಾಸುಗಳ ಕಥೆ ಮುಗಿದುದೇ ತಿಳಿಯದಂತೆ, ಎಲ್ಲೂ ಪ್ರದರ್ಶನ ನೀರಸವೆನಿಸದೆ ಪ್ರೇಕ್ಷಕರನ್ನು ತನ್ಮಯಗೊಳಿಸಿತ್ತು. ಮದ್ದಳೆಗಾರರಾಗಿ ರಾಜೇಶ್, ಚಂಡೆಯಲ್ಲಿ ಆದಿತ್ಯ ಕಶ್ಯಪ್ ತಮ್ಮ ಕೈ ಚಳಕ ತೋರಿಸಿದರು. ನಿತ್ಯಾನಂದ ನಾಯಕ್, ವಿಶ್ವನಾಥ ಉರಾಳ, ಅದಿತಿ ಉರಾಳ್, ಮುರಳಿಧರ ನಾವಡ ಮೊದಲಾದವರ ಪ್ರಸಾಧನ ಹಾಗೂ ನೇಪಥ್ಯ ನೆರವು ಪ್ರಸಂಗಕ್ಕೆ ಪ್ರದರ್ಶನಕ್ಕೆ ಪೂರಕವಿತ್ತು. ಹೊಸ ಪೀಳಿಗೆಯತ್ತ ಯಕ್ಷಗಾನ ಹರಿಯುತ್ತಿರುವುದರ ಸಂಕೇತವೆಂಬಂತೆ ಬಾಲಕ ವಿಘ್ನೇಶ್

ಯಕ್ಷಗಾನದ ಪೂರ್ವರಂಗದಲ್ಲೊಂದಾದ ಬಾಲಗೋಪಾಲ ನೃತ್ಯವನ್ನು ಮೊದಲಿಗೆ ಪ್ರದರ್ಶಿಸಿದರು.

ಪೌರಾಣಿಕ ಪ್ರಸಂಗಗಳು ವಿರಳವಾಗುತ್ತಿವೆ. ವೃತ್ತಿ ಮೇಳಗಳೂ ಹೊಸಪ್ರಸಂಗಗಳಿಗೆ ಆತುಕೊಂಡಿವೆ. ವೃತ್ತಿ ಕಲಾವಿದರು ಜನರಂಜನೆಯನ್ನು ಗುರಿಯಾಗಿಸಿಕೊಂಡು ಪೌರಾಣಿಕ ಪ್ರಸಂಗಗಳಿಂದ ದೂರ ಸರಿಯುತ್ತಿದ್ದಾರೆ. ಈ ಸ್ಥಿತಿಯಲ್ಲಿ ನಾಡಿನ ಉದ್ದಗಲಕ್ಕಿರುವ ಹವ್ಯಾಸಿಗಳು ಪೌರಾಣಿಕ ಪ್ರಸಂಗಗಳಿಗೆ ಮರು ಜೀವ ನೀಡುತ್ತಿರುವುದು ಸ್ವಾಗತಾರ್ಹ ವಿಚಾರ. ಕಲಾಕದಂಬ ಆರ್ಟ್ಸ್ ಸೆಂಟರ್‌ನ ಗೆಳೆಯರು ಅದರಲ್ಲೂ ಅಂಬರೀಷ್, ಡಾ.ರಾಧಾಕೃಷ್ಣ ಉರಾಳ, ಡಾ.ಪ್ರದೀಪ್ ಸಾಮಗರು ಸೇರಿ ಇಂತಹ ಒಂದು ಒಳ್ಳೆಯ ಪ್ರದರ್ಶನ ನೀಡಿರುವುದಕ್ಕೆ ಅಭಿನಂದನಾರ್ಹರು.

ಸುದರ್ಶನ ಗರ್ವಭಂಗ:

ಯಕ್ಷಗಾನ ಪ್ರದರ್ಶನಕ್ಕೆ ನಿರ್ದೇಶಕರಿರಬೇಕೆ? ಬೇಡವೇ? ಎನ್ನುವ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ವಸ್ತುವಿನಲ್ಲಿ ತೆಳುವಾದ ಹಂದರವಿದ್ದರೂ ಉತ್ತಮ ಕಲಾವಿದ ಹಾಗೂ ಸಮರ್ಥ ನಿರ್ದೇಶಕರ ಕೂಡುವಿಕೆಯಿಂದ ಪ್ರದರ್ಶನ ಯಶಸ್ವಿಯಾಗಲು ಸಾಧ್ಯ ಎಂಬುದು ಬೆಂಗಳೂರಿನಲ್ಲಿ ಇತ್ತೀಚೆಗೆ ರುಜುವಾತು ಗೊಂಡಿತು. ಯಕ್ಷದೇಗುಲ ಬೆಂಗಳೂರು ಇವರು ನಯನ ಸಭಾಂಗಣದಲ್ಲಿ ಕೋಟ ಸುದರ್ಶನ ಉರಾಳರು ಸಂಯೋಜಿಸಿದ "ಸುದರ್ಶನ ಗರ್ವಭಂಗ" ಪ್ರಸಂಗಕ್ಕೆ ಯಕ್ಷಗಾನ ಸಂಘಟಕ ವೇಷಧಾರಿ ಹಾಗೂ ಯಕ್ಷಗಾನದ ಸರ್ವ ಅಂಗಗಳಲ್ಲಿ ಪರಿಣಿತರಾದ ಕೆ.ಮೋಹನ್ ಅವರು ನಿರ್ದೇಶನ ನೀಡಿದ್ದರು. ಪ್ರದರ್ಶನ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸಿತು.

ದೇವೇಂದ್ರನ ಒಡ್ಡೋಲಗದೊಂದಿಗೆ ಪ್ರಾರಂಭವಾದ ಪ್ರಸಂಗದಲ್ಲಿ ದೇವೇಂದ್ರನಾಗಿ ಗಣೇಶ್, ವಾಯುವಾಗಿ ಪ್ರಕಾಶ್ ಉಳ್ಳೂರರು ಪಾತ್ರ ನಿರ್ವಹಿಸಿದರು. ಅವರ ಕುಣಿತ, ಮಾತುಗಳಲ್ಲಿ ಸಂಪ್ರದಾಯ ನಿಷ್ಠೆಯನ್ನು ಕಾಣಬಹುದಾಗಿತ್ತು. ಬಣ್ಣದ ವೇಷವಾದ ಶತ್ರುಪ್ರಸೂದನನ ಒಡ್ಡೋಲಗದಲ್ಲೂ ಕೂಡ ನಿರ್ದೇಶಕರಿಗಿರುವ ಸಂಪ್ರದಾಯದ ಮೇಲಿನ ಗೌರವ ಹಾಗೂ ಹೊಸತನವನ್ನು ನೀಡಬೇಕೆಂಬ ಕಾಳಜಿಯನ್ನು ಗುರುತಿಸಿ ಬಡಗುತಿಟ್ಟಿನ ಸಮರ್ಥ ಬಣ್ಣದ ವೇಷಧಾರಿ ಕೃಷ್ಣಮೂರ್ತಿ ಉರಾಳರು ಅಕ್ಕಿಹಿಟ್ಟಿನ ಚಿಟ್ಟೆ ಇಟ್ಟು ಶತ್ರುಪ್ರಸೂದನನ ಪಾತ್ರವನ್ನು ವಹಿಸಿದ್ದರು. ತೆರೆಯ ಕುಣಿತದಲ್ಲಿ ಅವರು ತೋರಿದ ಹಾವಭಾವ ಚೇತೋಹಾರಿಯಾಗಿದ್ದು ತೆರೆಯನ್ನು ಒಂದು ಕಡೆ ಸರಿಸಿ ಮುಖದಲ್ಲಿ ತೋರಿದ ಅಭಿನಯ ಹಾಗೂ

ಇನ್ನೊಂದೆಡೆ ಸರಿಸಿ ಪುನಃ ಮುಖವನ್ನು ತೋರಿಸಿದ ಅಭಿನಯ ವಿಶಿಷ್ಟವಾಗಿತ್ತು. ರಾಕ್ಷಸ ಪಾತ್ರದಿಂದ ಮುಖ ವರ್ಣನೆ, ಸ್ನಾನ, ಭಸ್ಮಧಾರಣೆ, ಲಿಂಗಾರ್ಚನೆಯನ್ನು ಸುಮಾರು 15–20 ನಿಮಿಷಗಳ ಕಾಲ ತೋರಿಸಿದರು. ಎಲ್ಲವೂ ಕೂಡ ಲವಲವಿಕೆಯಿಂದ ಇದ್ದು ಎಲ್ಲೂ ಬೇಸರ ತೋರಿಸಲಿಲ್ಲ. ದೇವಲೋಕಕ್ಕೆ ಲಗ್ಗೆ ಇಟ್ಟಿದ್ದು, ವಾಯು ಹಾಗೂ ದೇವೇಂದ್ರನೊಂದಿಗೆ ಕದನ ಎಲ್ಲವೂ ಚುರುಕಾಗಿ ನಡೆಯಿತು. ಇಲ್ಲಿನ ಸಂಭಾಷಣೆಯಲ್ಲೂ ಪೌರಾಣಿಕ ವಿಚಾರಗಳು ಚರ್ಚೆಯಾದವು. ದೂತನಾಗಿ ಬಂದ ಪ್ರಶಾಂತ ಹೆಗಡೆಯವರ ಹಾಸ್ಯ ಚೆನ್ನಾಗಿತ್ತು. ವಿಷ್ಣು ಮತ್ತು ಲಕ್ಷ್ಮೀಯರ ಮಾತುಕತೆಯಲ್ಲಿ ವಿಷ್ಣುವಿನ ಹಿಂದಿನ ಅವತಾರಗಳ ವಿಷಯ ಚರ್ಚಿತವಾಗಿದ್ದವು. ವಿಷ್ಣು ಪಾತ್ರಧಾರಿಯಾಗಿ ತಮ್ಮಣ್ಣ ಗಾಂವ್ಕರ್ ಹಾಗೂ ಲಕ್ಷ್ಮೀಯಾಗಿ ಗಣಪತಿ ಹೆಗಡೆಯವರು ಭಾಗವಹಿಸಿದ್ದು ಕುಣಿತ, ಮಾತು, ಹಾವಭಾವಗಳೆಲ್ಲ ಹಿಂದಿನ ಕಾಲದ ಆಟವನ್ನು ನೋಡಿದಂತಾಗುತ್ತಿತ್ತು. ಲಕ್ಷ್ಮೀಯಿಂದ ವಿಷ್ಣುವಿನ ಸಾಹಸಗಾಥೆಯನ್ನು ಕೇಳಿಸಿಕೊಂಡ ಸುದರ್ಶನ ಚಕ್ರವು ಅಸಾಮಾಧಾನಗೊಳ್ಳುತ್ತದೆ. ಆಗ ಸುದರ್ಶನ ಪಾತ್ರಧಾರಿಯಾಗಿ ಪ್ರವೇಶಿಸಿದ ಎಚ್.ಸುಜಯೀಂದ್ರ ಹಂದೆಯವರು ರಂಗದಲ್ಲಿ ಮಿಂಚು ಹರಿಸಿ ಮಾತಿನಲ್ಲಿ ಹಾಗೂ ಅಭಿನಯದಲ್ಲಿ ಮತ್ತು ಕುಣಿತದಲ್ಲಿ ತಾವೊಬ್ಬರು ನುರಿತವರು ಎಂಬುದನ್ನು ತೋರಿಸಿಕೊಟ್ಟರು. ವಿಷ್ಣುವಿನ ಜಯದ ಹಿಂದೆ ತಾನಿದ್ದ ಪರಿಯನ್ನು ಹೇಳುತ್ತಾ ಸುದರ್ಶನ ಬೀಗುತ್ತಾ ಹೋಗುತ್ತಾನೆ. ತನಗೆ ಸರಿಯಾದ ಗೌರವ ಸಿಕ್ಕಿಲ್ಲವೆಂದು ವಿಷ್ಣುವನ್ನು ತ್ಯಜಿಸಿ ಹೊರಡುತ್ತಾನೆ. ಈ ಭಾಗವೆಲ್ಲ ಬಹಳ ಮನೋಜ್ಞವಾಗಿ ಬಂದಿದೆ. ಮೂವರು ಪಾತ್ರಧಾರಿಗಳು ನ್ಯಾಯ ಒದಗಿಸಿದ್ದಾರೆ. ಶತ್ರುಪ್ರಸೂದನನಿಂದ ಪದಚ್ಯುತಗೊಂಡ ದೇವೇಂದ್ರ ವಿಷ್ಣುವಿನಲ್ಲಿ ಸಹಾಯ ಯಾಚಿಸಿದಾಗ ಸುದರ್ಶನ ಚಕ್ರವಿಲ್ಲದೇ ಯುದ್ಧಕ್ಕೆ ತೆರಳಿ ಸೋಲೊಪ್ಪುತ್ತಾನೆ. ಆಗ ರಾಕ್ಷಸನೊಂದಿಗೆ ಹೋರಾಡಲು ಬಂದ ಸುದರ್ಶನ ವರದ ಮಹಿಮೆಯಿಂದಾಗಿ ಗೆಲ್ಲುತ್ತಾನೆ. ಇಲ್ಲೂ ಕೂಡ ಸುಜಯೀಂದ್ರ ಹಂದೆ ಹಾಗೂ ಕೃಷ್ಣಮೂರ್ತಿ ಉರಾಳರ ನಡುವೆ ನಡೆದ ಸಂಭಾಷಣೆ ಹಾಗೂ ಕುಣಿತ ಹಾಗೂ ಅಭಿನಯಗಳು ಅತ್ಯಾಕರ್ಷಕವಾಗಿತ್ತು. ಜಯದ ಬೀಗಿನಿಂದ ಬಂದ ಸುದರ್ಶನ ವಿಷ್ಣುವಿನ ಶಾಪಕ್ಕೆ ಗುರಿಯಾಗುವಲ್ಲಿ ಪ್ರಸಂಗ ಮುಕ್ತಾಯವಾಗುತ್ತದೆ.

ಹೀಗೆ ಸರಳ ವಿಚಾರವನ್ನು ಹೊಂದಿದ ಪ್ರಸಂಗ 2 ಗಂಟೆಗಳ ಕಾಲ ನಡೆದು ಪ್ರೇಕ್ಷಕರ ಮನಗೆದ್ದಿತು. ಎಲ್ಲಾ ಕಲಾವಿದರು ಅಚ್ಚುಕಟ್ಟಾಗಿ ನಿರ್ವಹಿಸದರು. ಭಾಗವತರಾಗಿದ್ದ ಲಂಬೋದರ ಹೆಗಡೆ ಹಾಗೂ ದೇವರಾಜ್ ದಾಸ್ ಅವರಿಗೆ ಗಣಪತಿಭಟ್ರ ಮದ್ದಲೆ ಸಹಕಾರಿಯಾಗಿತ್ತು. ಚಂಡೆವಾದಕರಾಗಿ ಮಾಧವ ಹಾಗೂ ಮಂಜುನಾಥ ನಾವಡರಿದ್ದರು. ಪ್ರದರ್ಶನದ ಮೊದಲಿಗೆ ಹಿರಿಯ ಭಾಗವತರಾದ ಕೆಪ್ಪೆಕೆರೆ ಸುಬ್ರಾಯ ಹೆಗಡೆಯವರನ್ನು ಸನ್ಮಾನಿಸಲಾಯಿತು.

ರಾವಣ ವಧೆ:

ಹೆಚ್ಚಾಗಿ ವೃತ್ತನಿರತ ಕಲಾವಿದರುಗಳಿಂದ ಜನಮಾನಸದ ಮೇಲೆ ಅಚ್ಚಳಿಯದ ಪ್ರಭಾವ ಬೀರಿರುವ ಯಕ್ಷಗಾನ ಕಲೆ ಕರಾವಳಿ ಹಾಗೂ ಮಲೆನಾಡಿನಲ್ಲಿ ಬಹು ಜನಾದರಣೀಯವಾದದ್ದು. ಜಗತ್ತು ನಗರೀಕರಣದೆಡೆಗೆ ಧಾವಿಸುತ್ತಿರುವ ಇಂದಿನ ಸಂಕೀರ್ಣ ಸಂದರ್ಭದಲ್ಲಿ ಮೂಲತಃ ಗ್ರಾಮೀಣ ಕಲೆಯಾದ ಯಕ್ಷಗಾನ ನಗರೀಕರಣಕ್ಕೆ ಮೈಯೊಡ್ಡುತ್ತಿರುವ ಪರಿ ವಿಶೇಷವಾಗದದ್ದು. ಈ ಪ್ರಕ್ರಿಯೆಯಲ್ಲಿ ಹವ್ಯಾಸಿ ಯಕ್ಷಗಾನ ಕಲಾವಿದರ ಪಾತ್ರ ಹಿರಿದು. ಹವ್ಯಾಸಿ ಕಲಾವಿದರ ಸಂಘಟನೆಗಳು ಕೇವಲ ಕರಾವಳಿ, ಮಲೆನಾಡಿನಲ್ಲಿ ಮಾತ್ರವಲ್ಲದೇ ಬೆಂಗಳೂರು, ಮೈಸೂರು, ಮುಂಬಯಿ, ಹೈದ್ರಾಬಾದ್, ದೆಹಲಿ, ದುಬೈ ಹಾಗೂ ಅಮೆರಿಕಾದ ಕೆಲವು ನಗರಗಳಲ್ಲಿ ಹುಟ್ಟಿಕೊಂಡಿದ್ದು ಯಕ್ಷಗಾನ ಪ್ರಸಾರದಲ್ಲಿ ಅದ್ವಿತೀಯವಾಗಿ ತೊಡಗಿಕೊಂಡಿವೆ. ಹಿಂದಿನಿಂದಲೂ ಯಕ್ಷಗಾನ ಕಲೆಯಲ್ಲಿ ಹವ್ಯಾಸಿಗಳಿದ್ದರು. ಆದರೆ ಇಂದಿನ ಹವ್ಯಾಸಿಗಳಲ್ಲಿ ಕಂಡು ಬರುತ್ತಿರುವ ಶಿಸ್ತು, ವ್ಯಾಪಕತೆ, ಕ್ರಿಯಾಶೀಲತೆ ಮತ್ತು ಬದ್ಧತೆ ಬೆರಗುಗೊಳ್ಳುವಂತಹುದು. ಸಕಾರಾತ್ಮಕ ಮನೋಧರ್ಮದ ಇವರು ಸಂಪ್ರದಾಯ ಉಳಿಯಬೇಕೆಂಬ ಹಂಬಲದವರು. ಹವ್ಯಾಸಿ ತಂಡಗಳ ಪ್ರದರ್ಶನಗಳು ವೃತ್ತಿಮೇಳಗಳ ಪ್ರದರ್ಶನಕ್ಕೆ ಸಮಾನಾಂತರವಾಗಿ ನಡೆಯುತ್ತಿದ್ದು ಯಕ್ಷಗಾನವನ್ನು ಬೆಳೆಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಬಲ್ಲವು.

ಇಂತಹ ಹವ್ಯಾಸಿ ಯಕ್ಷಗಾನ ತಂಡಗಳಲ್ಲಿ ಎಂಟು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಹುಟ್ಟಿದ "ಯಕ್ಷ ಸಿಂಚನ"ದ ಸಾಧನೆ ಆಸಕ್ತರ ಗಮನ ಸೆಳೆದಿದೆ. ವೃತ್ತಿಯಲ್ಲಿ ಬೇರೆಬೇರೆಯಾದರೂ ಪ್ರವೃತ್ತಿಯಲ್ಲಿ ಒಂದಾಗಿರುವ ಇದರ ಸದಸ್ಯರು ಬೆಂಗಳೂರಿನಲ್ಲಿರುವ ಸಮರ್ಥ ಯಕ್ಷಗಾನ ಗುರುಗಳಲ್ಲಿ ಒಬ್ಬರಾಗಿರುವ ಶ್ರೀ ಕೃಷ್ಣಮೂರ್ತಿ ತುಂಗರಲ್ಲಿ ತರಬೇತಿಯನ್ನು ಪಡೆದು 150ಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ. ಕೇವಲ ವಾರ್ಷಿಕೋತ್ಸವಕ್ಕಷ್ಟೇ ಸೀಮಿತವಾಗದ ಇವರು ರಾಷ್ಟ್ರದ ಬೇರೆಬೇರೆ ಕಡೆಯಲ್ಲಿ ಪ್ರದರ್ಶನಗಳನ್ನು ನೀಡಿ ಭರವಸೆ ಮೂಡಿಸಿದ್ದಾರೆ. ರಾಜಾಸ್ತಾನದ ಜೈಪುರ, ದೆಹಲಿ, ಆಗ್ರಾ, ಹೈದ್ರಾಬಾದ್, ಚನ್ನೈ ಮುಂತಾದ ಹೊರ ರಾಜ್ಯದ ಪ್ರದೇಶಗಳಲ್ಲಿ ಯಕ್ಷಗಾನ ಪ್ರದರ್ಶನಗಳನ್ನು ನೀಡಿರುವುದಲ್ಲದೇ ಶಿರಸಿ, ಸಾಗರ, ಮೈಸೂರು, ಉಡುಪಿ, ಮಂಗಳೂರಲ್ಲೂ "ಯಕ್ಷ ಸಿಂಚನ"ದ ಪ್ರದರ್ಶನಗಳು ನಡೆದಿವೆ. ಮುಖ್ಯವಾಗಿ ರವಿಮಡೋಡಿ, ಶಶಿಧರ ಸೋಮಯಾಜಿ, ಆದಿತ್ಯ ಉಡುಪ, ಶಶಿಕಾಂತ ಕಾಶಿ, ಕೃಷ್ಣಶಾಸ್ತ್ರಿ, ಮನೋಜಭಟ್, ಗುರುರಾಜ ಅಂಪಾರು ಮುಂತಾದವರು ಮುಮ್ಮೇಳದ ಕಲಾವಿದರಾಗಿ ಖ್ಯಾತಿಗಳಿಸಿದ್ದಾರೆ. ಈ ತಂಡ ಈಗಾಗಲೇ ಕಚದೇವಯಾನಿ, ಚಿತ್ರಸೇನ ಕಾಳಗ, ರುಕ್ಮಿಣಿ ಸ್ವಯಂವರ, ತಾಮ್ರಧ್ವಜ ಕಾಳಗ, ದ್ರೌಪದಿ ಸ್ವಯಂವರ, ಅತಿಕಾಯ ಕಾಳಗ ಮುಂತಾದ ಪ್ರಸಂಗಗಳಲ್ಲಿ ತರಬೇತಿ

ಹೊಂದಿ ಯಶಸ್ವಿಯಾಗಿ ಪ್ರದರ್ಶನ ನೀಡಿದ್ದಾರೆ. ಈಚೆಗೆ "ಯಕ್ಷ ಸಿಂಚನ"ದ ಎಂಟನೆಯ ವಾರ್ಷಿಕೋತ್ಸವ ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ ನಡೆದು ಹೊಸದಾಗಿ "ಇಂದ್ರಜಿತು ಕಾಳಗ-ರಾವಣ ವಧೆ" ಪ್ರದರ್ಶಿಸಿ ಅಭಿಮಾನಿಗಳನ್ನು ರಂಜಿಸಿದರು.

ಸಾಂಪ್ರದಾಯಿಕ ರಂಗಭೂಮಿಯಾದ ಯಕ್ಷಗಾನದ ಪರಂಪರೆಯ ಉಳಿವಿನ ಬಗ್ಗೆ ಸದಾ ಎಚ್ಚರವುಳ್ಳ ಇಲ್ಲಿನ ಕಲಾವಿದರು ಔಚಿತ್ಯಪೂರ್ಣವಾದ ರಂಗದ ಹೊಣೆಗಾರಿಕೆ, ಹಿತಮಿತವಾದ ಸಂಭಾಷಣೆ ಸಂಪ್ರದಾಯಕ್ಕೆ ಊನವಾಗದ ರೀತಿಯ ನರ್ತನ, ಅಭಿನಯಗಳನ್ನು ನೀಡುವುದರ ಮೂಲಕ ಅತಿಥಿಗಳ ಮನ ಗೆದ್ದರು. ಈ ಕಲಾಮಾಧ್ಯಮದ ಬಗ್ಗೆ ಇವರಿಗಿರುವ ನಿಷ್ಠೆ ಮೆಚ್ಚಬೇಕಾದ್ದು. ಅಂದು ಸಮಾರಂಭದಲ್ಲಿ ಮೊದಲಿಗೆ ಮಕ್ಕಳು "ಪಾರಿಜಾತ" ಪ್ರಸಂಗವನ್ನು ತೊಂಭತ್ತು ನಿಮಿಷಗಳಲ್ಲಿ ಪ್ರಸ್ತುತ ಪಡಿಸಿದರು. ಹಿಮ್ಮೇಳದಲ್ಲಿ ಖ್ಯಾತ ಭಾಗವತರಾಗಿರುವ ಶ್ರೀ ಸತೀಶ ಕೆದ್ಲಾಯರು ಹಾಗೂ ಪ್ರಸಿದ್ಧ ಮೃದಂಗವಾದಕ ಶ್ರೀ ಅನಂತ ಪದ್ಮನಾಭ ಪಾಠಕರು ಮತ್ತು ಚಂಡೆಯಲ್ಲಿ ಆದಿತ್ಯ ಕಶ್ಯಪ್ ಇದ್ದರು. ಪ್ರಾರಂಭದಲ್ಲಿ ಗುರು ಕೃಷ್ಣಮೂರ್ತಿ ತುಂಗರು ಮಕ್ಕಳ ಮೂಲಕ ಪೂರ್ವರಂಗದ ಭಾಗವನ್ನು ಸಮರ್ಪಕವಾಗಿ ಪ್ರಸ್ತುತ ಪಡಿಸಿದರು. ಅಂದು ಕೃಷ್ಣನಾಗಿ ಕೌಸ್ತುಭರಾವ್ ಹಾಗೂ ಶ್ರಾವ್ಯ ಎಂ.ಆಚಾರ್ಯ ಅವರ ಅಭಿನಯ, ಕುಣಿತ, ಮಾತುಗಳೆಲ್ಲ ಮನೋಜ್ಞವಾಗಿದ್ದು ಪ್ರೇಕ್ಷಕರು ಸತತ ಕರತಾಡನದ ಮೂಲಕ ಮೆಚ್ಚುಗೆ ಸೂಚಿಸಿದರು. ದೇವೇಂದ್ರನಾಗಿ ಕುಮಾರಿ ಪ್ರಾರ್ಥನಾ ಕಾರಂತ್, ಯಮ ಹಾಗೂ ನರಕಾಸುರನಾಗಿ ಉತ್ತಮ, ಈಶ್ವರನಾಗಿ ಹೇಮಂತ್ ಅವರು ಪ್ರಸಂಗ ಕಳೆಕಟ್ಟುವುದರಲ್ಲಿ ಪೂರಕರಾದರು. ತುಂಗರ ಅಚ್ಚುಕಟ್ಟಾದ ನಿರ್ದೇಶನ ಹಾಗೂ ಶ್ರಮ ಪೂರ್ಣ ತರಬೇತಿ ಎದ್ದು ಕಾಣುತ್ತಿತ್ತು.

ಸಭಾ ಕಾರ್ಯಕ್ರಮದ ನಂತರ ನಡೆದ "ರಾವಣ ವಧೆ" ಪ್ರೇಕ್ಷಕರನ್ನು ಸಂಪೂರ್ಣವಾಗಿ ಹಿಡಿದು ಇಡುವಲ್ಲಿ ಯಶಸ್ವಿಯಾಯಿತು. ಸುಮಾರು ನೂರೈವತ್ತು ನಿಮಿಷಗಳ ಕಾಲ ನಡೆದ ಈ ಪ್ರದರ್ಶನ ಎಲ್ಲೂ ಕಳೆ ಗುಂದಲಿಲ್ಲ. ಅಂದಿನ ಪ್ರದರ್ಶನದಲ್ಲಿ ಶ್ರೀರಾಮನಾಗಿ ಶಶಿಧರ ಸೋಮಯಾಜಿ ಹಾಗೂ ಲಕ್ಷ್ಮಣನಾಗಿ ಕೌಸ್ತುಭ್ ಅವರು ಮೊದಲಿಗೆ ಸಮರ್ಪಕ ತಳಪಾಯ ಹಾಕಿದರು. ಮುಂದೆ ಬಂದ ಇಂದ್ರಜಿತು (ಶಶಿಕಾಂತ್ ಕಾಶಿ) ತನ್ನ ಬಣ್ಣಗಾರಿಕೆಯಿಂದ, ಕುಣಿತದಿಂದ, ಆಕರ್ಷಕ ಮಾತುಗಾರಿಕೆಯಿಂದ ಎಲ್ಲರ ಮನಗೆದ್ದರು. ಹನುಮಂತನಾಗಿ ಆದಿತ್ಯ ಉಡುಪ ಹಾಗೂ ವಿಭೀಷಣನಾಗಿ ಗುರುರಾಜ್ ಭಟ್ ಅಂಪಾರು ಪಾತ್ರ ವಹಿಸಿದ್ದು ಅವರಲ್ಲಿ ಹಿತಮಿತವಾದ ಕುಣಿತ, ಮಾತುಗಾರಿಕೆ ಇತ್ತು. ರಾವಣನಾಗಿ ರವಿಮಡೋಡಿಯವರು ರಂಗಕ್ಕೆ ಬಂದು ಸಮರ್ಥವಾಗಿ ಪಾತ್ರನಿರ್ವಹಿಸಿ ಕರತಾಡನ ಗಿಟ್ಟಿಸಿಕೊಂಡರು. ಮಾಯಾ ಸೀತೆಯ ವಧೆಯ ಪ್ರಸಂಗ ಹನುಮಂತನ ಆಕ್ರಂದನವೆಲ್ಲ ಸಹಜವೆಂಬಂತಿತ್ತು. ಇಂದ್ರಜಿತುವಿನ ಸಾವಿನ ನಂತರ ಘೋರಶೋಕಕ್ಕೆ ಒಳಗಾದ ರಾವಣನ ಮನಃ

ಸ್ಥಿತಿಯನ್ನು, ಆತನ ಆಂತರ್ಯವನ್ನು ಸಮರ್ಪಕವಾಗಿ ಬಿಂಬಿಸಿದರು. ರಾವಣ ಪಾತ್ರಧಾರಿ ರವಿಮಡೋಡಿಯವರು ಪುತ್ರಶೋಕದ ಪರಿಯನ್ನು ಸಮರ್ಪಕವಾಗಿ ತೋರಿದ್ದು ಎಲ್ಲರ ಮೆಚ್ಚುಗೆ ಗಳಿಸಿತು. ರಾವಣ ಹಾಗೂ ಮಂಡೋದರಿಯರು ಪುತ್ರಶೋಕ ತೋಡಿಕೊಂಡ ಬಗೆಯಲ್ಲಿ ಕರುಣಾರಸ ಒಸರುವಂತಿತ್ತು.

ಮಂಡೋದರಿ(ಶ್ರೀ ಮನೋಜ್‌ಭಟ್) ಹಾಗೂ ರಾವಣ(ರವಿಮಡೋಡಿ)ರ ನಡುವೆ ನಡೆದ ಸಂಭಾಷಣೆ ವೃತ್ತಿ ಕಲಾವಿದರಿಗೆ ಸರಿಸಾಟಿಯಾಗುವಷ್ಟು ಉತ್ತಮವಾಗಿತ್ತು. ಆತನ ಮನಃಸ್ಥಿತಿ, ಅದಕ್ಕೆ ಮಂಡೋದರಿಯ ಪ್ರತಿಕ್ರಿಯೆ, ಕೊನೆಯಲ್ಲಿ ರಾವಣನಿಗೆ ತನ್ನ ಜನ್ಮದ ಉದ್ದೇಶದ ಅರಿವು ಉಂಟು ಮಾಡುವ ಭಾವವೆಲ್ಲವೂ ತೀವ್ರವಾಗಿ ಅನುರಣನಗೊಂಡಿದೆ. ಆತ ಯದ್ಧಕ್ಕೆ ಸನ್ನದ್ಧವಾದ ಪರಿ ಹಾಗೂ ರಾಮನೊಂದಿಗೆ ನಡೆದ ಸಂಭಾಷಣೆ ಕೂಡ ಅಷ್ಟೇ ಗಂಭೀರವಾಗಿದ್ದು ಯಕ್ಷಗಾನದ ಮೂಲ ಉದ್ದೇಶವಾದ ಜೀವನ ಮೌಲ್ಯದ ಪ್ರತಿಪಾದನೆಯನ್ನು ಸೋಮಯಾಜಿಯವರು ಹಾಗೂ ಮಡೋಡಿಯವರು ಸಮರ್ಪಕವಾಗಿ ರಂಗದಲ್ಲಿ ಬಿಂಬಿಸಿದ್ದಾರೆ. ಇದೆಲ್ಲಕ್ಕೆ ಪೂರಕವಾಗಿ ಶ್ರೀ ಸತೀಶ್ ಕೆದ್ಲಾಯರ ಭಾಗವತಿಕೆಯಿದ್ದು ಸಭಿಕರನ್ನು ರಂಜಿಸಿತು.

ಹವ್ಯಾಸಿಗಳು ಯಕ್ಷಗಾನವನ್ನು ಉಳಿಸಿ ಬೆಳೆಸುವಲ್ಲಿ ಹೇಗೆ ತೊಡಗಿ ಕೊಳ್ಳಬಹುದೆಂಬುದಕ್ಕೆ ಅಂದಿನ ಪ್ರದರ್ಶನ ಮಾದರಿಯಾಗಿತ್ತು. ಕೃಷ್ಣಮೂರ್ತಿ ತುಂಗರ ನಿರ್ದೇಶನದಲ್ಲಿ ಎಲ್ಲಾ ಕಲಾವಿದರು ತಮಗೆ ಕಲೆಯ ಮೇಲಿರುವ ಪ್ರೀತಿಯನ್ನು ಹಾಗೂ ಬದ್ಧತೆಯನ್ನು ಈ ಪ್ರಸಂಗದ ಮೂಲಕ ತೋರಿಸಿಕೊಟ್ಟಿದ್ದಾರೆ. ಬಯಲಾಟದ ಮೇಳಗಳ ಕೆಲವೊಂದು ಪ್ರದರ್ಶನಗಳು ಅತಿರಂಜಕತೆ ಕಡೆಗೆ ಹೊರಳುತ್ತಿರುವ ದಿನ ಮಾನಸಗಳಲ್ಲಿ ಈ ಬಗೆಯ ಶಿಸ್ತುಬದ್ಧ ಪ್ರದರ್ಶನ, ಎಲ್ಲೂ ರಂಗಭೂಮಿಯ ಮರ್ಯಾದೆಗೆ ಚ್ಯುತಿ ಬರದ ರೀತಿಯ ಕುಣಿತ, ಅಭಿನಯ, ಮಾತುಗಾರಿಕೆ ಹಾಗೂ ವೇಷಗಾರಿಕೆಗಳು ಕಲಾಸಕ್ತರಲ್ಲಿ ಭರವಸೆಯನ್ನು ಮೂಡಿಸುತ್ತದೆ. ಇದಕ್ಕಾಗಿ "ಯಕ್ಷ ಸಿಂಚನ"ದ ಎಲ್ಲಾ ಕಲಾವಿದರು ಅಭಿನಂದನಾರ್ಹರು. ಪ್ರಾರಂಭಗೊಂಡ ಕೆಲವೇ ವರ್ಷಗಳಲ್ಲಿ ಈ ಬಗೆಯ ಸಾಧನೆಗೈದ ತಂಡ ತನ್ನ ಮಾಧ್ಯಮ ಬದ್ಧತೆಯನ್ನು ನಿರಂತರವಾಗಿ ಇರಿಸಿಕೊಳ್ಳಬೇಕೆಂಬುದೇ ಕಲಾಸಕ್ತರ ಬಯಕೆಯಾಗಿದೆ.

ಮಾರುತಿ ಪ್ರತಾಪ:

ಹಾಡುಗಬ್ಬವಾದ ಯಕ್ಷಗಾನ ಪ್ರಸಂಗವು ರಂಗಸ್ಥಳಕ್ಕೆ ಬಂದಾಗ ಜೀವಂತವಾಗುತ್ತದೆ. ಕನ್ನಡದ ಈ ಯಕ್ಷಕಾವ್ಯ ಪ್ರದರ್ಶನಕ್ಕೆ ಬರುವಾಗ ಕಾವ್ಯದ ಆಶಯಕ್ಕೆ, ಪ್ರತಿಪಾದಿಸುವ ಮೌಲ್ಯಕ್ಕೆ ಭಂಗ ಬರಬಾರದು ಎಂಬ ಎಚ್ಚರಿಕೆ ಮೇಳಗಳಲ್ಲಿ,

ಕಲಾವಿದರಲ್ಲಿ ಇರಬೇಕು. ಇದನ್ನು ಅರಿತು ವ್ಯವಹರಿಸುವ, ಬದ್ಧತೆಯನ್ನು ಪ್ರದರ್ಶಿಸುವ ಕೆಲವೇ ಮೇಳಗಳಲ್ಲಿ ಕೆರೆಮನೆಯ ಶ್ರೀ ಇಡುಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಮುಂಚೂಣಿಯಲ್ಲಿದೆ. ಈಚೆಗೆ ಬೆಂಗಳೂರಿನಲ್ಲಿ ನಡೆದ ಅವರ "ಮಾರುತಿ ಪ್ರತಾಪ ಪ್ರದರ್ಶನ" ಇದಕ್ಕೆ ಸಾಕ್ಷಿಯಾಯಿತು. ಇದೇ 07-08-2022 ರಂದು ""ಉಡುಪಿ ಗಾರ್ಡನ್" ಖ್ಯಾತಿಯ ರಮೇಶ್ ಕಾರಂತರ ಪ್ರಾಯೋಜಕತ್ವದಲ್ಲಿ ಬೆಂಗಳೂರಿನ ಬಿ.ಟಿ.ಎಮ್. ಬಡಾವಣೆಯ ಕುವೆಂಪು ರಂಗಮಂದಿರದಲ್ಲಿ ನಡೆದ ಪ್ರದರ್ಶನದಲ್ಲಿ ಕವಿಯ ಆಶಯಕ್ಕೆ ಬದ್ಧವಾದ ನಡೆ ಎದ್ದು ಕಾಣುತ್ತಿತ್ತು. ಕಳೆದ ಶತಮಾನದ ಯಕ್ಷಕವಿ ಜಾನಕೈ ತಿಮ್ಮಪ್ಪ ಹೆಗಡೆಯವರು 10ಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿದವರು. ಹುಕಲ್ಮಕ್ಕಿಯ ಯಕ್ಷಗಾನ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು. ಅವರ "ಮಾರುತಿ ಪ್ರತಾಪ"ವು ದ್ವಾಪರಾಯುಗಕ್ಕೆ ಸಂಬಂಧಿಸಿದ್ದು ಕಾಲ್ಪನಿಕ ಅಂಶಗಳಿಂದ ಕೂಡಿದ್ದು ಜನರು ಹೇಗೆ ಬದುಕಬೇಕೆಂಬುದನ್ನು ಎಲ್ಲಾ ಕಾಲಕ್ಕೂ ತಿಳಿಸಿಕೊಡುತ್ತದೆ. ಚಿರಂಜೀವಿ ಹನುಮಂತ ತ್ರೇತಾಯುಗದವನಾದರೂ ದ್ವಾಪರಕ್ಕೆ, ಅದರಲ್ಲೂ ದ್ವಾರಕೆಗೆ ಬಂದು ಅಹಂಕಾರಮದ, ರೂಪಮದ, ಶಕ್ತಿಮದವನ್ನು ನಿವಾರಿಸಿದ ಕಥೆಯ ಹಂದರವನ್ನು ಹೊಂದಿದೆ. ಇಂತಹ ಕಥೆಯನ್ನು ಪ್ರಸ್ತುತ ಪಡಿಸುವಲ್ಲಿ ಮೇಳದ ಎಲ್ಲಾ ಕಲಾವಿದರು ಕವಿಯ ಆಶಯವನ್ನು ಅರಿತು, ಔಚಿತ್ಯದ ಎಲ್ಲೆಯನ್ನು ಮೀರದೆ, ಸರ್ವಾಂಗ ಸುಂದರವಾದ ಪ್ರದರ್ಶನವನ್ನು ಅಂದು ಸಾಕಾರಗೊಳಿಸಿದರು.

ಪ್ರಸಂಗ ಪ್ರಾರಂಭವಾಗುವುದು ಬಲರಾಮನ (ಶ್ರೀವಿಘ್ನೇಶ್ವರ ಹಾವಗೋಡಿ) ಒಡ್ಡೋಲಗದಿಂದ ಆದರ್ಶ ಸಹೋದರರಂತಿದ್ದ ಬಲರಾಮ, ಕೃಷ್ಣರು ದ್ವಾರಕೆಯನ್ನು ಆಳುತಿದ್ದ ಸಂದರ್ಭ. ಸಭೆಗೆ ಕೃಷ್ಣ (ಶ್ರೀ ಕೆರೆಮನೆ ಶ್ರೀಧರ ಹೆಗಡೆ)ನ ಆಗಮನ ನಿಧಾನವಾಯಿತೆಂಬ ಕಾರಣದಿಂದ ಅಧಿಕಾರಮದದಿಂದ ಕೂಡಿದ ಬಲರಾಮ ಕೃಷ್ಣನನ್ನು ಜರೆದದ್ದು ಮಾತ್ರವಲ್ಲದೆ ಮುಂದೆ ಸಭೆಗೆ ಬಾರದಂತೆ ಆದೇಶಿಸುತ್ತಾನೆ. ಇಲ್ಲಿ ವಿಘ್ನೇಶ್ವರ ಹಾವಾಗೋಡಿ ಹಾಗೂ ಶ್ರೀಧರ ಹೆಗಡೆಯವರು ಅತ್ಯಂತ ಸಹಜವಾಗಿ ಅಭಿನಯಿಸಿದ್ದಾರೆ. ಬಲರಾಮನ ದರ್ಪ, ಕೃಷ್ಣನ ನಾಟಕೀಯ ಸ್ವಭಾವ ಅವರ ಮುಖಾಭಿನಯದಲ್ಲಿ, ಮಾತಿನಲ್ಲಿ ಹಾಗೂ ಕುಣಿತದಲ್ಲಿ ವ್ಯಕ್ತವಾಗುತ್ತಿತ್ತು. ಈ ಭಾಗವನ್ನು ಎಷ್ಟೋ ಬಾರಿ ಬೇರೆ ಕಲಾವಿದರು ಹಾಸ್ಯಕ್ಕೆ ತಿರುಗಿಸಿ ತಾವೇ ಅಪಹಾಸ್ಯಕ್ಕೆ ಈಡಾಗುತ್ತಿದ್ದರು. ಹಿಂದೆಲ್ಲ ಹಾಸ್ಯಾಸ್ಪದವಾಗುತ್ತಿದ್ದ ಸಂದರ್ಭ ಇಲ್ಲಿ ಸಂಯಮಪೂರ್ಣವಾಗಿ, ಔಚಿತ್ಯಪೂರ್ಣವಾಗಿ ಪಡಿಮೂಡಿತು. ಮುಂದಿನ ಭಾಗದಲ್ಲಿ ಸತ್ಯಭಾಮೆಯ (ಶ್ರೀ ಸದಾಶಿವ ಭಟ್ಟ ಮಳವಳ್ಳಿ) ಪ್ರವೇಶವಾಗುತ್ತದೆ. ಸ್ತ್ರೀ ವೇಷಕ್ಕೆ ಅಗತ್ಯವಾಗುವ ಒನಪು ವಯ್ಯಾರಗಳನ್ನು ಬಹು ಸಹಜವೆಂಬಂತೆ ಪ್ರದರ್ಶಿಸಿದ ಸದಾಶಿವ ಭಟ್ಟರು ತಾವೊಬ್ಬ ಪ್ರೌಢ ಕಲಾವಿದರೆಂಬುದನ್ನು ಸಾಬೀತು ಮಾಡಿದರು.

ಸಖಿಯೊಂದಿಗೆ ಅವರಾಡಿದ ಮಾತು, ಮುಂದೆ ಅಂತಃಪುರಕ್ಕೆ ಕೃಷ್ಣನು (ಶ್ರೀ ಕೆರೆಮನೆ ಶಿವಾನಂದ ಹೆಗಡೆ) ಬಂದಾಗ ನಡೆದುಕೊಂಡ ಬಗೆ ಮನಸ್ಸಿಗೆ ಅಚ್ಚೊತ್ತುವಂತಿತ್ತು. ತನ್ನ ರೂಪದ ಮದ, ತವರಿನಿಂದ ತಂದ ಐಶ್ವರ್ಯದ ಮದ, ಎಲ್ಲಕ್ಕಿಂತ ಮೇಲಾಗಿ ಶಮಂತಕಮಣಿಯ ಒಡತಿಯೆಂಬ ಗರ್ವ ಸತ್ಯಭಾಮೆಯಲ್ಲಿ ಏಕತ್ರಗೊಂಡು, ಕೃಷ್ಣನು ಮುಂದೆ ಅಂತಃಪುರಕ್ಕೆ ಬಾರದಂತೆ ತಡೆಯುತ್ತಾಳೆ. ಈ ಭಾಗದಲ್ಲಿ ಸದಾಶಿವ ಭಟ್ಟರ ಹಾಗೂ ಶಿವಾನಂದ ಹೆಗಡೆಯವರ ಮಾತುಗಾರಿಕೆ, ಅಭಿನಯಗಳೆಲ್ಲವೂ ಮನೋಜ್ಞವಾಗಿದ್ದು. ಎಲ್ಲೆ ಮೀರದ ಶೃಂಗಾರವನ್ನು ಹೇಗೆ ಪ್ರಕಟಿಸಬೇಕೆಂಬುದಕ್ಕೆ ಮಾದರಿಯಾಗಿತ್ತು.

ಮುಂದೆ ವೈನತೇಯನ ಶಕ್ತಿಮದವನ್ನು ಪ್ರಸ್ತಾಪಿಸಿದ ಕೃಷ್ಣ, ತಾನು ಹೀಗೆ ಅತಂತ್ರನಾದ ಸ್ಥಿತಿಯನ್ನು, ಅಸಹಾಯಕತೆಯನ್ನು ವ್ಯಕ್ತಪಡಿಸಿ ಈ ಮದತ್ರಯಗಳನ್ನು ನಿವಾರಿಸಲು ನಾರದನನ್ನು (ಶ್ರೀ ಶಿರಳಗಿ ತಿಮ್ಮಪ್ಪ ಹೆಗಡೆ) ಸಂಪರ್ಕಿಸುತ್ತಾನೆ. ಇಡಗುಂಜಿ ಮೇಳದ ನಾರದ ಯಕ್ಷಗಾನೀಯವಾಗಿಯೇ ಪ್ರವೇಶಿಸಿದ್ದು ವಿಶೇಷವಾಗಿತ್ತು. ಉಳಿದ ಹೆಚ್ಚಿನ ಕಡೆ ನಾರದನ ವೇಷ ನಾಟಕ ರಂಗಭೂಮಿಯ ಪಡಿಯಚ್ಚಾಗಿರುತ್ತದೆ. ಇಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಕಸೆಸೀರೆಯ ಕಚ್ಚೆ, ಯಕ್ಷಗಾನದ ಮುಡಿ, ಹಸಿರು ದಗಲೆ, ಬೆನ್ನುವಸ್ತ್ರ ಧರಿಸಿದ ನಾರದನ ವೇಷ ಪ್ರೇಕ್ಷಕರ ಮನಸೆಳೆಯಿತು. ಇದು ಇಡಗುಂಜಿ ಮೇಳಕ್ಕೆ ಪರಂಪರೆಯ ವೇಷ ಕ್ರಮದ ಬಗ್ಗೆ ಇದ್ದ ಬದ್ಧತೆಯನ್ನು ಬಿಂಬಿಸುವಂತಿತ್ತು. ಶ್ರೀ ಕೃಷ್ಣ ದೇವನಾದರೂ ಈ ಲೋಕದಲ್ಲಿ ಅವತರಿಸಿದಾಗ ಲೌಕಿಕನೇ ಆಗುತ್ತಾನೆ. ನಾರದನೊಂದಿಗಿನ ಮಾತುಗಾರಿಕೆಯಲ್ಲಿ ಶಿವಾನಂದ ಹೆಗಡೆಯವರು ಎತ್ತಿದ ಪ್ರಶ್ನೆಗಳು ಸೂಕ್ಷ್ಮವಾಗಿದ್ದು, ಗಂಭೀರವಾಗಿತ್ತು. ಅವರ ಕುಣಿತ, ಮಾತುಗಾರಿಕೆ, ಅಭಿನಯದಲ್ಲಿ, ಹಾವಭಾವದಲ್ಲಿ ಪ್ರೌಢಿಮೆ ಇತ್ತು. ಶಿರಳಗೆಯವರು ಕೂಡ ನಾರದನಾಗಿ ಅಷ್ಟೇ ಪ್ರಬುದ್ಧತೆಯನ್ನು ಮೆರೆದರು. ನಾರದನು ಸಮಸ್ಯೆಯ ನಿವಾರಣೆಗೆ ತ್ರೇತಾಯುಗದ ಹನುಮಂತನ (ಶ್ರೀ ಈಶ್ವರ ಭಟ್ ಅಂಸಳ್ಳಿ) ಮೊರೆ ಹೋಗಬೇಕಾಗುತ್ತದೆ. ಮಾರುತಿಯಾಗಿ ಈಶ್ವರ ಭಟ್ಟರ ವೇಷಗಾರಿಕೆ ಬಹಳ ಅಚ್ಚುಕಟ್ಟಾಗಿ, ಸಂಪ್ರದಾಯ ಬದ್ಧವಾಗಿತ್ತು. ರಾಮ ದರ್ಶನಾಕಾಂಕ್ಷಿಯಾಗಿ ದ್ವಾರಕೆಗೆ ಬಂದ ಆತ ಬಲರಾಮನೆಂಬ ಹೆಸರು ಕೇಳಿಯೇ ಸಿಟ್ಟುಗೊಂಡು ಉಪವನವನ್ನು ಹಾಳು ಮಾಡುತ್ತಾನೆ. ಆಗ ಅಲ್ಲಿಗೆ ಬಂದ ವನಪಾಲಕ (ಶ್ರೀ ಸೀತಾರಾಮ ಹೆಗಡೆ ಮುಡಾರೆ)ನ ನಡೆನುಡಿಗಳೆಲ್ಲ ಪ್ರೇಕ್ಷಕರನ್ನು ರಂಜಿಸಿದವು. ಬಲರಾಮನ ಗರ್ವಭಂಗವಾಗುತ್ತದೆ. ಮತ್ತೆ ನಾರದನು ಗರುಡನನ್ನು ((ಶ್ರೀ ಲೋಕೇಶ್ ನಾಯಕ್ ಗೋಕರ್ಣ) ಪ್ರೇರೇಪಿಸಿ ಹನುಮಂತನೊಂದಿಗೆ ಕಾದುವಂತೆ ಮಾಡುತ್ತಾನೆ. ಲೋಕೇಶ ನಾಯಕರ ಕುಣಿತವು ಆಕರ್ಷಕವಾಗಿದ್ದು ನಡೆದ ಯುದ್ಧದಲ್ಲಿ ಗರುಡನ ಗರ್ವಭಂಗವೂ ಆಗುತ್ತದೆ. ಮುಂದೆ ನಾರದ, ಸತ್ಯಭಾಮೆ ಇದ್ದಲ್ಲಿಗೆ ಬಂದು

ಅವಳನ್ನು ಉಬ್ಬಿಸಿ ಶ್ರೀ ರಾಮದರ್ಶನವಾಗುವಲ್ಲಿಗೆ ವಿರೂಪ ವೇಷದಲ್ಲಿ ಕಾಣಿಸಿಕೊಳ್ಳಬೇಕೆಂಬ ಅವಳ ಪ್ರಯತ್ನ ವಿಫಲವಾಗಿ ರೂಪಮದವು ಅಳಿಸಿ ಹೋಗಿ ತಪ್ಪಿನ ಅರಿವಾಗುತ್ತದೆ. ಹೀಗೆ ಮೂವರ ಅಧಿಕಾರಮದ, ಶಕ್ತಿಮದ, ರೂಪಮದಗಳು ಕೊನೆಗೊಳ್ಳುತ್ತವೆ. ಕೃಷ್ಣನ ತಂತ್ರಗಾರಿಕೆ, ನಾರದನ ಅಲೌಕಿಕ ನಡೆ ಈ ಪ್ರಸಂಗದ ಜೀವಾಳವಾಗಿದೆ. ಇದನ್ನು ಪ್ರೇಕ್ಷಕರಿಗೆ ಮುಟ್ಟಿಸುವಲ್ಲಿ ಹಿಮ್ಮೇಳ ಕಲಾವಿದರ ಪಾತ್ರ ಮಹತ್ತರವಾಗಿತ್ತು. ಭಾಗವತರಾಗಿ ಶ್ರೀ ಅನಂತ ಹೆಗಡೆ ದಂತಳಿಕೆಯವರು ಭಾವಪೂರ್ಣವಾಗಿ ಹಾಡಿದ್ದೇ ಅಲ್ಲದೆ ಯಥೋಚಿತವಾಗಿ ಪಾತ್ರಗಳನ್ನು ಕುಣಿಸುವಲ್ಲಿ ಯಶಸ್ವಿಯಾಗಿದ್ದರು. ಅವರೊಂದಿಗೆ ಮದ್ದಳೆಯಲ್ಲಿ ಶ್ರೀ ಮುರೂರು ನರಸಿಂಹ ಹೆಗಡೆ, ಚಂಡೆಯಲ್ಲಿ ಶ್ರೀ ರಾಮನ್ ಹೆಗಡೆ ಊರಕೇರಿ ಸಹಕರಿಸಿದ್ದರು. ಎರಡೂವರೆ ತಾಸುಗಳ ಪ್ರದರ್ಶನ ಎಲ್ಲೂ ಜಾಳುಜಾಳಗದೆ ಪ್ರೇಕ್ಷಕರು ತಲ್ಲೀನರಾಗುವಂತೆ ಮಾಡಿತು.

ಪಾಂಚಜನ್ಯ:

"ಪಾಂಚಜನ್ಯ" ಜಯ ಹಾಗೂ ಯಶಸ್ಸಿನ ಸಂಕೇತ ಶ್ರೀ ಕೃಷ್ಣನ ಕೈಯಲ್ಲಿರುವ ಪಾಂಚಜನ್ಯ ಮೊಳಗಿದಾಗ ಧರ್ಮಕ್ಕೆ ಜಯ, ಅಧರ್ಮಕ್ಕೆ ಸೋಲು. ಇಂತಹ ಅಪೂರ್ವ ಶಂಖ ಕೃಷ್ಣನ ಕೈ ಸೇರಿದ ಕಥೆ ಹೆಚ್ಚು ಪ್ರಚಲಿತ ಇಲ್ಲ. ಈ ವಸ್ತುವನ್ನು ಯಕ್ಷಗಾನ ರಂಗಕ್ಕೆ ತಂದು ಪರಿಚಯಿಸಿದವರು ಖ್ಯಾತ ಅರ್ಥಧಾರಿ ಶೇಣಿಯವರಿಗೆ ಗುರುಸದೃಶರಾದ ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್‌ರವರು. ಯಕ್ಷದೇಗುಲ 2019ರ ಸನ್ಮಾನ ಕಾರ್ಯಕ್ರಮದ ಅಂಗವಾಗಿ ಬೆಂಗಳೂರು ರಸಿಕರಿಗೆ ಪರಿಚಯಿಸಿದ "ಪಾಂಚಜನ್ಯ" ಮೊಳಗಿಸಿದವರು ಬೆಂಗಳೂರಿನ ಯಕ್ಷದೇಗುಲ ತಂಡದವರು. ಪ್ರಸಂಗದ ವಸ್ತು ತೆಳುವಾದರೂ ಕಲಾವಿದರ ಕಲಾಸಾಮರ್ಥ್ಯದಿಂದಾಗಿ ಎರಡು ತಾಸುಗಳ ಪ್ರದರ್ಶನ ರಂಗದಲ್ಲಿ ಮಿಂಚುವಂತಾಯಿತು.

ಗುರು ಸಾಂದೀಪನಿ ಮುನಿಯ ಆಶ್ರಯದಲ್ಲಿ ಶಿಕ್ಷಣ ಮುಗಿಸಿರುವ ಶ್ರೀ ಕೃಷ್ಣ ಮತ್ತು ಉದ್ದಲರ ಸಂಭಾಷಣೆಯೊಂದಿಗೆ ಪ್ರಸಂಗ ಪ್ರಾರಂಭವಾಗುತ್ತದೆ. ಕೃಷ್ಣನಾಗಿ ಶ್ರೀ ಸುಜಯೀಂದ್ರ ಹಂದೆಯವರು ಅಚ್ಚುಕಟ್ಟಾದ ವೇಷ, ಕುಣಿತ ಹಾಗೂ ಆಕರ್ಷಕ ಮಾತುಗಾರಿಕೆ ಪ್ರದರ್ಶನದ ಧನಾತ್ಮಕ ಅಂಶ. ಅವರ ತಂದೆ ಮಕ್ಕಳ ಮೇಳದ ಎಚ್.ಶ್ರೀಧರ ಹಂದೆಯವರ ಕೃಷ್ಣನ ವೇಷವೆಂದರೆ ನಯನ ಮನೋಹರವಾದುದು. ಆ ಪಾತ್ರಕ್ಕೊಂದು "ಬ್ರಾಂಡ್ ವ್ಯಾಲ್ಯೂ" ತಂದು ಕೊಟ್ಟವರು. ಸುಜಯೀಂದ್ರ ಹಂದೆ ಅದನ್ನು ಸರಿಗಟ್ಟಿರುವುದೇ ಇಲ್ಲಿನ ವಿಶೇಷ. ಉದ್ಧಲನಾಗಿ ಪಾತ್ರವಹಿಸಿದ ಶ್ರೀ ಪ್ರಶಾಂತ ಹೆಗಡೆಯವರ ಹಾಸ್ಯಮಯ ಮತುಗಾರಿಕೆ, ಹದವರಿತ ಅಭಿನಯ ಆಕರ್ಷಕವಾಗಿತ್ತು. "ಸಮುದ್ರದ ವರ್ಣನೆಯ ಪರೀಕ್ಷಿಸು ಮಿತ್ರನೆ. . .

"ಪದ್ಯದ ಸಂದರ್ಭದಲ್ಲಿ ಕೃಷ್ಣನ ನರ್ತನ, ಅಭಿನಯ, ಗುರುವಿನೊಂದಿಗಿನ ಮಾತಿನಲ್ಲಿನ ವಿನಯಪೂರ್ಣ ನಡವಳಿಕೆ ಹಂದೆಯವರ ಮಾಗಿದ ವ್ಯಕ್ತಿತ್ವವನ್ನು ಬಿಂಬಿಸುತಿತ್ತು. ಮಗನನ್ನು ಕಳೆದುಕೊಂಡ ಗುರು ಸಾಂದೀಪಿನಿಯ ಅಳಲು (ನರಸಿಂಹ ತುಂಗ) ಕರುಣಾಮಯವಾಗಿತ್ತು. ರಾಕ್ಷಸವೇಷಧಾರಿಯಾಗಿ ಪ್ರವೇಶಿಸಿದ ಪಂಚಜನನಾಗಿ ತಮ್ಮಣ್ಣ ಗಾಂವ್ಕರ್ ಅವರ ವೀರರಸಪೂರಿತ ಕುಣಿತ, ಉತ್ತಮ ಪೀಠಿಕೆ, ಯುದ್ಧದ ಕಾಲದ ಹೆಜ್ಜೆಗಾರಿಕೆ, ವಿಶೇಷ ಭಕ್ತಿಯಲ್ಲಿ ತೋಡಿಕೊಂಡ ವಿಚಾರಗಳೆಲ್ಲವೂ ಪ್ರಸಂಗವು ಸುಲಲಿತವಾಗಿ ಸಾಗಲು ಕಾರಣವಾಯಿತು. ಪಂಚಜನನ ಆಸೆ ಈಡೇರಿಸಲು ಅವನ ದೇಹದ ಮೂಳೆಯಿಂದ "ಪಾಂಚಜನ್ಯ" ಶಂಖವನ್ನು ನಿರ್ಮಿಸಿಕೊಂಡು ಕೃಷ್ಣ ಅದನ್ನು ಕೈಯಲ್ಲಿ ಧರಿಸುತ್ತಾನೆ. ಆತನಿಂದಲೇ ಗುರುಪುತ್ರ ಮೃತ್ಯುಮಾಲಿನಿಯ ವಶವಿರುವುದು ತಿಳಿದು ಅಲ್ಲಿಗೆ ಕೃಷ್ಣ ಉದ್ದಲರು ತೆರಳುತ್ತಾರೆ. ಮೃತ್ಯುಮಾಲಿನಿಯ ಒಡ್ಡೋಲಗ, ಪೀಠಿಕೆಯೆಲ್ಲವೂ ಆಕರ್ಷಕವಾಗಿತ್ತು. ಗಣೇಶ ಉಪ್ಪುಂದ ಅವರ ಈ ಪಾತ್ರ ವೃತ್ತಿಕಲಾವಿದರ ವೇಷವನ್ನು ನೆನಪಿಸುತ್ತಿತ್ತು. ಪವಡಿಸಿರುವ ಕೃಷ್ಣನನ್ನು ನೋಡಿ ಮೋಹಿಸಿದ ಅಸಿಕೆಯಾಗಿ ಮನೋಜ್ ಭಟ್ ಅವರ ಲಾಸ್ಯಪೂರ್ಣ ನರ್ತನ, ಹಾವಭಾವಗಳು ಕಣ್ಮನ ಸೆಳೆಯುವಂತ್ತಿತ್ತು. ಅಸಿಕೆ, ಕೃಷ್ಣರ ವಿವಾಹ ನಡೆದು ಗುರುಪುತ್ರನನ್ನು ಗುರುವಿಗೆ ಮರಳಿಸಿ "ಗುರುದಕ್ಷಿಣೆ"ಯನ್ನು ನೀಡುವುದರೊಂದಿಗೆ ಪ್ರಸಂಗ ಮುಕ್ತಾಯವಾಗುತ್ತದೆ. ಕೊನೆಯಲ್ಲಿ ತಾಂತ್ರಿಕ ಕಾರಣದಿಂದಾಗಿ ಗಡಿಬಿಡಿಯಲ್ಲಿ ಪ್ರಸಂಗವನ್ನು ಮುಗಿಸಬೇಕಾಗಿ ಬಂತೆಂಬುದೊಂದೆ ಪ್ರದರ್ಶನದ ಋಣಾತ್ಮಕ ಅಂಶ. ಮತ್ತೆಲ್ಲಾ ವಿಚಾರದಲ್ಲೂ ಇಡೀ ಪ್ರದರ್ಶನ ಯಶಸ್ವಿಯಾಗಿತ್ತು.

ಪ್ರದರ್ಶನದ ಹಿಮ್ಮೇಳದಲ್ಲಿ ಭಾಗವತರಾಗಿ ಲಂಬೋದರ ಹೆಗಡೆಯವರಿದ್ದರು. ಮೃದಂಗ ವಾದನದಲ್ಲಿ ಗಣಪತಿ ಭಟ್ ಹಾಗೂ ಮಾಧವ ಮಣೂರು ಸಹಕರಿಸಿದ್ದರೆ ಚಂಡೆ ವಾದಕರಾಗಿ ಮಂಜುನಾಥ ನಾವುಡರು ಪಾಲ್ಗೊಂಡಿದ್ದರು. ಲಂಬೋದರ ಹೆಗಡೆಯವರು ಭಾವಪೂರ್ಣವಾಗಿ ಹಾಡಿದ್ದು ಕೂಡ ವಿಶೇಷವೇ. ಈ ಪ್ರಸಂಗವನ್ನು ಕೋಟ ಸುದರ್ಶನ ಉರಾಳರು ಸಂಯೋಜಿಸಿದರು. ಕೆ. ಮೋಹನ್ ಅವರ ನಿರ್ದೇಶನ ಅಚ್ಚುಕಟ್ಟಾಗಿತ್ತು. ಪ್ರಸಂಗ ಎಲ್ಲೂ ಹಾಳಾಗದಂತೆ ನೋಡಿಕೊಳ್ಳಲಾಗಿತ್ತು. ಮೂರು ತಾಸುಗಳ ಒಟ್ಟು ಕಾರ್ಯಕ್ರಮ ಎಂದಿನಂತೆ ಶಿಸ್ತುಪೂರ್ಣವಾಗಿದ್ದು ಬೆಂಗಳೂರಿನ ಯಕ್ಷದೇಗುಲ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಯಿತು.

* * *

ಐಸಿರಿ ಪ್ರಕಾಶನ – # 468, 2ನೇ 'ಸಿ' ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ, ನಾಗರಬಾವಿ, ಬೆಂಗಳೂರು– 72.

ನಮ್ಮ ಕೆಲವು ಪ್ರಕಟಣೆಗಳು

* ಹೆಜ್ಜೆ ಮೂಡಿದ ಹಾದಿ (ಕಾದಂಬರಿ) – ಡಾ. ಸುರೇಶ ಪಾಟೀಲ 90/–
* ಸಂಕ್ಷಿಪ್ತ ನಾಟಕ ಚರಿತ್ರೆ – ಡಾ. ಬಿ.ಎ ಅನ್ನದಾನೇಶ್ 100/–
* ಪರಸ್ಪರ – ಡಾ. ಸುರೇಶ ಪಾಟೀಲ 100/–
* ಆದಿಮಜಾತಿ ಚಮಾರ್–ಇತಿಹಾಸ, ಧರ್ಮ ಮತ್ತುಸಂಸ್ಕೃತಿ(ಅನು)–ಡಾ. ಪ್ರಮೀಳಾಮಾದವ್ 150/–
* ಜಾಗತೀಕರಣ : ನಂಬಿಕೆ–ಸಂಪ್ರದಾಯ (ಸಂಶೋಧನೆ) – ಡಾ. ಮಂಜುನಾಥ ಪಾಳ್ಯ 120/–
* ಸಹಪಥಿಕ – ಲಕ್ಷ್ಮಣ ಕೊಡಸೆ 75/–
* ಸೂರ್ಯನಯನ (ಅನುವಾದ) – ಡಾ. ಪ್ರಮೀಳಾ ಮಾಧವ್ 200/–
* ಲಂಕೇಶರ ಐತಿಹಾಸಿಕ ನಾಟಕಗಳು (ಸಂಶೋಧನೆ) – ಡಾ. ರೂಪ. ಜಿ 50/–
* ಶೂರತನ – ಡಾ. ಬಸವರಾಜು ತೋಟಹಳ್ಳಿ 150/–
* ಮೀಟುಗೋಲು – ಡಾ. ಸಿ. ಬಿ. ಹೊನ್ನುಸಿದ್ಧಾರ್ಥ 150/–
* ಹನುಮ ಒಂದು ಅಧ್ಯಯನ (ಸಂಶೋಧನೆ) – ಡಾ. ಎಸ್.ಎಲ್. ಮಂಜುನಾಥ 300/–
* ವಿಶ್ಲೇಷಣೆ – ಡಾ. ಸಿ. ಬಿ. ಹೊನ್ನುಸಿದ್ಧಾರ್ಥ 150/–
* ಮಂದಹಾಸ – ಡಾ. ಎಸ್. ರಾಮಮೂರ್ತಿ 90/–
* ರಾಜಸೇವಾಸಕ್ತ ಸಿ.ಕೆ. ವೆಂಕಟರಾಮಯ್ಯ ಬದುಕು–ಬರಹ (ಸಂಶೋಧನೆ)–ಡಾ. ಹೆಚ್. ತುಕಾರಾಂ 250/–
* ಭಾಷಿಕ ಸಂಕಥನ: ಗಂಡು, ಹೆಣ್ಣು – ಚಂದ್ರಕಲಾ. ಜಿ 100/–
* ಮಕ್ಕಳ ರಂಗಭೂಮಿ (ಸಂಶೋಧನೆ) – ಡಾ. ಜನಾರ್ಧನ 275/–
* ಸಿಂಗರ್ ಕತೆಗಳು (ಅನುವಾದ) – ನರಹಳ್ಳಿ ಬಾಲಸುಬ್ರಹ್ಮಣ್ಯ 120/–
* ಬೆಂಗಳೂರು ನಮ್ಮ ಹೆಮ್ಮೆ – ಸಿ. ಕೆ. ರಾಮೇಗೌಡ 100/–
* ತಾಳುವಿಕೆಗಿಂತ ತಪವು ಇಲ್ಲ (ಸಂಶೋಧನೆ) – ಡಾ. ಆರ್. ವಾದಿರಾಜು 250/–
* ಅನುವಾದ ಕತೆಗಳು–1 – ಡಾ. ಪ್ರಮೀಳಾ ಮಾಧವ್ 150/–
* ಉಚಲ್ಯಾ ಮತ್ತು ಅಕ್ರಮ ಸಂತಾನ ಸಾಂಸ್ಕೃತಿಕ ವಿಶ್ಲೇಷಣೆ (ಸಂಶೋಧನೆ) – ಡಾ. ಎಂ. ನಾಗರಾಜು 150/–
* ಅಭಿಮನ್ಯು ಅನತ್‌ರ ನಾಟಕಗಳು (ಅನುವಾದ) – ಡಾ. ಟಿ. ರಾಮಕೃಷ್ಣ 400/–
* ಪರೀಕ್ಷಿತ (ಕಾದಂಬರಿ) – ಡಾ. ಸುರೇಶ ಪಾಟೀಲ 200/–
* ನಲ್ಮೆಗೆ ನನ್ನೋಲೆ (ಕಾದಂಬರಿ) – ಚೇತನ್ ರಾಂಪುರ 150/–
* ತ್ರಿವೇಣಿ: ಮನ ಮಂಥನ (ಸಂಶೋಧನೆ) – ಡಾ. ಅರ್ಚನಾ ಆರ್. 220/–
* ಕನ್ನಡ ಸಣ್ಣಕತೆಗಳು ಮತ್ತು ಜಾಗತೀಕರಣ (ಸಂಶೋಧನೆ) – ಡಾ. ಅಮರೇಂದ್ರ ಹೊಲ್ಲಂಬಳ್ಳಿ 300/–
* ನೆಪ್ಪು – ಡಾ. ವಿಜಯಲಕ್ಷ್ಮಿ ಮನಾಪುರ 250/–
* ಅಲೆ (ಕಾದಂಬರಿ) – ಡಾ. ಸುರೇಶ ಪಾಟೀಲ 200/–
* ಮಂಥನ (ಕಥಾಸಂಕಲನ) – ಡಾ. ಪ್ರಮೀಳಾ ಮಾಧವ್ 150/–
* ಸಾಹಿತ್ಯ ಮಂಜರಿ – ಶರಣಪ್ಪ ರಾ ಆಡಕಾರ 100/–

* ಕನ್ನಡದಲ್ಲಿ ಲಿಪಿ ಮತ್ತು ತಂತ್ರಾಂಶಗಳು – ಡಾ. ಎಸ್. ರಾಮಮೂರ್ತಿಶರ್ಮ. ಲಕ್ಕೂರು 120/–
* ಚಂದ್ರಗುಪ್ತ (ನಾಟಕ) – ಡಾ. ಅಮರೇಂದ್ರ ಹೊಲ್ಲಂಬಳ್ಳಿ 110/–
* ಸ್ವಪ್ನ ಮಹಲ್ (ಕಾದಂಬರಿ) – ಡಾ. ಸುರೇಶ ಪಾಟೀಲ 225/–
* ಕ್ಷೋಭೆ ಮತ್ತು ತರುವಾಯ (ಅನುವಾದ) – ವಿರೂಪಾಕ್ಷ ಕುಲಕರ್ಣಿ 200/–
* ಓದಿನ ಭಾವಗಳು (ವಿಮರ್ಶೆ) – ಡಾ. ಮಂಜುನಾಥ ಪಾಳ್ಯ 150/–
* ಚಿಂಚಲಿ – ಸಾಂಸ್ಕೃತಿ ಅಧ್ಯಯನ – ಶರಣಪ್ಪ ರಾ ಆಡಕಾರ 170/–
* ಕಥಾನಾಯಕ (ಕಾದಂಬರಿ) – ಶ್ರೀದೇವಿ ಹಂದ್ರಾಳ 250/–
* ಸಾಹಿತ್ಯ ಸೌರಭ (ವಿಮರ್ಶೆ) – ಡಾ. ಪ್ರಮೀಳಾ ಮಾಧವ್ 300/–
* ಜಾನಪದ ಚಂದ್ರಮ (ಡಾ. ಚಕ್ಕೆರೆ ವ್ಯಕ್ತಿತ್ವ ಮತ್ತು ಸಾಹಿತ್ಯ) – ಸಂ: ಡಾ. ಸೂರನಾಯಕನಹಳ್ಳಿ ನಂದೀಶ 350/–
* ಕನ್ನಡ ಕ್ರೈಸ್ತ ಸಾಹಿತ್ಯದ ಒಳನೋಟಗಳು (ಸಂಶೋಧನೆ) – ಡಾ. ಸಿಸ್ಟರ್ ಪ್ರೇಮ 350/–
* ಸಾಂತಿಯಾಗೊ ಮತ್ತು ಕಡಲು (ಅನುವಾದ) – ಡಾ. ಸುರೇಶ ಪಾಟೀಲ 100/–
* ಚಿಗುರು (ಮಕ್ಕಳ ಕಾವ್ಯ ಲೋಕ) – ಡಾ. ಪ್ರಮೀಳಾ ಮಾಧವ್ 100/–



ಯಕ್ಷಗಾನದ ಅಂಗೋಪಾಂಗಗಳ ಕುರಿತು ಡಾ. ಆನಂದರಾಮ ಉಪಾಧ್ಯರು ಕಾಳಜಿ ಮತ್ತು ಸಂಯಮದ ದೃಷ್ಟಿಕೋನದಿಂದ ಅವಲೋಕನ ಮಾಡಿದ ಹತ್ತೊಂಬತ್ತು ಲೇಖನಗಳ ಸಂಗ್ರಹವೇ "ಯಕ್ಷ ಸಂಕಾಶ". ಕಲಾವಿದರ, ರಚನೆಕಾರರ ನೆಲೆಯಲ್ಲಿ ನಿಂತು ಅವರ ಪ್ರಸ್ತುತಿಯ ಗುಣದೋಷಗಳನ್ನು ಅವಲೋಕಿಸುವವವರಿಗೆ ರಸಾಸ್ವಾದನೆ ಮುಖ್ಯ. ಅದರೊಂದಿಗೆ ರಸತಜ್ಞತೆಯ ಸೂಕ್ಷ್ಮ ಪರಿಚಯ ಇರಬೇಕಾಗುತ್ತದೆ.

ಈ ಕೃತಿಯಲ್ಲಿ ಉಪಾಧ್ಯರ ನಿಲುವು ಅವಲೋಕನಕಾರನದ್ದು. ಬೇರೆ ಬೇರೆ ಸಂದರ್ಭದಲ್ಲಿ ಮಂಡಿಸಿದ ಪ್ರಬಂಧಗಳ, ಬರೆದ ಲೇಖನಗಳ, ಕೃತಿ ವಿಶ್ಲೇಷಣೆಗಳ, ಕಲಾವಿದರ ಕುರಿತ ಬರೆಹಗಳ ಗುಚ್ಛವಿದು. "ಯಕ್ಷ ಶಿಕ್ಷಣಪಠ್ಯ ಹಾಗೂ ಕಲಿಕೆ" ಯಕ್ಷಗಾನದ ಅಭ್ಯಾಸಿಗಳಿಗೆ ಮತ್ತು ಅದರ ಸಂಶೋಧಕರಿಗೆ ಅತ್ಯಗತ್ಯ ದಾಖಲೆಯಾಗಿದೆ. ಉಪಾಧ್ಯರ ಲೇಖನದ ವಿಶೇಷವೇ ಅವರು ವಿಷಯವನ್ನು ಪ್ರಸ್ಥಾಪಿಸುವ ರೀತಿ ಮತ್ತು ವಿಷಯದ ತಿರುಳನ್ನು ತಮ್ಮದೇ ಆದ **crisp** ನುಡಿಗಟ್ಟಿನೊಂದಿಗೆ ಹೇಳುವ ವಿಧಾನವಾಗಿದೆ. ಇಲ್ಲಿನ ಲೇಖನಗಳು ಬರೆದ ಸಂದರ್ಭ ಮತ್ತು ಕಾಲ ಬೇರೆಬೇರೆಯಾದರೂ ಏಕಸೂತ್ರವಿದೆ. ಕಲಾತಜ್ಞತೆ ರಸಭಾವದಲ್ಲಿ ಮಿಳಿತವಾಗಿದೆ. ಕವಿ ಹೃದಯದ ಭಾಷೆ ಅವರಿಗೆ ಸಿದ್ಧಿಸಿದೆ. ಅಧ್ಯಯನ ಮತ್ತು ಪರಿಚಯಾತ್ಮಕತೆ ಎರಡಕ್ಕೂ ಉಪಯೋಗ ಉಳ್ಳ ಕೃತಿ ಇದು.

ನಾರಾಯಣ ಯಾಜಿ
ಲೇಖಕರು ಹಾಗೂ ಅರ್ಥಧಾರಿಗಳು

ISBN 81-969076-4-8
2024
9788196907648
ಬೆಲೆ - ₹ 200/-
ಐಸಿರಿ ಪ್ರಕಾಶನ
ನಾಗರಭಾವಿ, ಬೆಂಗಳೂರು-72